ಕನ್ಯಾಕುಮಾರಿ

ಮತ್ತು

ಇತರ ಕಥೆಗಳು

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪ್ರಕಾಶಕರು :
ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟೆ ಚೌಕ, ಬೆಂಗಳೂರು-53

ಕನ್ಯಾಕುಮಾರಿ

ಮತ್ತು

ಇತರ ಕಥೆಗಳು

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪ್ರಕಾಶಕರು :

ರಾಜಲಕ್ಷ್ಮೀ ಪ್ರಕಾಶನ

ಬಳೇಪೇಟೆ ಚೌಕ, ಬೆಂಗಳೂರು-560 053

Kanyakumari Matthu Ithara Kathegalu a Short Story Collection by Gorur Ramaswamy Iyengar Fourth Edition 1991 Published by Rajalakshmi Prakashana, Balepet Square, Bangalore-560 053

ಮೊದಲ ಮುದ್ರಣ : ೧೯೬೬
ಎರಡನೆ ಮುದ್ರಣ : ೧೯೬೭
ಮೂರನೆ ಮುದ್ರಣ : ೧೯೬೮
ನಾಲ್ಕನೆ ಮುದ್ರಣ : ೧೯೯೧

ಅಧಿಕೃತ ಮಾರಾಟಗಾರರು :

ಗೀತಾ ಏಜನ್ಸೀಸ್
(ಸಗಟು ಪುಸ್ತಕ ವ್ಯಾಪಾರಿಗಳು)
ಬಳೇಪೇಟೆ ಚೌಕ, ಬೆಂಗಳೂರು-53
[ದೂರವಾಣಿ : 74226]

ಮುದ್ರಕರು :
ಪದ್ಮ ಪ್ರಿಂಟಿಂಗ್ ಪ್ರೆಸ್
ಬಳೇಪೇಟೆ, ಬೆಂಗಳೂರು-53.

ಅ ರಿ ಕೆ

ಮೊದಲ ಮುದ್ರಣ

ಈ ಸಂಗ್ರಹದಲ್ಲಿ ನನ್ನ ಹತ್ತು ಕತೆಗಳನ್ನು ಒಂದೆಡೆ ಪ್ರಕಟಿಸಲಾಗಿದೆ.

ವೈವಿಧ್ಯಪೂರ್ಣವಾದ ಮತ್ತು ಯಾವ ವಿವರಣೆಯ ಸ್ಪಷ್ಟ ಚೌಕಟ್ಟಿನೊಳಗೂ ಅಡಗದ, ಬಾಳಿನ ವಿಶ್ವರೂಪದರ್ಶನದ ಸೂಕ್ಷ್ಮ ಪರಿಚಯವನ್ನು ಕಾಂತಾಸಂಮಿತಿಯ ಕಮನೀಯ ರೂಪದಲ್ಲಿ ವಾಚಕರ ಮುಂದೆ ಈ ಕಥೆಯಲ್ಲಿ ನಿರೂಪಿಸಿದೆ.

ಈ ಗ್ರಂಥವನ್ನು ಪ್ರಕಾಶನಗೊಳಿಸುತ್ತಿರುವ ಸರ್ವಶ್ರೀ ಎಚ್. ಎಸ್. ಹರಿಶಂಕರ್ ; ಎಚ್. ಎಸ್. ಗೋಪಿನಾಥ್‌ರಿಗೂ, ಅಂದವಾಗಿ ಮುದ್ರಿಸಿರುವ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಗೊರೂರು ಗೊರೂರು ರಾಮಸ್ವಾಮಿ ಅಯ್ಯಂಗಾರ್

1-7-1966

ಎರಡನೆಯ ಮುದ್ರಣದ ಅರಿಕೆ

ಕರ್ಣಾಟಕ ವಿಶ್ವವಿದ್ಯಾನಿಲಯದವರು ಪ್ರಿ-ಯುನಿವರ್ಸಿಟಿ ಪರೀಕ್ಷೆಗೆ ಈ ಗ್ರಂಥವನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸಿದ ಕಾರಣ ಈ ಗ್ರಂಥದ ಎರಡನೆಯ ಮುದ್ರಣಕ್ಕೆ ಅವಕಾಶವಾಯಿತು. ಇದಕ್ಕಾಗಿ ಪಠ್ಯಪುಸ್ತಕ ನಿಯಾಮಕ ಸಮಿತಿಗೂ, ವಿಶ್ವವಿದ್ಯಾನಿಲಯಕ್ಕೂ ಕೃತಜ್ಞನಾಗಿದ್ದೇನೆ. ಸಕಾಲದಲ್ಲಿ ಪುಸ್ತಕವನ್ನು ಹೊರತಂದ ಪ್ರಕಾಶಕರಿಗೂ, ಮುದ್ರಿಸಿಕೊಟ್ಟ ಅಚ್ಚುಕೂಟದವರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಗೊರೂರು ಗೊರೂರು ರಾಮಸ್ವಾಮಿ ಅಯ್ಯಂಗಾರ್

20-5-1967

ಮೂರನೆಯ ಮುದ್ರಣ

ಇದು ಎರಡನೆಯ ಮುದ್ರಣದ ಪುನರ್ ಮುದ್ರಣ. ಇದರಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ.

ಗೊರೂರು ಗೊರೂರು ರಾಮಸ್ವಾಮಿ ಅಯ್ಯಂಗಾರ್

10-2-1968

ಪರಿವಿಡಿ

— □ —

ಕನ್ಯಾಕುಮಾರಿ

೧

ಮಲ್ಲಿಗೆ ಹಳ್ಳಿಯ ಪಾಳುಬಿದ್ದಿರುವ ಅಮ್ಮನ ಗುಡಿಯನ್ನು ಕಟ್ಟಿಸಿದಾತ ನಾರೋ ಗೊತ್ತಿಲ್ಲ. ಆ ಗುಡಿಯನ್ನು ನೋಡಿದರೆ, ಅದನ್ನು ಕಟ್ಟಿಸಿದವನಿಗೆ ಅದು ಅನೇಕ ಕಾಲ ಶಾಶ್ವತವಾಗಿ ಇರಬೇಕೆಂಬ ಆಸೆಯಿದ್ದಂತೆ ತೋರುತ್ತದೆ. ಅಚ್ಚು ಕಟ್ಟಾದ ಗರ್ಭಗುಡಿ, ವಿಶಾಲವಾದ ನವರಂಗ, ರಂಗಮಂಟಪ, ಚೆನ್ನಾಗಿ ಕಡೆದ ಕೆತ್ತನೆಯ ಕಲ್ಲಿನ ಕಂಬಗಳು, ಸೂಕ್ಷ್ಮವಾದ ಕೆಲಸಗಳನ್ನು ಮಾಡಿದ ಚಪ್ಪಡಿಗಳ ಸೂರು, ವಿಶಾಲವಾದ ಮುಂಭಾಗ ; ಮೆಟ್ಟಲು. ದೇವಸ್ಥಾನದ ಅಂದವನ್ನು ನೋಡಿದರೆ ಇಲ್ಲಿ ಯಾವುದೇ ಮನಮೋಹಕವಾದ, ಈ ಕಟ್ಟಡದ ಅಂದಕ್ಕೆ ಅನುಗುಣವಾದ ಸೊಬಗುಳ್ಳ ದೇವತೆಯನ್ನು ಸ್ಥಾಪಿಸಿ, ಆ ದೇವತೆಯಲ್ಲಿ ಭಕ್ತಿಯಿಂದಲೂ ವಿಗ್ರಹ ಕಟ್ಟಡಗಳ ಸೌಂದರ್ಯದಿಂದಲೂ ಬಂದ ಭಕ್ತರ ಮನಸ್ಸನ್ನೂ ಕಲೆಗಾರರನ್ನೂ ಮೋಹಗೊಳಿಸುವುದು ದೇವಸ್ಥಾನ ನಿರ್ಮಾಣಕನ ಉದ್ದೇಶವಾಗಿದ್ದಂತೆ ತೋರುತ್ತದೆ ದೇವಸ್ಥಾನದ ಸೊಬಗಿಗೆ ಅರ್ಹವಾದ ದೇವತಾ ವಿಗ್ರಹವೊಂದು ಮಾತ್ರ ಇಲ್ಲಿ ಇದ್ದುಬಿಟ್ಟದ್ದರೆ, ಭಗವಂತನು ಇಲ್ಲಿ ನಿಜವಾಗಿಯೂ ನೆಲಸುತ್ತಿದ್ದನು ಎಂಬುದರಲ್ಲಿ ಸಂದೇಹವಿಲ್ಲ.

ಆದರೆ, ದೇವಸ್ಥಾನದಲ್ಲಿ ದೇವರು ಇಲ್ಲ ಅದು ದೇವಸ್ಥಾನಕ್ಕೆ ಒಂದು ಶಾಪದಂತೆ ತೋರುತ್ತದೆ. ಇಂತಹ ಚೆಲುವಾದ ದೇವಸ್ಥಾನದಲ್ಲಿ ದೇವರಿಲ್ಲದಿರುವುದು ಕಣ್ಣಿಲ್ಲದ ವಿಗ್ರಹದಂತೆ, ದಯೆಯಿಲ್ಲದ ಮಾನವನಂತೆ. ದೇವಸ್ಥಾನವನ್ನು ಕಟ್ಟಿಸಿದವನು, ಸಾವಿರಾರು ರೂಪಾಯಿಗಳ ವೆಚ್ಚದಲ್ಲಿ ಅತ್ಯಂತ ಸುಂದರವಾದ ಸರಸ್ವತಿಯ ವಿಗ್ರಹವನ್ನು ಮಾಡಿಸಿದನು. ಸರಸ್ವತಿ ಲಾವಣ್ಯದಿಂದ ನೋಡಿದವರ ಮನಸ್ಸನ್ನು ಪೂರ್ಣವಾಗಿ ಸೆಳೆಯುತ್ತಿದ್ದಿತು. ಅದನ್ನು ನೋಡಿದವರು "ಆ ವಿಗ್ರಹ ನಮ್ಮೊಂದಿಗೆ ಮಾತನಾಡುವಂತೆ ತೋರುತ್ತಿದ್ದಿತು. ಇನ್ನೂ ಸ್ವಲ್ಪ ಹೊತ್ತು ನೋಡಿದ್ದರೆ ಮುಗುಳುನಗೆ ಬೀರುತ್ತಿದ್ದಿತು" ಎಂದು ಹೇಳುತ್ತಾರೆ. ಇಂತಹ ದಿವ್ಯ ಮಂಗಳ ವಿಗ್ರಹವನ್ನು, ಮಾಡಿದ ನಂತರ ದೇವಸ್ಥಾನದಲ್ಲಿ

ಪ್ರತಿಷ್ಠೆ ಮಾಡುವುದಕ್ಕಿಂತ ಮುಂಚಿತವಾಗಿ ಕೆಲವು ಕಾಲ ನೀರಿನಲ್ಲಿ ನೆನೆಯ ಲೆಂದು ಅದನ್ನು ದೇವಸ್ಥಾನದ ಮುಂದೆ ಹರಿಯುತ್ತಿದ್ದ ಹೇಮಾವತಿ ನದಿಯಲ್ಲಿ ಹಾಕಿದರು.ಕೆಲವು ದಿವಸಗಳ ಮೇಲೆ, ಪ್ರತಿಷ್ಠೆಮಾಡಲು ವಿಗ್ರಹವನ್ನು ಹುಡುಕಿ ಸಿದಾಗ ಅದು ಸಿಕ್ಕಲಿಲ್ಲ. ಬೆಸ್ತರು ಹುಡುಕಿ ಹುಡುಕಿ ಬೇಸತ್ತರು. ವಿಗ್ರಹ ಮಾಡಿದವನನ್ನು ಮತ್ತೊಂದು ವಿಗ್ರಹವನ್ನು ಮಾಡಬೇಕೆಂದು ಹೇಳಿದಾಗ ಅವನು "ಮತ್ತೆ ಅಂತಹ ವಿಗ್ರಹವನ್ನು ಮಾಡಲು ನನ್ನ ಹಣೆಯಲ್ಲಿ ಬರೆದಿಲ್ಲ. ಆ ಸರಸ್ವತಿಯನ್ನು ಮಾಡಿದಾಗ ಸರಸ್ವತಿ ನನ್ನ ಬೆರಳುಗಳಲ್ಲಿ ನಲಿಯುತ್ತಿತ್ತು. ಮತ್ತೆ ಆ ಪುಣ್ಯ ಎಲ್ಲಿ ಬಂತು" ಎಂದನು. ಹೇಮಾವತಿಯು ಸರಸ್ವತಿಯನ್ನು ಜತೆ ಮಾಡಿಕೊಂಡು ಕಣ್ಮರೆಯಾಗಿ ಹೊರಟುಹೋದಳು. ದೇವಸ್ಥಾನವು ಶೂನ್ಯವಾಗಿ ಉಳಿಯಿತು. ಸರಸ್ವತಿಯ ದೇವಾಲಯವಾಗಿ ಪ್ರಾರಂಭವಾಗ ಬೇಕಾಗಿದ್ದುದು ಅಮ್ಮನ ಗುಡಿಯಾಯಿತು.

ಆದರೆ ದೇವರಿಲ್ಲದಿದ್ದರೂ ಸ್ಥಳದ ಸನ್ನಿವೇಶವು ಜನರನ್ನು ಆಕರ್ಷಿಸು ವುದನ್ನು ಬಿಡಲಿಲ್ಲ. ದೇವಸ್ಥಾನದ ಮುಂದಲ ಮಂಗಳಕರವಾದ ಪುಣ್ಯೋದಕ ವಾಹಿನಿಯಾದ ಹೇಮಾವತಿ, ದೇವರಿಲ್ಲದಿದ್ದರೂ ದೇವಸ್ಥಾನಕ್ಕೆ ಮಹಿಮೆ ಯನ್ನು ಕೊಟ್ಟಿದೆ. ಈಚೆಗೆ ಯಾರೋ ಪುಣ್ಯಾತ್ಮರು ದೇವಸ್ಥಾನದ ಮುಂದೆ ಒಂದು ಸ್ನಾನದ ಕಡುವುವನ್ನು ಮಾಡಿ ಕಲ್ಲುಚಪ್ಪಡಿಗಳನ್ನು ಹಾಸಿದ್ದಾರೆ. ಅದರ ಮುಂದಿನ ತೋಪು ಅತ್ಯಂತ ದಟ್ಟವಾದ ಶೀತಳವಾದ ನೆಳಲನ್ನು ಪಸರಿ ಸುತ್ತಾ ಜನರನ್ನು ದೂರದಿಂದಲೇ 'ಇಲ್ಲಿ ಬಂದು ವಿಶ್ರಮಿಸಿಕೊಳ್ಳಿ' ಎಂದು ಕರೆಯುವಂತೆ ಮನೋಮೋಹಕವಾಗಿ ಎಲೆಗಳ ಬೆರಳುಗಳಿಂದ ಕರೆಯುತ್ತಿದೆ. ಇಲ್ಲಿ ಹೇಮಾವತಿ ಕೂಡ ತನ್ನ ಎಲ್ಲಾ ಬೆಡಗನ್ನೂ ಪ್ರದರ್ಶಿಸಿ ಜನರನ್ನು ಆಕ ರ್ಷಿಸುತ್ತಿದೆ. ಸ್ನಾನದ ಕಡುವಿನಿಂದ ಎಡಗಡೆಗೆ ನೀರು ಸ್ವಲ್ಪ ಆಳವಾಗಿರುವುದ ರಿಂದ ಈಜುವ ಸಾಹಸಿಗಳು ಇಲ್ಲಿ ಬರುತ್ತಾರೆ. ಈ ಅಮ್ಮನ ಗುಡಿ, ಊರಿಂದ ನಾಲ್ಕು ಮಾರು ದೂರದಲ್ಲಿ ಸ್ವಲ್ಪ ವಿವಿಕ್ತವಾದಂತೆ ಇದ್ದರೂ ಊರಿನ ಯುವತಿಯರೂ ಉತ್ಸಾಹಶಾಲಿನಿಯರಾದ ಪ್ರಮದೆಯರೂ ಈ ಕಡುವಿಗೇ ಬರುತ್ತಾರೆ. ಆ ಲಲನೆಯರು ಆಗಾಗ ಮನೆಗಳಿಂದ ತಿಂಡಿ ತೀರ್ಥಗಳನ್ನು ತಂದು ಕೊಂಡು ದೇವಸ್ಥಾನದ ತೋಪಿನಲ್ಲಿ ತಿಂದು, ತಮ್ಮ ಬಳೆಗಳ ದನಿಗಳನ್ನೂ ಸವಿಮಾತುಗಳ ಕಲಕಲರವವನ್ನೂ, ನದಿಯ ಜುಳುಜುಳುರವದೊಂದಿಗೆ ಸೇರಿಸಿ

ಹಿರಿಯರನ್ನೂ ಮುದುಕಿಯರನ್ನೂ ಅತ್ತೆಯರನ್ನೂ-ಕೆಲವು ವೇಳೆ ವಯಸ್ಕರಾದ ಪತಿಯರನ್ನೂ-ಹಾಸ್ಯ ಮಾಡುತ್ತಾ ನಲಿದಾಡುತ್ತಾರೆ. ವಯಸ್ಕರಾದ ಸ್ತ್ರೀಯರು ಹೆಚ್ಚಾಗಿ ಈ ಕಡುವಿಗೆ ಬರುವುದಿಲ್ಲ. ಅತಿ ಮಡಿಯುವರೂ ಈ ಕಡುವಿಗೆ ಬರುವುದಿಲ್ಲ. ಅವರು ಇಳಿದುಕೊಳ್ಳುವ ಸ್ಥಳಕ್ಕೂ ಅಮ್ಮನ ಗುಡಿಯ ಕಡುವಿಗೂ ಸುಮಾರು ೬೦-೭೦ ಗಜ ದೂರವಿದೆ. ಅಮ್ಮನ ಗುಡಿಯ ಕಡುವಿನ ನಗೆಯ ಲಹರಿಗಳು ತರಂಗ ತರಂಗವಾಗಿ ಹೊರಟು ನದಿಯ ಅಲೆಗಳೊಂದಿಗೆ ಸೇರಿಕೊಂಡು ಆ ವಯಸ್ಕರಾದ ಸುಮಂಗಲಿಯರ ಕಿವಿಗೆ ತಗುಲಿ ವೈಸೋಕಿ ತಮ್ಮ ಬಾಲ್ಯವನ್ನು ಅವರಿಗೆ ನೆನಪು ಕೊಡುತ್ತದೆ.

ಈ ಗುಡಿಯಲ್ಲಿ ಆಗಾಗ್ಗೆ ಪರಸ್ಥಳದ ಸನ್ಯಾಸಿಗಳೂ ಬೈರಾಗಿಗಳೂ ಬಾವಾಜಿಗಳೆನ್ನಿಸಿಕೊಳ್ಳುವವರೂ ಕಾವಿಶಾಠಿಯುವರೂ ಬಂದು ನೆಲಸಿ ಒಂದೆರಡು ದಿನ ಇದ್ದುಕೊಂಡು ಮುಂದಿನ ಪ್ರಯಾಣವನ್ನು ಮಾಡುವುದುಂಟು. ಹಾಗೆ ಬರುವ ಬೈರಾಗಿಗಳಲ್ಲಿ ಭಂಗೀಕೋರರಂತೆ ಭಾವಪರವಶರಾದವರೂ ಇದ್ದು ಅನೇಕ ದಿನ ರಾತ್ರಿಯೆಲ್ಲಾ ಅವರು ನಿದ್ದೆ ಮಾಡದೆ ಹಾಡುತ್ತಾರೆ. ಹಳ್ಳಿಯವರಿಗೆ ತಮ್ಮ ಹಾಸಿಗೆಗಳಲ್ಲಿ ಅರ್ಧ ರಾತ್ರಿಗಳಲ್ಲಿಯೂ ಬೆಳಗಿನ ಜಾವಗಳಲ್ಲೂ ಎಚ್ಚರವಾದಾಗ, ಅನೇಕ ದಿನ ದೇವಸ್ಥಾನದಿಂದ ಹೊರಟ ಯಾವನೋ ಭಾವಪರವಶನಾದ ಬೈರಾಗಿಯ ಹಾಡು ಇರುಳಿನ ನಿಶ್ಶಬ್ದತೆಯಿಂದಲೂ ಗಾಳಿಯಿಂದಲೂ ಇನ್ನೂ ಮಂದರವಾಗಿ ಮಧುರವಾಗಿ ಕೇಳಿಸುತ್ತದೆ. ಆಗ ಹಳ್ಳಿಯಲ್ಲಿರುವವರು ಇವನು ಹಾಡುವನು ಯಾರೋ ? ಯಾವ ದುಃಖವನ್ನು ಅನುಭವಿಸಿದ್ದಾನೊ ? ಯಾವ ಸುಖದ ನೆನಪಿನ ಸವಿಯನ್ನು ಹಾಡುತ್ತಾನೊ? ಇವನ ನೋವು ಕಾವು ಕನಸು ನೆನಸು ಆಶೆ ಆಕಾಂಕ್ಷೆ ಇವುಗಳನ್ನು ಈ ಗಾನದಿಂದ ತೋಡಿಕೊಳ್ಳುತ್ತಾನೋ ಏನೋ ಎಂದು ಯೋಚಿಸುತ್ತಾರೆ. ಅನೇಕ ದಿನಗಳಲ್ಲಿ ಬೈರಾಗಿಗಳು ರಾತ್ರಿಯಲ್ಲಿ ಬಂದು ತಂಗಿದ್ದು ಬೆಳಗಾಗುವುದರೊಳಗಾಗಿ ಊರು ಬಿಟ್ಟು ಹೊರಟೇ ಹೋಗುತ್ತಾರೆ. ಬೆಳಗಿನ ಜಾವದ ಅವರ ಹಾಡನ್ನು ಕೇಳಿದ ಹಳ್ಳಿಯುವರು, ಹಾಡುಗಾರನೆಂದು ಅವನನ್ನು ನೋಡಲು ಬೆಳಗಾದ ಮೇಲೆ ಹೋಗಿ ಅಲ್ಲಿ ಯಾರನ್ನೂ ಕಾಣದೆ ಹಿಂದಿರುಗುತ್ತಾರೆ. ಆದರೆ ಅವರು ಕೇಳಿದ ಗಾನ ಅವರ ಮನಸ್ಸನ್ನೂ ಬಿಟ್ಟು ಹೋಗುವುದಿಲ್ಲ. ಬೆಳಗಿನ

ಜಾವ, ಅರ್ಧರಾತ್ರಿಗಳಲ್ಲಿ ಮತ್ತೆ ಮತ್ತೆ ಎಚ್ಚರವಾದಾಗಲೆಲ್ಲಾ ಅವರು ಮತ್ತೆ ಆ ಮಧುರವಾದ ಗಾನಕ್ಕಾಗಿ ಆಲಿಸಿ ನಿರಾಶರಾಗುತ್ತಾರೆ.

ಮಾಘಮಾಸದಲ್ಲಿ ಒಂದು ದಿವಸ ಬೆಳಿಗ್ಗೆ ಒಬ್ಬ ಸನ್ಯಾಸಿಯು ಮಲ್ಲಿಗೆ ಹಳ್ಳಿಗೆ ಬಂದನು. ಅವನನ್ನು ನೋಡಿದರೆ ಮೂವತ್ತು ವಯಸ್ಸಿಗಿಂತ ಮೀರಿದವ ನಾಗಿ ತೋರುತ್ತಿರಲಿಲ್ಲ. ಆಜಾನುಬಾಹುವಾಗಿ ಬಹಳ ಸ್ಫುರದ್ರೂಪಿಯಾಗಿ ಮುಖದಲ್ಲಿ ತೇಜಸ್ಸು ತಾಂಡವವಾಡುತ್ತಿದ್ದ ಆ ಸನ್ಯಾಸಿಯನ್ನು ನೋಡಿದ ಕೂಡಲೇ, ಅವನ ಮುಖದ ಮೇಲೆ ಕಾಣುತ್ತಿದ್ದ ಅಕೃತಿಮವಾದ ಭಾವವನ್ನೂ ಪ್ರಸನ್ನ ಮುದ್ರೆಯನ್ನೂ ನೋಡಿ ಜನರು ಹರ್ಷಿತರಾಗುತ್ತಿದ್ದರು. ಅವನ ಮುಖದಲ್ಲಿ ಒಳ್ಳೆಯ ವಯಸ್ಸಾದವರ ಅನುಭವವೂ, ಹಸುಳೆಗಳ ಸರಳತೆಯೂ ಯುವಕರ ವೀರ್ಯ ತೇಜಸ್ಸುಗಳೂ, ಜ್ಞಾನಿಗಳ ಗಾಂಭೀರ್ಯವೂ ಸ್ಪಷ್ಟವಾಗಿ ಏಕಕಾಲದಲ್ಲಿ ಪ್ರಕಟವಾಗಿ ಕಾಣುತ್ತಿದ್ದುವು. ಅವನನ್ನು ನೋಡಿದ ಕೂಡಲೇ ಜನರ ಮನಸ್ಸು ಪ್ರಸನ್ನವೂ ಪ್ರಫುಲ್ಲವೂ ಆಗುತ್ತಿದ್ದವು. ಅವನ ಧ್ವನಿಯು ಗಂಭೀರವಾಗಿ ಮಧುರವಾಗಿ ಇನ್ನೂ ಮಾತನಾಡಲಿ ಮಾತನಾಡಲೆ ಎಂದು ಕೇಳುವವರಿಗೆ ಆಸೆ ಹುಟ್ಟಿಸುತ್ತಿದ್ದಿತು. ಸನ್ಯಾಸಿಯು ಎಲ್ಲರ ಮನಸ್ಸನ್ನೂ ಸೂರೆಗೊಂಡನು. ಅವನು ಬಂದು ಅಮ್ಮನ ಗುಡಿಯಲ್ಲಿ ಇಳಿದುಕೊಂಡುದುದರಿಂದ ಅಮ್ಮನ ಗುಡಿಗೆ ಜನ ಹೋಗುವುದು ಹೆಚ್ಚಾಯಿತು.

ಸನ್ಯಾಸಿಯು ಮಲ್ಲಿಗೆ ಹಳ್ಳಿಯ ಬಂದ ದಿನವೇ ಎಲ್ಲರಿಗೂ ಅವನ ದರುಶನ ವಾಯಿತು. ಸನ್ಯಾಸಿಯು ಅಮ್ಮನ ಗುಡಿಯಲ್ಲಿ ಬಂದು ಕುಳಿತು, ನದಿಯಲ್ಲಿ ಸ್ನಾನಮಾಡಿ, ಉಟ್ಟಿದ್ದ ಕಾವಿಬಣ್ಣದ ಬಟ್ಟೆಗಳನ್ನು ನೆನಸಿ ಒಣಗಿಸಿಕೊಂಡು ಸಂಧ್ಯಾವಂದನೆ, ಮಾಧ್ಯಾಹ್ನಿಕ ನಿತ್ಯಕ್ರಮಗಳನ್ನು ಮಾಡಿ ಮೂರು ನಾಲ್ಕು ಗಂಟೆಗಳು ಧ್ಯಾನಾಸಕ್ತನಾಗಿ ಕುಳಿತಿದ್ದನು. ನದಿಯ ಮಧ್ಯದಲ್ಲಿ ಕುಳಿತಿದ್ದ ಅವನು ಈಶ್ವರನಂತೆ, ಪರಶುರಾಮನಂತೆ ದೇದೀಪ್ಯಮಾನನಾಗಿ ಬೆಳಗುತ್ತಿದ್ದನು. ಅವನನ್ನು ಆಗ ನೋಡಿದವರು, ಇವನು ಇದುವರೆಗೆ ಅಮ್ಮನ ಗುಡಿಯಲ್ಲಿ ಬಂದು ಇಳಿದುಕೊಳ್ಳುತ್ತಿದ್ದ ಭಂಗಿ ಬೈರಾಗಿಗಳ ಜಾತಿಯವನಲ್ಲ, ನಿಜವಾದ ಮಹಾತ್ಮನೆ ಸರಿ ಎಂದುಕೊಂಡರು. ಸುಮಾರು ಮೂರು ಗಂಟೆಯ ವೇಳೆಗೆ ಸನ್ಯಾಸಿಯು ಧ್ಯಾನದಿಂದ ಬಿಡುಗಡೆ ಹೊಂದಿ ಎದ್ದನು. ಭಗವಂತನ ಕೀರ್ತನೆಗಳನ್ನು ಪಾಡುತ್ತಾ ಮಲ್ಲಿಗೆಹಳ್ಳಿಯ ಬೀದಿಗಳೊಳಗೆ ಬಂದನು. ಸನ್ಯಾಸಿಯು

ಭಕ್ತಿಯ ಭಾರದಿಂದ ಕುಸಿಯುತ್ತಿದ್ದನು. ಅವನ ದನಿಯ ಮಾಧುರ್ಯವು ಅಮೃತವನ್ನು ತೊಟ್ಟಿಕ್ಕುತ್ತಿದ್ದಿತು. ಅವನು ಪ್ರತಿಯೊಂದು ಮನೆಯ ಬಾಗಿಲಿನಲ್ಲಿಯೂ ನಿಂತುಕೊಂಡು ಒಂದೆರಡು ಘಳಿಗೆ ಹಾಡಿ ಮುಂದಕ್ಕೆ ಹೋಗುತ್ತಿದ್ದನು. ಅವನು ಹಾಡುತ್ತಿರುವಾಗ ಮನೆಯಲ್ಲಿದ್ದವರಿಗೆಲ್ಲಾ ಯಾವುದೋ ಒಂದು ಅನಿರ್ವಚನೀಯವಾದ ಆನಂದವುಂಟಾಗುತ್ತಿದ್ದಿತು. ಅವನ ಹಾಡನ್ನು ಕೇಳಿದವರಿಗೆಲ್ಲಾ ಸನ್ಯಾಸಿಯು ತಮ್ಮ ಸುಖ ದುಃಖ ಆಸೆ ನಚ್ಚುಗಳನು ಹಾಡುತ್ತಿರು ಂತೆ ತೋರಿ ಅವನಲ್ಲಿ ಅವ್ಯಾಜವಾದ ಪ್ರೇಮವುಂಟಾಗುತ್ತಿದ್ದಿತು. ಬಹಳ ಕಾಲದ ಮೇಲೆ ಬಂದು ಹಳೆಯ ಗೆಳೆಯನನ್ನು ಕಂಡಂತೆ, ಜನರೆಲ್ಲಾ ಸನ್ಯಾಸಿಯನ್ನು ನೋಡಿ ಪ್ರಪುಲ್ಲಚಿತ್ತರಾದರು.

ಸನ್ಯಾಸಿಯು ಹಾಡುತ್ತಾ ಹೋಗುತ್ತಿರುವಾಗಲೇ ಅನೇಕರು ಅವನನ್ನು ಅನುಸರಿಸಿಕೊಂಡು ಅಮ್ಮನ ಗುಡಿಗೆ ಹೋದರು.ಅಲ್ಲಿ ನೋಡುವಲ್ಲಿ ಸನ್ಯಾಸಿಯ ವೈರಾಗ್ಯ ಅವರಿಗೆ ಚೆನ್ನಾಗಿ ಅರ್ಥವಾಯಿತು. ಅಲ್ಲಿ ಅವನದಾಗಿ ಯಾವ ಸಾಮಾನುಗಳೂ ಗಂಟು ಮೂಟೆಗಳೂ ಹಾಸಿಗೆ ವಸ್ತ್ರಗಳೂ ಇರಲಿಲ್ಲ. ಅವನ ಮೈಮೇಲಿದ್ದ ಕಾವಿಶಾಠಿಯ ಬಟ್ಟೆಗಳ ಹೊರತು ಅವನಲ್ಲಿ ಇನ್ನಾವ ವಸ್ತುಗಳೂ ಇದ್ದಂತೆ ತೋರಲಿಲ್ಲ. ಆದರೆ ಅವನನ್ನು ನೋಡಿದರೆ ಸಕಲೈಶ್ವರ್ಯ ಸಂಪನ್ನನಾದ ಈಶ್ವರನು ಭಿಕಾರಿಯಾಗಿ ತಿರುಗುತ್ತಿರುವಂತೆ ತೋರುತ್ತಿದ್ದಿತು. ಸನ್ಯಾಸಿಯು ಯಾರೊಂದಿಗೂ ಯಾವ ಮಾತನ್ನೂ ಆಡಲಿಲ್ಲ. ಆದರೂ ಅವನು ಎಲ್ಲರನ್ನೂ ಕಣ್ಣಿನಿಂದಲೇ ಮಾತನಾಡಿಸುತ್ತಿರುವಂತೆ ತೋರುತ್ತಿದ್ದಿತು. ಅಮ್ಮನ ಗುಡಿಯನ್ನು ಸೇರುವವರೆಗೆ ಸನ್ಯಾಸಿ, ತನ್ನನ್ನು ಅನುಸರಿಸಿಕೊಂಡು ತನ್ನ ಸುತ್ತಾ ಬರುತ್ತಿದ್ದ ಜನರನ್ನೂ ಬಾಲಕರನ್ನೂ ಗಮನಿಸಲಿಲ್ಲ. ಅವನು ಭಾವಪರವಶನಾದಂತೆ ಹಾಡಿನ ಹಾದಿಯನ್ನೇ ಅನುಸರಿಸಿಕೊಂಡು ಹೋಗುತ್ತಿದ್ದನು. ಜನರೂ ಮಂತ್ರದಿಂದ ಮುಗ್ಧರಾದವರಂತೆ ಅವನ ಹಿಂದೆ ಹಿಂದೆ ಹೋಗುತ್ತಿದ್ದರು.

ಸನ್ಯಾಸಿ ಭಾವಪರವಶನಾಗಿಯೇ ಇದ್ದವನಂತೆ ಅಮ್ಮನ ಗುಡಿಯ ವಿಶಾಲವಾದ ಕೈಸಾಲೆಯಲ್ಲಿ ಬಂದು ಕುಳಿತನು. ಆಗ ಸನ್ಯಾಸಿಯ ಶಿಷ್ಯ ಇಪ್ಪತ್ತೆರಡು ಇಪ್ಪತ್ತಮೂರು ವಯಸ್ಸಿನ ಯುವಕ ಒಬ್ಬನು, ಒಳಗೆ ಕುಳಿತಿದ್ದವನು ಸುಮಾರು ನಾಲ್ಕು ವಯಸ್ಸಿನ ಒಂದು ಹೆಣ್ಣು ಮಗುವನ್ನು ಎತ್ತಿಕೊಂಡು

ಹೊರಕ್ಕೆ ಬಂದನು. ಸನ್ಯಾಸಿಯೂ ಅವನ ಶಿಷ್ಯನೂ ಮೊದಲು ಅಮ್ಮನ ಗುಡಿಗೆ ಬಂದು ಅಲ್ಲಿ ಶಿಷ್ಯನೂ ಹೆಣ್ಣು ಮಗುವೂ ಉಳಿದು ಸನ್ಯಾಸಿಯೊಬ್ಬನೇ ಊರೊಳಕ್ಕೆ ಹೋಗಿದ್ದನು. ಊರಿನವರು ಸನ್ಯಾಸಿ ಒಬ್ಬನೇ ತಮ್ಮೂರಿಗೆ ಬಂದಿದ್ದಾನೆಂದುಕೊಂಡಿದ್ದರು. ಸನ್ಯಾಸಿಯ ಜೊತೆಯಲ್ಲಿದ್ದ ಮಗುವನ್ನು ನೋಡಿದ ಕೂಡಲೇ ಊರಿನವರನ್ನು ಒಂದು ಸಲ ಎತ್ತಿ ಕುಲುಕಿದಂತೆ ಆಯಿತು. ಅವರ ಮನಸ್ಸಿನಲ್ಲಿ ನಾನಾ ವಿಧವಾದ ಭಾವನೆಗಳು ಸುಳಿದವು. ಇದಕ್ಕಿದ್ದಂತೆ ಅವರಿಗೆ ಸನ್ಯಾಸಿಯಲ್ಲಿ ಮೊದಲು ಇದ್ದುದಕ್ಕಿಂತ ಹೆಚ್ಚು ಕುತೂಹಲವುಂಟಾಯಿತು. ಸನ್ಯಾಸಿ ಒಂದು ಸಲ ಆ ಮಗುವಿನ ಕಡೆ ನೋಡಿದನು. ಆ ನೋಟದಲ್ಲಿ ಯಾವ ತಾಯಿಗೂ ಮಗುವಿನ ಮೇಲೆ ಇಲ್ಲದಷ್ಟು ಪೂರ್ಣ ಪ್ರೇಮವು ತುಂಬಿದ್ದಿತು. ಸನ್ಯಾಸಿಯು ಸನ್ಯಾಸಿಯೋ, ಅಲ್ಲವೋ, ಆದರೆ ತಾವು ಒಂದು ಮಹತ್ ಪ್ರೇಮಪೂರ್ಣ ವ್ಯಕ್ತಿಯ ಎದುರಿಗೆ ನಿಂತಿರುವುದರ ಅರಿವು ಜನರಿಗೆ ಉಂಟಾಯಿತು. ಸನ್ಯಾಸಿಯ ಸುತ್ತ ಬಂದಿದ್ದವರೆಲ್ಲ ನೆರೆದು ಕುಳಿತರು. ಅವನು ಸುಮಾರು ಅರ್ಧಗಂಟೆಯ ಕಾಲ, ಹೃದಯವನ್ನು ತೆರೆದು ಭಕ್ತಿಯ ಗೀತೆಗಳನ್ನು ಪಾಡಿದನು. ಅವನು ಭಕ್ತಿಯನ್ನು ಹಾಡಿನಿಂದ ಮೊಗೆದು ಮೊಗೆದು ಹೊರಕ್ಕೆ ತೋಡಿ ಪ್ರವಾಹ ರೂಪವಾಗಿ ಹರಿಸುತ್ತಿದ್ದಂತೆ ತೋರಿತು. ಅಮ್ಮನ ಗುಡಿಯ ಕಡುವಿನಲ್ಲಿ ಪಾತ್ರೆಗಳನ್ನು ಬೆಳಗುತ್ತಿದ್ದ, ಸೀರೆಗಳನ್ನು ಒಗೆಯುತ್ತಿದ್ದ ಯುವತಿಯರೆಲ್ಲರೂ ಸನ್ಯಾಸಿಯ ಹಾಡನ್ನು ಕೇಳುವುದಕ್ಕೂ, ಬಂದು ನೆರೆದಿದ್ದ ಜನರನ್ನು ನೋಡುವುದಕ್ಕೂ ತಮ್ಮ ಸೀರೆ ಪಾತ್ರೆಗಳ ಕುಕ್ಕೆಗಳನ್ನು ನದಿಯ ಕಲ್ಲುಗಳ ಮೇಲೆಯೇ ಬಿಟ್ಟು ಗುಡಿಗೆ ಬಂದರು. ಸಂಧ್ಯಾಕಾಲದ ಸೂರ್ಯನು ಮುಳುಗುವ ಅವಸರದಲ್ಲಿದ್ದನು. ಅವನ ಹೊಂಬಣ್ಣದ ಕಿರಣಗಳು ಮೃದುವಾಗಿ ಬೆಚ್ಚಗೆ ಕಾಮನಬಿಲ್ಲಿನ ಪ್ರತಿನೆರಳಿನಂತೆ ಆ ಸನ್ಯಾಸಿಯ ಮೈಮೇಲೂ ನೆರೆದಿದ್ದ ಗಂಡಸರ ಮಕ್ಕಳ ಮೇಲೆಯೂ ಹಿಂದೆ ನೋಡುತ್ತ ನಿಂತಿದ್ದ ಪ್ರಮದೆಯರ ಮೇಲೂ ಬೀಳುತ್ತಿದ್ದವು. ಆ ಹೊಳಪಿನಲ್ಲಿ ಆ ದೇವಾಲಯವೂ ನೆರೆದ ಜನರೂ ಎದುರಿಗೆ ಹರಿಯುತ್ತಿದ್ದ ನದಿಯೂ, ಈ ಲೋಕದ ವಸ್ತುಗಳಲ್ಲದೆ ಯಾವದೋ ಅಮರಲೋಕದ ವಸ್ತುಗಳಾಗಿ ತೋರುತ್ತಿದ್ದುವು.

ಸನ್ಯಾಸಿಯು ಹಾಡುವುದನ್ನು ನಿಲ್ಲಿಸಿ ಪ್ರಸನ್ನಮುಖಿಯಾಗಿ ಸುತ್ತಲೂ ನೆರೆದಿದ್ದವರನ್ನು ನೋಡಿದನು. ಅನಂತರ ಎಲ್ಲರ ಯೋಗಕ್ಷೇಮವನ್ನು

ವಿಚಾರಿಸಿದನು. ಊರಿನವರು "ನಿಮ್ಮ ಸ್ಥಳ ಯಾವುದು ; ಎಲ್ಲಿಂದ ಬಂದಿರಿ, ಎಲ್ಲಿಗೆ ಹೋಗುತ್ತಿದ್ದೀರಿ ? ಈ ಊರು ಚೆನ್ನಾಗಿದೆ. ಈ ನದಿಯ ತೀರದ ದೇವಸ್ಥಾನ ಮನೋಹರವಾಗಿದೆ. ಇಲ್ಲಿಯೇ ನಿಂತುಬಿಡಿ" ಎಂದೂ ಮುಂತಾಗಿ ಬಲಾತ್ಕರಿಸಿದರು. ಸನ್ಯಾಸಿಯು "ಈ ಜಡಕ್ಕೆ ಯಾವ ಊರಾದರೇನು? ಯಾವ ಕಾಡು ಆದರೇನು? ಈ ಜಡದಿಂದ ಉಳಿದವರಿಗೆ ತೊಂದರೆಯಾಗಬಾರದು ಅಷ್ಟೆ" ಎಂದನು. ಹಳ್ಳಿಯ ಮುಖಂಡರು "ಅಯ್ಯೊ, ಹಾಗೆಂದರೇನು ? ನಮಗೆ ತೊಂದರೆಯೆ ? ನೀವು ಬಂದುದು ದೇವರು ಬಂದಂತೆ ಆಯಿತು. ಇಲ್ಲಿಯೇ ನಿಮ್ಮ ಆಶ್ರಮವನ್ನು ಸ್ಥಾಪಿಸಿಬಿಡಿ" ಎಂದರು. ಸನ್ಯಾಸಿಯು ಅಮ್ಮನ ಗುಡಿಯಲ್ಲಿಯೇ ನಿಂತನು. ಅಲ್ಲಿಂದ ಮುಂದೆ ನಿತ್ಯವೂ ಸಾಯಂಕಾಲ ೬ ಗಂಟೆಗೆ ಸನ್ಯಾಸಿಯು ಅಮ್ಮನ ಗುಡಿಯಲ್ಲಿ ಪ್ರಾರ್ಥನೆ ಮಾಡುತ್ತಿದ್ದನು. ಭಕ್ತಿಗೀತೆಗಳನ್ನು ಹಾಡುತ್ತಿದ್ದನು. ಅವನ ದೇಹವೂ ಮನಸ್ಸೂ ಯಾವಾಗಲೂ ಗಾನದಲ್ಲಿಯೇ ಲೀನವಾಗಿದ್ದಂತೆ ತೋರುತ್ತಿದ್ದಿತು. ಅಂತೂ ಊರಿನವರೆಲ್ಲಾ ದಿವಸಕ್ಕೆ ಒಂದು ಸಲ ಆ ಪ್ರಾರ್ಥನೆ ವೇಳೆಯಲ್ಲಿ ದೇವಸ್ಥಾನಕ್ಕೆ ಬರುತ್ತಿದ್ದರು.

ಸನ್ಯಾಸಿಯು ಬಹಳ ದೇಹದಂಡನೆಯ ಜೀವನವನ್ನು ನಡೆಸುತ್ತಿದ್ದನು. ಅವನು ನಿದ್ರೆ ಮಾಡುತ್ತಿರುವಂತೆಯೇ ತೋರುತ್ತಿರಲಿಲ್ಲ. ರಾತ್ರಿಯಿಂದ ಬೆಳಗಿನವರೆಗೆ ಅವನ ಹಾಡು ಜನಕ್ಕೆ ಕೇಳಿಸುತ್ತಲೇ ಇದ್ದಿತು. ಅವನು ಬೆಳಗಿನ ಜಾವ ನಾಲ್ಕು ಗಂಟೆಗೆ ನದಿಯಲ್ಲಿ ಸ್ನಾನ ಮಾಡುತ್ತಿದ್ದನು. ಇಷ್ಟಾದರೂ ಅವನ ದೇಹವೂ ಮುಖವೂ ಬಳಲಿಕೆಯ ಚಿಹ್ನೆಯನ್ನು ತೋರಿಸುತ್ತಿರಲಿಲ್ಲ. ರಾತ್ರಿಯೆಲ್ಲಾ ಅವನ ಹಾಡುಗಳನ್ನು ಕೇಳಿದ್ದ ಹಳ್ಳಿಯವರು, ಬೆಳಗ್ಗೆ ಅವನು ಜಾಗರಣೆಯಿಂದ ಸುಸ್ತಾಗಿರುವನೆಂದುಕೊಂಡು ಗುಡಿಗೆ ಹೋಗಿ ನೋಡಿದರೆ ಸನ್ಯಾಸಿಯು ಎಂದಿನಂತೆ ಹಸನ್ಮುಖನಾಗಿ ಹಕ್ಕಿಯಂತೆ ಹಗುರವಾದ ಮೈಯುಳ್ಳವನಾಗಿರುತ್ತಿದ್ದನು. ಅವನನ್ನು ನೋಡಿದರೆ ಸ್ವಲ್ಪವೂ ಬಳಲಿಕೆಯಿಲ್ಲದೆ ಅಮೃತಪಾನವನ್ನು ಮಾಡಿದವನಂತೆ ತೋರುತ್ತಿದ್ದನು. ಅವನ ಕಾಲವೆಲ್ಲಾ ಬೆಳಗ್ಗೆ ಭಗವದ್ಗೀತೆ, ಮಧ್ಯಾಹ್ನ ರಾಮಾಯಣ, ಸಾಯಂಕಾಲ ಪ್ರಾರ್ಥನೆ, ರಾತ್ರಿ ಭಾರತ ಇವುಗಳಲ್ಲಿಯೂ ಉಳಿದ ಕಾಲವೆಲ್ಲಾ ಹಾಡುಗಳನ್ನು ಹಾಡುವುದರಲ್ಲಿಯೂ ಕಳೆಯುತ್ತಿದ್ದಿತು. ಬರಬರುತ್ತಾ ಸನ್ಯಾಸಿಯ ಕಾರ್ಯಕ್ರಮವೇ ಊರಿನವರ ಕಾರ್ಯಕ್ರಮವಾಯಿತು. ಭಗವದ್ಗೀತೆ, ರಾಮಾಯಣ, ಪ್ರಾರ್ಥನೆ,

ಭಾರತ ಎಲ್ಲವನ್ನೂ ಎಲ್ಲರೂ ಕೇಳತೊಡಗಿದರು. ಊರಿನ ಬಹುಭಾಗದ ಜನ ತಮ್ಮ ಬಹುಕಾಲವನ್ನು ಅಮ್ಮನ ಗುಡಿಯಲ್ಲಿ ಕಳೆಯತೊಡಗಿದರು. ಅದೇ ಅವರಿಗೆ ಭಗವತ್ಸಾನಿಧ್ಯವೂ ವಿಶ್ರಾಂತಿಗೃಹವೂ ಆರಾಮಗೃಹವೂ ಆಯಿತು.

ಸನ್ಯಾಸಿಯ ಪಾಂಡಿತ್ಯವೂ ಪ್ರತಿಭೆಯೂ ಅಪಾರವಾಗಿದ್ದವು. ಅವನಿಗೆ ಕನ್ನಡ ಸಂಸ್ಕೃತ ತಮಿಳು ಈ ಎಲ್ಲಾ ಭಾಷೆಗ್ರಂಥಗಳೂ ತಿಳಿದಿದ್ದಿತು. ವೇದಾಂತ ಜ್ಞಾನವೂ ಅವನಿಗೆ ಚೆನ್ನಾಗಿದ್ದಿತು. ಶಂಕರ ರಾಮಾನುಜ ಮಾಧ್ವ ಸಂಪ್ರದಾಯಗಳನ್ನೆಲ್ಲ ಅವನು ಚೆನ್ನಾಗಿ ತಿಳಿದಿದ್ದನು. ಅವನ ಜಾತಿ ಯಾವುದು ಎಂಬುದು ಯಾರಿಗೂ ತಿಳಿಯುವಂತೆ ಇರಲಿಲ್ಲ. ಅವನನ್ನು ನೋಡಿದರೆ ಇವನ ಜಾತಿ ಮಾನವಜಾತಿ ಎಂದು ಮಾತ್ರ ತೋರುತ್ತಿದ್ದಿತು. ಅವನ ಪ್ರತಿಯೊಂದು ಮಾತೂ ಮಾನವ ಪ್ರೇಮದಿಂದ ತುಂಬಿದ್ದವು. ಆ ಮಾತುಗಳು ಜಾತಿ ಕುಲ ಗೋತ್ರಗಳ ಬಂಧನವನ್ನು ಮೀರಿದ್ದುವು. ರಾಮಾಯಣ ಭಾರತ ಭಾಗವತಗಳನ್ನು ಅವನು ವಿವರಿಸುವುದೂ, ಅವುಗಳಿಗೆ ವ್ಯಾಖ್ಯಾನ ಮಾಡುವುದೂ ಜನರನ್ನು ಪುಳಕಿತರನ್ನಾಗಿ ಮಾಡುತ್ತಿದ್ದುವು. ಕರುಣರಸವು ಬಂದಾಗಲಂತೂ ಸನ್ಯಾಸಿಯು ತನ್ನನ್ನು ತಾನು ಮರೆಯುತ್ತಿದ್ದನು. ಅವನ ದೇಹವು ಕರುಣರಸದ ಭಾರವನ್ನು ತಡೆಯಲಾರದೆ ಬಾಗುತ್ತಿದ್ದಿತು. ಕಂಠವು ಗದ್ಗದವಾಗುತ್ತಿದ್ದಿತು. ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿದ್ದಿತು. ಮಧ್ಯೆ ಮಧ್ಯೆ ಮಾತು ನಿಂತುಹೋಗುತ್ತಿದ್ದಿತು. ರಾಮಾಯಣ ಭಾರತಗಳಿಗೆ ಹೀಗೆ ವ್ಯಾಖ್ಯಾನ ಮಾಡಿದವರನ್ನು ಹಳ್ಳಿಯವರು ಕಂಡಿರಲಿಲ್ಲ. ಅವರ ಕಣ್ಣುಗಳಿಂದಲೂ ಆನಂದಬಾಷ್ಪಗಳು ಹರಿಯುತ್ತಿದ್ದುವು. ಸನ್ಯಾಸಿ ಯಾವಾಗಲೂ ಧ್ಯಾನಾಸಕ್ತನಾಗಿ ಗಾನಾಸಕ್ತನಾಗಿ ಇರುತ್ತಿದ್ದನು. ಸನ್ಯಾಸಿಯ ಶಿಷ್ಯ ಸನ್ಯಾಸಿಯ ವೈರಾಗ್ಯಕ್ಕಿಂತ ಹೆಚ್ಚಾಗಿ ಅವನ ಗಾನಕ್ಕಾಗಿಯೇ ಅವನನ್ನು ಅನುಸರಿಸುತ್ತಿರುವಂತೆ ತೋರಿತು. ಸನ್ಯಾಸಿ ಸ್ವಲ್ಪವೂ ಬೇಸರಿಕೆ ಇಲ್ಲದೆ ಶಿಷ್ಯನಿಗೆ ಯಾವಾಗಲೂ ಸಂಗೀತವನ್ನು ಬೋಧಿಸುತ್ತಿದ್ದನು. ಅವರಿಬ್ಬರೂ ಸಂಗೀತದ ಪೂರ್ಣ ಉಪಾಸಕರಾಗಿ ಅದರಲ್ಲಿಯೇ ಲೀನವಾಗಿದ್ದರು. ಶಿಷ್ಯನು ಅಡಿಗೆಯ ಕೆಲಸಗಳನ್ನು ಮಾಡುತ್ತಿದ್ದನು. ಮಗುವನ್ನು ತಾಯಿಯಂತೆ ಸಾಕುತ್ತಿದ್ದನು. ಮಗು ಅತ್ತರೆ ಹಾಡಿಯೇ ಅದನ್ನು ಸಮಾಧಾನಪಡಿಸುತ್ತಿದ್ದನು. ಸನ್ಯಾಸಿ ಮಗುವನ್ನು ಯಾವಾಗಲೂ ಎತ್ತಿಕೊಳ್ಳುತ್ತಿರಲಿಲ್ಲ.

ಆದರೆ ಅವನ ಪ್ರೇಮಪೂರ್ಣವಾದ ದೃಷ್ಟಿಯೇ ಮಗುವನ್ನು ಪೂರ್ಣವಾಗಿ ಆವರಿಸಿ ಆಲಿಂಗಿಸಿಕೊಳ್ಳುತ್ತಿದ್ದಿತು.

ಸನ್ಯಾಸಿಯ ಜತೆಯಲ್ಲಿ ಮಗುವಿದ್ದುದರಿಂದ ಮಲ್ಲಿಗೆ ಹಳ್ಳಿಯವರಿಗೆ ಸನ್ಯಾಸಿಯಲ್ಲಿದ್ದ ಪ್ರೇಮಗೌರವಗಳೂ ಇನ್ನೂ ಹೆಚ್ಚೇ ಆದವು. ಇದು ಬರಿಯ ಒಣಕಾಷ್ಟವಲ್ಲ, ಕಷ್ಟಸುಖಗಳನ್ನು ಅರಿತಿರುವ ಪ್ರೇಮದ ಮೂರ್ತಿ ಎಂದು ಜನ ಸನ್ಯಾಸಿಯ ಬಳಿಗೆ ಹೆಚ್ಚು ಹೆಚ್ಚಾಗಿ ಬರತೊಡಗಿದರು. ಜನ್ಮ ಬಂಜೆಯರೂ ಕೆಲವು ಕೃಪಣರೂ "ಇದಾವ ಸನ್ಯಾಸಿ ಮಗುವಿನೊಂದಿಗೆ ತಿರುಗುತ್ತಿದ್ದಾನೆ" ಎಂದು ಮೂಗು ಮುರಿದರೂ, ಜತೆಯಲ್ಲಿ ಮಗುವಿದ್ದುದರಿಂದ ಸನ್ಯಾಸಿ ಜನರಿಗೆ ಹೆಚ್ಚು ಪ್ರಿಯನಾದನು. ಅವನ ವಿಷಯದಲ್ಲಿ ದುರ್ಭಾವನೆ ಹೊಂದುವದು ಯಾರಿಗೂ ಸಾಧ್ಯವಿರಲಿಲ್ಲ. ವೃದ್ಧರಾದ ಮಲ್ಲಿಗೆ ಹಳ್ಳಿ ದೀಕ್ಷಿತರಿಗೆ ಮಾತ್ರ, ಸನ್ಯಾಸಿಯ ಜತೆಯಲ್ಲಿದ್ದ ಮಗುವನ್ನು ನೋಡಿದ ಕೂಡಲೇ 'ಇದನ್ನು ಎಲ್ಲಿಯೋ ನೋಡಿದಂತಿದೆ' ಎಂಬ ಭಾವ ಬರುತ್ತಿದ್ದಿತು. ಆದರೆ ಎಲ್ಲಿ ಎಂಬುದು ಖಚಿತವಾಗಿ ಗೊತ್ತಾಗಲಿಲ್ಲ.

೨

ಸನ್ಯಾಸಿ, ಸನ್ಯಾಸಿಯಾಗುವುದಕ್ಕೆ ಮುಂಚೆ ನಮ್ಮ ನಾಡಿನ ಕೊನೆಯಾದ ಒಂದು ಮಲೆನಾಡು ಹಳ್ಳಿಯಲ್ಲಿ ವಾಸವಾಗಿದ್ದನು. ಅದೇ ಅವನ ಊರಾಗಿದ್ದಿತು. ಆಗ ಅವನು ಇನ್ನೂ ವಿದ್ಯಾರ್ಥಿಯಾಗಿ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ರಜಾ ಬಂದಾಗ, ಬೆಂಗಳೂರಿನ ಕಾಲೇಜಿನಿಂದ ತನ್ನ ಹಳ್ಳಿಗೆ ಬಂದು ರಜಾ ಕಾಲವನ್ನು ಪೂರ್ತಾ ಹಳ್ಳಿಯಲ್ಲಿಯೇ ಕಳೆಯುತ್ತಿದ್ದನು. ಸ್ವಭಾವದಿಂದ ರಸಿಕನಾದ ಅವನಿಗೆ ಬೆಂಗಳೂರಿನ ಗಾಯನ ಸಮಾಜದ ಸಂಗೀತ ಕಚೇರಿಗಳನ್ನು ಕೇಳಿ ಕೇಳಿ, ಸಿನಿಮಾಗಳನ್ನು ನೋಡಿ ನೋಡಿ ಸುಮಾರಾಗಿ, ಸಂಗೀತದಲ್ಲಿ ಪಾಂಡಿತ್ಯವೇ ಉಂಟಾಗಿತ್ತು. ಚಂಪೆ, ಅರೈಕುಡಿ, ಶಂಬಂಗುಡಿ, ಮುಸುರಿ, ಟೈಗರ್, ಗಾವಿಬಿ (ಗಾನವಿಶಾರದ ಬಿಡಾರದ ಕೃಷ್ಣಪ್ಪ) ಇವರುಗಳ ಕೀರ್ತನೆಗಳನ್ನು ಚೆನ್ನಾಗಿ ಹಾಡುವುದನ್ನು ಅವನು ಕಲಿತಿದ್ದನು. ಬರಬರುತ್ತಾ ಸಂಗೀತದಲ್ಲಿಯೇ ಹೆಚ್ಚು ಉತ್ಸಾಹವುಳ್ಳವನಾಗಿ ಒಬ್ಬ ಗಾಯಕರ ಬಳಿಯಲ್ಲಿ ಶಿಕ್ಷಣವನ್ನು ತೆಗೆದುಕೊಳ್ಳಲಾರಂಭಿ

ಸಿದನು. ಹಳ್ಳಿಗೆ ಬಂದ ಕಾಲದಲ್ಲಿ ಅವನು ಯಾವಾಗಲೂ ಮನೆಯಲ್ಲಿ ಹಾಡುತ್ತಾ ಒಳ್ಳೊಳ್ಳೆಯ ಕೀರ್ತನೆಗಳನ್ನೂ ಹಾಡುಗಳನ್ನೂ ಹೇಳಿಕೊಳ್ಳು ತ್ತಿದ್ದನು. ಹಾಡುವಾಗ ಶ್ರೀಧರನು ಹೊಂದುತ್ತಿದ್ದ ಆವೇಶವನ್ನು ನೋಡಿ ಅವನ ವೈದಿಕನಾದ ತಂದೆಯು "ಎರಡು ಇಂಗ್ಲಿಷ್ ಅಕ್ಷರ ಕಲಿತು ಯಾವ ದಾದರೂ ಸರ್ಕಾರಿ ಕೆಲಸಕ್ಕೆ ಸೇರಿ ಜೀವನ ಹೊರಕೊಳ್ಳಲಿ ಅಂತ ಇವನನ್ನು ಬೆಂಗಳೂರಿಗೆ ಕಳುಹಿಸಿದರೆ, ಇವನು ತಂಬೂರಿ ಹಿಡಿದುಕೊಂಡು ಊರೂರು ಸುತ್ತಲು ಸಿದ್ಧನಾಗುವಂತೆ ಕಾಣುತ್ತಿದೆ. ಈ ಏಕನಾದ ಭಿಕಾರಿಯಾಗುವು ದಕ್ಕೆಯೇ ನಾನು ಹೊಟ್ಟೆಬಟ್ಟೆ ಕಟ್ಟಿ ಸಾಲಮಾಡಿ, ಮಾನ ಅವಮಾನ ಒಂದನ್ನೂ ನೋಡದೆ, ಹೋದ ಕಡೆಗಳಲ್ಲೆಲ್ಲಾ ಪೌರೋಹಿತ್ಯದ ದಕ್ಷಿಣೆ ಒಂದು ಬರೋ ಜಾಗದಲ್ಲಿ ಎರಡು ವಸೂಲ್ಮಾಡಿ ಇವನಿಗೆ ತಿಂಗಳು ತಿಂಗಳು ಹಣ ಒದಗಿಸಿದ್ದು" ಎಂದು ರೇಗಾಡುತ್ತಿದ್ದರು. ಆದರೆ ಶ್ರೀಧರನ ತಾಯಿ "ಯಾಕೆ ಹೀಗೆ ರೇಗ್ತೀರಿ, ಸುಮ್ನಿರಿ ಅಂದ್ರೆ, ಅವನ ಪಾಡಿಗೆ ಅವನು ಪ್ರತಿ ವರ್ಷವೂ ಪ್ಯಾಸ್ ಮಾಡ್ತಾ ಇಲ್ವೆ. ಹಾಡು ಹಾಡಿಕೊಂಡರೆ ನಿಮಗೇನು ನಷ್ಟ" ಎಂದು ಸಮಾಧಾನ ಮಾಡುತ್ತಿದ್ದಳು.

ಚಂದ್ರವಳ್ಳಿಯ ಜನರಿಗೆ ಶ್ರೀಧರ ಹೆಚ್ಚು ಪ್ರಿಯನಾಗಲು ಅವನ ಸಂಗೀತ ಕಾರಣವಾಗಿತ್ತು. ಚಂದ್ರವಳ್ಳಿಯಲ್ಲಿ ಒಂದು ಮಿಡಲ್ ಸ್ಕೂಲ್ ಇತ್ತು. ಆದರೆ ಗ್ರಾಮಸ್ಥರು ಎಷ್ಟು ವಿಧವಾಗಿ ಹೇಳಿಕೊಂಡರೂ ಸರ್ಕಾರದವರು ಒಬ್ಬ ಸಂಗೀತ ಉಪಾಧ್ಯಾಯರನ್ನಾಗಲಿ ಉಪಾಧ್ಯಾಯಿನಿಯನ್ನಾಗಲಿ ಆ ಊರಿಗೆ ಕೊಡಲಿಲ್ಲ. ಗ್ರಾಮದಲ್ಲಿ ಅನೇಕ ಹುಡುಗಿಯರು ಬೆಳೆದು ಮದುವೆಗೆ ಸಿದ್ಧ ವಾಗುತ್ತಿದ್ದರು. ಅವರಿಗೆ ಸ್ವಲ್ಪ ಸಂಗೀತ ಕಲಿಸೋಣವೆಂದರೆ ಊರಿನಲ್ಲಿ ಸಂಗೀತದ ಉಪಾಧ್ಯಾಯರು ಇರಲಿಲ್ಲ. ಬೇರೆ ಊರಿನಿಂದ ಒಬ್ಬ ಸಂಗೀತ ಗಾರನನ್ನು ಕರೆಸಿಕೊಂಡು ಅವನಿಂದ ಮಕ್ಕಳಿಗೆ ಪಾಠ ಹೇಳಿಸಿ, ಅವನನ್ನು ಸಾಕುವಷ್ಟು ಶಕ್ತಿ ಚಂದ್ರವಳ್ಳಿಯಲ್ಲಿ ಯಾರಿಗೂ ಇರಲಿಲ್ಲ. ಆದುದರಿಂದ, ಮಿಡಲ್ ಸ್ಕೂಲಿನ ಉಪಾಧ್ಯಾಯರ ಪೈಕಿ ಒಬ್ಬರು ಸಂಗೀತ ತಿಳಿದವರನ್ನು, ಈ ಊರಿಗೆ ಹಾಕಿಕೊಡಿ ಎಂದು ಜನರು ವಿದ್ಯಾ ಇಲಾಖೆಗೆ ಬರೆದುಕೊಂಡರು. ಚಂದ್ರವಳ್ಳಿಯ ಮುಂದೆ ಒಂದು ಸಲ ಮಂತ್ರಿಗಳು ಕಾರಿನಲ್ಲಿ ಸರ್ಕೀಟು ಹೋಗುತ್ತಿರುವಾಗ ಗ್ರಾಮಸ್ಥರು ಅರ್ಜಿಗಳೊಂದಿಗೆ ಆ ಕಾರನ್ನು ಅಡ್ಡಹಾಕಿ

'ಈ ಕಾಲದಲ್ಲಿ ಹುಡುಗಿಯರಿಗೆ ಸಂಗೀತವಿಲ್ಲದಿದ್ದರೆ ಮದುವೆ ಮಾಡುವುದೇ ಕಷ್ಟವಾಗುತ್ತೆ. ದಯವಿಟ್ಟು ಒಬ್ಬ ಸಂಗೀತಗಾರ ಮೇಷ್ಟ್ರನ್ನು ಕೊಡಿ' ಎಂದರು. ಮಂತ್ರಿಗಳು ಕೋಪದಿಂದ 'ಯಾವುದಕ್ಕೂ ಸರ್ಕಾರ ಕೇಳೋದೆ ನೀವು ಕಂಡಿರುವುದು' ಎಂದು ಮುಂದೆ ಕಾರು ಬಿಟ್ಟರು. ಗ್ರಾಮಸ್ಥರು 'ಸ್ವಾಮಿ, ನಾವು ಇದಕ್ಕಾಗಿ ಸರ್ಕಾರದ ಮೇಲೆ ಚಳುವಳಿ ಹೂಡಬೇಕಾಗುತ್ತೆ' ಎಂದರು. ಮಂತ್ರಿಗಳು ಚಳುವಳಿ ಎಂದರೆ ಜವಾಬ್ದಾರಿ ಸರ್ಕಾರದ ಚಳುವಳಿ ಎಂದು ತಿಳಿದುಕೊಂಡು, ಕೋಪದಿಂದ, ಚಂದ್ರವಳ್ಳಿಯಲ್ಲಿ ಒಂದು ಪೋಲಿಸ್ ಸ್ಟೇಷನ್ ಸ್ಥಾಪನೆ ಮಾಡಿ ಅಲ್ಲಿ ಶಾಶ್ವತವಾಗಿ ನಾಕ್ಕು ರಿಸರ್ವ್ ಇಟ್ಟರು. ಹೀಗೆ ಸಂಗೀತಗಾರನು ಬೇಕೆಂದು ಬಯಸಿದರೆ ಬಂದೂಕಗಾರನು ಬಂದುದ ರಿಂದ ಹಳ್ಳಿಯವರು ನಿರಾಶರಾಗಿ ಶ್ರೀಧರನು ರಜಾ ಕಾಲದಲ್ಲಿ ಊರಿಗೆ ಬಂದಾಗ ಹುಡುಗಿಯರಿಗೆ ನಾಲ್ಕಾರು ಹಾಡುಗಳನ್ನು ಹೇಳಿಕೊಡುವಂತೆ ಕೇಳಿ ಕೊಂಡರು. ಶ್ರೀಧರನಿಗೆ ಮೊದಲು ಮೊದಲು ಸಂಕೋಚವಾದರೂ ಕೊನೆ ಯಲ್ಲಿ ಅವನು ಒಪ್ಪಿ ಪ್ರತಿದಿನವೂ ಹುಡುಗಿಯರಿಗೆ ಹಾಡು ಹೇಳಿ ಕೊಡು ತ್ತಿದ್ದನು.

ಶ್ರೀಧರ ಈ ಹಾಡಿನ ಶಿಕ್ಷಣವನ್ನು ಸಂಗೀತ ಶಾಲೆಯಂತೆಯೇ ನಡೆಸು ತ್ತಿದ್ದನು. ತನ್ನಲ್ಲಿ ಪಾಠಕ್ಕೆ ಬರುತ್ತಿದ್ದ ಹತ್ತು ಹುಡುಗಿಯರನ್ನು ಸಾಲಾಗಿ ಕುಳ್ಳಿರಿಸಿ ಅವರಿಗೆ ಹಾಡುಗಳನ್ನು ಹೇಳಿಕೊಡುತ್ತಿದ್ದನು. ಅವರೆಲ್ಲರೂ ಅವನ ಧಾಟಿಯನ್ನೇ ಅನುಸರಿಸಿ ಹಾಡುತ್ತಿದ್ದರು. ಎಲ್ಲಾ ಹುಡುಗಿಯರೂ ಹಾಗೂ ಹೀಗೂ ಹೇಳಿಕೊಟ್ಟ ಹಾಡುಗಳನ್ನು ಕಲಿತರು. ಆದರೆ ಕಲ್ಯಾಣಿ ಮಾತ್ರ ತಾನು ಹಾಡುತ್ತಿದ್ದ ಹಾಡಿಗೆ ಒಂದು ಹೊಸ ಸೊಗಸನ್ನು ಕೊಡುತ್ತಿದ್ದಳು. ಅವಳ ಧ್ವನಿ ಕೋಗಿಲೆಯ ದನಿಯಂತೆ ಇತ್ತು. ಅವಳು ಹಾಡುಗಳನ್ನು ಬಹು ಸುಲಭವಾಗಿ ಗ್ರಹಿಸುತ್ತಿದ್ದಳು. ರೂಪದಲ್ಲಿ ಗಂಧರ್ವಕನ್ನಿಕೆಯಾಗಿದ್ದಳು. ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದಳು. ಶ್ರೀಧರನೂ ಅವಳ ರೂಪವನ್ನೂ ಗುಣ ವನ್ನೂ ದೇವಲೋಕದ ಆ ಕಂಠವನ್ನೂ ನೋಡಿ ನೋಡಿ ಕೇಳಿ ಕೇಳಿ ಮುಗ್ಧ ನಾದನು. ಆಹಾ, ಈ ಹುಡುಗಿಗೆ ಮಾತ್ರ ಸಂಗೀತದಲ್ಲಿ ಒಳ್ಳೆಯ ಶಿಕ್ಷಣವನ್ನು ಕೊಟ್ಟರೆ ಸರಸ್ವತಿಯೇ ಆಗುತ್ತಾಳೆ. ಭಗವಂತ, ಇವಳು ಪಟ್ಟಣದಲ್ಲಿ ಎಲ್ಲಾ ದರೂ ಶ್ರೀಮಂತನ ಮನೆಯಲ್ಲಿ ಜನಿಸಿದ್ದರೆ ಸಂಗೀತ ಸಾಹಿತ್ಯ ಎರಡರಲ್ಲಿಯೂ

ಪಾರಂಗತಳಾಗುತ್ತಿದ್ದಳು. ರಸಿಕನೊಬ್ಬನು ಆಸೆಯಿಂದ ಬಂದು ಹೂವನ್ನು ಎತ್ತಿಕೊಳ್ಳುವಂತೆ ಮೃದುವಾಗಿ ಇವಳನ್ನು ಎತ್ತಿಕೊಂಡು ಹೃದಯ ಮಂದಿರ ದಲ್ಲಿ ಪೂಜಿಸುತ್ತಿದ್ದ. ನಮ್ಮ ದೇಶದಲ್ಲಿ ಅಲ್ಲದೆ ಇನ್ನಾವ ದೇಶದಲ್ಲಿ ಹುಟ್ಟಿ ದ್ದರೂ ಇವಳು ತನ್ನ ಜೀವನದಲ್ಲಿ ಸಾರ್ಥಕವನ್ನು ಹೊಂದುತ್ತಿದ್ದಳು. ಆದರೆ ಇಲ್ಲೋ, ಭಗವಂತ ಈ ಮಲ್ಲಿಗೆ ಅನುಭವಿಸುವವರಿಲ್ಲದೆ ಬಿದ್ದು ಬಾಡುವುದು ಎಂದುಕೊಂಡ.

ಕಲ್ಯಾಣಿಯ ವಯಸ್ಸು ಹದಿನಾಲ್ಕು ಆಗಿತ್ತು. ಅವಳು ಹತ್ತು ವರುಷ ದಿಂದಲೂ ಬೆಳೆಯುತ್ತಿರುವುದನ್ನು ಶ್ರೀಧರ ನೋಡಿದ್ದ. 'ನಾನು ಯಾಕೆ ಅವಳನ್ನು ಮದುವೆಯಾಗಬಾರದು. ಆಗ ನನ್ನಂತಹ ಸುಖಿ ಯಾರು ?' ಎಂದುಕೊಂಡ. ಆದರೆ ಹಾಗೆ ಆಗಲಾರದೆಂದು ಅವನಿಗೆ ಒಂದು ವಿಧವಾದ ಭಯವಿತ್ತು. ಅದು ಹೇಗೋ ಸರಿಯಾದ ಕಾರಣವಿಲ್ಲದೆ ಅವನ ಮನಸ್ಸಿನಲ್ಲಿ ಬೇರೂರಿತ್ತು. ಕಲ್ಯಾಣಿ ಅದೇ ಊರಿನ ನರಹರಿಯ ತಂಗಿಯ ಮಗಳು. ನರಹರಿಯ ತಂಗಿ ವಿಧವೆಯಾಗಿ ಊರಿಗೆ ಬಂದು, ಒಬ್ಬಳೇ ಅಣ್ಣನ ಮನೆ ಯಲ್ಲಿರುತ್ತಿದ್ದಳು. ಅವಳ ತಂದೆ ತಾಯಿ ಇಬ್ಬರೂ ತೀರಿಹೋಗಿದ್ದರು. ಗಂಡನ ಮನೆಯಲ್ಲಿ ಯಾವ ಆಸ್ತಿಯೂ ಇರಲಿಲ್ಲ. ಸಣ್ಣ ಸರ್ಕಾರಿ ನೌಕರಿ ಯಲ್ಲಿದ್ದ ಗಂಡ ತೀರಿಕೊಂಡ ಮೇಲೆ ಅಲ್ಪಸ್ವಲ್ಪ ಇನ್ಷುರೆನ್ಸ್ ಹಣ ಬಂದಿತ್ತು. ಕಲ್ಯಾಣಿಯ ತಾಯಿ ಹಣ ಅಣ್ಣನ ಕೈಯಲ್ಲಿ ಕೊಟ್ಟಳು. ಅವನು ಬೇಡ ವೆಂದರೂ ಕೇಳದೆ ಆ ಹಣಕ್ಕೆ ಸ್ವಲ್ಪ ಜಮೀನನ್ನು ಕೊಂಡುಕೊಂಡನು. ಆ ಹುಡುಗಿಯನ್ನು ತಾನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಶ್ರೀಧರನು ಮನೆಯಲ್ಲಿ ಹೇಳಿದಾಗ ಅವನ ತಂದೆ ತಾಯಿಗಳು ಅಟ್ಟಕ್ಕೆ ಹಾರಿ ಬೆಟ್ಟದಿಂದ ಬಿದ್ದರು. ನಮ್ಮಲ್ಲಿ ನೂರಾರು ಸಾವಿರಾರು ಒಳಜಾತಿಗಳಿವೆಯಲ್ಲ. ಒಂದು ಜಾತಿಯ ಹೆಣ್ಣನ್ನು ಇನ್ನೊಂದು ಜಾತಿಗೆ ತರಬಾರದಂತೆ. ಅದರಲ್ಲೂ ವೈದಿಕ ಜಾಡ್ಯದವನಾದ ಶ್ರೀಧರನ ತಂದೆ "ನನ್ನ ಕುಲಕೋಟಿಯನ್ನು ನೀನು ನರಕದಲ್ಲಿ ಅದ್ದುವುದಾದರೆ ನಾನು ನೇಣುಹಾಕಿಕೊಂಡು ಪ್ರಾಣಬಿಡುತ್ತೇನೆ" ಎಂದನು. ಶ್ರೀಧರ "ಅಪ್ಪ, ಹಾಗಾದರೆ ನಾನು ಈ ಜನ್ಮದಲ್ಲಿ ದಾಂಪತ್ಯ ಸುಖ ಕಾಣುವಂತೆಯೇ ಇಲ್ಲ" ಎಂದನು. ಶ್ರೀಧರನ ತಂದೆಯು ಕೋಪ ದಿಂದ "ತಂಬೂರಿ ಹಿಡಿದುಕೊಂಡು ಭಿಕಾರಿಯಾಗಿ ದೇಶದ ಮೇಲೆ ಜೋಗಿ

ಯಂತೆ ತಿರುಗು, ನಿನಗೆ ಹಾಡುಗಳು ಬರುತ್ತವೆಯಲ್ಲ" ಎಂದನು. ಶ್ರೀಧರನು ಕಳವು ಮಾಡುತ್ತೇನೆಂದಿದ್ದರೂ ಅವನ ತಂದೆಗೆ ಕಲ್ಯಾಣಿಯನ್ನು ಮದುವೆ ಯಾಗುತ್ತೇನೆ ಎಂದುದರಿಂದ ಬಂದ ಸಿಟ್ಟು ಬರುತ್ತಿರಲಿಲ್ಲ. "ಇಂತಹ ವೈದಿಕನ ಮಗನಾಗಿ ಜಾತಿಬಿಟ್ಟು ಜಾತಿಯ ಹೆಣ್ಣು ತರುವುದೇ ? ನಿನಗೆ ಎರಡು ಕುರುಡು ಇಂಗ್ಲಿಷ್ ಬಂದರೆ ನೀನು ಕಿರಿಸ್ತಾನನೇ ಆಗಿಬಿಟ್ಟೆಯೊ. ರಘುರಾಮನ ಮಗಳು ಜಾನಕಿ ಏನಾಗಿದ್ದಾಳೆ. ಆಚಾರವೂ ಇದೆ, ರೂಪು ಇದೆ. ರಘುರಾಮನಿಗೆ ಗಂಡು ಸಂತತಿ ಇಲ್ಲ. ಕೊನೆಯ ಪಕ್ಷ ಇಪ್ಪತ್ತು ಸಾವಿರ ಆಸ್ತಿಗೆ ಯಜಮಾನನಾಗುವೆ. ಕಲ್ಯಾಣಿಯಂತೆ ಕಲ್ಯಾಣಿ ! ರಾಮ ರಾಮ! ಇದೆಲ್ಲಾ ಕಲ್ಯಾಣಿಯ ತಾಯಿ ಆ ಚಿನ್ನಾಲಿಯ ಮಾಟ. ತಲೆಬೋಳಿಸು ಅಂತ ಆಗಲೇ ಅವಳ ಅಣ್ಣನಿಗೆ ಹೇಳಿದೆ. ಅವಳ ಹಣಕ್ಕೆ ಆಸೆಪಟ್ಟು ನನ್ನ ಮಾತನ್ನು ಕೇಳಲಿಲ್ಲ ; ಅವಳ ಹತ್ತಿರ ಒಂದು ಮಾತು ಆಡಿದರೆ ಸಾಕು, ಈ ಕಾಲದ ಹುಡುಗರು ಅವಳ ಬಲೆಗೆ ಬೀಳುತ್ತಾರೆ. ಕಲ್ಯಾಣಿಯನ್ನು ಮದುವೆ ಮಾಡಿಕೊಡು ಅಂತ ಅಂಗಲಾಚ್ತಾರೆ. ಬಿ.ಎ. ಓದಿದ ನೀನು ಈ ಬಲೆಗೆ ಬೀಳೋದಿಲ್ಲ ಅಂತಿದ್ದೆ. ಆದರೆ ಹುಡುಗಿ ಅಂದರೆ ಹುಡುಗರೆಲ್ಲಾ ಒಂದೇ ; ಬಾಯಿ ಬಿಡ್ತಾರೆ. ಆದರೆ ನನ್ನ ಹತ್ತಿರ ಇದೆಲ್ಲ ನಡೆಯುವುದಿಲ್ಲ" ಎಂದರು. ಶ್ರೀಧರನ ತಂದೆ ಹೇಳಿದ್ದ ಮಾತು ನಿಜವಾಗಿತ್ತು. ಮೊದಲು ಶ್ರೀಧರನಿಗೆ, ಕಲ್ಯಾಣಿಯ ತಾಯಿ ತನಗೆ ಕಲ್ಯಾಣಿಯನ್ನು ಮದುವೆ ಮಾಡಿಕೊಡುತ್ತಾಳೆಯೋ ಎಂದು ಸಂದೇಹವಿತ್ತು. ಆ ಬೆಳಗ್ಗೆ ಅವನು ನದಿಗೆ ಪಂಚೆ ಒಗೆಯಲು ಹೋಗುತ್ತಿರುವಾಗ ಕಲ್ಯಾಣಿಯೂ ಅವಳ ತಾಯಿಯೂ ನದಿಯಿಂದ ಸ್ನಾನಮಾಡಿಕೊಂಡು ತಲೆಯ ಮೇಲೆ ಸೀರೆಯ ಕುಕ್ಕೆಯನ್ನೂ ನೀರಿನ ಪಾತ್ರೆಯನ್ನೂ ಇಟ್ಟುಕೊಂಡು ಬರುತ್ತಿರುವುದನ್ನು ದೂರದಿಂದಲೇ ನೋಡಿದನು. ಇವರನ್ನು ಮಾತನಾಡಿಸೋಣ ಎಂದು ಶ್ರೀಧರನು ಸರಸರನೆ ಸಮೀಪಕ್ಕೆ ಬಂದನು. ಕಲ್ಯಾಣಿಯೂ ಅವಳ ತಾಯಿಯೂ, ತಾಯಿ ಯಾರು ಮಗಳಾರು ಎಂದು ತಿಳಿಯದಮಟ್ಟಿಗೆ ಸಮಾನವಾಗಿದ್ದರು. ಅವರಿಬ್ಬರು ಒಟ್ಟಿಗೆ ನಿಂತರೆ ತಾಯಿ ಮಗಳಂತಲ್ಲದೆ ಅಕ್ಕತಂಗಿಯರಾಗಿ ಕಾಣುತ್ತಿದ್ದರು. ಶ್ರೀಧರನು ಹತ್ತಿರಕ್ಕೆ ಬಂದು ಕಲ್ಯಾಣಿಯನ್ನು "ಹೊಳೆಗೆ ಹೋಗಿದ್ದಿರಾ" ಎಂದು ಕೇಳಿ ಅವಳ ತಾಯಿಯ ಕಡೆ ನೋಡಿದನು.

ಕಲ್ಯಾಣಿಯ ತಾಯಿ 'ಹೌದು' ಎಂದು ಹೇಳಿ "ಕಲ್ಯಾಣಿಗೆ ಯಾವಾಗಲೂ ನಿಮ್ಮ ಹೊಗಳಿಕೆಯೇ ಆಯಿತು. ಊರಿನ ಹುಡುಗಿಯರಿಗೆಲ್ಲಾ ಹಾಡು ಸಂಗೀತ ಕಲಿಸಿದಿರಿ. ನೀವು ಹೇಳಿಕೊಡದೆ ಇದ್ದಿದ್ದರೆ ನಾವು ಬೇರೆ ಊರಿನಿಂದ ದುಡ್ಡು ಕೊಟ್ಟು ಸಂಗೀತದ ಮೇಷ್ಟ್ರನ್ನು ಕರಿಸ್ಬೇಕಿತ್ತು, ಆಗಿಲ್ಲ. ಕರಸಿದ್ರೆ ಒಬ್ಬೊಬ್ಬರಿಗೆ ನೂರಾರು ರೂಪಾಯಿ ಖರ್ಚಾಗೋದು. ನಾವು ನಿಮಗೆ ಏನನ್ನಾನೆ ಕೊಡಬಲ್ಲೆವು" ಎಂದಳು. ಶ್ರೀಧರನು "ಕೊಡುವುದಿದ್ದರೆ ಕಲ್ಯಾಣೀನ್ನೆ ಕೊಡಿ" ಎಂದನು. ಕಲ್ಯಾಣಿಯ ತಾಯಿಯು "ಅಯ್ಯೋ ನಿಮ್ಮ ಮನೆಯೋರು ಎಲ್ಲಪ್ಪ ಒಪ್ಪತಾರೆ. ಹಾಗೆ ಮಾಡಿಕೊಂಡರೆ ನೂರು ಜನ್ಮ ಬೇಕಾದರೂ ಸೇವೆ ಮಾಡಿ ಋಣ ತೀರಿಸ್ತೇನೆ" ಎಂದಳು. ಕಲ್ಯಾಣಿ ಅಭಿಮಾನದಿಂದ ಶ್ರೀಧರನ ಕಡೆ ನೋಡಿದಳು. ಶ್ರೀಧರನು—ಈ ಹೆಂಗಸರಿಗೆ ಇರುವ ಧೈರ್ಯ ಗಂಡಸರೆನ್ನಿಸಿಕೊಳ್ಳುವ ನಮಗೆ ಇಲ್ಲವಲ್ಲ. ಮನುಷ್ಯನಂತಹ ಮರ ಬೇರೆ ಯಾವುದುಂಟು ? ಇಂತಹ ಹೆಂಡತಿ, ಇಂತ ಅತ್ತೆ—ಹಾಳು ಜಾತಿಯೆ ? ಜಾತಿಗಳನ್ನು ಮಾಡಿದ ರಾಕ್ಷಸರು ಸಾವಿರಾರು ವರುಷಗಳ ಕೆಳಗೆ ಸತ್ತರೂ ಅವರ ಭೂತಗಳು ನಮ್ಮನ್ನು ಇನ್ನೂ ಕಾಡುತ್ತಿವೆಯಲ್ಲ ಎಂದು ತನ್ನಲ್ಲಿ ತಾನು ಗರ್ಜಿಸಿಕೊಂಡನು. ತಂದೆಗೆ ಇಷ್ಟವಿಲ್ಲದಿದ್ದರೇನು, ಇದು ನನ್ನ ಬಾಳೇ ಹೊರತು ಅವರದಲ್ಲ. ಕಲ್ಯಾಣಿಯನ್ನೇ ಮದುವೆಯಾಗುತ್ತೇನೆ ಎಂದುಕೊಂಡನು. ಶ್ರೀಧರನ ಮನೆಯಲ್ಲಿ ನಿತ್ಯಾ ರಾದ್ಧಾಂತ ಪ್ರಾರಂಭವಾಯಿತು. ಊರಿನವರೆಲ್ಲಾ ಬಂದು ಶ್ರೀಧರನಿಗೆ ಹೇಳತೊಡಗಿದರು. ಅವನ ತಂದೆ ಹೋಗಿಬರುವವರನ್ನೆಲ್ಲಾ ಕರೆದು ಪಂಚಾಯ್ತಿ ಮಾಡತೊಡಗಿದರು. ಶ್ರೀಧರ 'ಬರಿಯ ಸ್ವಾರ್ಥಿ, ಕಾಮಿ' ಎಂಬ ರೀತಿಯಲ್ಲಿ ಕಾಣುವಂತೆ ಅವನ ತಂದೆ ಪ್ರಚಾರಪಡಿಸಿದರು.

ಎಡರುಗಳ ಜತೆಗೆ ಎಡರುಗಳಾಗಿ ನರಹರಿಯೂ—ತಂಗಿಯ ಮಗಳನ್ನು ಶ್ರೀಧರನಿಗೆ ಕೊಡುವುದಿಲ್ಲ; ಇದು ಹೊಸ ಪದ್ಧತಿ; ಒಂದೂರಿನಲ್ಲಿ ನನಗೆ ವ್ಯಾಜ್ಯ ಬೇಕಿಲ್ಲ ಎಂದನು. ಅವನ ಅಸಮ್ಮತಿಯನ್ನು ಸೂಚಿಸಲು ಮುಖ್ಯ ಕಾರಣ ಬೇರೆಯಾಗಿತ್ತು. ಕಲ್ಯಾಣಿಯ ತಾಯಿಯ ಸ್ವಲ್ಪ ಹಣ ಮತ್ತು ಅವಳಿಗಾಗಿ ಕೊಂಡುಕೊಂಡಿದ್ದ ಸ್ವಲ್ಪ ಜಮೀನು ಇವುಗಳನ್ನು ತನ್ನ ಕೈಯಿಂದ ಬಿಟ್ಟು ಕೊಡಲು ಅವನಿಗೆ ಇಷ್ಟವಿರಲಿಲ್ಲ. ಒಂದೇ ಊರಿನ ಗಂಡು ತಂಗಿಯ ಅಳಿಯ

ನಾದರೆ ಅದೇ ಊರಿನಲ್ಲಿ ಇದ್ದುಕೊಂಡು ಈ ಜಮೀನಿಗೆ ಆಸೆಪಡುತ್ತಾನೆ, ಆಕ್ರಮಿಸಿಕೊಳ್ಳುತ್ತಾನೆ. ಬೇರೆ ಯಾವುದಾದರೂ ಊರಿನವನು ಅಳಿಯನಾದರೆ ಈ ಸಣ್ಣ ಆಸ್ತಿಗಾಗಿ ಇಲ್ಲಿ ಬಂದು ಕಿರುಕುಳ ಕೊಡುವುದಿಲ್ಲ. ಇದರಲ್ಲಿ ನನಗೆ ಇನ್ನೊಂದು ಏಟೂ ಬೀಳುತ್ತದೆ. ಇಂತಹ ಚೆಲುವೆಯಾದ ಹುಡುಗಿಯನ್ನು ದೂರದ ನೆಂಟರು ಯಾರಾದರೂ ಬಂದು ಮದುವೆಯಾದರೆ ತನಗೆ ಏನಾದರೂ ಫಾಯಿದೆಯಾಗಬಹುದು. ಅದು ಬಿಟ್ಟು ಈ ಶ್ರೀಧರನಿಗೆ ಕಲ್ಯಾಣಿಯನ್ನು ಕೊಟ್ಟು ಜತೆಯಲ್ಲಿ ಇರುವ ಜಮೀನಿನ ತುಂಡನ್ನೂ ಯಾಕೆ ಕಳೆದುಕೊಳ್ಳಲಿ ಎಂದು ಅವನು 'ನಾನು ಖಂಡಿತ ಈ ಮದುವೆಗೆ ಒಪ್ಪುವುದಿಲ್ಲ' ಎಂದನು. ಶ್ರೀಧರನು ಅನೇಕ ದಿನ ನಿದ್ರೆ ಮಾಡದೆ ಈ ಪ್ರಶ್ನೆಯನ್ನು ಕುರಿತು ಹಗಲು ರಾತ್ರಿ ಯೋಚಿಸಿದನು ಹುಡುಗಿಯನ್ನು ಹೊಡೆದುಕೊಂಡು ಬೊಂಬಾಯಿಗೋ ಮದರಾಸಿಗೋ ಓಡಿಬಿಡಲೇ ಎಂದು ಚಿಂತಿಸಿದನು. ಇದೇ ಯೋಚನೆಯನ್ನು ಅವನು ಕಲ್ಯಾಣಿಗೆ ಹೇಳಿದಾಗ ಅವಳೂ ಅವನೂ ನಿರೀಕ್ಷಿಸಿದ್ದಂತೆ 'ನೀವು ಎಲ್ಲಿಗೆ ಬಾ ಅಂದರೆ ಅಲ್ಲಿಗೆ ಬರುತ್ತೇನೆ' ಎಂದಳು. ಮುಖ್ಯ ಶ್ರೀಧರನಿಗೆ ಧೈರ್ಯವಿರಲಿಲ್ಲ. ಬೊಂಬಾಯಿ ಮದರಾಸಿನಲ್ಲಿ ಅರಿಯದ ಹುಡುಗಿಯನ್ನು ಕಟ್ಟಿಕೊಂಡು ಏನು ಮಾಡಲಿ, ಬಿ. ಎ. ಪರೀಕ್ಷೆಗೆ ಸಹ ಇನ್ನೊಂದು ವರ್ಷ ಓದಬೇಕಲ್ಲ. ಮದುವೆಯಾಗಿ ಹೆಂಡತಿಯೊಡನೆ ಸಂಸಾರ ಮಾಡಿಕೊಂಡಿರಬೇಕು ಎಂಬ ಯೋಚನೆಗೂ ಹುಡುಗಿಯನ್ನು ಹೊಡೆದುಕೊಂಡು ತಲೆಮಾರಿಕೊಂಡು ದೇಶಾಂತರ ಹೋಗಬೇಕು ಎಂಬ ಯೋಚನೆಗೂ ಎಷ್ಟು ಅಂತರ ? ಹೀಗೆ ಹುಡುಗಿಯನ್ನು ಹಾರಿಸಿಕೊಂಡು ಹೋಗುವುದನ್ನು ಶ್ರೀಧರನು ಕತೆಗಳಲ್ಲಿ ಮಾತ್ರ ಓದಿದ್ದನು. ಸಿನಿಮಾಗಳಲ್ಲಿ ಮಾತ್ರ ನೋಡಿದ್ದನು. ಬಹುಶಃ ಹಳ್ಳಿಯಲ್ಲಿಯೇ ಬೆಳೆದು ಹಳ್ಳಿಯಲ್ಲಿಯೇ ಉಳಿದವನಾಗಿದ್ದರೆ ಹಾಗೆ ಓಡಿಹೋಗುವ ಸ್ವಾಭಾವಿಕವಾದ ಧೈರ್ಯ ಅವನಿಗೆ ಉಂಟಾಗುತ್ತಿದ್ದಿತೋ ಏನೋ ? ಅವನಿಗೆ ದೊರಕಿದ್ದ ಇಂಗ್ಲಿಷ್ ವಿದ್ಯಾಭ್ಯಾಸ ಅವನ ಧೈರ್ಯವನ್ನು ಪೂರ್ಣವಾಗಿ ಕೊಂದಿತ್ತು. ಪ್ರೇಮದ ಈ ಹೊಸ ರೂಪ ಅವನು ಮೈಗೂಡಿಸಿಕೊಂಡಿದ್ದ ಸಭ್ಯತೆಗೆ ವಿರೋಧವಾಗಿತ್ತು. ಅವನು ಏನು ಮಾಡಲಿ ಎಂದು ಯೋಚಿಸುತ್ತಾ ತಲೆ ತಲೆ ಹೊಡೆದುಕೊಂಡು ರಜಾ ಮುಗಿದ ಕೂಡಲೆ ಕಾಲೇಜಿಗೆ ಹೋದನು. ಬಸ್ಸು ಅವನ ಮನೆಯ ಮುಂದೆ ಬಂದಾಗ, ಅವನು ಅದನ್ನು ಏರುವಾಗ,

ಎದುರು ಮನೆಯ ಭಾಗೀರಥಿಯೊಂದಿಗೆ ಮಾತನಾಡಲು ಬಂದಿದ್ದ ಕಲ್ಯಾಣಿ ಯನ್ನು ನೋಡಿದನು. ಅವಳ ಮುಖದಲ್ಲಿ ತಿರಸ್ಕಾರ ತುಂಬಿತ್ತು. ಶ್ರೀಧರ ನಿಗೆ ತಾನೇ ತನ್ನ ಹೆಣವಾಗಿ ಸ್ಮಶಾನಕ್ಕೆ ಹೋಗುತ್ತಿರುವಂತೆ ತೋರಿತು.

ಬೆಂಗಳೂರಿಗೆ ಹೋದ ಒಂದು ತಿಂಗಳಿನೊಳಗಾಗಿ ಶ್ರೀಧರನಿಗೆ, ಕಲ್ಯಾಣಿಗೆ ಯಾವುದೋ ದೂರದ ಹಳ್ಳಿಯ ಸಣ್ಣ ಜಮೀನ್ದಾರನೊಂದಿಗೆ ಮದುವೆಯಾಯಿತೆಂದು ತಿಳಿಯಿತು. ವಿಚಾರವನ್ನು ಅವನಿಗೆ ತಿಳಿಸಿದ ಅವನ ಊರಿನವರು ಯಾವುದೋ ಹೈಕೋರ್ಟು ಕೆಲಸಕ್ಕಾಗಿ ಬಂದಿದ್ದರು. ಸ್ವಲ್ಪ ಆಧುನಿಕವಾದ ಮನೋಭಾವವುಳ್ಳವರು. ಶ್ರೀಧರನು ವರ ಚೆನ್ನಾಗಿದ್ದಾನೆಯೋ ಎಂದು ಕೇಳಿದಾಗ—ಏನು ಚೆನ್ನಾಗಿದ್ದಾನೆ. ನಮ್ಮ ಜನ ನೂರು ಚಿಕ್ಕ ಚಿಕ್ಕ ಪಂಗಡವಾಗಿದೆ. ಕೊಡುವುದು ತರುವುದು ಎಲ್ಲಾ ಅಲ್ಲಲ್ಲೇ ನಡೆಯ ಬೇಕು. ಒಂದು ಊರಿಗೆ ಒಂದು ಒಕ್ಕಲು ಇದಾನೆ ವಯಸ್ಸು ೪೫. ಎರಡ ನೆಯ ವರ ಶ್ಯಾನುಭೋಗ. ಮೊದಲನೆಯ ಹೆಂಡತಿಗೆ ಮಕ್ಕಳಿಲ್ಲವಂತೆ. ಅಂತಹ ಕಟ್ಟುಮಸ್ತಾದ ಆಳಲ್ಲ. ಆ ಹುಡುಗಿಗೆ ಸುತರಾಂ ಲಾಯಕ್ಕಲ್ಲ. (ಸ್ವಲ್ಪ ಹೊತ್ತು ಬಿಟ್ಟು) ಹುಡುಗಿಗೂ ನಿನಗೂ ವರಸಾಮ್ಯ ಬಹಳ ಚೆನ್ನಾಗಿ ಕೂಡಿತ್ತು. ನೀನು ಅವಳನ್ನು ಮದುವೆಯಾಗ್ತೀಯ ಅಂತ ಊರವರೆಲ್ಲಾ ನಿರೀಕ್ಷಿಸಿದ್ದರು. ನಿಮ್ಮಪ್ಪನಿಗೆ ಇಷ್ಟವಿರಲಿಲ್ಲ ಅನ್ನೋದು ಗೊತ್ತಿತ್ತು ನೀನು ಹುಡುಗಿ ಹಾರಿಸ್ಕೊಂಡು ಹೋಗ್ತೀಯ ಅಂತ ತಿಳಿದಿದ್ವಿ. ಈ ಕಾಲದ ಹುಡುಗರಿಗೆ ಅಂತ ಧೈರ್ಯ ಇಲ್ಲ ಅಂತ ಆಮೇಲೆ ತಿಳೀತು. ನಿಮ್ಮ ವಿದ್ಯ ನಿಮಗೆ ಅದೇನೋ ಮಾಡುತ್ತೆ. ಇವತ್ತು ಕಲ್ಯಾಣಿ ನನ್ನ ಜತೇಲಿ ಬರೋ ದಿದ್ರೆ ಎತ್ತಿಕೊಂಡು ಜತೇಲಿ ನರಕಕ್ಕೆ ಬೇಕಾದರೂ ಹೋಗ್ತೇನೆ. ಅಂತಹ ಭರ್ಜರಿ ಹುಡುಗಿಗಾಗಿ ಅರ್ಧ ಆಯುಸ್ಸನ್ನೇ ಬಲಿ ಕೊಡಬಹುದು....ಆದರೆ ನೀನು ಇನ್ನೂ ಮಗು—ಎಂದರು.

೩

ಕಲ್ಯಾಣಿಗೆ ಮದುವೆ ಆಯಿತು ಎಂಬುದನ್ನು ಕೇಳಿ ಶ್ರೀಧರನ ಎದೆ ಯಲ್ಲಿ ವಜ್ರದ ಹೊಡೆತ ಬಿದ್ದಂತೆ ಆಯಿತು. ಕಲ್ಯಾಣಿ ಎಷ್ಟರಮಟ್ಟಿಗೆ ತನ್ನ ಜೀವದ ಜೀವ, ಹೃದಯದ ಹೃದಯ, ಕಣ್ಣಿನ ಕಣ್ಣು ಎಂಬುದು ಆಗ ಅವನಿಗೆ ಗೊತ್ತಾಯಿತು. ಅವನ ಪ್ರಾಣ ಹೋದಂತೆ ಆಯಿತು. “ಹೇಡಿ,

ನಿರ್ಭಾಗ್ಯ, ಎರಡು ಜೀವಗಳನ್ನು ಕೊಂದೆ" ಎಂದುಕೊಂಡು ಅವನು ತಲೆ ಹಿಡಿದು ಬಿರುಕುಬಿಡುವಂತೆ ಕೈಯಿಂದ ತಲೆಯ ಮೇಲೆ ಕುಟ್ಟಿಕೊಂಡನು. ಹೇಗಿದ್ದನೋ ಹಾಗೆಯೇ ಹೊರಟು ಹುಚ್ಚನಂತೆ ಕಾಲುನಡಿಗೆಯಲ್ಲಿ ಊರಿಂದ ಊರಿಗೆ ಪ್ರಯಾಣ ಮಾಡುತ್ತ ನಾಲ್ಕು ತಿಂಗಳಿಗೆ ಹರಿದ್ವಾರವನ್ನು ಸೇರಿದನು. ಅಲ್ಲಿ ಪರಿಚಿತರಾದ ಒಬ್ಬ ಸ್ವಾಮಿಗಳಿಂದ ಸನ್ಯಾಸವನ್ನು ಪಡೆದು ಕಾವಿಬಟ್ಟೆಯನ್ನು ಧರಿಸಿ ಅವರ ಜೊತೆಯಲ್ಲಿ ನಾಲ್ಕು ವರ್ಷಗಳ ಕಾಲ ಹಿಮಾಲಯ ಪರ್ವತದ ಗವಿಗಳಲ್ಲಿಯೂ ಆಶ್ರಮಗಳಲ್ಲಿಯೂ ವಾಸಿಸಿದನು. ಆ ಕಾಲದಲ್ಲಿ ಅವನು ಅನೇಕವಾದ ತತ್ತ್ವಜ್ಞಾನ ಗ್ರಂಥಗಳನ್ನು ಆ ಸ್ವಾಮಿಗಳ ಸಹಾಯದಿಂದ ಪಠಿಸಿ ಸಂಸ್ಕೃತ ಇಂಗ್ಲಿಷ್ ತಮಿಳು ಮೂರು ಭಾಷೆಗಳಲ್ಲಿಯೂ ಪ್ರಾವೀಣ್ಯವನ್ನು ಪಡೆದನು. ಅವನಲ್ಲಿ ಸ್ವಾಭಾವಿಕವಾದ ಸಂಗೀತಶಕ್ತಿ ಜಾಗ್ರತವಾಗಿ ಅವನನ್ನು ಆಗಾಗ್ಗೆ ಪಾಡಲು ತೊಡಗಿಸುತ್ತಿದ್ದಿತು. ಅವನು ಭಾವಾವೇಶವನ್ನು ಹೊಂದಿ ಅನೇಕ ಗಂಟೆಗಳ ಕಾಲ ಗಾನಮಾಧುರ್ಯದಲ್ಲಿ ಲೀನವಾಗಿ ಇರುತ್ತಿದ್ದನು. ಇಷ್ಟಾದರೂ ಅವನ ಮನಸ್ಸಿಗೆ ಶಾಂತಿ ಉಂಟಾಗಿರಲಿಲ್ಲ. ಕಲ್ಯಾಣಿಯ ಧ್ಯಾನ ಮರೆತಿರಲಿಲ್ಲ. ಈಗಲೂ ಅವನಿಗೆ ಒಂದೊಂದು ದಿನ ಕನಸಿನಲ್ಲಿ ಕಲ್ಯಾಣಿಯ ಗಂಧರ್ವ ಮೋಹನ ರೂಪು ಕಾಣುತ್ತಿದ್ದಿತು. ಶ್ರೀಧರನು ಕೂಡಲೆ ಎದ್ದು ತಣ್ಣೀರಿನಲ್ಲಿ ಸ್ನಾನಮಾಡಿ ಕಣ್ಣಿನಲ್ಲಿ ಧಾರೆಧಾರೆಯಾಗಿ ನೀರು ಸುರಿಸುತ್ತಾ "ಏನಾದರೂ ಮರೆಯುದಲ್ಲಾ. ಹೃದಯವನ್ನು ಕಿತ್ತಾದರೂ ಒಗೆಯಲೆ ?" ಎಂದು ಸಂಕಟಪಡುತ್ತಿದ್ದನು. ಒಂದು ದಿನ ಇವನ ಜತೆಯ ವಯಸ್ಕರಾಗಿದ್ದ ಸ್ವಾಮಿಗಳು "ನೀವು ನಾಲ್ಕು ವರುಷ ತಪಸ್ಸು ಮಾಡಿದಿರಿ. ಆದರೂ ನಿಮ್ಮ ಮನಸ್ಸಿಗೆ ಶಾಂತಿ ಬರಲಿಲ್ಲ. ಕೈಗೂಡದ ಪ್ರೇಮದಿಂದ ಉತ್ಪನ್ನವಾದ ವೈರಾಗ್ಯ ಇಷ್ಟು ಬೇಗ ಫಲಕಾರಿಯಾಗುವುದಿಲ್ಲ. ನೀವು ದೇಶವನ್ನೆಲ್ಲಾ ಸಂಚಾರ ಮಾಡಿಕೊಂಡು ಬನ್ನಿ. ಒಂದೇ ಸ್ಥಳದಲ್ಲಿ ಇರುವುದಕ್ಕಿಂತ ತಿರುಗಾಡುತ್ತಿದ್ದರೆ ಭಗವಂತನ ಲೀಲೆ ನಿಮಗೆ ಚೆನ್ನಾಗಿ ಗೊತ್ತಾಗುವುದು. ಜಗತ್ತಿನೊಂದಿಗೆ ಒಂದಾಗಿ ಬೆರೆಯುವುದರಿಂದ ನಿಮ್ಮ ಮೇಲೆಯೇ ಕೂತಿರುವ ನಿಮ್ಮ ಆಲೋಚನೆ, ಭಗವಂತನ ಸೃಷ್ಟಿಗಳಾದ ಇತರ ಪ್ರಾಣಿಗಳ ಮೇಲೆ ಹೋಗುವುದು. ನೀವು ಸಂಪಾದಿಸಿರುವ ಅಪಾರವಾದ ಜ್ಞಾನ, ವನೌಷಧಿಗಳ ಪರಿಚಯ, ಗಾನ ಇವುಗಳಿಂದ, ತೃಪ್ತವಾದ

ಜಗತ್ತಿಗೆ ಶಾಂತಿ ದೊರಕುವುದು. ನಿಮ್ಮ ಪ್ರವಾಸವನ್ನು ಬೇಗ ಮುಗಿಸಿಕೊಂಡು ಹಿಂದಿರುಗಬೇಕೆಂಬ ಆತುರ ನಿಮಗೆ ಬೇಡ. ಎಲ್ಲೆಲ್ಲಿ ಮನಸ್ಸಿಗೆ ಎಷ್ಟೆಷ್ಟು ಕಾಲ ಇರಬೇಕೆಂದು ತೋರುವುದೋ ಅಷ್ಟಷ್ಟು ಕಾಲ ಇದ್ದುಬಿಡಿ. ನಿಮ್ಮ ಮನಸ್ಸಿಗೆ ಒಪ್ಪಿ ನಿಮಗೆ ಶಾಂತಿ ದೊರೆಯುವ ಜಾಗ ಯಾವುದಾದರೂ ಸಿಕ್ಕಿದರೆ ಅಲ್ಲಿಯೇ ನಿಮ್ಮ ಕಾಲವನ್ನೆಲ್ಲಾ ಪೂರ್ಣವಾಗಿ ಕಳೆಯುವ ಏರ್ಪಾಡು ಮಾಡಿ. ನಿಮ್ಮ ವಯಸ್ಸು ಇನ್ನೂ ಬಹಳ ಬಾಲ್ಯ, ಮನಸ್ಸು ಮತ್ತೆ ಸಂಸಾರದ ಕಡೆಗೆ ತಿರುಗಿದರೆ ಅದನ್ನು ಬಲಾತ್ಕಾರವಾಗಿ ವೈರಾಗ್ಯದ ಮಾರ್ಗಕ್ಕೆ ಎಳೆದುಕೊಳ್ಳಬೇಡಿ. ಕಾಲಕ್ಕೆ ಮುಂಚೆ ಪಕ್ವವಾದ ಕಾಯಿ ಕೊಳೆಯುವುದು. ಕಾಯಿ ಸರಿಯಾಗಿ ಫಲವಾಗಬೇಕಾದರೆ ಅದಕ್ಕೆ ಆವಶ್ಯಕವಾದ ಮಳೆ ಗಾಳಿ ತಗಲಬೇಕು" ಎಂದರು. ಶ್ರೀಧರನು ತನ್ನನ್ನು ನಾಲ್ಕು ವರುಷಗಳಿಂದ ತಂದೆಯಂತೆ ಬೆಳೆಸಿದ ಸ್ವಾಮಿಗಳಿಗೆ ನಮಸ್ಕರಿಸಿ ಹರಿದ್ವಾರದಿಂದ ಕಾಲುನಡಿಗೆಯಲ್ಲಿಯೇ ಹೊರಟು ದಾರಿಯಲ್ಲಿ ಮನಸ್ಸಿಗೆ ತೋರಿದ ಕಡೆ ತಂಗುತ್ತಾ ಉತ್ತರದ ಆ ಕೊನೆಯಿಂದ ದಕ್ಷಿಣದ ಕೊನೆಯಾದ ಕನ್ಯಾಕುಮಾರಿಗೆ ಬಂದನು.

ಕನ್ಯಾಕುಮಾರಿ ! ಆ ಹೆಸರೇ ಮನೋಹರ. ಕನ್ಯಾಕುಮಾರಿಯ ಎದುರಿಗೆ ಬಂದ ಕೂಡಲೆ ಶ್ರೀಧರನಿಗೆ ಸಾಕ್ಷಾತ್ ಭಗವಂತನ ಎದುರಿಗೆ ಬಂದಂತೆ ಭಾಸವಾಯಿತು. ಕನ್ಯಾಕುಮಾರಿಯ ಸನ್ನಿವೇಶ ಅದ್ಭುತವೂ ಸುಂದರವೂ ಆಗಿದ್ದಿತು. ಅಲ್ಲಿಯ ಮೂರು ಮಹಾ ಸಮುದ್ರಗಳೂ ಏಕಕಾಲದಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ಅಸಂಖ್ಯಾತಗಳಾದ ಅಲೆಗಳನ್ನು ಚಿಮ್ಮುತ್ತಿದ್ದರೂ ಆ ಅಲೆಗಳೆಲ್ಲವುಗಳ ಪೂರ್ಣವಾದ ಧ್ವನಿ ಒಂದು ಗಾನವೇ ಆಗಿತ್ತು. ಕನ್ಯಾಕುಮಾರಿಯನ್ನು ನೋಡಿದ ಕೂಡಲೇ ಶ್ರೀಧರನಿಗೆ ಬಹುಕಾಲದಿಂದ ನಡೆದು ಬಂದುದರಿಂದ ಉಂಟಾದ ಆಯಾಸವೂ ಬೇಸರಿಕೆಯೂ ಒಂದೇ ಸಲಕ್ಕೆ ನಾಶವಾಯಿತು. ಶ್ರೀಧರನು ಛತ್ರದಲ್ಲಿ ಉಳಿದುಕೊಂಡನು. 'ಇದು ನಿಜವಾದ ಭಗವಂತನ ಸಾನ್ನಿಧ್ಯ. ಮನಸ್ಸಿನ ಮಾಲಿನ್ಯವನ್ನು ಕಳೆದುಕೊಂಡು ಶಾಂತಿಯನ್ನು ದೊರಕಿಸಲು ಇದೇ ಸರಿಯಾದ ಸ್ಥಳ' ಎಂದ. ಅವನು ಕನ್ಯಾಕುಮಾರಿಯಲ್ಲಿಯೇ ಶಾಶ್ವತವಾಗಿ ನಿಲ್ಲಬೇಕೆಂದು ಮನಸ್ಸು ಮಾಡಿಕೊಂಡನು.

ಸತ್ರದಲ್ಲಿ ಕುಳಿತುಕೊಂಡು ಕನ್ಯಾಕುಮಾರಿಯ ಪ್ರಕೃತಿ ಸೌಂದರ್ಯವನ್ನು ನೋಡಿ ನೋಡಿದಂತೆ ಶ್ರೀಧರನು ಮುಗ್ಧನಾಗತೊಡಗಿದನು. ಕನ್ಯಾಕುಮಾರಿಯ ಪ್ರಾತಃಕಾಲದ ಸೌಂದರ್ಯ ಅನಿರ್ವಚನೀಯವಾಗಿದ್ದಿತು. ಗಂಭೀರವಾದ ತೆಂಗು ಮತ್ತು ತಾಳೆಯ ಮರಗಳು ಗಾಳಿಯಲ್ಲಿ ತೂರಾಡುತ್ತಿದ್ದುವು. ದಟ್ಟವಾದ ತಾಳೆಯ ಗರಿಗಳನ್ನು ಭೇದಿಸಿಕೊಂಡು ದೇವಲೋಕದ ಸಂದೇಶವೋ ಎಂಬಂತೆ ಸೂರ್ಯನ ಒಂದು ಕಿರಣ ಕೆಳಕ್ಕೆ ಬೀಳುತ್ತಿತ್ತು. ಮೇಲೆ ಪ್ರಕಾಶಮಾನವಾದ ನೀಲಾಕಾಶದಲ್ಲಿ ಹೊಳೆಯುವ ಚುರುಕಾದ ಸೂರ್ಯ, ಸ್ನಾನಘಟ್ಟಗಳ ಮೇಲೆ ಬೀಳುವ ಸೂರ್ಯನ ಹೊಳಪಾದ ಕಿರಣಗಳು, ಬಗೆ ಬಗೆಯ ತೀರ್ಥಗಳಿಗೆ ಕಟ್ಟಿರುವ ಮೆಟ್ಟಿಲುಗಳು, ಎಲ್ಲವುಗಳಿಗಿಂತ ಹೆಚ್ಚಾಗಿ ನೀಲಾಕಾಶವನ್ನು ತೂರಿಕೊಂಡು ಹೋಗುತ್ತಿರುವ ಕನ್ಯಾಕುಮಾರಿ ದೇವಾಲಯದ ಸುವರ್ಣಗೋಪುರ, ಮೈಲಿ ಮೈಲಿಗಳಗಟ್ಟಲೆ ಪಸರಿಸಿರುವ ಬಗೆಬಗೆಯ ಬಣ್ಣದ, ಬಗೆಬಗೆಯ ಆಕಾರದ ಮರಳುರಾಶಿಯ ಸಮುದ್ರ ತೀರ; ಸಮುದ್ರಕ್ಕೆ ಚಾಚಿಕೊಂಡಿರುವ ಸಾವಿರ ಆಕಾರದ ಚೂಪಾದ ಅರೆಬಂಡೆಗಳು, ಇವು ಶ್ರೀಧರನ ಮನಸ್ಸನ್ನು ಸೆರೆಹಿಡಿದು ಅವನನ್ನು ಭಾವನಾ ಪರವಶನನ್ನಾಗಿ ಮಾಡಿದವು. ಭಾರತದ ಭೂಮಿಯ ಆ ಕೊನೆ ತನ್ನ ಮನಸ್ಸಿನ ದುಃಖಗಳ ಕೊನೆ ಎಂದು ಶ್ರೀಧರನಿಗೆ ತೋರಿತು.

ಶ್ರೀಧರ ದಿನದಿನವೂ ಕನ್ಯಾಕುಮಾರಿಯ ಆನಂದಚೇತನವನ್ನು ಆಸ್ವಾದಿಸ ತೊಡಗಿದನು. ಸಮುದ್ರಕ್ಕೆ ನೀಡಿಕೊಂಡಿರುವ ಅದ್ಭುತವಾದ ಬಂಡೆಗಳ ಮೇಲೆ ನೆಟ್ಟ ಕಣ್ಣನ್ನು ಹಿಂದಕ್ಕೆ ಎಳೆದುಕೊಳ್ಳುವುದು ಅವನಿಗೆ ಕಷ್ಟವಾಗುತ್ತಿತ್ತು. ಬಂಡೆಗಳ ಮೇಲೆ ಬೀಳುವ ಅಲೆಗಳ ಸಂಗೀತವನ್ನು ಕೇಳುತ್ತಿದ್ದರೆ ಮನಸ್ಸಿಗೆ ಮತ್ತೇನೂ ಬೇಕಾಗುತ್ತಿರಲಿಲ್ಲ. ಸಮುದ್ರ ತನ್ನ ಮಹತ್ತಾದ ಅಲೆಗಳ ತೋಳುಗಳನ್ನು ತೀರದ ಕಡೆಗೆ ನೀಡಿದಾಗ, ಸಾವಿರಾರು ಬಿಳಿಯ ನೊರೆಯ ಕುದುರೆಗಳು ವಿಸ್ತಾರವಾದ ಮರಳುರಾಶಿಯ ಸಮುದ್ರತೀರದ ಕಡೆಗೆ ನುಗ್ಗುತ್ತಿದ್ದುವು. ದೇವಸ್ಥಾನದ ಸುತ್ತ ಬಂಡೆಗಳು ಕಾವಲುಗಾರರಂತೆ ನಿಂತಿವೆ. ಅವುಗಳ ಬಣ್ಣ ಬೂದುಬಣ್ಣವಾದರೂ, ಕನ್ಯಾಕುಮಾರಿಯ ಅತ್ಯಂತ ಮನೋಹರವಾದ ಸೂರ್ಯೋದಯ, ಸೂರ್ಯಾಸ್ತದ ಕಿರಣಗಳ ಬೆಳಕು ಅವುಗಳ ಮೇಲೆ ಬಿದ್ದಾಗ ಆ ಬಂಡೆಗಳು ಕೆಂಪು ಹಳದಿ ಮುಂತಾದ ಕಾಂತಿಯನ್ನು ಹೊಂದುತ್ತವೆ.

ಸಮುದ್ರದ ಪರಿಶುದ್ಧವಾದ ನೀರು ಪರಿಶುದ್ಧಳಾದ ಕುಮಾರಿಯ ದೇವಾಲಯದ ಪಾದಗಳನ್ನು ತೊಳೆಯುತ್ತಿದೆ. ಶ್ರೀಧರನು ಬೇಸಗೆಯ ಸಂಧ್ಯೆಯಲ್ಲಿ ಸಮುದ್ರವನ್ನು ಕಣ್ಣಿಗೆ ಕಾಣುವವರೆಗೆ ನೋಡುತ್ತಿದ್ದನು. ಆಹಾ ! ಆ ದೃಶ್ಯದ ಸೌಂದರ್ಯದ ಗಾಂಭೀರ್ಯವೇನು ? ನಿಜವಾದ ಚಿತ್ರಗಾರನ ಕುಂಚಕ್ಕೆ ಎಂತಹ ಔತಣ ! ಅರ್ಧಚಂದ್ರನೋಪಾದಿಯಲ್ಲಿ ಮೇಲೆ ಹರಡಿರುವ, ಸಮುದ್ರಕ್ಕಿಂತ ಹೆಚ್ಚು ನೀಲವಾದ ಆಕಾಶದಲ್ಲಿ, ಬಗೆಬಗೆಯ ಬಣ್ಣದ ಮೋಡಗಳು ಯಥೇಚ್ಛವಾಗಿ ವಿಹರಿಸುತ್ತವೆ. ಬೆಳಕು-ಛಾಯೆಗಳ ಫಲವಾಗಿ ಆ ಮೇಘಗಳು ಗಳಿಗೆಗಳಿಗೆಗೂ ಆಕಾರವನ್ನೂ ಬಣ್ಣವನ್ನೂ ಬದಲಾಯಿಸುತ್ತವೆ. ಬಿಳಿಯ ಮೋಡಗಳ ಒಂದು ಸಂದಿಯಲ್ಲಿ ವಿಶಾಲವಾದ ಪ್ರಕಾಶವಾದ ಕೇಸರಿಬಣ್ಣದ ದುಂಡು ಸೂರ್ಯ ಇಣಿಕಿ ನೋಡುತ್ತಾನೆ. ಸೂರ್ಯನು ಮುಳುಗುವಾಗ ಅವನನ್ನು ಮುಂದೆ ಕಳುಹಿಸಿ ಹಿಂದೆ ನಿಂತ ಬಣ್ಣದ ಮೋಡಗಳು ಒಂದನ್ನೊಂದು ವಿನೋದವಾಗಿ ನೂಕಾಡುತ್ತವೆ. ಪೂರ್ವ ದಿಕ್ಕಿನ ಆಕಾಶ, ಸುಮಾರು ಹಳದಿಯ ಚಿನ್ನದ ಬಣ್ಣವನ್ನು ತಳೆಯುತ್ತದೆ. ಸಮುದ್ರದಲ್ಲಿ ಊಹಿಸಲಸಾಧ್ಯವಾದ ನೂರಾರು ಬಣ್ಣಗಳು ಕಾಣುತ್ತವೆ. ಮುಳುಗುತ್ತಿರುವ ಸೂರ್ಯನ ಹೊಳೆಯುವ ಕೇಸರಿಕಾಂತಿಯಿಂದ ದಡದ ಮರಳೂ ಕೇಸರಿ ಬಣ್ಣವಾಗುತ್ತದೆ. ಸಂಧ್ಯಾಕಾಲದ ಸೂರ್ಯಾಸ್ತದ ಆಕಾಶದ ಸಾವಿರಾರು ಕಾಂತಿಗಳು ಸಾವಿರಾರು ಕಾಮನ ಬಿಲ್ಲುಗಳಾಗಿ, ಸಮುದ್ರದಲ್ಲಿ ಪ್ರತಿಬಿಂಬಿತವಾಗುತ್ತವೆ. ಸಂಧ್ಯಾಕಾಲ ಅನಿರ್ವಚನೀಯವಾದ ಮಾಯೆಯನ್ನು ಬೀರುವಾಗ, ಸಮುದ್ರದ ನೀರು ಮೃದುವಾಗಿ ತಿಳಿಯ ದನಿಯಲ್ಲಿ ಪಿಸುಗುಟ್ಟುತ್ತದೆ. ಶ್ರೀಧರನು ಕನ್ಯಾಕುಮಾರಿಯ ಸೌಂದರ್ಯವನ್ನು ಅದರ ಎಲ್ಲಾ ರೂಪುಗಳಲ್ಲಿಯೂ ಅನುಭವಿಸಿದನು. ಅಲ್ಲಿಯ ರಾತ್ರಿಗಳು ಅತಿಮನೋಹರ. ಮಧ್ಯಾಹ್ನದಲ್ಲಿ ಉರಿಬಿಸಿಲಿನ ಶಾಖವಿಲ್ಲ. ತಂಗಾಳಿ ತೆಂಗಿನ ಮರಗಳ ಮೂಲಕ ದಡಕ್ಕೆ ನುಗ್ಗುತ್ತದೆ. ಅಲೆಗಳು ಕಲ್ಲುಗಳ ಮೇಲೆ ಬಡಿದು ತುಂತುರಿನ ಮುತ್ತುಗಳನ್ನು ಸೂರೆಮಾಡುತ್ತವೆ. ಅಂತಹ ಇರುಳಿನಲ್ಲಿ ಕನ್ಯಾಕುಮಾರಿ, ಅದೃಶ್ಯದೇವತೆಯ ಸಿಂಹಾಸನದಂತೆ ತೋರುತ್ತಿದ್ದಿತು. ಮೇಲಿನ ನಕ್ಷತ್ರಮಾಲೆಗಳೇ ಕಾವಲುಗಾರರು. ಅಲೆಗಳ ಮೇಲೂ ಮರಳಿನ ಮೇಲೂ ಚಂದ್ರನು ತನ್ನ ಬೆಳಕನ್ನು ತಂಪಾಗಿ ಬಿಡುತ್ತಿದ್ದನು. ಅಸಂಖ್ಯಾತವಾದ ನಕ್ಷತ್ರಗಳ ಕೆತ್ತನೆಯ ಕೆಲಸವನ್ನು ಮಾಡಿರುವ

ಮೇಲಿನ ನೀಲಾಕಾಶ, ಕೆಳಗಿನ ನೀರಿನಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗುವುದು. ಬಿಳಿಯ ಮರಳು ಮಾಟಗಾರನ ಅಪ್ಪಣೆಯಂತೆ ಅಪ್ಸರೆಯರು ನೆಯ್ದ ಅಮೃತದ ಜಮುಖಾನದಂತೆ ತೋರುವುದು. ಕೆಲವು ದಿನ ಪೂರ್ಣವಾಗಿ ಕತ್ತಲೆಯಾದ ರಾತ್ರಿಗಳು ಸಮುದ್ರದ ಬೆಳಕಿನಿಂದ ಎಲ್ಲೋ ಸ್ವಲ್ಪ ಹೊಳಪಾಗಿ ಕಾಣುವುವು. ಬೆಳದಿಂಗಳ ರಾತ್ರಿ ಭೂಮಿಗೆ ಸೌಂದರ್ಯವೇ ನೂರು ಮಡಿ ಬಂದಂತೆ ಕಾಣುವುದು ಕನ್ಯಾಕುಮಾರಿಯ ಮರಳಿನ ಮೇಲೆ ಒಂದು ರಾತ್ರಿ ಕುಳಿತವರಿಗೆ ಮುಂದೆ ಸ್ವರ್ಗದ ಆಸೆಯೂ ಉಂಟಾಗುವುದಿಲ್ಲ.

ಶ್ರೀಧರ ಸನ್ಯಾಸಿಯ ಜೀವ ಒಂದು ಕಡೆ ದೇವಸ್ಥಾನ ಮತ್ತೊಂದು ಕಡೆ ಸಮುದ್ರ ತೀರ ಹೀಗೆ ವಿಹರಿಸುತ್ತಿದ್ದಿತು. ಸಮುದ್ರ ತೀರದ ದೇವಾಲಯದ ದೇವತೆ ಕನ್ಯಾಕುಮಾರಿ. ದೇವಸ್ಥಾನ ಕಲ್ಲಿನಲ್ಲಿ ಕಟ್ಟಿದೆ. ಸುತ್ತಾ ಗೋಡೆ ಕೋಟೆಯಂತೆ ಇದೆ. ಇದು ಹೊಯ್ಸಳರ ಮಾರ್ಗದ ದೇವಸ್ಥಾನ. ಮಹಾ ದ್ವಾರವೂ ಕಂಬದ ಕಲ್ಲಿನ ವಿಗ್ರಹಗಳೂ ಬಹು ಮನೋಹರವಾಗಿವೆ. ದೇವತೆಗಳಿಗೂ ಅಸುರರಿಗೂ ಯುದ್ಧ ನಡೆದಾಗ ದೇವತೆಗಳು, ಪದ್ಧತಿಯಂತೆ ಸೋಲುವ ಸ್ಥಿತಿ ಬಂತು. ಆಗ ಪಾರ್ವತಿ ಮನುಷ್ಯರೂಪದ ಹನ್ನೆರಡು ವರ್ಷದ ಕನ್ಯೆಯಾಗಿ ಅಸುರರನ್ನು ಕೊಂದಳು. ಕೊಲೆಯಿಂದ ಕಲುಷಿತಳಾದ ಅವಳು ತಪಸ್ಸು ಮಾಡಿ ಪಾಪಪರಿಹಾರ ಮಾಡಿಕೊಳ್ಳಬೇಕೆಂದು ಶಿವನು ಸೂಚಿಸಿದನು. ಪಾರ್ವತಿ ಬಂದು ಇಲ್ಲಿ ತಪಸ್ಸಿಗೆ ನಿಂತಳು. ಆದರೆ ಪರಿಶುದ್ಧಳಾದ ದೇವಿಗೆ ಪಾಪವೆಲ್ಲಿ ? ಭಕ್ತರ ತಂಡ ಲಕ್ಷಲಕ್ಷವಾಗಿ ಬರತೊಡಗಿತು. ಭಕ್ತರು ಅಖಿಲಭಾರತದಿಂದ ಬಂದು ದೇವಸ್ಥಾನದಲ್ಲಿ ಯಾವಾಗಲೂ ನೆರೆದೇ ಇರುತ್ತಾರೆ. ಕನ್ಯಾಕುಮಾರಿ ದೇವತೆ, ಸಂಧ್ಯಾಕಾಲದ ದೀಪಾರಾಧನೆಯ ಸಮಯದಲ್ಲಿ ಸಜೀವಳಾದವಳಂತೆ ಸಿಂಹಾಸನಾರೂಢಳಾಗಿ ಆಧಿಪತ್ಯ ಮಾಡುವ ದೃಶ್ಯ, ಒಂದು ಸಲ ಕನ್ಯಾಕುಮಾರಿಯನ್ನು ನೋಡಿದವರಿಗೆ ಮರೆಯುವುದಿಲ್ಲ. ಕನ್ಯಾಕುಮಾರಿ ಕಲ್ಲಿನ ವಿಗ್ರಹ ರತ್ನಾಭರಣಗಳಿಂದ ಅಲಂಕೃತವಾಗಿರುವುದು. ಕುಮಾರಿಗೆ ರೇಶಿಮೆಯನ್ನು ಉಡಿಸಿ ಸುಗಂಧದ್ರವ್ಯಗಳನ್ನೂ ಚಂದನವನ್ನೂ ಪೂಸಿ ಪುಷ್ಪಾಹಾರಗಳನ್ನು ಅರ್ಪಿಸುತ್ತಾರೆ. ಕೊಳಲುಗಳು ಹಾಡುತ್ತವೆ; ಮೃದಂಗಗಳು ಬಾರಿಸುತ್ತವೆ; ಶಂಖಗಳು ಊದುತ್ತವೆ. ಭಕ್ತರು ಕೆಲವರು ಗಂಭೀರನಾದ, ಕೆಲವರು ಗೆಲುವಾದ ಧ್ವನಿಯಲ್ಲಿ ಹಾಡುತ್ತಾರೆ. ಕೆಲವರು

ಅಡ್ಡ ಬೀಳುತ್ತಿರುತ್ತಾರೆ. ಕೆಲವರು ಮಂಡಿಯೂರಿ ಕೈಮುಗಿದುಕೊಂಡು ನಿಂತಿರುತ್ತಾರೆ. ಕೆಲವರು ಪ್ರಾರ್ಥನೆಯಲ್ಲಿ ಪೂರ್ಣವಾಗಿ ಲೀನವಾಗಿರುತ್ತಾರೆ. ಕುಮಾರಿಯಲ್ಲಿ ನೆಟ್ಟ ಕಣ್ಣು, ಇಟ್ಟ ಮನಸ್ಸು ಉಳ್ಳವರಾಗಿ ಸ್ತುತಿಸುತ್ತಾರೆ. ಭಕ್ತಿಯು ತಾಂಡವವಾಡುತ್ತದೆ. ದೇವಾಲಯದ ಕಲ್ಲಿನ ಗೋಡೆಗಳು ಭಕ್ತರ ಗೀತೆಗಳನ್ನು ಅವರಿಗೇ ಹಿಂದಿರುಗಿಸುತ್ತವೆ. ಹರಿಜನರೂ ಬ್ರಾಹ್ಮಣರೂ ಒಟ್ಟಿಗೆ ಕುಮಾರಿಯನ್ನು, ಒಬ್ಬರ ನೆರೆಯಲ್ಲಿ ಒಬ್ಬರು ಉಪಾಸಿಸುತ್ತಾರೆ. ಕುಮಾರಿಯ ಮೈ ಮೇಲಿನ ರತ್ನ ವಜ್ರ ಪಚ್ಚೆ ಪುಷ್ಯರಾಗ ವೈಢೂರ್ಯ ನೀಲ ಮಣಿಗಳ ಹೊಳಪು ಕಣ್ಣನ್ನು ಕುಕ್ಕುತ್ತದೆ. ಸುತ್ತ ದೈವಿಕವಾದ ಕಾಂತಿಯನ್ನು ಹರಡುತ್ತದೆ. ಸುಗಂಧ ದ್ರವ್ಯ ಧೂಪಾರತಿಗಳ ಮಂಗಳಕರವಾದ ಸುವಾಸನೆ ಎಲ್ಲೆಲ್ಲೂ ತುಂಬುತ್ತದೆ. ದೇವಸ್ಥಾನದಲ್ಲೆಲ್ಲಾ ಸಣ್ಣ ಸಣ್ಣ ಹೊಳಪಾದ ದೀಪಗಳು ಮಿನುಗುತ್ತವೆ. ಸಮುದ್ರದಿಂದ ದೇವಸ್ಥಾನದ ಕಡೆ ಇರುವ ಬಾಗಿಲನ್ನು ಮುಚ್ಚಿದ್ದಾರೆ. ಇದನ್ನು ವರುಷಕ್ಕೆ ಎರಡು ಸಲ ಮಾತ್ರ ತೆರೆಯುತ್ತಾರೆ. ಹಿಂದೆ ಈ ಬಾಗಿಲು ಯಾವಾಗಲೂ ತೆರೆದಿರುತ್ತಿದ್ದಿತಂತೆ. ಆಗ ಕನ್ಯಾಕುಮಾರಿಯ ಆಭರಣಗಳು ಸಮುದ್ರದಲ್ಲಿ ಬರುವವರಿಗೆ ಬಹಳ ದೂರ ಗುರುತಾಗಿ ಕಾಣುತ್ತಿದ್ದುವಂತೆ. ನಮ್ಮ ದೇಶದ ಒಳ್ಳೆಯ ಪದಾರ್ಥಗಳನ್ನು ಯಾವಾಗಲೂ ಕದಿಯುವುದರಲ್ಲಿಯೇ ನಿಸ್ಸೀಮರಾದ ಕೆಲವು ಪರದೇಶದ ಕಳ್ಳರು, ಸಮುದ್ರ ತೀರದಲ್ಲಿ ಇಳಿದು ಕುಮಾರಿಯ ಮೈಮೇಲಿನ ಆಭರಣಗಳನ್ನು ಕದಿಯಲು ಬಂದರಂತೆ. ಕುಮಾರಿಯ ಎದುರಿಗೆ ಬಂದಾಗ ಅವರ ಕಣ್ಣು ಮಂಜಾಯಿತು. ಕೈಕಾಲು ನಡುಗಿದವು. ಕುಮಾರಿಯ ಪ್ರಭೆಯಲ್ಲಿ ಬೆಂಕಿಯಲ್ಲಿಯ ಹುಳುವಿನಂತೆ ಅವರು ಸಿಕ್ಕಿ ಕೊಂಡರು. ಹೇಗೋ ತಪ್ಪಿಸಿಕೊಂಡು ಹೋಗಿ ಸಮುದ್ರದಲ್ಲಿ ನಾಶವಾದರು. ಕನ್ಯಾಕುಮಾರಿಯ ದೇವಾಲಯ ಭಾರತದ ಮೇಲೆ ಬರುವ ರಾಕ್ಷಸರನ್ನು ಎದುರಿಸುವುದಕ್ಕೋ ಎಂಬಂತೆ ಮಹತ್ತಾಗಿ ಎದ್ದು ನಿಂತಿದೆ. "ಬಂಗಾಳ ಮತ್ತು ಅರಬ್ಬಿ ಸಮುದ್ರಗಳು ಕುಮಾರಿಯ ಪಾದವನ್ನು ತೊಳೆಯುತ್ತಿವೆ. ಕುಮಾರಿಯು ಉತ್ತರದಲ್ಲಿ ಕೈಲಾಸದಲ್ಲಿರುವ ಶಿವನನ್ನು ಒಲಿಸಿಕೊಳ್ಳಲು ತಪಸ್ಸು ಮಾಡುತ್ತಿದ್ದಾಳೆ." ಕುಮಾರಿ ಹೇಗೆ ಶುದ್ಧಳೋ ಸುತ್ತಲ ಅನಂತ

ವಾದ ವಿಸ್ತಾರವಾದ ಜಲರಾಶಿಯೂ ಹಾಗೆಯೇ ಪವಿತ್ರ. ಕನ್ಯಾಕುಮಾರಿಗೆ ಸ್ವಲ್ಪ ದೂರದಲ್ಲಿರುವ ಸುಚೀಂದ್ರ ಎಂಬ ಕ್ಷೇತ್ರದಲ್ಲಿ ಪ್ರತಿಷ್ಠಿತವಾದ ಶಿವ, ಒಂದು ಸಲ ಕುಮಾರಿ ತನ್ನನ್ನು ಮದುವೆಯಾಗುವಂತೆ ಒಲಿಸಿಕೊಂಡನು. ದೇವತೆಗಳೂ ಮನುಷ್ಯರೂ ಯಕ್ಷ ಗಂಧರ್ವರೂ ಸಕಲ ಜಗತ್ತೂ, ಈಶ್ವರ ಕುಮಾರಿಯರ ವಿವಾಹವನ್ನು ನೋಡಲು ಸಕಲ ಸಂಭಾರಗಳೊಂದಿಗೆ ನೆರೆ ಯಿತು. ಶಿವನು ಮದುವೆಯಾಗುವ ಹೊಸ ವರನಂತೆಯೇ ಉತ್ಸಾಹಿ ಯಾಗಿದ್ದ. ಕೊನೆಯ ಗಳಿಗೆಯಲ್ಲಿ ಕುಮಾರಿಯು ಮನಸ್ಸನ್ನು ಬದಲಾಯಿಸಿ ಶಿವನನ್ನು ತಿರಸ್ಕರಿಸಿದಳು. ಕೋಪಿಷ್ಠನಾದ ಶಿವ ಮದುವೆಗಾಗಿ ಸಿದ್ಧವಾಗಿದ್ದ ರತ್ನಾಭರಣಗಳು, ಅಕ್ಕಿಸಕ್ಕರೆಗಳನ್ನು ದಿಕ್ಕಾಪಾಲಾಗಿ ಮನಬಂದಂತೆ ಎಸೆದ ನಂತೆ. ಕನ್ಯಾಕುಮಾರಿಯ ಮರಳು ಬಣ್ಣಬಣ್ಣವಾಗಿ ಬೇರೆಬೇರೆ ಆಕಾರ ವಾಗಿರುವುದರ ಕಾರಣ, ಹಾಗೆ ಶಿವನು ಎಸೆದ ರತ್ನಾಭರಣಗಳು ಅದರಲ್ಲಿ ಬಿದ್ದುದೇ ! ಈ ಕತೆ ಕೇಳಿ ಶ್ರೀಧರನು ಕುಮಾರಿಯನ್ನು ನೋಡಿದಾಗ, ಅವನಿಗೆ ಕುಮಾರಿಯ ಕಣ್ಣುಗಳೂ ತುಟಿಗಳೂ ವಿನೋದದ ಚೇಷ್ಟೆಯನ್ನು ಳ್ಳವುಗಳಾಗಿತೋರಿದುವು. ಇದ್ದರೂ ಇರಬಹುದು ಎಂದುಕೊಂಡನು.

ಶ್ರೀಧರಸನ್ಯಾಸಿ ಹೀಗೆ ಅವಿಚ್ಛಿನ್ನವಾಗಿ ತನ್ನ ಮುಂದೆ ನಡೆಯುತ್ತಿದ್ದ ಜನಲೀಲೆಯನ್ನೂ ಅದ್ಭುತವಾದ ಅನಂತವಾದ ಸಾಗರದ ಮಹಿಮೆಯನ್ನೂ ಕುಮಾರಿಯ ದೀಪೋತ್ಸವ ಪಕ್ಷೋತ್ಸವ ಮಾಸೋತ್ಸವಗಳನ್ನೂ ನೋಡುತ್ತಾ ತನ್ನನ್ನು ತಾನು ಕುರಿತು ಯೋಚಿಸಿಕೊಂಡನು. ಬಿರುಗಾಳಿ ಕಡಿಮೆಯಾಗಿ ಮಳೆಯು ಪೂರ್ಣವಾಗಿ ನಿಂತು ಸಮುದ್ರದ ಮೇಲೆ ಮನೋಹರವಾದ ಪಕ್ಷಿ ಗಳು ಕಣ್ಣಿಗೆ ಕಾಣುವವರೆಗೆ ಹಾರಿಹೋಗುತ್ತಿರುವಾಗ, ದೇವಸ್ಥಾನದಲ್ಲಿ ವೇದ ಘೋಷಗಳೂ ಸಂಗೀತ ವಾದ್ಯಗಳೂ ಘಂಟೆಯ ನಾದದೊಂದಿಗೆ ಬೆರೆತಾಗ, ಬ್ರಾಹ್ಮಣರು ಪದಿನಾರು (ಹದಿನಾರು) ಕಾಲುಮಂಟಪದಲ್ಲಿ ಕುಳಿತು ಧ್ಯಾನ ಮಾಡುತ್ತಿರುವಾಗ ತೀರ್ಥಗಳಲ್ಲಿ ಜತೆ ಜತೆಯಾಗಿ ತಂದೆ ಮಗ, ತಾಯಿ ಮಗ, ಗಂಡ ಹೆಂಡತಿ, ಅಣ್ಣ ತಮ್ಮ ಇವರು ಒಬ್ಬರ ಕೈಯನ್ನು ಒಬ್ಬರು ಹಿಡಿದು ಕೊಂಡು ಸ್ನಾನಮಾಡುವಾಗ, ತೀರ್ಥಗಳ ತೀರಗಳ ಕಪ್ಪೆಚಿಪ್ಪುಗಳನ್ನು ಗರ್ಭಿಣಿ ಸ್ತ್ರೀಯರು ಸುಖಪ್ರಸವಕ್ಕಾಗಿ ಕಟ್ಟಿಕೊಳ್ಳುವಾಗ, ತಮಗೆ ಪ್ರಿಯ ಪ್ರಿಯೆಯರು ದೊರೆಯಲಿ ಎಂದು ಸ್ತ್ರೀ ಪುರುಷರು ಮಾತೃತೀರ್ಥದಲ್ಲಿ ದೊರ

ಕುವ ಕಪ್ಪೆಚಿಪ್ಪುಗಳನ್ನು ಸೆರಗಿಗೆ ಕಟ್ಟಿಕೊಳ್ಳುವಾಗ, ಶ್ರೀಧರಸನ್ಯಾಸಿಯು "ಇವರಿಗೆಲ್ಲಾ ಶಾಂತಿ ದೊರೆತಿದೆಯೆ ? ಮನುಷ್ಯನಿಗೆ ಶಾಂತಿ ದೊರೆಯುವುದಾದರೆ ಇಲ್ಲಿ ತಾನೇ ದೊರೆಯಬೇಕು. ಆದರೆ ನನಗೆ ಶಾಂತಿ ದೊರೆಯಲಿಲ್ಲವಲ್ಲ. ಶ್ರೀ ಸ್ವಾಮಿ ವಿವೇಕಾನಂದರು ಇಲ್ಲಿ ಬಂದು ಈ ಅದ್ಭುತವನ್ನು ಅನುಭವಿಸಿ ಅಲೌಕಿಕವಾದ ತೇಜಸ್ಸನ್ನೂ ಆತ್ಮಶಕ್ತಿಯನ್ನೂ ಗಳಿಸಿಕೊಂಡರು. ಆದರೆ ನನಗೆ ಇನ್ನೂ ಸಂಸಾರದ ವಾಸನೆ ಅಳಿಯಲಿಲ್ಲವಲ್ಲ. ತಾಯಿ ಕುಮಾರಿ, ಈ ಮನಸ್ಸನ್ನು ಚಾಪಲ್ಯದಿಂದ ಬಿಡಿಸು. ಬರಿಯ ವೇಷದ ಸನ್ಯಾಸಿಯಾಗಿರುವ ನನಗೆ, ನಿಜವಾದ ಸನ್ಯಾಸವನ್ನು ಕರುಣಿಸು" ಎಂದು ಕುಮಾರಿಯನ್ನು ಪ್ರಾರ್ಥಿಸಿದನು. ಅವನ ಕಣ್ಣುಗಳಿಂದ ದೌರ್ಬಲ್ಯದ ನೀರು ಧಾರೆ ಧಾರೆಯಾಗಿ, ಹೃದಯದ ಮಾಲಿನ್ಯವೋ ಎಂಬಂತೆ ಸುರಿಯಿತು. ಆದರೆ ಅವನ ಮನಸ್ಸು ಹಗುರವಾಗಲಿಲ್ಲ.

ಕನ್ಯಾಕುಮಾರಿಗೆ ತಂಡತಂಡವಾಗಿ ಬರುತ್ತಿದ್ದ ಯಾತ್ರಿಕರ ಪೈಕಿ ಒಂದು ದಿನ ಕಲ್ಯಾಣಿಯೂ ಬಂದುದನ್ನು ನೋಡಿ ಶ್ರೀಧರ ಸನ್ಯಾಸಿ ಬೆಚ್ಚಿಬಿದ್ದನು. ಕಲ್ಯಾಣಿಯ ಜತೆಯಲ್ಲಿ ಸುಮಾರು ೪೫-೪೬ ವರುಷದ ಒಬ್ಬ ನಿಶ್ಶಕ್ತನಾದ ಗಂಡಸು ಇದ್ದನು. ಮೂರು ನಾಲ್ಕು ವರುಷದ ಒಂದು ಹೆಣ್ಣು ಮಗುವನ್ನು ಕಲ್ಯಾಣಿ ಎತ್ತಿಕೊಂಡಿದ್ದಳು. ರೈಲಿನಿಂದ ಇಳಿದು ಛತ್ರಕ್ಕೆ ನುಗ್ಗುತ್ತಿದ್ದ ಅನೇಕ ಯಾತ್ರಿಕರ ಗುಂಪಿನಲ್ಲಿ ಕಲ್ಯಾಣಿ ಹೋಗುತ್ತಿದ್ದರೂ, ಶ್ರೀಧರ, ಅವಳನ್ನು ತತ್‌ಕ್ಷಣ ಗುರುತಿಸಿದನು. ತನ್ನ ನಾಲ್ಕು ವರುಷಗಳ ತಪಸ್ಸು ದೇಹದಂಡನೆಗಳಿಂದ ಏನೂ ಪ್ರಯೋಜನವಾಗಲಿಲ್ಲವೆಂಬುದು ಅವನಿಗೆ ಆ ಗಳಿಗೆಯಲ್ಲಿ ಗೊತ್ತಾಯಿತು. ಕಲ್ಯಾಣಿಯೂ ಶ್ರೀಧರನ ಕಡೆ ನೋಡಿದಳು. ಒಬ್ಬರನ್ನೊಬ್ಬರು ಕಂಡು ಆರು ವರುಷಗಳಾಗಿದ್ದರೂ, ಇಬ್ಬರ ಮುಖಭಾವದಲ್ಲಿಯೂ ಏನೂ ವ್ಯತ್ಯಾಸವಾಗಿರಲಿಲ್ಲ. ಶ್ರೀಧರನು ಕಲ್ಯಾಣಿಯ ಮುಖದಲ್ಲಿ ಅದೇ ಜಿಂಕೆಯ ಕಣ್ಣುಗಳನ್ನೂ ಹವಳದ ತುಟಿಗಳನ್ನೂ ನೋಡಿದನು. ಹಿಂದೆ ಆರು ವರುಷಗಳ ಕೆಳಗೆ ಇದ್ದುದಕ್ಕಿಂತ ಕಲ್ಯಾಣಿ ನೂರುಮಡಿ ಸುಂದರಿಯಾಗಿ ತೋರಿದಳು. ಶ್ರೀಧರಸನ್ಯಾಸಿಗೆ ಕನ್ಯಾಕುಮಾರಿಗಿಂತ ಕಲ್ಯಾಣಿಯೇ ಹೆಚ್ಚಿನ ದೇವತೆಯಾದಳು. ಅವನ ಮನಸ್ಸಿನಲ್ಲಿ ಅಮುಕಿ ಕುಳಿತಿದ್ದ ಪ್ರೇಮ

ಮಲಗಿರುವ ಸರ್ಪ ಹೆಡೆ ಎತ್ತಿಕೊಂಡು ಮೇಲಕ್ಕೆ ಎದ್ದಂತೆ ಪ್ರೇಮದ ಅಲೆಗಳು, ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತಾ ಅವನನ್ನು ಕೊಚ್ಚಿಕೊಂಡು ಹೋಗುವಂತೆ ಜಾಗ್ರತವಾಯಿತು. ಶ್ರೀಧರ ಸನ್ಯಾಸಿಯು "ಈ ಅಲೆಯ ಸುಳಿಗೆ ಸಿಕ್ಕಿದೆ. ಸತ್ತೆ. ಹೆಣ್ಣಿನ ಆಸೆ ಬಿಡಲಿಲ್ಲ. ನರಕಕ್ಕೆ ಹೋದರೂ ಚಿಂತೆಯಿಲ್ಲ. ಕಲ್ಯಾಣಿಯನ್ನು ಬಿಡಲಾರೆ" ಎಂದುಕೊಂಡನು.

ಎಲ್ಲಾ ಯಾತ್ರಿಕರಂತೆ ಕಲ್ಯಾಣಿಯೂ ತನ್ನ ಮಗು ಗಂಡನೊಂದಿಗೆ ಶ್ರೀಧರ ಇಳಿದಿದ್ದ ಛತ್ರಕ್ಕೆ ಬಂದಳು. ಮನೆಯಿಂದ ದೂರವಾದ ಅಂತಹ ಯಾತ್ರಾ ಸ್ಥಳಗಳಲ್ಲಿ ಗುರುತಿಲ್ಲದವರೇ ಸ್ನೇಹಿತರಾಗಿರುವಾಗ ತನ್ನ ಗಂಡನಾಗ ಬೇಕಾಗಿದ್ದ ಹಳೆಯ ಸಂಗೀತದ ಉಪಾಧ್ಯಾಯರೊಂದಿಗೆ ಕಲ್ಯಾಣಿ ಸ್ವಾಭಾವಿಕವಾಗಿ ಮಾತನಾಡಿದುದು ಆಶ್ಚರ್ಯವಾಗಿರಲಿಲ್ಲ. ಕಲ್ಯಾಣಿ ತನ್ನ ಗಂಡನಿಗೆ "ಇವರು ನಮ್ಮ ಊರಿನವರು. ನನಗೆ ಸಂಗೀತದ ಉಪಾಧ್ಯಾಯರಾಗಿದ್ದರು" ಎಂದಳು. ಅವಳ ಧ್ವನಿ ಗಂಭೀರವಾಗಿತ್ತು. ಅವಳು ಶ್ರೀಧರನೊಂದಿಗೆ ಧೈರ್ಯದಿಂದಲೇ ಮಾತನಾಡುತ್ತಿದ್ದಳು. ಆಕೆಯ ಗಂಡ ನಿಶ್ಯಕ್ತನಾಗಿ ಬಡಕಲಾದ ಆಳು, ನಮ್ರವಾದ ನಾಯಿ ಯಜಮಾನನ್ನು ಅನುಸರಿಸುವಂತೆ ಆಸೆಯಿಂದ ಯಾವಾಗಲೂ ಕಲ್ಯಾಣಿಯ ಕಡೆಯೇ ನೋಡುತ್ತಿದ್ದನು. ಶ್ರೀಧರ ಸನ್ಯಾಸಿ ಕಲ್ಯಾಣಿಯ ಮಗಳನ್ನು ನೋಡಿದನು. ಅದು ಗೆಲುವಾಗಿ ದಪ್ಪನಾಗಿ ಚೆನ್ನಾಗಿದ್ದಿತು. ಅವನ ಪ್ರಯತ್ನವಿಲ್ಲದೆಲೇ "ಈ ಮಗು ನನ್ನದಾಗಿರಬಹುದಾಗಿತ್ತು" ಎಂಬ ಭಾವ ಅವನಿಗೆ ಬಂದಿತು.

ಕಲ್ಯಾಣಿಯೂ ಆಕೆಯ ಗಂಡನೂ ಸಮುದ್ರದಲ್ಲಿ ಸ್ನಾನಮಾಡಿಕೊಂಡು ಬಂದರು. ಅನಂತರ ದೇವರ ಸೇವೆ ಮುಗಿಸಿಕೊಂಡು ಬಂದು ಅಡಿಗೆ ಮಾಡಿ ಊಟ ಮಾಡಿದರು. ಕಲ್ಯಾಣಿಯ ಗಂಡನಿಗೆ ಪ್ರಯಾಣದ ಆಯಾಸದಿಂದ ನಿತ್ರಾಣವಾಗಿ ಅವನು ಮಲಗಿಬಿಟ್ಟನು. ಸುತ್ತಲ ಬಗೆ ಬಗೆಯ ಜನರೂ, ಸಮುದ್ರವೂ, ಮರಳಿನ ರಾಶಿಯೂ, ಪ್ರಕೃತಿಯ ಸೊಬಗೂ, ಕನ್ಯಾಕುಮಾರಿಯ ದಿವ್ಯ ವೈಭವವೂ, ಗಾಳಿಯ ಹಾಗೆ ಕಲ್ಯಾಣಿ ಚಲಿಸುತ್ತಿದ್ದುದೂ ಆತನ ಲಕ್ಷ್ಯಕ್ಕೆ ಬಂದಿರಲಿಲ್ಲ ಶ್ರೀಧರ ಸನ್ಯಾಸಿ ನಿಧಾನವಾಗಿ ಕಲ್ಯಾಣಿಯೊಂದಿಗೆ ಮಾತನಾಡಲು ಪ್ರಾರಂಭಿಸಿದನು. ಮೊದಲು ಮೊದಲು ಅವರು ಸಾಮಾನ್ಯ ವಿಚಾರಗಳನ್ನೇ ಕುರಿತು ಮಾತನಾಡಿದರು. ಊರಿನ ಸುದ್ದಿ,

ಕಲ್ಯಾಣಿಯ ತಾಯಿ ಪ್ಲೇಗಿನಲ್ಲಿ ಸತ್ತುದು, ಅವರ ಮಾವನೂ ಸತ್ತುದು ; ತನ್ನ ಗಂಡನಿಗೆ ೧೦-೧೫ ವರ್ಷಗಳಿಂದ (ತನ್ನನ್ನು ಮದುವೆಯಾಗುವುದಕ್ಕೆ ಮುಂಚಿನಿಂದಲೇ ಖಾಯಿಲೆ ಇದ್ದುದು). ಇದು ಕ್ಷಯವಿರಬಹುದೆಂದು ಜನ ಹೆದರಿಸಿದುದು, ದಿನ ದಿನಕ್ಕೆ ಖಾಯಿಲೆ ನಿಶ್ಶಕ್ತಿ ಹೆಚ್ಚಾದುದರಿಂದ ಬಿಸಿಲು ಪ್ರಾಂತದಲ್ಲಿ ತಿರುಗಾಡಿ ಸಮುದ್ರ ಸ್ನಾನ ಮಾಡಿದರೆ ಒಳ್ಳೆಯದಾಗುವುದೆಂದು ವೈದ್ಯರು ಹೇಳಿದುದು ; ಎಲ್ಲವೂ ಶ್ರೀಧರ ಸನ್ಯಾಸಿಗೆ ತಿಳಿಯಿತು. ಕಲ್ಯಾಣಿಯ ಗಂಡ "ಈ ಸ್ಥಳದ ಹವ ನನಗೆ ಒಗ್ಗುತ್ತಿದೆ, ಹದಿನೈದು ದಿನ ಇರೋಣ" ಎಂದನು.

ಇಲ್ಲಿ ಕಲ್ಯಾಣಿಯ ಸಾನ್ನಿಧ್ಯದಲ್ಲಿ ಶ್ರೀಧರ ಸನ್ಯಾಸಿ ಪೂರ್ಣವಾಗಿ ಕಾಮನ ಪಾಶದಲ್ಲಿ ಸಿಕ್ಕಿಕೊಂಡನು. ಅವನ ಮನಸ್ಸು ಕಣ್ಣು ಕಿವಿ ಎಲ್ಲವೂ ವ್ಯಭಿಚಾರಿಗಳಾದವು. ದೇಹ ಮಾತ್ರ ಸ್ವಾಭಾವಿಕವಾದ ಸಂಯಮದಿಂದ ಶುದ್ಧವಾಗಿದ್ದಿತು. ಕಲ್ಯಾಣಿಯ ಕತೆಯನ್ನೆಲ್ಲಾ ಕೇಳಿ ಶ್ರೀಧರನು "ನೀನು ಮದುವೆಯಾಗದೆ ಇನ್ನು ಎರಡು ತಿಂಗಳು ಮಾತ್ರ ಕಾದಿದ್ದರೆ !" ಎಂದನು. ಕಲ್ಯಾಣಿಯು 'ನೀವು ಒಂದು ಮಾತು ಹೇಳಿದ್ದರೆ ಎರಡು ತಿಂಗಳಲ್ಲ, ಎರಡು ಯುಗ ಬೇಕಾದರೂ ಕಾಯುತ್ತಿದ್ದೆನಲ್ಲ' ಎಂದಳು. ಶ್ರೀಧರ ಸನ್ಯಾಸಿಯು "ಆಗ ನನ್ನ ಕಾಲಿಗೆ ಸೇದಿಹೋಗಿತ್ತು" ಎಂದು ತಲೆ ಚಚ್ಚಿಕೊಂಡನು. ಶ್ರೀಧರನ ಮಾತುಗಳನ್ನೂ, ಉಕ್ಕಿಬರುತ್ತಿದ್ದ ಆಸೆಯನ್ನೂ ಕಂಡು ಕಲ್ಯಾಣಿ ಬೆಚ್ಚಿಬಿದ್ದಳು.

ಕಲ್ಯಾಣಿಯೂ ಅವಳ ಗಂಡನೂ ನಿತ್ಯ ಸಮುದ್ರ ಸ್ನಾನಕ್ಕೆ ಹೋಗುತ್ತಿದ್ದರು. ಮಗುವನ್ನು ಶ್ರೀಧರ ಸನ್ಯಾಸಿಯ ಬಳಿಯಲ್ಲಿ ಬಿಟ್ಟು ಹೋಗುತ್ತಿದ್ದರು. ಶ್ರೀಧರನು ಆರು ವರ್ಷಗಳಿಂದಲೂ ಗಳಿಸಿದ ಸಂಯಮವೂ ತಪಸ್ಸೂ ಇದ್ದಕ್ಕಿದ್ದಂತೆ ಮಾಯವಾಯಿತು. ಕಲ್ಯಾಣಿಯ ಸಾನ್ನಿಧ್ಯದಿಂದ ಶ್ರೀಧರನು ಬೆಂಕಿಯಲ್ಲಿ ಬೀಳುವ ಪತಂಗದಂತಾಗುತ್ತಿದ್ದನು. 'ಪಾಪ ಸಂಘಟಿಸುತ್ತದೆ. ಆದರೆ ಅದನ್ನು ತಡೆಯಲು ನನಗೆ ಶಕ್ತಿಯಿಲ್ಲ' ಎಂದು ಶ್ರೀಧರ ಸನ್ಯಾಸಿ ದುರ್ಬಲನಾಗಿ ಎಳೆಯ ಮಗುವಿನಂತೆ ಅತ್ತನು. ಆ ದಿನ ಕಲ್ಯಾಣಿಯೂ ಅವಳ ಗಂಡನೂ ಸಮುದ್ರದಿಂದ ಸ್ನಾನ ಮಾಡಿಕೊಂಡು ನಿತ್ಯದ ಹೊತ್ತಿಗೆ ಬರಲಿಲ್ಲ. ಯಾಕೆ ಸಾವಕಾಶವಾಗಿರಬಹುದೆಂದು ಶ್ರೀಧರನು ಯೋಚಿಸುತ್ತಿರಲು, ಛತ್ರದ

ಹೊರಗಡೆ ಜನರ ಗದ್ದಲ ಹೆಚ್ಚಾಯಿತು. "ಗಂಡನು ತೇಲಿಹೋಗಲು ಹೆಂಡತಿ ಹಿಡಿದುಕೊಂಡಳು. ಇಬ್ಬರೂ ನೀರಿನ ಪಾಲಾದರು" ಎಂದು ಜನರು ಹೇಳುತ್ತಿದ್ದರು. ಕಲ್ಯಾಣಿಯೂ ಅವಳ ಗಂಡನೂ ಕನ್ಯಾಕುಮಾರಿಯ ಅನಂತವಾದ ಅಪಾರವಾದ ಜಲರಾಶಿಯಲ್ಲಿ ತಮ್ಮ ಜೀವನಯಾತ್ರೆಯನ್ನು ಮುಗಿಸಿದ್ದರು.

ಕಲ್ಯಾಣಿ ತೇಲಿಹೋದುದನ್ನು ಕಂಡು ಶ್ರೀಧರ ಸನ್ಯಾಸಿಯ ಎದೆಯೊಡೆಯಿತು. ಬಹಳ ದಿನಗಳಿಂದ ಕಟ್ಟಿದ್ದ ಅಣೆಕಟ್ಟು ಒಡೆದಾಗ ನೀರು ಹರಿಯುವಂತೆ ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಿತು. ಶ್ರೀಧರನು ನಿಸ್ಸಂಕೋಚವಾಗಿ ಪೂರ್ಣವಾಗಿ ಅತ್ತನು. ಭಗವಂತನ ಲೀಲೆ ವಿಚಿತ್ರವಾದುದು. ಕಲ್ಯಾಣಿಯ ಚೆಲುವು, ಯೌವನ ಅದೆಲ್ಲಾ ಒಂದೇ ಗಳಿಗೆಯಲ್ಲಿ ಮಣ್ಣು ಪಾಲಾದುದನ್ನು ಕಂಡು ಅನೇಕ ವರ್ಷಗಳ ಧ್ಯಾನ, ತಪಸ್ಸಿನಿಂದ ಉಂಟಾಗದ ವೈರಾಗ್ಯ ಅವನಿಗೆ ಉಂಟಾಯಿತು. ಮಾಯಾ ಜಿಂಕೆಯಂತೆ ಕೈಗೆ ಸಿಕ್ಕಿ ಮರುಕ್ಷಣದಲ್ಲಿ ತಪ್ಪಿಸಿಕೊಂಡು ಹೋಗುತ್ತಿರುವ ಸುಖದ ಬೇಟೆಯಿಂದ ಶ್ರೀಧರನು ಪೂರ್ಣವಾಗಿ ವಿಮುಖನಾದನು. ಕಲ್ಯಾಣಿಯ ಕೊನೆಯನ್ನು ಶ್ರೀಧರನು ಹೀಗೆ ಕಾಣದಿದ್ದರೆ ಅವನಿಗೆ ಎಂದಿಗೂ ವೈರಾಗ್ಯವುಂಟಾಗುತ್ತಿರಲಿಲ್ಲ.

ಅಳುತ್ತಿರುವ ಕಲ್ಯಾಣಿಯ ಮಗು, ಅವನ ದೃಷ್ಟಿಯನ್ನು ಎಳೆಯಿತು. ಆ ಬಡಪಾಯಿಯನ್ನು ಕಂಡು ಶ್ರೀಧರನಿಗೆ ಕನಿಕರವುಂಟಾಯಿತು. ಇದು ಈ ಜಗತ್ತಿನಲ್ಲಿ ಇನ್ನು ಯಾವ ಯಾವ ದುಃಖವನ್ನನುಭವಿಸಬೇಕೋ ಎಂದುಕೊಂಡನು. ಅವನಿಗೆ ನಿಜವಾದ ವೈರಾಗ್ಯ ಉಂಟಾಗಿ ಅವನ ಮನಸ್ಸು ಜಗತ್ತಿನಿಂದ ವಿಮುಖವಾದುದರಿಂದ ಇನ್ನು ಕನ್ಯಾಕುಮಾರಿಯಲ್ಲಿರುವುದು ಅವನಿಗೆ ಅವಶ್ಯಕವಾಗಲಿಲ್ಲ. ಕಲ್ಯಾಣಿಯ ಮಗುವನ್ನು ಅವಳ ಊರಿಗೆ ಕರೆದುಕೊಂಡು ಹೋಗಿ ಯಾರಲ್ಲಿಯಾದರೂ ಬಿಟ್ಟ ಹೊರತು ಶ್ರೀಧರನ ಜವಾಬ್ದಾರಿ ಪೂರ್ಣವಾಗುವುದಾಗಿರಲಿಲ್ಲ. ಅವನ ಕಾಮವೆಲ್ಲವೂ ಈಗ ಪೂರ್ಣವಾಗಿ ಪ್ರೇಮವಾಯಿತು. ಭಗವಂತನ ಸೃಷ್ಟಿಯೆಲ್ಲಾ ಅವನ ಪ್ರಾಣದ ಪ್ರಾಣವಾಯಿತು. ಕಲ್ಯಾಣಿಯ ಊರಿನಲ್ಲಿ ಅವಳ ಬಂಧುಗಳಾಗಲಿ, ಅಥವಾ ಅವಳ ಮಗುವಿಗೆ ಪೋಷಕರಾಗುವವರಾಗಲಿ ಯಾರಾದರೂ ಇರುವರೇ ಎಂಬುವೂ ಶ್ರೀಧರ ಸನ್ಯಾಸಿಗೆ ಗೊತ್ತಿರಲಿಲ್ಲ.

ಕಲ್ಯಾಣಿಯ ಗಂಡನ ಗ್ರಾಮ ಅವನಿಗೆ ಗೊತ್ತಾಗಿದ್ದುರಿಂದ ಶ್ರೀಧರ ಸನ್ಯಾಸಿ ಕಾಲುನಡಗೆಯಲ್ಲಿಯೇ ಹೊರಟನು. ಅವನಿಗೆ ಗಾಬರಿ, ಕಾತರ, ಆತಂಕಗಳು ಇರಲಿಲ್ಲ. ಅವನು ಅವಸರದಿಂದ ಪೂರೈಸಬೇಕಾದ ಕೆಲಸಗಳಾವುವೂ ಇರಲಿಲ್ಲ. ಅವನು ಕಲ್ಯಾಣಿಯ ಮಗುವನ್ನು ಜತೆಯಲ್ಲಿ ಕರೆದುಕೊಂಡು ದಾರಿಯ ಗ್ರಾಮಗಳಲ್ಲೆಲ್ಲಾ ಒಂದು ದಿನ ಎರಡು ದಿನ ನಿಲ್ಲುತ್ತಾ ನಿಧಾನವಾಗಿ ಯಾತ್ರೆ ಪ್ರಾರಂಭಿಸಿದನು. ಕಲ್ಯಾಣಿಯ ಆಸೆ ಬಿಟ್ಟ ಮೇಲೆ ಅವನಿಗೆ ಗಾನಸರಸ್ವತಿಯು ಪೂರ್ಣವಾಗಿ ಒಲಿದಂತೆ ತೋರಿತು. ಅವನು ಅನೇಕ ಗಂಟೆಗಳವರೆಗೆ ಒಂದೇ ಸಮನಾಗಿ ಗಾನದಲ್ಲಿಯೇ ಲೀನನಾಗಿರುತ್ತಿದ್ದನು. ಮಧುರೆಯಲ್ಲಿ ಶ್ರೀಧರ ಸನ್ಯಾಸಿ ದೇವಸ್ಥಾನದಲ್ಲಿ ಪರವಶನಾಗಿ ಹಾಡುತ್ತಿರುವಾಗ ಆತನ ಪ್ರೇಮಪೂರ್ಣವಾದ ಕೋಮಲ ಹೃದಯದಿಂದ ಹೊರಡುತ್ತಿದ್ದ ಗಾನವು ಸಂಗೀತಾಭಿಲಾಷಿಯಾದ ಒಬ್ಬ ಯುವಕನನ್ನು ಅವನಲ್ಲಿಗೆ ಎಳೆಯಿತು. ಅಲ್ಲಿಂದ ಮುಂದೆ ಯುವಕನು ಶ್ರೀಧರ ಸನ್ಯಾಸಿಗಳ ಜತೆಯಲ್ಲಿಯೇ ದೇಶಸಂಚಾರ ಹೊರಟನು. ಕಲ್ಯಾಣಿಯ ಮಗುವಿನ ರಕ್ಷಣೆಯ ಭಾರವೂ ಅವನನ್ನೇ ಕೂಡಿತು.

೪

ಶ್ರೀಧರ ಸನ್ಯಾಸಿ ಮಲ್ಲಿಗೆ ಹಳ್ಳಿಗೆ ಬಂದ ಎರಡು ಮೂರು ದಿನಗಳೊಳಗಾಗಿ ಕಲ್ಯಾಣಿಯೂ ಅವಳ ಗಂಡನೂ ಕನ್ಯಾಕುಮಾರಿಯಲ್ಲಿ ನೀರುಪಾಲಾದ ಸಂಗತಿ ಮಲ್ಲಿಗೆ ಹಳ್ಳಿಯವರಿಗೆ ತಿಳಿಯಿತು. ಆದರೆ ಅವರಿಗಾಗಿ ಅಲ್ಲಿ ಅಳುವವರು ಯಾರೂ ಇರಲಿಲ್ಲ. ಯಾತ್ರೆ ಹೋದವರು ಬರಲಿಲ್ಲ ಎಂದಿಷ್ಟು ಮಾತ್ರ ಜನ ತಿಳಿದುಕೊಂಡು ಸುಮ್ಮನಾಗಿದ್ದರು. ಸನ್ಯಾಸಿ ಮಲ್ಲಿಗೆ ಹಳ್ಳಿಗೆ ಬಂದ ನಾಲ್ಕು ದಿನಗಳ ನಂತರ ಮಲ್ಲಿಗೆಹಳ್ಳಿಯ ದೀಕ್ಷಿತರಿಗೆ ಕಲ್ಯಾಣಿ ಗಂಡನೊಂದಿಗೆ ಕನ್ಯಾಕುಮಾರಿಯಲ್ಲಿ ಐಕ್ಯವಾದುದನ್ನು ತಿಳಿಸಿದನು. ತಾನು ಎದುರಿಗೆ ಇದ್ದುದರಿಂದ ಅವಳ ಮಗುವನ್ನು ಬಿಡುವುದಕ್ಕಾಗಿಯೇ ಮಲ್ಲಿಗೆ ಹಳ್ಳಿಗೆ ಬಂದುದಾಗಿಯೂ ಮಗುವಿಗೆ ಯಾರಾದರೂ ರಕ್ಷಕರು ಸಿಕ್ಕಿದರೆ ತಾನು ಮತ್ತೆ ತನ್ನ ನಿವೃತ್ತಿ ಮಾರ್ಗಾನ್ವೇಷಣಕ್ಕೆ ಹಿಮಾಲಯಕ್ಕೆ ಹೋಗುವುದಾಗಿಯೂ ತಿಳಿಸಿದನು. ದೀಕ್ಷಿತರು "ಸ್ವಾಮಿನ್, ಆ ವಿಷಯ ತಾವು ಯೋಚಿಸಬೇಕಾದುದಿಲ್ಲ. ನನಗೆ ಮಕ್ಕಳು ಇಲ್ಲ. ನಾನೇ ಈ ಮಗುವನ್ನು ಸಾಕಿಕೊಳ್ಳುತ್ತೇನೆ"

ಎಂದರು. ಕಲ್ಯಾಣಿಯ ಸಾವಿನಿಂದ ಯಾರೂ ಹೆಚ್ಚು ದುಃಖಪಡಲಿಲ್ಲ. ಆದರೆ ಕನ್ಯಾಕುಮಾರಿಯಂತಹ ಪವಿತ್ರವಾದ ಸ್ಥಳದಲ್ಲಿ ಗಂಡನೊಂದಿಗೆ ಮೃತಳಾದುದರಿಂದ ಆಕೆಯ ಮಹಿಮೆಯೇ ಏರಿತು. ಅಲ್ಲಿಂದ ಮುಂದೆ ಜನ ಆ ಪಾಳು ಗುಡಿಗೆ ಅವಳ ಜ್ಞಾಪಕವಾಗಿ ಕನ್ಯಾಕುಮಾರಿ ಎಂದೇ ಹೆಸರಿಟ್ಟರು.

ಸನ್ಯಾಸಿ ಮಗುವನ್ನು ದೀಕ್ಷಿತರಲ್ಲಿ ಬಿಟ್ಟು ಶಿಷ್ಯನೊಂದಿಗೆ ಮರುದಿನವೇ ಎಲ್ಲಿಗೋ ಹೊರಟುಹೋದನು. ಅವನನ್ನು ಈಚೆಗೆ ಯಾರೂ ಕಾಣಲಿಲ್ಲ.

—□—

ಕೋರ್ಟಿನಲ್ಲಿ ಗೆದ್ದ ಎತ್ತು

ವಿದ್ಯಾಶಂಕರ, ಮಹಾತ್ಮಾ ಗಾಂಧಿಯವರಿಂದ ಸ್ಥಾಪಿತವಾದ ಬೆಂಗಳೂರಿನ ಅಖಿಲ ಭಾರತ ಚರಖ ಸಂಘದ ಖಾದಿ ವಸ್ತ್ರಾಲಯದಲ್ಲಿ ವ್ಯವಸ್ಥಾಪಕನಾಗಿದ್ದ. ದೇಶದ ನಾನಾ ಭಾಗಗಳಿಂದ ಖಾದಿ ವಸ್ತ್ರಗಳನ್ನು ತರಿಸಿ ಅದನ್ನು ಮಾರುವುದು ಅವನ ಕೆಲಸವಾಗಿತ್ತು. ಖಾದಿ ಬಟ್ಟೆಯ ಗಂಟುಗಳು ರೈಲಿನಲ್ಲಿ ಪ್ರತಿದಿನವೂ ಬೆಂಗಳೂರಿಗೆ ಬರುತ್ತಿದ್ದವು. ರೈಲು ನಿಲ್ದಾಣದಿಂದ ಅವುಗಳನ್ನು ವಸ್ತ್ರಾಲಯಕ್ಕೆ ತರಲು, ಒಂಟೆತ್ತಿನ ಒಂದು ಗಾಡಿ ಇಟ್ಟುಕೊಂಡಿದ್ದ ಒಬ್ಬ ಸಾಹೇಬ (ಮುಸಲ್ಮಾನ) ಹಿಂದಲಿಂದಲೂ ನಿಯಮಿತನಾಗಿದ್ದ. "ಖಾದಿ ಪವಿತ್ರವಾದ ಕಾರ್ಯ. ಇದಕ್ಕೆ ಸಾತ್ವಿಕರ ಸಂಪರ್ಕವೇ ಬೇಕು. ಖಾದಿರ್ (ಮುಸಲ್ಮಾನ ಗಾಡಿಯವ) ಬಹಳ ನಿಷ್ಠ. ನಮಾಜ ಮಾಡುವುದನ್ನು ಎಂದೂ ತಪ್ಪಿದವನಲ್ಲ. ಖುರಾನ್ ಚೆನ್ನಾಗಿ ಗೊತ್ತು. ಆ ವಠಾರದ ಮುಸಲ್ಮಾನರಿಗೆಲ್ಲಾ ಇವನೇ ಪುರೋಹಿತ. ಕೋರ್ಟು ಕಛೇರಿಗೆ ಒಬ್ಬರನ್ನೂ ಕಳುಹಿಸದೆ ಅವರ ವ್ಯಾಜ್ಯಗಳನ್ನೆಲ್ಲ ಇವನೇ ತೀರ್ಮಾನ ಮಾಡುತ್ತಾನೆ. ಇವನ ವಾಕ್ಯ ಅವರಿಗೆ ಖುರಾನ್. ಇವನಲ್ಲಿರುವ ಎಲ್ಲಕ್ಕಿಂತ ಹೆಚ್ಚಾದ ಗುಣ, ಇವನು ಕುಡುಕನಲ್ಲ" ಎಂದು ಹೇಳಿ ಹಿಂದಲ ವ್ಯವಸ್ಥಾಪಕರು ಖಾದಿರನನ್ನು ಶಿಫಾರಸು ಮಾಡಿ, ವರ್ಗವಾದ ಬೇರೆ ವಸ್ತ್ರಾಲಯಕ್ಕೆ ಹೋಗಿದ್ದರು. ಹೊರನೋಟಕ್ಕೂ ಖಾದಿರ ಅಚ್ಚ ಮುಸಲ್ಮಾನನಾಗಿ ತೋರುತ್ತಿದ್ದ. ಚೂಪಾದ ಎಂದಿಗೂ ಬೋಳಿಸದಿದ್ದ ಅವನ ಗಡ್ಡವನ್ನು ನೋಡಿದರೆ ಸಾಕು, ಪೈಗಂಬರ್ ಮಹಮ್ಮದರ ಪಕ್ಕಾ ಶಿಷ್ಯನಂತೆ ತೋರುತ್ತಿತ್ತು.

ರೈಲಿನಲ್ಲಿ ಮೂಟೆಗಳು ಬಂದು, ರೈಲ್ವೆ ರಶೀತಿ ವಸ್ತ್ರಾಲಯ ವ್ಯವಸ್ಥಾಪಕರಿಗೆ ರಿಜಿಸ್ಟರ್ ಪೋಸ್ಟಿನಲ್ಲಿ ಬರುತ್ತಿದ್ದವು. ರಶೀತಿಗಳಲ್ಲಿ ನಮೂದಾಗಿರುವ ರೈಲು ಕರವನ್ನೂ ರಶೀತಿಯನ್ನೂ ವಿದ್ಯಾಶಂಕರ, ಖಾದಿರನ ಕೈಲಿ ಕೊಟ್ಟು ಸ್ಟೇಷನಿಗೆ ಕಳುಹಿಸುತ್ತಿದ್ದ. ಖಾದಿರ ಗಂಟುಗಳನ್ನು ಬಿಡಿಸಿಕೊಂಡು, ತನ್ನ ಗಾಡಿಯಲ್ಲಿ ಹಾಕಿಕೊಂಡು ವಸ್ತ್ರಾಲಯಕ್ಕೆ ತಂದು ಹಾಕಿ, ಮೂಟೆಗೆ ಎಂಟಾಣೆ

ಯಂತೆ ಬಾಡಿಗೆ ಮುರಿದುಕೊಂಡು ಲೆಕ್ಕ ತೀರ್ಮಾನ ಮಾಡಿ ಹೋಗುತ್ತಿದ್ದ. ಬೆಂಗಳೂರಿನ ಖಾದಿ ಅಂಗಡಿ ಹುಟ್ಟಿದಂದಿನಿಂದ ಹೀಗೆಯೇ ನಡೆಯುತ್ತಿತ್ತು. ವಿದ್ಯಾಶಂಕರರೂ ಆ ಮಾಮೂಲನ್ನೇ ಅನುಸರಿಸುತ್ತಿದ್ದರು.

ವಸ್ತ್ರಾಲಯಕ್ಕೆ ಛಳಿಗಾಲದಲ್ಲಿ ಕಾಶ್ಮೀರದಿಂದ ಉಣ್ಣೆ ಬಟ್ಟೆಗಳು, ವಿಶೇಷವಾಗಿ ಬರುತ್ತಿದ್ದವು. ಅವುಗಳು ತ್ವರಿತವಾಗಿ ಬೇಕಾಗಿದ್ದುದರಿಂದ—ಪದ್ಧತಿಗೆ ವಿರೋಧವಾಗಿ–ವಿದ್ಯಾಶಂಕರರು ಅವುಗಳನ್ನು ರೈಲ್ವೆ ಪಾರ್ಸಲ್‌ನಲ್ಲಿ ತರಿಸಿದರು. ಪಾರ್ಸಲ್ ಕರವೇ ಇನ್ನೂರು ರೂಪಾಯಿ ಆಯಿತು. ಸಾಧಾರಣವಾಗಿ ಎಲ್ಲ ಗಂಟುಗಳನ್ನೂ ಗೂಡ್ಸ್‌ನಲ್ಲಿ ತರಿಸುತ್ತಿದ್ದರಿಂದ, ರೈಲು ಕರ ಹಿಂದೆ ಯಾವಾಗಲೂ ಒಂದೇ ಸಲಕ್ಕೆ ಅಷ್ಟು ಆಗಿರಲಿಲ್ಲ. ಖಾದಿರ್‌ಗೆ ರೈಲು ರಸೀತಿಯನ್ನೂ ಹಣವನ್ನೂ ಕೊಡುವಾಗ "ಬಹುಶಃ ಹಿಂದೆ ಯಾವಾಗಲೂ ಇವನ ಕೈಗೆ ಇಷ್ಟೊಂದು ಹಣವನ್ನು ನಾವು ರೈಲು ಕರಕ್ಕಾಗಿ ಕೊಟ್ಟಿರಲಿಲ್ಲ" ಎಂಬುದು ವಿದ್ಯಾಶಂಕರರಿಗೆ ಹೊಳೆಯಿತು. ಮರುಕ್ಷಣದಲ್ಲಿಯೇ "ಈ ಸಲದ ರೈಲು ಕರವೇ, ಪಾರ್ಸಲ್ ಆದುದರಿಂದ ಹೆಚ್ಚು" ಎಂಬ ಭಾವ ಅವರ ಮನಸ್ಸನ್ನು ಖಾದಿರ್‌ನಿಂದ ಬೇರೆ ಕಡೆಗೆ ತಿರುಗಿಸಿತು. ಆ ಮಧ್ಯಾಹ್ನ ಖಾದಿರ ಮೂಟೆಗಳನ್ನು ತೆಗೆದುಕೊಂಡು ಬರಲಿಲ್ಲ. ಮೂಟೆಗಳು ಇಲ್ಲದಿದ್ದರೆ ಮರು ದಿವಸ ಬಂದು ಕಾಣುವುದು ಅವನ ಪದ್ಧತಿಯಾಗಿದ್ದುದರಿಂದ, ವಿದ್ಯಾಶಂಕರರು ಆ ವಿಷಯವನ್ನು ಕುರಿತು ಯೋಚಿಸಲಿಲ್ಲ.

ಮಾರನೆಯ ದಿನವೂ ಖಾದಿರ ಮೂಟೆಗಳನ್ನು ತರಲಿಲ್ಲ. ಅಂದು ಭಾನುವಾರವಾಗಿದ್ದುದರಿಂದ, ಪಾರ್ಸೆಲ್ ಆಫೀಸಿಗೆ ರಜವಿರಬಹುದೆಂದು ವಿದ್ಯಾಶಂಕರರು ಸುಮ್ಮನಾದರು. ಸೋಮವಾರವೂ ಖಾದಿರ್ ಬರದಿರಲು ವಿದ್ಯಾಶಂಕರರಿಗೆ ಯೋಚನೆ ಪ್ರಾರಂಭವಾಯಿತು. ರೈಲು ಸ್ಟೇಷನ್ನಲ್ಲಿ ಹೋಗಿ ನೋಡಿದಾಗ ಪಾರ್ಸೆಲ್‌ಗಳು ನಾಲ್ಕು ದಿನಗಳ ಹಿಂದೆಯೇ ಅಲ್ಲಿ ಬಂದು ಬಿದ್ದಿರುವುದು ಅವರಿಗೆ ತಿಳಿಯಿತು. ಸಕಾಲದಲ್ಲಿ ತೆಗೆದುಕೊಳ್ಳದುದಕ್ಕಾಗಿ ಒಂದೆರಡು ದಿನಗಳ ದಂಡ (ಡೆಮರೇಜ್) ಸಹ ಕೊಡಬೇಕಾಗಬಹುದೆಂದು ಅವರಿಗೆ ತಿಳಿಯಿತು. ಅವರು ಕೂಡಲೇ ಖಾದಿರನ ಅನ್ವೇಷಣಕ್ಕೆ ಹೊರಟರು. ಆದರೆ ಖಾದಿರ್ ಎಲ್ಲಿರಬಹುದೆಂದು ಅವರಿಗೆ ತಿಳಿದಿರಲಿಲ್ಲ. ವಸ್ತ್ರಾಲಯದಲ್ಲಿದ್ದ ನೌಕರರಿಗೂ ಆ ಸಂಗತಿ ತಿಳಿದಿರಲಿಲ್ಲ. ಕೊನೆಯಲ್ಲಿ ವಸ್ತ್ರಾಲಯದ ದರ್ಜಿಗಳ

ಪೈಕಿ ಒಬ್ಬ "ಖಾದಿರ್ ಮಾರ್ಕೆಟ್ಟಿನ ಹಿಂಭಾಗದಿಂದ ನಿತ್ಯ ಗಾಡಿ ಹೊಡೆದು ಕೊಂಡು ಬರುತ್ತಾನೆ. ಅಲ್ಲಿ ಎಲ್ಲಿಯಾದರೂ ಮನೆ ಇರಬಹುದು" ಎಂದ. ವಿದ್ಯಾಶಂಕರರು ಮಾರ್ಕೆಟ್ ಸುತ್ತ ನೂರಾರು ಗಸ್ತು ಹೊಡೆದರು. ಖಾದಿರನ ಸುಳಿವೇ ಗೊತ್ತಾಗಲಿಲ್ಲ. ಹೀಗೆ ಸಂಧ್ಯಾಕಾಲದವರೆಗೆ ಹುಡುಕಿದ ಮೇಲೆ ಕೊನೆಗೆ, ಒಂದು ಹಾಳು ಮಸೀದಿಯ ಹೊರಗೋಡೆಗೆ ಬಿದಿರುಚಾಪೆಯ ಒಂದು ತಡಿಕೆ ಕಟ್ಟಿಕೊಂಡು ಖಾದಿರ ಅಲ್ಲಿ ವಾಸಿಸುತ್ತಿರುವುದು ವಿದ್ಯಾ ಶಂಕರರಿಗೆ ತಿಳಿಯಿತು. ವಿದ್ಯಾಶಂಕರರು ಆ ಗುಡಿಸಲಿನ ಬಾಗಿಲಿಗೆ ಹೋಗಲು ಒಳಗಿನಿಂದ "ಘೋಷ, ಬರಬೇಡಿ" ಎಂಬ ಧ್ವನಿ ಕೇಳಿಸಿತು. ಖಾದಿರ ಕೈಗೆ ದುಡ್ಡು ಸಿಕ್ಕಿದಾಗಿನಿಂದ ನಾಲ್ಕು ದಿನಗಳೂ ಒಂದೇ ಸಮನಾಗಿ ಕುಡಿಯುತ್ತಿರುವುದೂ ಗೊತ್ತಾಯಿತು. ವಿದ್ಯಾಶಂಕರರು ಖಾದಿರನ ಹೆಂಡತಿಗೆ ಹೇಳಿ ಅವನ ಜೇಬಿನಲ್ಲಿದ್ದ ರೈಲ್ವೆ ಪಾರ್ಸಲ್ ರಸೀತಿಯನ್ನು ತೆಗಿಸಿಕೊಂಡು, ಸ್ಟೇಷನ್ನಿಗೆ ಹೋಗಿ ರೈಲ್ವೆ ಕರವನ್ನೂ ಹೆಚ್ಚಿಗೆ ಡೆಮ ರೇಜ್‌ನ್ನೂ ತೆತ್ತು, ಉಣ್ಣೆ ಬಟ್ಟೆಗಳನ್ನು ಬಿಡಿಸಿಕೊಂಡು ಬಂದರು. ಅನಂತರ ವಿಚಾರಿಸಿದುದರಲ್ಲಿ "ಖಾದಿರ ದೊಡ್ಡ ಪೋಕರಿ, ದಗಾಕೋರ, ಯಾವಾಗಿ ನಿಂದಲೂ ಹೀಗೆಯೇ" ಎಂಬುದು ಅವರಿಗೆ ಗೊತ್ತಾಯಿತು.

ತಮ್ಮ ಅಜಾಗರೂಕತೆಗಾಗಿ ತಾವೇ ಇನ್ನೂರು ರೂಪಾಯಿಗಳನ್ನು ವಸ್ತ್ರಾಲಯಕ್ಕೆ ಕೊಟ್ಟು, ಖಾದಿರ್ ತಿಂದ ಹಣವನ್ನು ಸರಿದೂಗಿಸಬೇಕೆಂದು ವಿದ್ಯಾಶಂಕರರು ತೀರ್ಮಾನಿಸಿದರು. ಆದರೆ ಅವರ ಸಹಸೌಕರರು "ಕೊನೆಯಲ್ಲಿ ಹಾಗೆ ಮಾಡುವುದು ಇದ್ದೇ ಇದೆ. ಈಗ ಹಾಗೆ ಮಾಡಿದರೆ ಚರಖಾ ಸಂಘದ ಕೇಂದ್ರ ಕಛೇರಿಯವರು ಏನು ಭಾವಿಸಬಹುದು ? ವಸೂಲಿಗಾಗಿ ನಮ್ಮ ಪ್ರಯತ್ನಗಳನ್ನೆಲ್ಲ ಮಾಡಲೇಬೇಕು. ಖಾದಿರನ ಮೇಲೆ ಸಿವಿಲ್, ಕ್ರಿಮಿನಲ್ ಎರಡರಲ್ಲಿಯೂ ಮೊಕದ್ದಮೆ ಹೂಡಬೇಕು" ಎಂದು ಪುಸಲಾಯಿಸಿದರು. ವಿದ್ಯಾಶಂಕರರಿಗೆ ಕೋರ್ಟಿಗೆ ಹೋಗುವುದು ನಿಜವಾಗಿ ಇಷ್ಟವಿರಲಿಲ್ಲ. ಕೇಂದ್ರ ಕಛೇರಿಯಲ್ಲಿ ತಮ್ಮ ಸತ್ಯವನ್ನು ಸ್ಥಾಪಿಸಲು ಇದು ಅವಶ್ಯಕವೆಂದು ಅವರ ಮಿತ್ರರೆಲ್ಲರೂ ಒತ್ತಾಯಪಡಿಸಿದ ಮೇಲೆ, ಅವರು ಮೊಕದ್ದಮೆಯನ್ನು ಅಡ್ವೋಕೇಟ್ ಶ್ರೀನಿವಾಸರಿಗೆ ವಹಿಸಿದರು.

ಕೆಲವು ವಕೀಲರು, ಕಕ್ಷಿಗಾರನಲ್ಲಿರುವ ಹಣ ಪೂರ್ಣವಾಗಿ ಮುಗಿಯುವ ವರೆಗೆ ಅವನಿಂದ ಶುಲ್ಕವನ್ನು ಎಳೆಯುತ್ತಲೇ ಇರುತ್ತಾರೆ. ಆದರೆ ಶ್ರೀನಿವಾಸ

ಕಕ್ಷಿಗಾರ ತಂದಿಟ್ಟ ಬುತ್ತಿಯನ್ನು ಹೊಡೆದುಬಿಡುವ ವಕೀಲರಲ್ಲ. ಕೋರ್ಟಿನ ಸ್ಟಾಂಪನ್ನು ಕೈಯಿಂದ ಹಾಕುವುದು ಮಾತ್ರವಲ್ಲದೆ ಶ್ರೀನಿವಾಸ, ವಿದ್ಯಾಶಂಕರ ಕಕ್ಷಿಗಾರನನ್ನು ತನ್ನ ಗಾಡಿಯಲ್ಲಿ ಕೂರಿಸಿಕೊಂಡು ಕೋರ್ಟಿಗೆ ಕರೆದುಕೊಂಡು ಹೋಗಿ ವಿಚಾರಣೆಯಾದ ನಂತರ ಹಿಂದಕ್ಕೆ ಕರೆದುಕೊಂಡು ಬರುತ್ತಿದ್ದ. ಮಹಾತ್ಮ ಗಾಂಧಿಯವರ ಚಳುವಳಿ ಪ್ರಾರಂಭವಾದಂದಿನಿಂದ ಖಾದಿ ಅಸಹಕಾರ, ಕರ ನಿರಾಕರಣ, ಸೇವಾದಳ, ರಾಜದ್ರೋಹ, ಧ್ವಜಸತ್ಯಾಗ್ರಹ ಇವುಗಳೆಲ್ಲದರ ಆಪಾದಿತ ದೇಶಭಕ್ತರ ಪರವಾಗಿ, ಒಂದು ಕಾಸನ್ನೂ ತೆಗೆದು ಕೊಳ್ಳದೆ ಅನೇಕ ವೇಳೆ ತಮ್ಮ ಕೈಯಿಂದಲೇ ಹಣ ಖರ್ಚುಮಾಡಿಕೊಂಡು ವಾದಿಸುತ್ತಿದ್ದ ಲಾಯರು ಶ್ರೀನಿವಾಸ ಖಾದಿ ಲಾಯರೆಂಬುದೇ ಅವರಿಗೆ ಹೆಸರು.

ವಿದ್ಯಾಶಂಕರರಿಗೂ ಶ್ರೀನಿವಾಸರಿಗೂ ತಮ್ಮ ಹಣ ಹಿಂದಕ್ಕೆ ಬರಬಹುದೆಂಬ ಆಸೆ ಇದ್ದುದು ಒಂದೇ ಮಾರ್ಗದಿಂದ. ಅದೇ ಖಾದಿರ್‌ನ ಎತ್ತು ಮತ್ತು ಗಾಡಿ. ಆ ಎತ್ತು ಗಾಡಿಯನ್ನು ಹರಾಜು ಮಾಡಿಸಿದರೆ ಇನ್ನೂರು ರೂಪಾಯಿಗಳೂ ಕೋರ್ಟ್ ವೆಚ್ಚವೂ ಧಾರಾಳವಾಗಿ ಹುಟ್ಟುವುದೆಂದು ಖಾದಿರ್‌ನ ಒಂಟೆತ್ತಿನ ಗಾಡಿಯನ್ನು ನೋಡಿದವರೆಲ್ಲ ಹೇಳುತ್ತಿದ್ದರು. ಆ ಗಾಡಿ ಮತ್ತು ಎತ್ತನ್ನು ಇಂಜಕ್ಷನ್ ಜಫ್ತಿ (ಡಿಕ್ರಿ ಆಗುವುದಕ್ಕಿಂತ ಮುಂಚೆ ಜಫ್ತಿ) ಮಾಡಿಸಬೇಕೆಂದು ಕೋರ್ಟಿನಲ್ಲಿ ಅಡ್ವೋಕೇಟ್ ಶ್ರೀನಿವಾಸ ವಾದ ಮಾಡಿದುದರಿಂದ ಕೋರ್ಟ್ ಅದಕ್ಕೆ ಅನುಮತಿ ಇತ್ತಿತು. ಇಂಜಕ್ಷನ್ ಜಫ್ತಿ ವಾರೆಂಟನ್ನು ತೆಗೆದುಕೊಂಡು ಕೋರ್ಟ್ ಅಮೀನರೂ, ವಾದಿ ವಿದ್ಯಾ ಶಂಕರರೂ ಖಾದಿರನ ಬಿದಿರು ತಡಿಕೆ ಗುಡಿಸಿಲಿನ ಬಳಿ ಹೋದರು. ಖಾದಿರ ಮನೆಯಲ್ಲಿರಲಿಲ್ಲ. ಬಾಗಿಲಿನಲ್ಲಿ ಎತ್ತು ಗಾಡಿ ಇರಲಿಲ್ಲ, ಎತ್ತು ಗಾಡಿ ನಿಲ್ಲುವುದಕ್ಕೂ ಅಲ್ಲಿ ಜಾಗ ಇರಲಿಲ್ಲ. ಮಾಡುವುದೇನೆಂದು ತೋರದೆ ಅವರು ಮತ್ತೆ ಕೋರ್ಟಿನ ಕಡೆ ಹೊರಟರು. ಮಾರ್ಕೆಟ್ ಮುಂದೆ ಅವೆನ್ಯೂ ರೋಡ್‌ನ ಚೌಕಕ್ಕೆ ಬಂದಾಗ, ದೂರದಲ್ಲಿ ಅವೆನ್ಯೂರೋಡ್‌ನಲ್ಲಿ ಖಾದಿರ್‌ನ ಬಳಿ ಒಂಟೆತ್ತಿನ ಗಾಡಿ ಒಳ್ಳೇ ಜೋರಾಗಿ ತಮ್ಮ ಕಡೆಗೇ ಬರುತ್ತಿರುವುದು ಅವರಿಗೆ ಕಂಡಿತು.

ವಿದ್ಯಾಶಂಕರರೂ ಅಮೀನರೂ, ಗಾಡಿ ಹತ್ತಿರಕ್ಕೆ ಬರುವವರೆಗೆ ಒಂದು ಅಂಗಡಿಯ ಮುಂದೆ ನಿಂತಿದ್ದರು. ಅಂಗಡಿಯ ಎದುರಿಗೆ ಗಾಡಿ ಬಂದ ಕೂಡಲೇ ಇಬ್ಬರೂ ಅದನ್ನು ಹೋಗಿ ಮುತ್ತಿದರು. ಬಲಿಷ್ಠವಾಗಿ ಆನೆ

ಯುಂತಿದ್ದ ಎತ್ತು ಸ್ವಲ್ಪ ಇಳಿಜಾರಾಗಿದ್ದ ಟಾರ್ ರಸ್ತೆಯಲ್ಲಿ ಸರಸರನೆ ಸಾಗುತ್ತಿದ್ದುದರಿಂದ ಅದನ್ನು ತತ್‌ಕ್ಷಣ ನಿಲ್ಲಿಸುವುದು, ನಿಪುಣ ಸಾರಥಿಯಾದ ಖಾದಿರನಿಗೂ ಸಾಧ್ಯವಾಗಲಿಲ್ಲ. ಹತ್ತು ಮಾರು ಮುಂದೆ ಹೋಗಿ ಗಾಡಿ ನಿಂತ ಮೇಲೆ ಅಮೀನರು ಖಾದಿರ್‌ಗೆ "ನಿನ್ನ ಎತ್ತು ಗಾಡಿ ಜಪ್ತಿ ಮಾಡಿದ್ದೇನೆ. ನಡೆ, ಕೋರ್ಟಿಗೆ ಹೊಡೆದುಕೊಂಡು" ಎಂದರು. ಖಾದಿರ ಕೋಪದಿಂದ ಒಂದು ಸಲ ಅಮೀನರನ್ನೂ ಮತ್ತೊಂದು ಸಲ ವಿದ್ಯಾಶಂಕರರನ್ನೂ ನೋಡಿದ. ಅಮೀನರು ದರ್ಪದಿಂದ "ನನ್ನ ಮುಂದೆ ನಿನ್ನ ಜೋರು ನಡೆಯುವುದಿಲ್ಲ. ನಡೆ ಕೋರ್ಟಿಗೆ" ಎಂದು ಗದರಿಸಿದರು ! ವಿದ್ಯಾಶಂಕರರೂ ಅಮೀನರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಎತ್ತಿನ ಮೂಗುದಾರವನ್ನು ಹಿಡಿದರು. ಖಾದಿರ ಗಾಡಿಯಿಂದಿಳಿದು ಹೊರಟೇಹೋದನು.

ಅವೆನ್ಯೂ ರೋಡಿನಲ್ಲಿ ಒಂದು ಗಾಡಿ ಸುಮ್ಮನೆ ಅರ್ಧ ಗಂಟೆ ನಿಂತುಬಿಟ್ಟರೆ ಜನ ಕೇಳುತ್ತಾರೆಯೇ ? ಮೋಟಾರು, ಜಟಕ, ಲಾರಿ, ಬೈಸಿಕಲ್, ಕಾಲಾಳು ಎಲ್ಲ ಹಿಂದೆ ಮುಂದೆ ಗೇರಾಯಿಸಿ ನಿಂತುಬಿಟ್ಟವು. ಗಾಡಿ ನಿಂತಿದ್ದ, ಅಂಗಡಿಯವನಂತೂ ವಿದ್ಯಾಶಂಕರನನ್ನು ಒಂದೇ ಸಮನೆ ಗದರಿಸುತ್ತಿದ್ದ. "ಗಾಡಿ ಮುಂದಕ್ಕೆ ಹೊಡೆಯುವುದಕ್ಕೆ ನಿನಗೇನು ರೋಗ" ಎಂದು ವಿದ್ಯಾಶಂಕರರನ್ನು ತಿವಿಯುವಂತೆಯೇ ಒಬ್ಬ ಜಟಕಾದವ ರೇಗಿದ. ಪಾಪ, ವಿದ್ಯಾಶಂಕರರಿಗೆ ಯುದ್ಧಭೂಮಿಯಲ್ಲಿ ಸಿಕ್ಕಿಕೊಂಡ ನಿರಾಯುಧ ಸೈನಿಕನಂತೆ ದಿಕ್ಕೇ ತೋರದಾಯಿತು. ಅವರು ಅಮೀನರಿಗೆ "ಖಾದಿರ್ ಹೊರಟೇಹೋದ. ನಾವೂ ಇದನ್ನು ಇಲ್ಲಿಯೇ ಬಿಟ್ಟು ಹೊರಟುಹೋಗಿಬಿಡೋಣ. ಆದಂತೆ ಆಗಲಿ" ಎಂದರು. ಅವರಿಗೆ, ಸದ್ಯ ಈ ಸ್ಥಳದಿಂದ ತಪ್ಪಿಸಿಕೊಂಡು ಹೋದರೆ ಸಾಕು ಎನಿಸಿತು. ಅಮೀನರು "ಛೆ ಛೆ, ಎಲ್ಲಿಯಾದರೂ ಉಂಟೆ ? ನಾನು ಜಪ್ತಿ ಮಾಡದಿದ್ದರೆ ನೀವು ಹೇಳಿದಂತೆ ಆಗಬಹುದಾಗಿತ್ತು. ಈಗ ಜಪ್ತಿಯಾದ ಮೇಲೆ, ಮಾಲು ಸರ್ಕಾರಕ್ಕೆ ಸೇರಿಹೋಯಿತು. ಕೋರ್ಟಿಗೆ ಹಾಜರು ಪಡಿಸದೆ ಹೋದರೆ ನಾವಿಬ್ಬರೂ ಸಜಾ ಹೋಗಬೇಕಾಗುತ್ತೆ. ಎಲ್ಲಿ, ಎತ್ತಿನ ಹಗ್ಗ ಹಿಡಿದುಕೊಂಡು ಗಾಡಿ ಹೊಡೆಯಿರಿ. ನಾನೂ ನಿಮ್ಮ ಹಿಂದೆಯೇ ಕುಳಿತುಕೊಂಡು ಸಹಾಯ ಮಾಡುತ್ತೇನೆ. ಕೋರ್ಟಿಗೆ ಹೋಗೋಣ. ಖಾದಿರ್ ಅಲ್ಲಿಗೆ ಬಂದೇ ಬರುತ್ತಾನೆ" ಎಂದರು.

ವಿದ್ಯಾಶಂಕರರು ಹೇಗೋ ಗಾಡಿ ಹತ್ತಿ ಕುಳಿತರು. ಗಾಡಿಯ ಮೂಕಿ,

ಎತ್ತಿನ ಹೆಗಲಿನ ಮೇಲೆ, ಮೇಲಕ್ಕೊ ಕೆಳಕ್ಕೊ ತಕ್ಕಡಿಯ ಕೋಲಿನಂತೆ ತೂಗಾಡುತ್ತಿತ್ತು. ಗಾಡಿ ಎರಡು ಚಕ್ರಗಳ ಮೇಲೆ ನಿಂತಿದ್ದರೂ ವಿದ್ಯಾಶಂಕರರಿಗೆ ಅದು ಹೇಗೋ ಒಂದೇ ಚಕ್ರದ ಮೇಲೆ ನಿಂತಿರುವಂತೆಯೂ ತಾವು ಸ್ವಲ್ಪ ಅಲುಗಾಡಿದರೂ ಗಾಡಿಯೇ ನೆಲಕ್ಕೆ ಮಗುಚಿಕೊಳ್ಳುವಂತೆಯೂ ತೋರಿತು. ಅವರು ಹೇಗೊ ಒಂದು ಬಗೆಯ ಸಮತೂಕದಲ್ಲಿ ಗಾಡಿಯ ಮೇಲೆ ಕುಳಿತರು. ಎತ್ತಿಗೆ ಮೂಗುದಾರ ಹಾಕಿ, ಅದಕ್ಕೆ ಕಟ್ಟಿದ್ದ ಒಂದೇ ಹಗ್ಗವನ್ನು ಗಾಡಿಯವನು ಎತ್ತನ್ನು ಬೇಕಾದ ಕಡೆ ತಿರುಗಿಸಲು ಉಪಯೋಗಿಸುತ್ತಿದ್ದ. ವಿದ್ಯಾಶಂಕರರಿಗೆ ಆ ಒಂದು ಹಗ್ಗವನ್ನು ತಾವು ಹಿಡಿದುಕೊಂಡ ಕೂಡಲೇ, ಇದಕ್ಕೆ ಕುದುರೆಗೆ ಲಗಾಮಿ ಇರುವಂತೆ ಎರಡು ಕಡೆಗಳಿಗೂ ಹಗ್ಗ ಬೇಕು ಎಂದು ತೋರಿತು. ಅವರ ಹಿಂದೆ ಕುಳಿತಿದ್ದ ಅಮೀನರು ಸ್ವಲ್ಪ ಆಚೆ ಈಚೆ ಅಲುಗಾಡಿದರೂ ಗಾಡಿ ಸಮತೂಕ ತಪ್ಪಿದಂತೆ ಎಲ್ಲಿ ಬಿದ್ದೇ ಬಿಡುವುದೋ ಎಂಬಂತೆ ಓಲಾಡುತ್ತಿತ್ತು.

ವಿದ್ಯಾಶಂಕರರಿಗೆ ಎಲ್ಲಕ್ಕಿಂತ ಹೆಚ್ಚು ಆಶ್ಚರ್ಯವಾದ ಸಂಗತಿಯೆಂದರೆ, ಆ ಬಲಿಷ್ಠವಾದ ಎತ್ತು, ಇವರು ಗಾಡಿಯ ಮೇಲೆ ಕುಳಿತುಕೊಂಡ ಮೇಲೆ ಏನು ಮಾಡಿದರೂ ಒಂದು ಹೆಜ್ಜೆ ಕೂಡ ಮುಂದಕ್ಕೆ ಹೋಗದುದು. ವಿದ್ಯಾಶಂಕರರು ಚಾವಟಿಯಿಂದ ಎಷ್ಟು ಏಟು ಕೊಟ್ಟರೂ ಅದು ನಿರ್ಲಕ್ಷ್ಯವಾಗಿ ಸುಮ್ಮನೆ ನಿಂತೇ ಇತ್ತು. ಕೊನೆಗೆ ಒಂದು ಸಲ ಇದ್ದಕ್ಕಿದ್ದಂತೆ ಒಂದೇ ಏಟಿಗೆ ನಾಗಾಲೋಟದಲ್ಲಿ ಓಡತೊಡಗಿತು. ಈ ಮೊದಲು ಅದನ್ನು ಹೊರಡಿಸುವುದಕ್ಕೆ ಹೇಗೆ ವಿದ್ಯಾಶಂಕರರಿಗೆ ಆಗಲಿಲ್ಲವೋ, ಈಗ ಅದನ್ನು ತಡೆಯುವುದಕ್ಕಾಗಲಿ, ತಮಗೆ ಬೇಕಾದ ಕಡೆಗೆ ಗಾಡಿಯನ್ನು ತಿರುಗಿಸುವುದಕ್ಕಾಗಲಿ, ವಿದ್ಯಾಶಂಕರರಿಗೆ ಸಾಧ್ಯವಾಗಲಿಲ್ಲ. ಆನೆಯ ಮರಿಯಂತೆ ನಾಗಾಲೋಟ ಓಡುತ್ತಿತ್ತು ಆ ಎತ್ತು ! ಗಾಡಿಯಿಂದ ಯಾರಿಗೂ ಅಪಾಯವಾಗದಿರಲೆಂದು ವಿದ್ಯಾಶಂಕರರು ರಸ್ತೆಯಲ್ಲಿ ಮುಂದೆ ಇದ್ದವರನ್ನು ಎಚ್ಚರಿಸುತ್ತಾ ಗಟ್ಟಿಯಾಗಿ ಕೂಗುತ್ತಿದ್ದರು. ಆದರೂ ಎತ್ತು ಸರ್ಕಲ್‌ನ ಲಾಂದ್ರದ ಕಂಬದ ಎತ್ತರವಾದ ದಿನ್ನೆ ಏರಿ, ಬೈಸಿಕಲ್ ಸವಾರನೊಬ್ಬನನ್ನು ಕೆಡವಿ ಒಂದು ಜಟಕಾಗಾಡಿಯ ಚಕ್ರಕ್ಕೆ ಡಿಕ್ಕಿ ಹೊಡೆದು, ಸಿಮೆಂಟಿನ ಕಸದ ತೊಟ್ಟಿಯನ್ನು ಉರುಳಿಸಿ ವಿದ್ಯಾಶಂಕರರನ್ನೂ ಅಮೀನರನ್ನೂ ನಡುರಸ್ತೆಯಲ್ಲಿ ಕುಕ್ಕರಿಸಿತು. ಅವರಿಬ್ಬರೂ

ಗಾಡಿಯಿಂದ ಬೀಳಲಿಲ್ಲ. ಆದರೆ ಗಾಡಿಯ ಎರಡು ಚಕ್ರಗಳೂ ಆ ಕಡೆ ಗೊಂಡು ಕಿತ್ತುಕೊಂಡು ಹೋಗಿ ಚರಂಡಿಗಳಿಗೆ ಬಿದ್ದುದರಿಂದ ಗಾಡಿ ನೆಲಕ್ಕೆ ಕುಕ್ಕರಿಸಿತ್ತು. ಇಲ್ಲದೆ ಹೋಗಿದ್ದರೆ ವಿದ್ಯಾಶಂಕರರೂ ಅಮೀನನೂ ಇನ್ನೂ ಎಷ್ಟು ದೂರ ಆ ನಿಲ್ಲದ ಬಂಡಿಯಲ್ಲಿ (ನಾನ್‌ಸ್ಟಾಪ್) ಸವಾರಿಮಾಡ ಬೇಕಾಗುತ್ತಿತ್ತೋ ! ಖಾದಿರ್, ಗಾಡಿಬಿಟ್ಟು ಹೋಗುವಾಗ ಕಡಾಣಿಯನ್ನು ಕಿತ್ತುಕೊಂಡು ಹೋಗಿದ್ದುದು ಅನಂತರ ಅಮೀನರಿಗೆ ಗೊತ್ತಾಯಿತು. ಅಮೀನರು ಜತೆಯಲ್ಲಿಲ್ಲದೆ ಹೋಗಿದ್ದರೆ ವಿದ್ಯಾಶಂಕರರು ಗಾಡಿಯನ್ನು ಅಲ್ಲಿಯೇ ಬಿಟ್ಟು ಓಡಿಬಿಡುತ್ತಿದ್ದರು. ಆದರೆ ವಿರಾಟಪರ್ವದಲ್ಲಿ ಗೋಗ್ರಹಣ ಕ್ಷೇತ್ರದಿಂದ ಉತ್ತರನನ್ನು ಹಿಂದಕ್ಕೆ ಹೋಗಗೊಡದ ಬೃಹನ್ನಳೆ ಅರ್ಜುನನಂತೆ, ಅಮೀನರು ವಿದ್ಯಾಶಂಕರರನ್ನು, ಕೋರ್ಟಿಗೆ ಹೋಗಿ ಎತ್ತು ಗಾಡಿ ಸ್ವಾಧೀನಕ್ಕೆ ತೆಗೆದುಕೊಂಡಲ್ಲದೆ ಬಿಡುವವರಾಗಿರಲಿಲ್ಲ. ಅಮೀನರೇ ಇನ್ನೊಂದು ಒಂಟೆತ್ತಿನ ಗಾಡಿ ಬಾಡಿಗೆಗೆ ಹಿಡಿದು, ಅದರ ಮೇಲೆ ಖಾದಿರನ ಚಕ್ರಗಳನ್ನೂ ಗಾಡಿ ಯನ್ನೂ ಇಡಿಸಿ, ಹಿಂದುಗಡೆ ಹಗ್ಗದಲ್ಲಿ ಎತ್ತನ್ನು ಹಿಡಿದುಕೊಳ್ಳುವಂತೆ ವಿದ್ಯಾ ಶಂಕರರಿಗೆ ಹೇಳಿದರು. ಯಾವ ಅವೆನ್ಯೂ ರೋಡ್‌ನಲ್ಲಿ ಗಾಡಿ ನಾಗಾ ಲೋಟದಲ್ಲಿ ಓಡಿದ್ದಿತೋ ಅದೇ ರೋಡ್‌ನಲ್ಲಿ ಈಗ ಆ ಗಾಡಿಯನ್ನೇ ಮತ್ತೊಂದು ಗಾಡಿಯ ಮೇಲೆ ಹೇರಿಕೊಂಡು ಹೋಗುವುದು ವಿದ್ಯಾಶಂಕರರಿಗೆ ಬೇಕಿರಲಿಲ್ಲ. ಅವರು ಯಾರು ಯಾರನ್ನು ಕಾಣಬಾರದೆಂದು ಬಯಸು ತ್ತಿದ್ದರೋ ಅವರೆಲ್ಲ ಈಗ ಅವರ ಎದುರಿಗೇ ಬರತೊಡಗಿದರು. ಅವರು ಎರಡು ಗಂಟೆಗೇ ಕೋರ್ಟನ್ನು ತಲಪಿದರು. ಮುರಿದ ಗಾಡಿಯನ್ನು ಎತ್ತು ವುದಕ್ಕೆ, ಗಾಡಿ ಬಾಡಿಗೆಗೆ, ಅಮೀನರ ತಿಂಡಿಗೆ ಆ ದಿನವೇ ವಿದ್ಯಾಶಂಕರರಿಗೆ ಹದಿನೈದು ರೂಪಾಯಿ ಖರ್ಚಾಗಿತ್ತು.

ಕೋರ್ಟಿನ ಮುಂದೆ ಎತ್ತು ಮತ್ತು ಮುರಿದ ಗಾಡಿಯನ್ನು ವಿದ್ಯಾ ಶಂಕರರೂ ಅಮೀನರೂ ಹಾಜರ್ಮಾಡಿದಾಗ ಗಂಟೆ ಮೂರುವರೆ ಆಗಿತ್ತು. ಆಗ ನ್ಯಾಯಾಧಿಪತಿಗಳ ಮುಂದೆ ಒಬ್ಬ ಮುಲ್ತಾನಿ ಸೇಟ್ ಹಾಜರಾದನು. ಅವನ ಹೆಸರು ಟೀಕಂದಾಸ್ ಎಂದು. ಅವನು ಕೋರ್ಟಿಗೆ 'ಎತ್ತು ಗಾಡಿ ನನ್ನದು. ಖಾದಿರ ನನ್ನ ಆಳು. ಅವನನ್ನು ಇವರು ಅನ್ಯಾಯವಾಗಿ ಹಿಡಿದು ಕೊಂಡು ಬಂದಿದ್ದಾರೆ. ಎತ್ತು ಗಾಡಿ ನನಗೆ ಹಿಂದಕ್ಕೆ ಕೊಡಿಸಬೇಕು.

ನಷ್ಟನಾಗಿರುವ ಇವತ್ತಿನ ಬಾಡಿಗೆ ಹತ್ತು ರೂಪಾಯಿ ಕೊಡಿಸಬೇಕು. ಗಾಡಿ
ಯನ್ನು ಮುರಿದು ಹಾಕಿದ್ದಾರೆ. ಅದರ ನಷ್ಟ ನೂರು ರೂಪಾಯಿ ಕೊಡಿಸ
ಬೇಕು' ಎಂದು ಮುಚ್ಚಳಿಕೆ ಕೊಟ್ಟನು. ಅವನು ಒಬ್ಬ ವಕೀಲರನ್ನೂ
ಗೊತ್ತುಮಾಡಿಕೊಂಡಿದ್ದನು. ನ್ಯಾಯಾಧಿಪತಿಗಳು ಎರಡು ಕಡೆಯ
ವಕೀಲರ ವಾದವನ್ನೂ ಖಾದಿರನ ಹೇಳಿಕೆಯನ್ನೂ ಕೇಳಿ ಮೊಕದ್ದಮೆ
ತೀರ್ಮಾನವಾಗುವವರೆಗೆ ಎತ್ತು ಗಾಡಿ, ವಾದಿಯಾದ ವಿದ್ಯಾಶಂಕರರ ವಶ
ದಲ್ಲಿಯೇ ಇರಲಿ. ಕೋರ್ಟ್ ಆರ್ಡರು ಆದಾಗ ಅವರು ಅವುಗಳನ್ನು ಸರಿ
ಯಾದ ಸ್ಥಿತಿಯಲ್ಲಿ ಹಾಜರ್‌ಪಡಿಸಬೇಕು" ಎಂದು ಅಪ್ಪಣೆ ಮಾಡಿದರು.
ಆಮೀನರಿಗೆ ಬಹಳ ಸಂತೋಷವಾಯಿತು. ಅವರು ವಿದ್ಯಾಶಂಕರರ ವೆಚ್ಚ
ದಲ್ಲಿ ಮತ್ತೊಂದು ಸಲ ಕಾಫಿ ಕುಡಿದು, ಕೃತಕೃತ್ಯರಾಗಿ ಮನೆಗೆ ಹೋದರು.
ಆ ವೇಳೆಗೆ ಐದು ಗಂಟೆಯಾದುದರಿಂದ ಕೋರ್ಟ್ ಬರಖಾಸ್ತು ಆಯಿತು.

ಸುಮಾರು ಹತ್ತು ನಿಮಿಷದೊಳಗೆ ಜೇನಿನ ಗೂಡಿನಂತಿದ್ದ ಕೋರ್ಟು
ಆವರಣ ಬರಿದಾಗಿ ಮೌನವಾಯಿತು. ಮೋಟಾರಿನಲ್ಲಿ ಹೋಗುವವರು, ಬೈಸಿ
ಕಲ್‌ನಲ್ಲಿ ಹೋಗುವವರು, ನಡೆದುಕೊಂಡು ಹೋಗುವವರು ಎಲ್ಲರೂ ತಮ್ಮ
ತಮ್ಮ ನಿವಾಸ ಸ್ಥಳಗಳಿಗೆ ಹೊರಟುಹೋದರು. ಕೋರ್ಟಿನ ಆವರಣದಲ್ಲಿ
ಉಳಿದವರು ವಿದ್ಯಾಶಂಕರರೊಬ್ಬರೇ. ಒಂದು ಮರದ ಕೆಳಗೆ ಅವರ ಮುರುಕಲು
ಗಾಡಿ ಬಿದ್ದಿತ್ತು. ಅದರ ಮುರಿದ ಚಕ್ರಗಳನ್ನು ಆ ಮರಕ್ಕೆ ಒರಗಿಸಿದ್ದರು. ಅದೇ
ಮರಕ್ಕೆ ಎತ್ತನ್ನು ಹಗ್ಗದಲ್ಲಿ ಬಿಗಿದಿದ್ದರು. ಆ ದಿನದ ಚಟುವಟಿಕೆಗಳನ್ನು
ಬೆಳಗಿನಿಂದ ಜ್ಞಾಪಿಸಿಕೊಂಡು ವಿದ್ಯಾಶಂಕರರಿಗೆ ಆ ಗಾಡಿ ಎತ್ತು ಯುದ್ಧ
ಭೂಮಿಯ ಏಕಮಾತ್ರ ಅವಶೇಷವಾಗಿ ತೋರಿತು. ಎತ್ತನ್ನೂ ಗಾಡಿಯನ್ನೂ
ಏನು ಮಾಡಬೇಕು, ಎಲ್ಲಿಗೆ ಸಾಗಿಸಬೇಕು. ಮನೆಯಲ್ಲಿ ನನಗೇ ಇರುವುದಕ್ಕೆ
ಜಾಗ ಸಾಲದಲ್ಲ ಎಂದೆಲ್ಲ ಅವರು ಯೋಚಿಸುತ್ತಿರುವಾಗ ಕೋರ್ಟ್ ಮುಗಿದ
ಮೇಲೆ ಅದರ ಚಾವಡಿಯನ್ನು ಮನೆಯಾಗಿ ಮಾಡಿಕೊಳ್ಳುವ ಭಿಕ್ಷುಕರ ತಂಡ
ಅಲ್ಲಿಗೆ ಬಂದಿತು. ಅವರು ಮೊದಲೇ ಗೊತ್ತಾಗಿದ್ದಂತೆ ತಮ್ಮ ತಮ್ಮ ಜಾಗ
ಗಳನ್ನು ತಾವು ಆಕ್ರಮಿಸಿಕೊಂಡು ಅಲ್ಲಿ ತಮ್ಮ ಮುದಿಕೆ, ಈಚಲು ಚಾಪೆ,
ಕಾಗದದ ಚಾಪೆ, ಭಿಕ್ಷಾಪಾತ್ರೆ ಇವುಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳ
ತೊಡಗಿದರು. ಐದು ಗಂಟೆಯಾದ ಮೇಲೆ ತಮ್ಮ ಸ್ವರಾಜ್ಯವಾದ ಆ ಸ್ಥಳದಲ್ಲಿ

ವಿದ್ಯಾಶಂಕರರೇ ಆಗಂತುಕರಾಗಿ ತೋರಿದರು. ವಾಸ್ತವವಾಗಿ ವಿದ್ಯಾಶಂಕರರು ಒಬ್ಬ ಭಿಕ್ಷುಕನ ಸ್ಥಳವನ್ನೇ ಆಕ್ರಮಿಸಿಕೊಂಡು ನಿಂತಿದ್ದರು. ಸುತ್ತಲೂ ನೋಡಿದಾಗ ಅವರಿಗೆ 'ತಾವು ಮಾಡಬೇಕಾದ ಕಾರ್ಯವೇನೆಂಬುದು ಇವರೆಲ್ಲರಿಗೂ ಗೊತ್ತು. ಆದರೆ ನಾನೊಬ್ಬ ಮಾತ್ರ ಈಗ ಕರ್ತವ್ಯಮೂಢನಾಗಿದ್ದೇನೆ' ಎಂದು ತೋರಿತು. ವಿದ್ಯಾಶಂಕರರಿಗೆ ಆ ಬೆಳಗಿನಿಂದ ಆಹಾರವಿರಲಿಲ್ಲ. ಬೇಸರಿಕೆಯಿಂದಲೂ ಅವರು ಕಂಗೆಟ್ಟಿದ್ದರು. ಅವರ ದೃಷ್ಟಿ ಹಾಗೆಯೇ ತಮ್ಮ ಆಸ್ತಿಯಾದ ಎತ್ತಿನ ಕಡೆಗೆ ಹೋಯಿತು. ಇದ್ದಕ್ಕಿದ್ದಂತೆ ಎತ್ತಿನ ಕಣ್ಣಿನಲ್ಲಿ ಅವರಿಗೆ ಏನೋ ಒಂದು ಹೊಸ ನೋಟ, ಮನುಷ್ಯನ ನೋಟ ತೋರಿತು. ಅದು ಕೂಡ ಇವರ ಸಂಕಟವನ್ನು ನೋಡಲಾರದೆ 'ಅಯ್ಯೋ ಪಾಪ' ಎನ್ನುವಂತಿತ್ತು. ಆದರ ಆ ಆತ್ಮೀಯ ನೋಟವನ್ನು ನೋಡಿ ವಿದ್ಯಾಶಂಕರರಿಗೆ 'ಪಾಪ, ಇದಕ್ಕೂ ಇದಕ್ಕೂ ಬೆಳಗ್ಗಿನಿಂದ ಹೊಟ್ಟೆಗಿಲ್ಲ' ಎಂದು ಎತ್ತಿನಲ್ಲಿ ಕನಿಕರವುಂಟಾಯಿತು.

ಸಂಜೆಯಾದ ಮೇಲೆ ಎಲ್ಲರೂ ಸಮಸ್ಯೆಗಳನ್ನೆಲ್ಲ ಬದಿಗೊತ್ತಿ ನಿರ್ಯೋಚನೆಯಿಂದ ತಮ್ಮ ತಮ್ಮ ನಿವಾಸಗಳನ್ನು ಸೇರುತ್ತಾರೆ. ಹಕ್ಕಿಗಳೂ ದನಗಳೂ ಸಹ ವಿಶ್ರಾಂತಿ ತೆಗೆದುಕೊಳ್ಳುತ್ತವೆ. ಭಿಕ್ಷುಕರೂ ತಮ್ಮ ತಮ್ಮ ಸ್ಥಳಗಳಲ್ಲಿ ಶಾಂತರಾಗಿ ಕುಳಿತಿದ್ದರು. ಆದರೆ ವಿದ್ಯಾಶಂಕರರಿಗೆ ಹೊಸ ಸಮಸ್ಯೆ ಪ್ರಾರಂಭವಾಗಿತ್ತು. ಎತ್ತನ್ನು ಏನು ಮಾಡುವುದು ? ಕಣ್ಣಿಗೆ ಘೋರವಾದ ಆ ಮುರುಕಲು ಗಾಡಿಯನ್ನು ಏನು ಮಾಡುವುದು ? ಬೆಂಗಳೂರಿನಲ್ಲಿ ವಿದ್ಯಾಶಂಕರರು ತಿಂಗಳಿಗೆ ನಲವತ್ತು ರೂಪಾಯಿ ಸಂಪಾದಿಸುತ್ತಾ ಎರಡೇ ಕೊಠಡಿಗಳ ಮನೆಯಲ್ಲಿದ್ದವರು. ಮನೆಯವರಿಗೇ ಸ್ಥಳ ಸಾಲುತ್ತಿರಲಿಲ್ಲ. ಎತ್ತನ್ನು ಮನೆಗೆ ಹೊಡೆದುಕೊಂಡು ಹೋದರೆ ಮನೆಯವರೆಲ್ಲಾ ಬೀದಿಯಲ್ಲಿಯೇ ಇರಬೇಕಾಗುತ್ತಿತ್ತು. ವಿದ್ಯಾಶಂಕರರು ಮತ್ತೆ ಒಂದು ಎತ್ತಿನ ಗಾಡಿ ಬಾಡಿಗೆಗೆ ಮಾಡಿಕೊಂಡು ಕೂಲಿಯಾಳುಗಳಿಂದ ತಮ್ಮ ಮುರಿದ ಗಾಡಿಯನ್ನು ಅದರ ಮೇಲೆ ಹೇರಿಸಿಕೊಂಡು ಹಿಂದಲಂತೆ ಎತ್ತನ್ನು ಕೈಯಲ್ಲಿ ಹಿಡಿದುಕೊಂಡು ಗಾಡಿಯ ಮೇಲೆ ಕುಳಿತು ತಮ್ಮ ಮನೆಗೆ ಹೊರಟರು. ಮತ್ತೆ ಅದೇ ಅವೆನ್ಯೂ ರೋಡಿನಲ್ಲಿ ಹೋಗುವಾಗ ಅವರು ಹಿಂದೆ ನೋಡಿದ್ದ ಅಂಗಡಿಯವರ ಕಣ್ಣಿಗೆ ಬೀಳಬಾರದೆಂದು ಮುಖ ಮುಚ್ಚಿಕೊಂಡಿದ್ದರು. ತಮ್ಮ ಮನೆಯ ಬಾಗಿಲಿನಲ್ಲಿ ಗಾಡಿ ಇಳಿಸಿ, ಬಾಡಿಗೆ ಕೊಟ್ಟು ಕಳುಹಿಸುವ ವೇಳೆಗೆ ಅವರ ಕೈಯಿಂದ ಮತ್ತೆ

ಎಂಟು ರೂಪಾಯಿ ಖರ್ಚಾಗಿತ್ತು. ಬಾಗಿಲಿಗೆ ಅಡ್ಡಲಾಗಿ ಮುರುಕಲು ಗಾಡಿ ಬಿದ್ದಿತ್ತು. ವಿದ್ಯಾಶಂಕರರು ಒಂದು ಅಂಗಡಿಗೆ ಹೋಗಿ ಒಂದೂವರೆ ರೂಪಾಯಿ ಹುಲ್ಲು ತಂದು ಎತ್ತಿಗೆ ಹಾಕಿದರು. ಇದ್ದ ಎರಡು ಕೊಠಡಿಗಳ ಪೈಕಿ, ಒಂದರಲ್ಲಿ ಎತ್ತನ್ನು ಕಟ್ಟಿಹಾಕಿ ಮನೆಯವರೆಲ್ಲ ಅಡಿಗೇ ಮನೆಯಲ್ಲಿಯೇ ರಾತ್ರಿಯನ್ನು ಕಳೆದರು. ಆ ರಾತ್ರಿಯೆಲ್ಲಾ ವಿದ್ಯಾಶಂಕರರಿಗೆ ನಿದ್ರೆ ಬರಲಿಲ್ಲ. ಕೋರ್ಟು, ಎತ್ತು, ಅಮೀನ, ಖಾದಿರ್, ಮುರಿದ ಗಾಡಿ ಭಿಕ್ಷುಕರು, ಟೇಕಂದಾಸ್, ಎತ್ತಿಗೆ ಜಾಗ, ನಿತ್ಯ ಎತ್ತಿನ ಹುಲ್ಲು ಖರ್ಚು ಈ ವಿಕೃತ ಮಾಯಾಲೋಕದಲ್ಲಿ ವಿದ್ಯಾಶಂಕರರು ಜ್ವರಪೀಡಿತರಾದವರಂತೆ ರಾತ್ರಿಯನ್ನು ಕಳೆದರು. ಅವರು ಎದ್ದು ಎತ್ತನ್ನು ಬೀದಿಗೆ ಕಟ್ಟುವವರೆಗೆ, ಮನೆಯವರಿಗೆ ಅಡಿಗೆ ಮನೆಯಿಂದ ಈಚೆಗೆ ಬರಲು ಅವಕಾಶವಿಲ್ಲದುದರಿಂದ ಮನೆಯವರು ಅಲ್ಲಿಯೇ ಇರಬೇಕಾಗಿತ್ತು. ಬಾಗಿಲಿಗೆ ಅಡ್ಡವಾಗಿ ಬಿದ್ದಿದ್ದ ಮುರುಕಲು ಗಾಡಿಯನ್ನು ದಾಟಿಕೊಂಡೇ ಮನೆಯವರು ತಿರುಗುತ್ತಿದ್ದರು.

ಬೇರೇನೂ ಮಾಡುವುದಕ್ಕೆ ತೋರದೆ, ಬೆಳಗಾದ ಕೂಡಲೆ ವಿದ್ಯಾಶಂಕರರು ಎತ್ತನ್ನು ಹಿಡಿದುಕೊಂಡು ಅಡ್ವೋಕೇಟ್ ಶ್ರೀನಿವಾಸರ ಆಫೀಸಿಗೆ ಚಿಕ್ಕಪೇಟೆಗೆ ಹೋದರು. ಅಡ್ವೋಕೇಟ್‌ರ ಆಫೀಸ್ ಇದ್ದದ್ದು ಮಹಡಿಯ ಮೇಲೆ ; ಎತ್ತು ಸರಾಗವಾಗಿ ಮಹಡಿಯ ಮೇಲಕ್ಕೆ ಏರುವುದಾಗಿದ್ದರೆ ಅವರು ಅದನ್ನೂ ಮೇಲಕ್ಕೆ ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಈಗ ಮಹಡಿಯ ಕೆಳಗೆ ಕಟಕಟಿಗೆ ಎತ್ತನ್ನು ಕಟ್ಟಿ ಹಾಕಿದರು. ಎತ್ತು ಮಹಡಿಯ ಮೆಟ್ಟಲಿಗೆ ಸರಿಯಾಗಿ ಅಡ್ಡವಾಗಿ ಮಲಗಿಕೊಂಡುಬಿಟ್ಟಿತು. ಮಹಡಿ ಹತ್ತುವುದಕ್ಕೂ ಇಳಿಯುವುದಕ್ಕೂ ಅದು ಯಾರಿಗೂ ಅವಕಾಶಕೊಡುತ್ತಿರಲಿಲ್ಲ. ನಂದಿಕೇಶ್ವರನಂತೆ ಬೆಟ್ಟದ ಆಕಾರದಲ್ಲಿ ಮಹಡಿಯ ಮೆಟ್ಟಲುಗಳ ಬುಡದಲ್ಲಿ ಮಲಗಿದ್ದ ಎತ್ತು, ತನಗೆ ನಾಲ್ಕು ಏಟು ಬಿದ್ದರೂ ಸ್ಮೃತಿಯಿರದೇ ಹೋಯಿತೆಂದು, ಮಲಗಿದ್ದ ಜಾಗ ಬಿಟ್ಟು ಅಲುಗಾಡುತ್ತಿರಲಿಲ್ಲ. ಯಾವ ಬೇಟೆ ನಾಯಿಯನ್ನು ಸಾಕಿಕೊಂಡಿದ್ದರೂ ಅಡ್ವೋಕೇಟರಿಗೆ ಇಂತಹ ರಕ್ಷಣೆ ದೊರಕುತ್ತಿರಲಿಲ್ಲ. ವಿದ್ಯಾಶಂಕರರ ಸಂಕಟ ಹೆಚ್ಚಾಗಿದ್ದರೂ ಸ್ವಾಭಾವಿಕವಾಗಿ ವಿನೋದಪ್ರಿಯರಾಗಿದ್ದ ಅಡ್ವೋಕೇಟರಿಗೆ ಸನ್ನಿವೇಶದ ಸ್ವಾರಸ್ಯ ರಸವತ್ತಾಗಿಯೇ ತೋರುತ್ತಿತ್ತು. ಈಶ್ವರನ ಬಾಗಿಲನ್ನು ಕಾಯುತ್ತಿದ್ದ ಬಸವೇಶ್ವರನಂತೆ ಮಲಗಿದ್ದ ಆ

ಶ್ವೇತ ವೃಷಭ, ಒಬ್ಬಿಬ್ಬರು ಯೋಗ್ಯರಾದ ಕಕ್ಷಿಗಾರರನ್ನು ತಡೆದರೂ ಅನೇಕ ಕಿರುಕುಳದ ನಿರುದ್ಯೋಗಿಗಳನ್ನು ತಮ್ಮ ಬಳಿ ಬರದಂತೆ ಮಾಡಿದುದರಿಂದ ಅಡ್ವೋಕೇಟರಿಗೆ ಎತ್ತಿನ ಮೇಲೆ ಅಸಮಾಧಾನವೇ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ಸ್ವಾರಸ್ಯವಾಗಿ ತೋರಿದ ಸಂಗತಿಯೆಂದರೆ, ದಿನಕ್ಕೆ ಹತ್ತು ರೂಪಾಯಿ ದುಡಿದು ತನ್ನ ಹೊಟ್ಟೆಯನ್ನೂ ಖಾದಿರ್ ಮತ್ತು ಟೇಕಂದಾಸರ ಹೊಟ್ಟೆಯನ್ನು ಸಾಕಿದ ಆ ಎತ್ತು ಗಾಡಿ, ವಿದ್ಯಾಶಂಕರರ ಕೈಗೆ ಬಂದ ಕೂಡಲೇ ವಿದ್ಯಾಶಂಕರರ ಪೂರ್ತಿ ಸಂಬಳ ಅದರ ಹುಲ್ಲಿಗೇ ವೆಚ್ಚವಾಗಿ ಅವರಿಗೆ ಒಂದು ಕಾಸೂ ಲಾಭ ಬರದಿದ್ದುದು. ಅಷ್ಟೇ ಅಲ್ಲ, ಆ ಎತ್ತಿನ ಕೈಯಿಂದ ತಪ್ಪಿಸಿ ಕೊಳ್ಳಲು ಏನಾದರೂ ವಿದ್ಯಾಶಂಕರರಿಗೆ ಸಾಧ್ಯವಾಗದುದು. ಎತ್ತು ವಿದ್ಯಾ ಶಂಕರರ ಸ್ವಾಧೀನಕ್ಕೆ ಬರಲಿಲ್ಲ—ವಿದ್ಯಾಶಂಕರು ಎತ್ತಿನ ಸ್ವಾಧೀನಕ್ಕೆ ಹೋದರು ಎಂಬುದನ್ನು ನೆನೆದು ನೆನೆದು, ಅಡ್ವೋಕೇಟರಿಗೆ ನ್ಯಾಯಾಧಿಪತಿ ಗಳು ಎಷ್ಟೇ ಗಂಭೀರ ಮುಖಭಾವದಲ್ಲಿದ್ದರೂ ನಗು ಉಂಟಾಗುತ್ತಿತ್ತು.

ನಿತ್ಯ ಒಂದು ರೂಪಾಯಿ ಐದು ಆಣೆ ನಾಲ್ಕು ಪೈ ಸಂಪಾದಿಸುತ್ತಿದ್ದ ವಿದ್ಯಾಶಂಕರರು ಎತ್ತಿಗೆ ದಿನಕ್ಕೆ ಒಂದೂವರೆ ರೂಪಾಯಿ ಖರ್ಚು ಮಾಡ ಬೇಕಾಗುತ್ತಿತ್ತು. "ಸಧ್ಯ ಜನ ಹುಲ್ಲು ತಿನ್ನುವುದಿಲ್ಲ. ಇಲ್ಲದಿದ್ದರೆ ಎತ್ತಿಗೆ ಹುಲ್ಲು ಸಹ ಸಿಕ್ಕುತ್ತಿರಲಿಲ್ಲ" ಎಂದುಕೊಂಡರು ಅವರು. ಹೀಗೆ ಸುಮಾರು ಹದಿನೈದು ದಿನ ಎತ್ತು ಹುಲ್ಲು ತಿನ್ನುತ್ತಾ ಅಡ್ವೋಕೇಟರ ಬಾಗಿಲಿಗೆ ಕಾವಲಾ ಗಿತ್ತು. ಕೋರ್ಟಿನವರು ಕೇಳಿದಾಗ ಎತ್ತನ್ನು ಸರಿಯಾದ ಸ್ಥಿತಿಯಲ್ಲಿ ಹಾಜರು ಪಡಿಸದಿದ್ದರೆ ದಂಡ ಕೊಡಬೇಕಾದೀತೆಂದು ಅಡ್ವೋಕೇಟ್‌ರು ಸೂಚಿಸಿದ್ದರು. ವಿದ್ಯಾಶಂಕರರು ನಿತ್ಯ ಒಂದೂವರೆ ರೂಪಾಯಿಯ ಹುಲ್ಲು ತಿನ್ನಿಸುತ್ತಿದ್ದರೂ ಕೆಲಸವಿಲ್ಲದುದರಿಂದಲೋ ಏನೋ, ಎತ್ತು ದಿನದಿನಕ್ಕೆ ಬಡಕಲಾಗುತ್ತ ಬರ ತೊಡಗಿತ್ತು. ಕೊನೆಗೆ ಎತ್ತಿಗೆ ಹುಲ್ಲು ಹಾಕಲು ಅವರಿಗೆ ಸಾಧ್ಯವಾಗದಾಗ, ಒಂದು ರಾತ್ರಿ ಅವರು ಕಳ್ಳನಂತೆ ಎತ್ತನ್ನು ಅಡ್ವೋಕೇಟರ ಬಾಗಿಲಿನಿಂದ ಹೊಡೆದುಕೊಂಡು ಹೋಗಿ ಖಾದಿರನ ತಡಿಕೆಗುಡಿಸಿಲಿನ ಮುಂದೆ ಕಟ್ಟಿಬಿಟ್ಟರು. ಸಾಧಾರಣವಾಗಿ ಹೆಜ್ಜೆ ಇಡುವುದಕ್ಕೆ ಹಿಂತೆಗೆಯುತ್ತಿದ್ದ ಎತ್ತನ್ನು ಖಾದಿರನ ಮನೆದಾರಿಗೆ ತಿರುಗಿಸಿದ ಕೂಡಲೇ ಸರಾಗವಾಗಿ ತನಗೆ ಪ್ರಿಯವಾದ ಜಾಗಕ್ಕೆ ಹೋಗುತ್ತಿರುವುದು ಗೊತ್ತಾಗಿದ್ದಂತೆ ಅದು ಸರಸರನೆ ಹೊರಟುಬಿಟ್ಟಿತು.

ಎತ್ತನ್ನು ಖಾದಿರನ ಬಾಗಿಲಿನಲ್ಲಿ ಕಟ್ಟುತ್ತಿರುವಾಗ ಅವನಿಗೆ ಎಲ್ಲಿ ಎಚ್ಚರವಾಗಿ ತನ್ನ ಕಳ್ಳತನ ಗೊತ್ತಾಗಿಬಿಡುವುದೋ ಎಂದು ವಿದ್ಯಾಶಂಕರರಿಗೆ ಭಯವಾಗಿತ್ತು! ಮಾರನೆ ದಿನ ಬೆಳಿಗ್ಗೆ ಅವರು ಮೊದಲಿನಂತೆ, ಮತ್ತೊಂದು ಎತ್ತಿನ ಗಾಡಿ ಬಾಡಿಗೆಗೆ ಗೊತ್ತು ಮಾಡಿ, ಅದರಲ್ಲಿ ತನ್ನ ಬಾಗಿನಲ್ಲಿದ್ದ ಮುರುಕು ಗಾಡಿಯನ್ನು ತುರುಕಿ ಖಾದಿರನ ಮನೆಯ ಗುರುತನ್ನು ಹೇಳಿ ಅಲ್ಲಿಗೆ ಹಾಕುವಂತೆ ಬಾಡಿಗೆ ಸಹ ಕೊಟ್ಟು ಕಳುಹಿಸಿಬಿಟ್ಟರು! ಬಹು ದಿನಗಳಿಂದ ಅವರಿಗೆ ಇರದಿದ್ದ ಮನಶ್ಶಾಂತಿ ಅಂದು ಉಂಟಾಯಿತು.

* * * *

ಆ ಮಧ್ಯಾಹ್ನ ಅವರು ಅವೆನ್ಯೂ ರೋಡಿನಲ್ಲಿ ಹೋಗುತ್ತಿರುವಾಗ ಖಾದಿರ ಗಾಡಿಯನ್ನು ಸರಿಮಾಡಿಕೊಂಡು ಅದರ ಮೇಲೆ ೧೦-೧೨ ದೊಡ್ಡ ದೊಡ್ಡ ಮೂಟೆ ಹೇರಿಕೊಂಡು ಹೋಗುತ್ತಿದ್ದುದನ್ನು ನೋಡಿದರು. ಆಗಲೂ ಸಹ ಅವರಿಗೆ "ಇದನ್ನಿಟ್ಟುಕೊಂಡು ನಾನು ಮಾಡುವುದೇನು ? ನಾನು ಮಾಡಿದುದೇ ಸರಿ" ಎಂಬ ಭಾವ ಮತ್ತೆ ಉಂಟಾಯಿತು. ಅನಾನತ್‌ನಲ್ಲಿ ಇಟ್ಟಿದ್ದ ಮಾಲು ಹೀಗೆ ಪೋಲು ಆದುದಕ್ಕೆ ಅವನನ್ನು ಹೇಗೆ "ಬಚಾವ್" ಮಾಡಿದರೋ ಅದು ಅಡ್ವೋಕೇಟ್ ಶ್ರೀನಿವಾಸರಿಗೆ ಮಾತ್ರ ಗೊತ್ತು. ಕೆಲವು ದಿನಗಳ ನಂತರ ಅಖಿಲ ಭಾರತ ಕೇಂದ್ರ ಚರಖಾ ಕಛೇರಿಯಿಂದ "ನೀವು ಖಾದಿರ್‌ಗೆ ಕೊಟ್ಟು ಕಳಕೊಂಡ ಇನ್ನೂರು ರೂಪಾಯಿಗಳನ್ನು ಕರಡುಸಾಲದ (Bad debt) ಖಾತೆಗೆ ವರ್ಗಾಯಿಸಿದೆ. ನೀವು ಕೋರ್ಟಿಗೆ ಹೋಗಬೇಕಾದುದಿರಲಿಲ್ಲ. ಅನ್ಯಾಯಕ್ಕೆ ಪ್ರತೀಕಾರ ಮಾಡಬಾರದೆಂಬ ಮಹಾತ್ಮರ ವಾಕ್ಯ (Resist not evil) ಅಖಿಲ ಭಾರತ ಚರಖಾ ಸಂಘದ ಕೆಲಸಗಾರರಿಗೆ ತಿಳಿದಿರಬೇಕು" ಎಂದು ಕಾಗದ ಬಂತು.

ವಿದ್ಯಾಶಂಕರರು "ನಾನು ಸುಮ್ಮನೆ ಇದ್ದಿದ್ದರೆ ನೂರಾರು ರೂಪಾಯಿ ಉಳಿಯುತ್ತಿತ್ತು. 'ಕೋರ್ಟಿಗೆ ಹೋದವನು ಸತ್ತ' ಎಂಬುದನ್ನು ಕಲಿಯಲು ದಂಡ ತೆತ್ತಂತೆ ಆಯಿತು. ಆದರೆ ಇದರಲ್ಲಿಯೂ ಒಂದು ಒಳ್ಳೇ ಅಂಶವಿದೆ. ಅದೇ ಶ್ರೀನಿವಾಸರಂತಹ ಅಡ್ವೋಕೇಟರು ಮತ್ತು ಅವರ ಸ್ನೇಹ ಎಂದುಕೊಂಡು ಶಾಂತರಾದರು. ಅಖಿಲ ಭಾರತ ಚರಖಾ ಸಂಘದ ಅಭಿಪ್ರಾಯ ಸರಿಯೇ ? ಎಂಬ ವಿಷಯದಲ್ಲಿ ಅವರೂ ಅಡ್ವೋಕೇಟ್‌ರೂ ಇನ್ನೂ ನಿಷ್ಕೃಷ್ಟವಾದ ತೀರ್ಮಾನಕ್ಕೆ ಬಂದಿಲ್ಲ.

ಮುಳ್ಳು ಗಿಡ

ಅಂದು ಭಾನುವಾರದ ಬೆಳಗಿನ ಜಾವ. ತಾಲ್ಲೂಕ್ ಕಛೇರಿ ಗುಮಾಸ್ತ ಸೂರಪ್ಪನಿಗೆ ಆ ರಾತ್ರಿ ಅರ್ಧರಾತ್ರಿಗೇ ಎಚ್ಚರವಾಗಿತ್ತು. ಬಹಳ ದಿನಗಳಿಂದ ಅವನ ಮನಸ್ಸಿನಲ್ಲಿ ಹಣ್ಣಾಗುತ್ತಿದ್ದ ಆಸೆ ಅಂದು ಫಲಿಸುವುದಾಗಿತ್ತು. ಆ ಆಸೆ ಭಾನುವಾರ ಮಾಪಿನಕೆರೆ ಜಟ್ಟಕ್ಕೆ ತನ್ನ ಬಾಲ್ಯ ಸ್ನೇಹಿತ ಸಬ್‌ಜಡ್ಜ್ ಕೃಷ್ಣಮೂರ್ತಿಯೊಡನೆ ಹೋಗಿ ವಿನೋದವಾಗಿ ಸಂಧ್ಯಾಕಾಲದವರೆಗೆ ಕಾಲ ಕಳೆದು ಬರುವುದಾಗಿತ್ತು. ಹೈಸ್ಕೂಲು ಒಂದನೇ ತರಗತಿಯಲ್ಲಿ ಕೃಷ್ಣಮೂರ್ತಿಯೂ ಸೂರಪ್ಪನೂ ಸಹಪಾಠಿಗಳಾಗಿದ್ದರು. ಅನಂತರ ಕೃಷ್ಣಮೂರ್ತಿಯ ತಂದೆಯವರಿಗೆ ಬೇರೆಕಡೆಗೆ ವರ್ಗವಾದುದರಿಂದ ಒಬ್ಬರ ಸುದ್ದಿ ಒಬ್ಬರಿಗೆ ತಿಳಿಯಲಿಲ್ಲ. ಆದರೆ ಕೃಷ್ಣಮೂರ್ತಿ ಬಿ.ಎ., ಬಿ.ಎಲ್. ಮಾಡಿ ಮುನಿಸೀಫನಾದುದೂ, ಅನಂತರ ಸಬ್ ಜಡ್ಜ್ ಆದುದೂ ಸೂರಪ್ಪನಿಗೆ ಗೊತ್ತು. ಸೂರಪ್ಪ ಬಹಳ ಅಭಿಮಾನದಿಂದ ಕೃಷ್ಣಮೂರ್ತಿಯ ಏಳಿಗೆಯನ್ನು ನೆನೆಯುತ್ತಾ ಅವನು ತನ್ನ ಸಹಪಾಠಿ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನು. ಇಷ್ಟು ವರುಷಗಳ ಮೇಲೆ ಇಬ್ಬರೂ ಮತ್ತೆ ಒಂದು ಕಡೆ ಸೇರಿದುದರಿಂದ ಸೂರಪ್ಪನಿಗೆ ಕಳೆದುಹೋದ ಆಸ್ತಿ ಕೈಗೆ ಬಂದಷ್ಟು ಆನಂದವಾಗಿದ್ದಿತ್ತು.

ಸೂರಪ್ಪನ ಬಾಳಿನಲ್ಲಿ ಆನಂದವೆಂಬುದೇ ಇರಲಿಲ್ಲ. ಅವನು ಎಸ್.ಎಸ್.ಎಲ್.ಸಿ. ಪರೀಕ್ಷೆ ಕೋರ್ಸ್ ಮಾಡಿಕೊಂಡು, ತಾಲ್ಲೂಕು ಕಛೇರಿಯಲ್ಲಿ ಇಪ್ಪತ್ತು ರೂಪಾಯಿಗೆ ಗುಮಾಸ್ತೆಗೆ ಸೇರಿ, ಈ ಹದಿನೈದು ವರುಷಗಳಲ್ಲಿ ೩೦ ರೂಪಾಯಿಗೆ ಬಡ್ತಿ ಹೊಂದಿದ್ದನು. ಮದುವೆಯಾಗಿ ಮನೆ ತುಂಬ ಮಕ್ಕಳಾಗಿದ್ದುವು. ಸೂರಪ್ಪನ ಸಂಪಾದನೆ ಮಕ್ಕಳ ಹೊಟ್ಟೆ ತುಂಬುವುದಕ್ಕೆ ಸಹ ಸಾಕಾಗುತ್ತಿರಲಿಲ್ಲ. ತನ್ನ ಹೆಂಡತಿ ತಿರುಮಲಮ್ಮ (ಹೆಸರು ಚೆನ್ನಾಗಿಲ್ಲ. ನಮ್ಮ ಮಾವ, ಹೆಸರನ್ನಾದರೂ ಆಕರ್ಷಕವಾಗಿ ಇಡಬಾರದಾಗಿತ್ತೆ ಎಂದು ಸೂರಪ್ಪ ಆಗಾಗ ಯೋಚಿಸುತ್ತಿದ್ದನು.) ಅಷ್ಟೊಂದು ಮಕ್ಕಳು ಕಟ್ಟಿಕೊಂಡು, ಮನೆ ಸಂಸಾರ ಮಾಡಿಕೊಂಡು ತನಗೂ ಕಛೇರಿಯ ಹೊತ್ತಿಗೆ ಹೇಗೆ ಅನ್ನ ತೋರಿಸುತ್ತಾಳೋ ಎಂಬುದು ಸೂರಪ್ಪನಿಗೆ ಸಮಸ್ಯೆಯೂ ಆಶ್ಚರ್ಯವೂ ಆಗಿತ್ತು. ಅವನಮಟ್ಟಿಗೆ, ಅವನ ಕೈಗೆ ೩೦ ರೂಪಾಯಿ ಸಿಕ್ಕಿದರೆ ಅವನು

ಅದನ್ನು ಒಂದೇ ದಿನದಲ್ಲಿ ಧ್ವಂಸಮಾಡಿಬಿಡುತ್ತಿದ್ದನು. ಈ ಕಾರಣದಿಂದ ಸೂರಪ್ಪ ಮನೆಯಲ್ಲಿ ಒಂದು ವಿಧವಾದ ಅಪರಾಧಿಯಂತೆ ಕಾಲ ಹಾಕುತ್ತಿದ್ದನು.

ಕಛೇರಿಗೆ ಹೊಸ ಹೊಸ ಶಿರಸ್ತಾರರೂ ಅಮಲ್ದಾರರೂ ಬಂದಾಗ ಹಳೆಯ ಗುಮಾಸ್ತನಾದ ಸೂರಪ್ಪನನ್ನು ಕರೆಸಿ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಹಾಗೆ ಬರುತ್ತಿದ್ದವರ ಹೆಡ್ಡತನವನ್ನು ನೋಡಿ ಸೂರಪ್ಪನಿಗೆ ಆಶ್ಚರ್ಯವಾಗುತ್ತಿದ್ದಿತಲ್ಲದೆ, ಇಂಥವನ ಕೈಯಿನ ಆಳ್ವಿಕೆಗೆ ಸಿಕ್ಕಿದ್ದಾರಲ್ಲ ಎಂದು ನಮ್ಮ ಜನರಲ್ಲಿ ಕನಿಕರವೂ ಉಂಟಾಗುತ್ತಿದ್ದಿತು. "ನಾನು ಸ್ವಲ್ಪ ಮುಂದಕ್ಕೆ ಓದಿದ್ದರೆ ?" ಎಂದು ಸೂರಪ್ಪನು ಆಗಾಗ ಆಸೆಯಿಂದ ಯೋಚಿಸುತ್ತಿದ್ದನು. ಕಛೇರಿಯಲ್ಲಿ ಕುಳಿತು ಇಂದಾ-ಗೆ ಮಾಡುತ್ತಿರುವಾಗ, ಇದ್ದಕ್ಕಿದ್ದಂತೆ ಅವನಿಗೆ ಈ ಭಾವನೆ ಹೊಳೆದು ಅವನ ಮನಸ್ಸು ಆಕಾಶ ಗಾಳಿಗೋಪುರಗಳನ್ನು ಕಟ್ಟುತ್ತಾ ತಾನು ಮಾಡುತ್ತಿದ್ದ ಕೆಲಸವನ್ನು ಮರೆತು ವಿಹರಿಸುತ್ತಿತ್ತು. ಬಹುಶಃ ಆಗ ನಾನು ಬಿ.ಎ.,ಬಿ.ಎಲ್. ಅಥವಾ ಎಂ.ಎ. ಮಾಡಿ ಮುನಿಸೀಫನೋ ಕಾಲೇಜ್ ಮೇಷ್ಟ್ರೋ ಆಗಿರುತ್ತಿದ್ದೆ. ನೂರಾರು ರೂಪಾಯಿ ಸಂಪಾದಿಸುತ್ತಿದ್ದೆ. ಒಳ್ಳೆಯ ಜಾಗದ ಹೆಣ್ಣನ್ನು ಮದುವೆಯಾಗಬಹುದಾಗಿತ್ತು. ಲಲಿತ ಎಂತಹ ಹುಡುಗಿ. ಸಂಗೀತದಲ್ಲೂ ನಿಪುಣೆ." ಹಾಗೆಯೇ ಸೂರಪ್ಪನ ಮನಸ್ಸು ತನ್ನ ಹೆಂಡತಿ ತಿರುಮಲಮ್ಮನ ಕಡೆಗೆ ಹೊರಳುತ್ತಿತ್ತು. ಸಂಗೀತ, ಸಾಹಿತ್ಯಗಳಲ್ಲಿ ಆಸೆಯುಳ್ಳ ಅವನು, "ಊಹು, ಇದು ಪ್ರಯೋಜನವಿಲ್ಲ. ಬರಿಯ ನಿರ್ಗಂಧ. ಇದರಲ್ಲಿ ಹೂವೇ ಇಲ್ಲ. ಬರಿಯ ಮುಳ್ಳಿನ ಗಿಡ" ಎಂದುಕೊಳ್ಳುತ್ತಿದ್ದನು. ಹೆಂಡತಿ ತನ್ನೊಂದಿಗೆ ನಕ್ಕುದೇ ಅವನಿಗೆ ಜ್ಞಾಪಕವಿರಲಿಲ್ಲ. "ಲಲಿತಳನ್ನು ಮದುವೆಯಾಗಿದ್ದರೆ ನಾನು ಬಹುಶಃ ಇನ್ನೂ ಹೆಚ್ಚು ಸಂತೋಷದಿಂದ ಇರಬಹುದಾಗಿತ್ತೇನೋ" ಎಂದುಕೊಳ್ಳುವನು.

"ಏನ್ರಿ ದೆವ್ವದ್ಹಾಗೆ ಕೂತಿದೀರಿ. ಎಷ್ಟು ಕೂಗಿದ್ರು ಕೇಳೋಲ್ವೆ. ನಂಜೇದೇವರ ಕಾವಲು ರಿಕಾರ್ಡು ತನ್ನಿ" ಎಂದು ಹೆಡ್ ಗುಮಾಸ್ತರು ಗದರಿಸಿದಾಗ ಸೂರಪ್ಪನಿಗೆ ತನ್ನ ಮನಸ್ಸು ಕಾಡು ಹೋಯುತ್ತಿರುವುದು ಗೊತ್ತಾಗಿ ಗಾಬರಿಯಿಂದ ರಿಕಾರ್ಡು ಪೆಟ್ಟಿಗೆ ಕಡೆ ತಿರುಗುವನು.

ಈ ಹದಿನೈದು ವರುಷದ ಗುಮಾಸ್ತಿಯಲ್ಲಿ ಸೂರಪ್ಪ ಒಂದು ದಿನವೂ ರಜ ತೆಗೆದುಕೊಂಡಿರಲಿಲ್ಲ. ತಾಲ್ಲೂಕು ಕಛೇರಿಗಳಲ್ಲಿ ಸಾಧಾರಣವಾಗಿ ಕೆಳ ದರ್ಜೆಯ ನೌಕರರಿಗೆ, ಅವರ ಕೆಲಸಗಳು ಯಾವಾಗಲೂ ಬಾಕಿ ಇರುವುದರಿಂದ ಹಕ್ಕಿದ್ದರೂ, ರಜ ದೊರೆಯುವುದಿಲ್ಲ. ಆದರೆ ಸೂರಪ್ಪ ರಜ ತೆಗೆದುಕೊಳ್ಳದಿರಲು ಇನ್ನೊಂದು ಕಾರಣವೂ ಇತ್ತು. ರಜ ತೆಗೆದುಕೊಂಡು ಮಾಡಬೇಕಾದ ಕೆಲಸ ಅವನಿಗೆ ಯಾವುದೂ ಇರಲಿಲ್ಲ. ಅಲ್ಲದೆ ರಜ ತೆಗೆದುಕೊಂಡರೆ ಖರ್ಚು ಹೆಚ್ಚು. ಮೊದಲನೆಯ ತಾರೀಖಿನ ಸಾಯಂಕಾಲವೇ ಕೈಲಿ ಮೂರುಕಾಸೂ ಉಳಿಯದಿರುವಾಗ ಇನ್ನು ರಜದಲ್ಲಿ 'ಮಜ' ಮಾಡಲು ದುಡ್ಡೆಲ್ಲಿ? ಈ ಎಲ್ಲ ಕಾರಣಗಳಿಂದ ಸೂರಪ್ಪ ರಜವನ್ನೇ ತೆಗೆದುಕೊಂಡಿರಲಿಲ್ಲ. ಅವನ ಹದಿನೈದು ವರುಷ 'ಸರ್ವಿಸ್'ನ ರಜ ಸರ್ಕಾರಕ್ಕೇ ಲಾಭವಾಗಿತ್ತು.

ಆದರೆ ಈಚೆಗೆ ಸಬ್‌ಜಡ್ಜ್ ಕೃಷ್ಣಮೂರ್ತಿ ಅದೇ ಊರಿಗೆ ಬಂದ ನಂತರ ತಾವಿಬ್ಬರೇ ಒಂದು ದಿನ ಯಾವುದಾದರೂ ವಿನೋದದ ವಿಹಾರಕ್ಕೆ ಹೋಗಿ ಆನಂದವಾಗಿರಬೇಕೆಂಬ ಅವನ ಆಸೆ, ದಿನ ದಿನಕ್ಕೆ ರೆಕ್ಕೆಗೊಂಡು ಬೆಳೆದಿತ್ತು. ಈ ಆಸೆಯನ್ನು ಕೃಷ್ಣಮೂರ್ತಿಗೆ ಹೇಳಿದಾಗ ಅವನು ಅದನ್ನು ಸ್ವಾಭಾವಿಕವಾಗಿ ಒಪ್ಪಿದನು. ಸೂರಪ್ಪ, ಕೋರ್ಟಿನ ಗುಮಾಸ್ತನಲ್ಲದೆ, ಬೇರೆ ಇಲಾಖೆಯ ಗುಮಾಸ್ತನಾಗಿದ್ದುದರಿಂದ ಅವನ ಜೊತೆ ಹೋಗಲು ಒಪ್ಪುವುದು ಸಬ್‌ಜಡ್ಜ್ ಆದ ಕೃಷ್ಣಮೂರ್ತಿಗೆ ಕಷ್ಟವಾಗಲಿಲ್ಲ. ಹೆಚ್ಚು ಸಂಬಳದ ಅಧಿಕಾರಿಗಳು ಕಡಿಮೆ ಸಂಬಳದ ಅಧಿಕಾರಿಗಳೊಂದಿಗೆ ಸಮಾನತೆಯಿಂದ ಎಂದಿಗೂ ವರ್ತಿಸುವುದಿಲ್ಲ. ಅದು ಅವರ ತಪ್ಪಲ್ಲ. ಅವರ ತಲೆಯ ಮೇಲೆ ಸವಾರಿ ಮಾಡುತ್ತಿರುವ ಅಧಿಕಾರ ಪಿಶಾಚಿಯ ದರ್ಪ ಅದು. ಸಬ್‌ಜಡ್ಜ್ ಕೃಷ್ಣಮೂರ್ತಿಗೆ ಸಹ ಹರಕಲು ಅಂಗಿಯ ಮಾಸಲು ರುಮಾಲಿನ ಪೊರಜಿಗಡ್ಡದ ಸೂರಪ್ಪನ ಜತೆಯಲ್ಲಿ ವಿನೋದ ವಿಹಾರ ಬೇಕಿರಲಿಲ್ಲ. ಆದರೆ ಸೂರಪ್ಪನ ಬಾಲ್ಯದ ನಿರ್ದಾಕ್ಷಿಣ್ಯ ಸ್ವಭಾವ ಅವನಿಗೆ ಗೊತ್ತಿದ್ದುದರಿಂದ, ತಾನು ಈಗ ಹೋಗಲು ಒಪ್ಪದಿದ್ದರೆ, ಸೂರಪ್ಪ ನಿಜವಾದ ಕಾರಣವನ್ನು ಊಹಿಸಿ ತನ್ನನ್ನು ನಿಷ್ಠುರವಾಗಿ ಟೀಕಿಸಬಹುದೆಂದು ಕೃಷ್ಣಮೂರ್ತಿ ಹೆದರಿದನು.

ಮಾವಿನಕೆರೆ ಬೆಟ್ಟಕ್ಕೆ ವಿನೋದ ವಿಹಾರಕ್ಕಾಗಿ ಹೊರಡುವುದು ಗೊತ್ತಾಗಿದ್ದ ಭಾನುವಾರದ ಒಂದು ಶನಿವಾರ ಸಾಯಂಕಾಲ, ಪ್ರಯಾಣದ ವಿಷಯ

ವನ್ನು ಖಾತರಿಮಾಡಿಕೊಳ್ಳಲು ಸೂರಪ್ಪ ಕೃಷ್ಣಮೂರ್ತಿಯ ಮನೆಗೆಹೋದನು. ಸೂರಪ್ಪ ಕೃಷ್ಣಮೂರ್ತಿಯ ಮನೆಗೆ ಹೋದುದು ಅದೇ ಮೊದಲು. ಆಗ ಕೃಷ್ಣಮೂರ್ತಿ ಮನೆಯಲ್ಲಿರಲಿಲ್ಲ. ಬಾಗಿಲಿನಲ್ಲಿದ್ದ ಆಳು, ಕೃಷ್ಣಮೂರ್ತಿ ಸಿನಿಮಾಕ್ಕೆ ಹೋಗಿರುವುದಾಗಿ ಹೇಳಿದನು. ಅಮ್ಮಾವ್ರು ಅವರ ಜತೆಯಲ್ಲಿ ಹೋಗಿರುವುದಾಗಿ ತಿಳಿಯಿತು. ಸೂರಪ್ಪ ಏನೂ ಪ್ರಶ್ನೆಮಾಡದೆ ನಿಂತಿದ್ದರೂ ಆಳು ತನ್ನ ಪಾಡಿಗೆ ತಾನೇ ಹೇಳಿದ ಮಾತುಗಳಿಂದ ಸೂರಪ್ಪನಿಗೆ ಕೃಷ್ಣಮೂರ್ತಿಯ ಸಂಸಾರದ ಸಂಗತಿಗಳು ಗೊತ್ತಾದವು. "ಕೃಷ್ಣಮೂರ್ತಿಗೆ ಮಕ್ಕಳಿರಲಿಲ್ಲ. ಮನೆಯಲ್ಲಿರುವವರು ಗಂಡ ಹೆಂಡತಿ ಇಬ್ಬರೇ. ಕಾರನ್ನು ಕೆಲವು ದಿನಗಳ ಹಿಂದೆ ಮಾರಿದುದರಿಂದ ಈಗ ಜಟಕಾದಲ್ಲಿ ತಿರುಗುತ್ತಾರೆ. ಇವತ್ತೂ ಸಿನಿಮಾಕ್ಕೆ ಜಟಕಾದಲ್ಲಿ ಹೋಗಿದ್ದಾರೆ. ಮನೆಯಲ್ಲಿ ಅಡಿಗೆಯವನು ಇಲ್ಲ. ಈಗ ಹತ್ತು ದಿನಗಳ ಕೆಳಗೆ ಹೋಗಿಬಿಟ್ಟ. ಹೊಸಬ ಬಂದಿಲ್ಲ. ಅಮ್ಮಾ ಅವರನ್ನು ಕೆಲಸದಲ್ಲಿ ತೃಪ್ತಿಪಡಿಸುವುದು ಕಷ್ಟ. ಅವರಿಗೆ ಎಲ್ಲವೂ ಬಹಳ ಅಚ್ಚುಕಟ್ಟಾಗಿರಬೇಕು. ಆದುದರಿಂದ ಅಡಿಗೆಯವರು ಸಿಕ್ಕುವುದು ಕಷ್ಟ."

ಸೂರಪ್ಪ ಎಲ್ಲ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳುತ್ತಿದ್ದ. ಆಳು "ವರಾಂಡದಲ್ಲಿರುವ ಕುರ್ಚಿಯ ಮೇಲೆ ಕುಳಿತುಕೊಳ್ಳಿ, ರಾಯರು ಇನ್ನೇನು ಬರುವ ಹೊತ್ತೇ ಆಯಿತು" ಎಂದ. ಸೂರಪ್ಪ ಒಂದು ಕುರ್ಚಿಯ ಮೇಲೆ ಕುಳಿತ. ಎದುರಿಗೆ ಗೋಡೆಯ ಮೇಲೆ ಬೆಂಗಳೂರು ಪ್ರೆಸ್‌ನ ಕ್ಯಾಲೆಂಡರು, ಬಲಗಡೆ ಯಾವುದೋ ದೇವರ ಚಿತ್ರಪಟ, ಮಹಾತ್ಮಾಗಾಂಧಿ, ಒಟ್ಟಿನಲ್ಲಿ ದೇವರ ಪಟಗಳೇ ಹೆಚ್ಚಾಗಿದ್ದುವು. ಮಕ್ಕಳಿಲ್ಲದಿದ್ದುದರಿಂದ ಸ್ವಲ್ಪ ಇಲ್ಲಿ ದೇವರ ಪೂಜೆ ಹೆಚ್ಚು ಎಂದು ಸೂರಪ್ಪ ಭಾವಿಸಿದನು. ಅವನಿಗೆ ತನ್ನ ಮನೆಯನ್ನು ನೆನೆಸಿಕೊಂಡು ಹಾಗೇ ಸ್ವಲ್ಪ ನಗು ಬಂತು. ತನ್ನ ಮನೆಯಲ್ಲಿ ಮಕ್ಕಳ ಗದ್ದಲವೋ ಗದ್ದಲ. ತನ್ನ ಮಕ್ಕಳು ತನಗೇ ಲೆಕ್ಕಕ್ಕೆ ಸಿಕ್ಕುವುದಿಲ್ಲ. ಬೀದಿಯ ಮನೆಯಿಂದ ಒಂದು ಮಗು ಬಂದು ಕುಳಿತರೂ ಗೊತ್ತಾಗುವುದಿಲ್ಲ. ಮನೆಯ ಮಗು ಒಂದು ಬೇರೆ ಮನೆಗೆ ಹೋಗಿದ್ದರೂ ತಿಳಿಯುವುದಿಲ್ಲ. ಆದರೆ ಇಲ್ಲಿ ನೋಡಿದರೆ ಮಕ್ಕಳೇ ಇಲ್ಲ. ತನ್ನ ಸಂಪಾದನೆ ತಿಂಗಳಿಗೆ ಮೂವತ್ತು, ಇವನದು ನಾಲ್ಕುನೂರ ಐವತ್ತು. ಭಗವಂತನ ಲೀಲೆ ವಿಚಿತ್ರ. 'ಒಂದು ಕೊಟ್ಟರೆ ಒಂದು ಕೊಡನೆಂಬ, ಒಕ್ಕಳ ಹೊನ್ನ ಕೊಟ್ಟರೆ ಮಕ್ಕಳ ಕೊಡೆನೆಂಬ' ಗಾದೆ ನಿಜ.

ಸೂರಪ್ಪ ಹಾಗೆಯೇ ತಲೆ ಎತ್ತಿ ನೋಡಿದ. ಎಡಗಡೆಯ ಕೊನೆಯಲ್ಲಿ ಬಣ್ಣದ ದಾರದಲ್ಲಿ ಕಾರ್ಡುಬೋರ್ಡಿನ ಮೇಲೆ ಹೆಣೆದಿದ್ದ ಒಂದು ಗಿಳಿಯ ಪಠ, ಅದರ ಕೆಳಗೆ ಎಸ್. ಎಸ್. ಲಲಿತ ಎಂದಿತ್ತು. ಕಾರ್ಪಣ್ಯದಿಂದ ಕಂಗೆಟ್ಟಿದ್ದರೂ ಆ ಹೆಸರನ್ನು ನೋಡಿದ ಕೂಡಲೇ ಸೂರಪ್ಪನಿಗೆ ರೋಮಾಂಚವಾಯಿತು. ಲಲಿತ! ಅವನ ಕನಸಿನ ಹೆಣ್ಣು. ಅವನ ಮಟ್ಟಿಗೆ ಆ ಹೆಸರಿನಲ್ಲಿ ಮೋಹಕತೆ ಇತ್ತು. ಅವನು ಒಣಗಿದ ಕೊರಡಾಗಿದ್ದರೂ ಆ ಹೆಸರನ್ನು ಕೇಳಿದ ಕೂಡಲೇ ಚಿಗುರುತ್ತಿದ್ದನು. ಸೂರಪ್ಪ ಕುಳಿತಲ್ಲಿಯೇ ಆ ಹೆಸರಿನ ಧ್ಯಾನದಿಂದ ತನ್ನ ಸ್ವಪ್ನ ರಾಜ್ಯಕ್ಕೆ ಬಂದನು. "ಹೌದು ಲಲಿತ, ಈಗ ಅವಳು ಎಲ್ಲಿರಬಹುದು ? ರಾಣಿಯಾಗಲು ಅರ್ಹಳಾದ ಹುಡುಗಿ, ಈ ಹದಿನೈದು ವರುಷಗಳಿಂದ ಅವಳ ಸಮಾಚಾರ ತಿಳಿಯಲಿಲ್ಲ. ಅವಳನ್ನು ಮದುವೆಯಾಗಿದ್ದರೆ ಎಂತಹ ಚೆನ್ನಾಗಿರುತ್ತಿತ್ತು. ಅದು ನನಗೆಲ್ಲಿ ಲಭ್ಯ ? ಎಸ್.ಎಸ್.ಎಲ್.ಸಿ. ಕೋರ್ಸ್‌ಗೆ ನನಗೆ ದೊರೆತದ್ದು ತಿರುಮಲೆ. "ಕುಂಟೆತ್ತಿಗೆ ಕೊಳಚೆ ನೀರೇ ಪಾವನ". ಆದರೆ ಮುಂದಲ ಗಳಿಗೆಯಲ್ಲಿಯೇ ಲಲಿತ ತನ್ನನ್ನು ಮದುವೆಯಾಗದುದೇ ಉತ್ತಮವಾಯಿತೆಂದು ಅವನಿಗೆ ತೋರಿತು. ಈ ಬಡತನವನ್ನು ನೀಗಲು ಆ ಕೋಮಲ ಕುಸುಮಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ತಿರುಮಲೆಯೇ ಸರಿ.

ಸೂರಪ್ಪನಿಗೆ ಥಟಕ್ಕನೆ ಒಂದು ಸ್ಫೂರ್ತಿ ಹೊಳೆದಂತಾಯಿತು. ಈ ಲಲಿತೆಯೇ ಆ ಲಲಿತೆಯಾಗಿರಬಹುದೆ ? ಕೃಷ್ಣಮೂರ್ತಿಯ ಹೆಂಡತಿ ಯಾರೆಂಬುದೂ ತನಗೆ ಆವರೆಗೆ ತಿಳಿದಿರಲಿಲ್ಲವೆಂಬುದು ಅವನ ಜ್ಞಾಪಕಕ್ಕೆ ಬಂದಿತು. ಎದುರಿನ ಪಠದ ಹೆಸರಿನ ಹಿಂದಿನ ಎಸ್.ಎಸ್. ಎಂಬುದನ್ನು ಅವನು ಗಮನಿಸಿದನು. ಹೌದು, ಅವನ ಲಲಿತಳು ಶಿವಪುರದ ಶಾಮರಾಮಯ್ಯನ ಮಗಳು. ಇವಳೋ ? ಸೂರಪ್ಪನು ಆಳನ್ನು ಕರೆದು "ನೀನು ಎಷ್ಟು ದಿನಗಳಿಂದ ಇವರ ಮನೆಯಲ್ಲಿದ್ದೀಯೆ ?" ಎಂದು ಕೇಳಿದನು. ಆಳು "ಸುಮಾರು ಐದು ವರ್ಷದಿಂದ" ಎಂದನು. ಸೂರಪ್ಪನು ನಿಮ್ಮ ರಾಯರ ಮಾವಂದಿರನ್ನು ನೋಡಿದ್ದೀಯ" ಎಂದನು. ಆಳು "ಹೌದು, ನೋಡಿದೀನಿ, ರಾಯರ ಜತೆಯಲ್ಲಿ ನಾನೇ ಒಂದು ಸಲ ಶಿವಪುರಕ್ಕೆ ಹೋಗಿದ್ದೆ. ಶಿರಸ್ತಾರರು ಬಹಳ ದೊಡ್ಡ ಮನುಷ್ಯರು" ಎಂದನು. ಸೂರಪ್ಪನಿಗೆ ಅನುಮಾನ ಉಳಿಯಲಿಲ್ಲ.

ಸೂರಪ್ಪನ ಮನಸ್ಸನ್ನು ನಾನಾ ಭಾವನೆಗಳು ಏಕಕಾಲದಲ್ಲಿ ಮುತ್ತಿದುವು. ಲಲಿತೆಯನ್ನು ನೋಡುವುದೇ ಅವನಿಗೆ ಒಂದು ಹಬ್ಬವಾಗಿದ್ದುದರಿಂದ ಒಮ್ಮೆ ಅವನಿಗೆ ಆನಂದವಾಯಿತು. ಮರುಕ್ಷಣದಲ್ಲಿಯೇ ತನ್ನ ದೈನ್ಯದೆಸೆಯನ್ನು ನೆನೆದುಕೊಂಡು "ಈ ಅವಸ್ಥೆಯಲ್ಲಿ ಅವಳ ಕಣ್ಣಿಗೆ ಬೀಳಬಾರದು" ಎಂದುಕೊಂಡನು. ಕೊನೆಯಲ್ಲಿ ಆ ಆತ್ಮಾಭಿಮಾನವೇ ಗೆದ್ದು ಅವನು ಕುರ್ಚಿಯಿಂದ ಮೇಲಕ್ಕೆ ಎದ್ದನು. ಅಷ್ಟರಲ್ಲಿ ಜವಾನನು "ರಾಯರು ಬಂದರು" ಎಂದನು. ಬಾಗಿಲಿಗೆ ಒಂದು ಕುದುರೆಗಾಡಿ ಬಂದು ನಿಂತಿತು. ಮೊದಲು ಕೃಷ್ಣಮೂರ್ತಿಯೂ ಅನಂತರ ಲಲಿತಳೂ ಕೆಳಕ್ಕೆ ಇಳಿದರು. ಜಾರ್ಜೆಟ್ ಸೀರೆ, ಮಲ್ಲಿಗೆ ಹೂವಿನ ಸುಗಂಧ ಮಾಲಿಕೆಯಂತೆ ಲಲಿತ ಒಳಕ್ಕೆ ಬಂದಳು. ಆ ಠೀವಿ, ಗತ್ತು ಯಾವ ಸಿನಿಮಾ ತಾರೆಯರನ್ನೂ ಹಿಂದೆ ಹಾಕುವುದಾಗಿದ್ದುವು. ಆ ಸೌಂದರ್ಯವನ್ನು ನೋಡಿ ಮೊದಲೇ ಮಂಕುಗೊಂಡಿದ್ದ ಸೂರಪ್ಪ ದಿಗ್ಭ್ರಮೆ ಹಿಡಿದವನಂತೆ ಕುಳಿತನು. ಲಲಿತ ಒಂದು ಕ್ಷಣ ಅವನ ಕಡೆಗೆ ಕಣ್ಣು ಹೊರಳಿಸಿದಳು. ತನ್ನನ್ನೂ ಅವಳು ಗುರುತಿಸಿದಂತೆಯೂ ಅವನಿಗೆ ಭಾಸವಾಯಿತು, ಆದರೆ ಒಂದು ಕ್ಷಣದ ಮಟ್ಟಿಗೆ, ಮರುಕ್ಷಣದಲ್ಲಿ ಅವಳು ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿಕೊಂಡು ಹೊರಟುಹೋದಳು. ಕೃಷ್ಣಮೂರ್ತಿಯು "ಸೂರು, ಬಂದೆ ಕುಳಿತುಕೊ" ಎಂದು ಹೇಳಿ ಒಳಕ್ಕೆ ಹೋದನು.

ಸೂರಪ್ಪನಿಗೆ ಲಲಿತೆ ಹಿಂದಲಿನ ದಿನಗಳಿಗಿಂತ—ಅವನು ಈಚೆಗೆ ಕನಸು ಕಂಡುದಕ್ಕಿಂತ-ಹೆಚ್ಚು ಸುಂದರಿಯಾಗಿ ತೋರಿದಳು. ಅವನಿಗೆ "ಕೃಷ್ಣಮೂರ್ತಿ ಅದೃಷ್ಟಶಾಲಿ" ಎಂದು ಮತ್ತೆ ಮತ್ತೆ ಭಾಸವಾಯಿತು. ಕೃಷ್ಣಮೂರ್ತಿಯ ಮೇಲೆ ಎಂದೂ ಇಲ್ಲದಿದ್ದ ಸ್ವಲ್ಪ ಹೊಟ್ಟೆಯ ಕಿಚ್ಚು ಸಹ ಉಂಟಾಯಿತು. ಕೃಷ್ಣಮೂರ್ತಿ ಉಡುಪನ್ನು ಬದಲಾಯಿಸಿ ಹೊರಕ್ಕೆ ಬಂದನು. ಬೆಳಗಿನ ಜಾವದ ಪ್ರಯಾಣವನ್ನು ಕುರಿತು ಇಬ್ಬರಿಗೂ ಮಾತು ಕತೆಗಳಾದವು. ಕೃಷ್ಣಮೂರ್ತಿಯ ಮನೆಯಿಂದ ರೈಲ್ವೆ ಸ್ಟೇಷನ್ ಒಂದೇ ಫರ್ಲಾಂಗು ಇದ್ದುದರಿಂದ ಇಬ್ಬರೂ ಅಲ್ಲಿಂದ ನಡೆದುಕೊಂಡೇ ಸ್ಟೇಷನ್ನಿಗೆ ಹೋಗಬೇಕೆಂದೂ ಸೂರಪ್ಪ ಬೆಳಗಿನ ಜಾವ ಕೃಷ್ಣಮೂರ್ತಿಯ ಮನೆಗೆ ಬರಬೇಕೆಂದೂ ತೀರ್ಮಾನವಾಯಿತು. ಸೂರಪ್ಪ ಮಾತು ಮುಗಿಸಿದ ಕೂಡಲೇ ಕೃಷ್ಣಮೂರ್ತಿ "ಸ್ವಲ್ಪ

ತಡಿ, ಕಾಫಿ ಕುಡಿದು ಹೋಗುವಿಯಂತೆ. ಅಪರೂಪವಾಗಿ ಮನೆಗೆ ಬಂದೆ" ಎಂದನು. ಸೂರಪ್ಪನಿಗೆ ಕಾಫಿ ಬೇಕಾಗದೆ ಇರಲಿಲ್ಲ. ಅವನಿಗೆ ಯಾವಾಗಲೂ ತೃಪ್ತಿಯಾಗುವಷ್ಟು ಆಹಾರವನ್ನಾಗಲಿ ಕಾಫಿಯನ್ನಾಗಲಿ ತಿಂಡಿಯನ್ನಾಗಲಿ ಯಾರೂ ಕೊಟ್ಟಿರಲಿಲ್ಲ. ಆದರೆ ಈಗ ಕಾಫಿ ಕುಡಿಯುವ ನೆಪದಲ್ಲಿ ಲಲಿತೆಯನ್ನು ಮತ್ತೊಂದು ಸಲ ನೋಡಬಹುದೆಂಬ ಆಸೆಯೂ ಅವನಿಗೆ ಇತ್ತು. ಆದ್ದರಿಂದ ಅವನು "ಕಾಫಿಯೋ, ಭೇಷ್ Welcome" ಎಂದು ಹೇಳಿ ಕುರ್ಚಿಯ ಮೇಲೆ ಆರಾಮವಾಗಿ ಕುಳಿತನು. ಸೂರಪ್ಪ ಕಾತರನಾಗಿ ಒಳಗಡೆಗೇ ನೋಡುತ್ತಾ ಕುಳಿತಿರುವಾಗ ಮತ್ತೆ ಕೃಷ್ಣಮೂರ್ತಿಯೇ ಒಳಕ್ಕೆ ಹೋಗಿ ಎರಡು ಕೈಗಳಲ್ಲಿಯೂ ಎರಡು ಬಟ್ಟಲು ಕಾಫಿಯನ್ನು ಹಿಡಿದುಕೊಂಡು ಬಂದನು. ಕಾಫಿ ಸುಡುತ್ತಿತ್ತು. ಅದನ್ನು ಬೇಗ ಮೇಜಿನ ಮೇಲಿಟ್ಟು ಕೃಷ್ಣಮೂರ್ತಿಯು "ಈ ಊರಿನಲ್ಲಿ ಹಾಳಾದ್ದು ಅಡಿಗೆಯವರದೇ ತಾಪತ್ರಯ. ಮೂವತ್ತಲ್ಲ, ನಲವತ್ತು ಕೊಟ್ಟರೂ ಸಿಕ್ಕುವುದಿಲ್ಲ" ಎಂದನು. ಲಲಿತ ಬರದೆ ಕೃಷ್ಣಮೂರ್ತಿಯೇ ತಂದುದರಿಂದ ಸೂರಪ್ಪನಿಗೆ ಆ ಕಾಫಿಯ ಮೇಲೆ ಅಂತಹ ಪ್ರೀತಿ ಬರಲಿಲ್ಲ. "ನಾನೇನೂ ದೂರದವನಲ್ಲ, ಗಂಡನ ಆಪ್ತ ಸ್ನೇಹಿತ, ಲಲಿತಳೇ ಬಂದು ಕಾಫಿಯನ್ನು ಕೊಡಬಹುದಾಗಿತ್ತು. ಆದರೆ ಈ ಕಾಲದಲ್ಲಿ ಗಂಡಂದಿರೇ ಹೆಂಡರ ಪರಿಚಾರಕರು" ಎಂದುಕೊಂಡು ಸೂರಪ್ಪ ಕಾಫಿಯನ್ನು ಕುಡಿದನು. ಆದರೂ ಅವನಿಗೆ ಲಲಿತೆಯ ಮೇಲೆ ಕೋಪ ಬರಲಿಲ್ಲ. ಅದರ ಬದಲು ಮತ್ತೆ ಕೃಷ್ಣಮೂರ್ತಿಯ ಮೇಲೆಯೇ ಅಸಮಾಧಾನ ಹೆಚ್ಚಾಯಿತು. ಲಲಿತ ಮೊದಲಿಗಿಂತ ಹೆಚ್ಚು ಪ್ರಿಯಳಾಗಿ ತೋರಿದಳು.

ಈ ವಿಷಯಗಳನ್ನೆಲ್ಲ ಸೂರಪ್ಪ ಮನಸ್ಸಿನಲ್ಲಿ ಮುಂಡಿಗೆ ಹಾಕುತ್ತ ಶನಿವಾರ ರಾತ್ರಿ ಮನೆಯಲ್ಲಿ ಮಲಗಿದನು. ಆ ರಾತ್ರಿ ಅವನಿಗೆ ಲಲಿತೆಯ ಜ್ಞಾಪಕದಿಂದ ತನ್ನ ಹೆಂಡತಿ ತಿರುಮಲಮ್ಮನ ಮೇಲೂ ಮಕ್ಕಳ ಮೇಲೂ ಎಂದಿಗಿಂತ ಹೆಚ್ಚು ಅಸಮಾಧಾನವಾಗಿತ್ತು. ಗಂಡನ ಅಸಮಾಧಾನ ತಿರುಮಲಮ್ಮನಿಗೆ ಗೊತ್ತಾಯಿತು. ಅವಳು ಅದರ ಕಾರಣವನ್ನು ವಿಚಾರಿಸಲು ಹೋಗಲಿಲ್ಲ. ಸೂರಪ್ಪ ತನ್ನ ಬಗೆಬಗೆಯ ದುರದೃಷ್ಟಗಳಿಗಾಗಿ ಆಗಿಂದಾಗ್ಗೆ ಹೀಗೆ ಮನೆಯಲ್ಲಿ ದೇವರು ಬಂದವನಂತೆ ಆಡುವುದು ಆಕೆಗೆ ಅನುಭವವಾಗಿತ್ತು. ಅಲ್ಲದೆ ಮಕ್ಕಳ ರಕ್ಷಣೆ,

ಒಂದರ ಕಿರುಚಾಟ, ಮತ್ತೆರಡರ ಪರಸ್ಪರ ಹೊಡೆದಾಟ, ತಿಂಡಿಯಿಲ್ಲದುದರಿಂದ ಒಂದರ ಅಳು, ಈ ಅವಾಂತರದಲ್ಲಿ ಗಂಡನ ಮುನಿಸನ್ನು ತಿಳಿಸಲು ಅಕೆಗೆ ಹೊತ್ತೇ ಇರಲಿಲ್ಲ. ಬೆಳಗಿನ ಜಾವ ಕೃಷ್ಣಮೂರ್ತಿಯೊಂದಿಗೆ ಮಾಪಿಸಕೆರೆಗೆ ಹೋಗಬೇಕೆಂದು ಗಂಡ ಹೇಳಿದ ಮಾತು ಮಾತ್ರ, ಅವಳ ಲಕ್ಷ್ಯದಲ್ಲಿದ್ದಿತು. ಸಾಮಾನ್ಯ ದಿನಗಳಾಗಿದ್ದರೆ ಸೂರಪ್ಪ ಬೆಳಗಿನ ಜಾವ ಕಾಫಿ ತಿಂಡಿ ಏನಾದರೂ ಮಾಡಬೇಕೆಂದು ಹೇಳುತ್ತಿದ್ದ. ಆದರೆ ಇಂದು ಲಲಿತಳ ಜೋಲಿಕೆಯಿಂದ ಅವನಿಗೆ, ಹೆಂಡತಿಯ ಮೇಲೆ ಅಸಮಾಧಾನ ಇನ್ನೂ ಹೆಚ್ಚಾಗಿದ್ದುದರಿಂದ, ಅವನು ಪ್ರಯಾಣದ ವಿಷಯವನ್ನು ಮಾತ್ರ ತಿಳಿಸಿ ಸುಮ್ಮನೆ ಮಲಗಿದನು.

ಬೆಳಗಿನ ಜಾವ ನಾಲ್ಕು ಗಂಟೆಗೆ ತಿರುಮಲಮ್ಮ ಎದ್ದು ಓಡಾಡುತ್ತಿದ್ದುದು ಸೂರಪ್ಪನಿಗೆ ಗೊತ್ತಾಯಿತು. ತಿರುಮಲಮ್ಮ ಬೀಸುವ ಕಲ್ಲಿನ ಮುಂದೆ ಕುಳಿತು ಏನನ್ನೋ ಬೀಸಿದಳು. ಅಕ್ಕಿ ಇರಬೇಕೆಂದು ಸೂರಪ್ಪ ಭಾವಿಸಿದನು. "ಮಗ್ಗುಲಲ್ಲೇ ಇರುವ ಮಿಷನ್‌ನಲ್ಲಿ ಯಾಕೆ ಇವಳು ಬೀಸಿಕೊಳ್ಳುವುದಿಲ್ಲ ?" ಎಂದು ಅವನು ಯೋಚಿಸಿದನು. 'ಬಹುಶಃ ದುಡ್ಡು ಇಲ್ಲವೇನೋ? ಯಾವಾಗಲೂ ಇವಳೇ ಬೀಸಿಕೊಳ್ಳುತ್ತಾಳೇನೋ, ಇಷ್ಟರ ಮೇಲೆ ನಾನು ಯಾವಾಗ ತಾನೇ ಇವಳನ್ನು ದುಡ್ಡಿದೆಯೇ ? ಎಂದು ವಿಚಾರಿಸಿದೆ. ವಿಚಾರಿಸಿದರೆ ಕೊಡುವುದಕ್ಕೆ ತಾನೇ ಎಲ್ಲಿದೆ ?' ಎಂದುಕೊಂಡನು. ಇದ್ದಕ್ಕಿದ್ದಂತೆ ಅವನ ಮೂರು ವರ್ಷದ ಮಗು ಗಣೇಶ ಕಿಲ್ಲೆಂದು ಕಿರಚಿತು. ತಿರುಮಲಮ್ಮ ಮಾಂತ್ರಿಕಳಂತೆ ಒಂದೆರಡು ನಿಮಿಷಗಳಲ್ಲಿ ಅದನ್ನು ಸಮಾಧಾನ ಮಾಡಿ ಮಲಗಿಸಿದಳು.

ಸುಮಾರು ನಾಲ್ಕೂವರೆ ಗಂಟೆಗೆ ಸೂರಪ್ಪ ಹಾಸಿಗೆಯಿಂದ ಎದ್ದನು. ಛಳಿ ಮೈಯನ್ನು ಕೊರೆಯುತ್ತಿತ್ತು. ತಣ್ಣೀರಿನಲ್ಲಿ ಹಲ್ಲುಜ್ಜಿ ಮುಖ ತೊಳೆಯುವುದೂ ಪ್ರಯಾಸವೇ ಎಂದುಕೊಂಡು ಸೂರಪ್ಪ ಬಚ್ಚಲು ಮನೆಗೆ ಹೋದನು. ನೀರು ಹಂಡೆಯಲ್ಲಿ ಬಿಸಿಬಿಸಿಯಾಗಿ ಕಾದಿತ್ತು. ಅದರಿಂದಲೇ ಅವನಿಗೆ ತನ್ನ ಜೀವಮಾನದಲ್ಲಿ ಎಂದೂ ಇಲ್ಲದಷ್ಟು ಆನಂದವಾಯಿತು. ಸ್ನಾನಮಾಡಬೇಕೆಂಬುದು ಅವನ ಉದ್ದೇಶವಾಗಿಲ್ಲದಿದ್ದರೂ, ಬಿಸಿನೀರಿನ ಆಸೆಯಿಂದ ಅವನು ಸುಖವಾಗಿ ಸ್ನಾನ ಮಾಡಿದನು. ಒಳಕ್ಕೆ ಬರುವ ವೇಳೆಗೆ ತಿರುಮಲಮ್ಮ ಬಿಸಿ ರೊಟ್ಟಿಯನ್ನೂ ಕಾಫಿಯನ್ನೂ ಕೊಟ್ಟಳು. ಸೂರಪ್ಪನು ತಿಂಡಿ ತಿಂದು ಎದ್ದು,

ತನ್ನ ಹರಿದ ಕೋಟನ್ನು ಹಾಕಿಕೊಂಡು ಹೊರಟನು. ತಿರುಮಲಮ್ಮ ಅವನಿಗೆ ಒಂದು ಕೈಚೀಲವನ್ನು ಕೊಟ್ಟಳು. ಸೂರಪ್ಪನು ಇದೇನೆಂದು ಕೇಳುವವನಂತೆ ಅವಳ ಮುಖವನ್ನು ತಲೆ ಎತ್ತಿ ನೋಡಿದಾಗ ಆಕೆ "ಇರಲಿ, ಸ್ವಲ್ಪ ತಿಂಡಿ ಬೇಕಾಗುತ್ತೆ" ಎಂದಳು. ಸೂರಪ್ಪ ಚೀಲವನ್ನು ತೆಗೆದುಕೊಂಡು ಹೊರಟನು. ಸೂರಪ್ಪ ಬಾಗಿಲಿಗೆ ಹೋಗುವವರೆಗೆ ಸುಮ್ಮನಿದ್ದವಳು, ಅನಂತರ ಕೈಯನ್ನು ಮುಂದಕ್ಕೆ ಚಾಚಿ "ಕೊಳ್ಳಿ" ಎಂದಳು. ಸೂರಪ್ಪ ಅದೇನೆಂಬುದನ್ನು ಅರಿಯುದಲೇ ಕೈ ನೀಡಿದನು. ತಿರುಮಲಮ್ಮ ಕೈಗೆ ಮೂರು ಪಾವಲಿ ಹಾಕಿದಳು. ತಾನು ರೈಲಿಗೆ ದುಡ್ಡಿಲ್ಲದೆ ಹೊರಟಿರುವುದು ಆಗ ಅವನ ಜ್ಞಾಪಕಕ್ಕೆ ಬಂದಿತು. 'ಸಧ್ಯ ಕೃಷ್ಣಮೂರ್ತಿಯ ಹತ್ತಿರ ರೈಲು ಬಾಡಿಗೆ ಸಾಲ ತೆಗೆದುಕೊಳ್ಳುವ ಅವಮಾನ ತಪ್ಪಿತಲ್ಲ' ಎಂದು ಅವನಿಗೆ ತನ್ನ ಹೆಂಡತಿಯಲ್ಲಿ ಬಹಳ ಕೃತಜ್ಞತೆಯುಂಟಾಯಿತು. 'ಈ ಒಂದು ವಿಷಯವನ್ನೂ ಬಿಡದೆ ಎಲ್ಲವನ್ನೂ ಯೋಚಿಸಿಡಲು ಇವಳಿಗೆ ವ್ಯವಧಾನವೆಲ್ಲಿದೆ ?' ಎಂದು ಅವನು ಆಶ್ಚರ್ಯಪಡುತ್ತಾ, ಕೃಷ್ಣಮೂರ್ತಿಯ ಮನೆಯ ಕಡೆ ಹೊರಟನು. ತಿರುಮಲಮ್ಮ ಮನೆಯ ಕಾರ್ಯದಲ್ಲಿ ತೊಡಗಿದಳು.

ಬೆಳಕು ಚೆನ್ನಾಗಿ ಹರಿಯುತ್ತಿತ್ತು. ಸೂರಪ್ಪನ ಮನಸ್ಸು ಬಹಳ ಗೆಲುವಾಗಿ ಹಗುರವಾಗಿತ್ತು. ಪ್ರಾತಃಕಾಲದ ಚೈತನ್ಯದಾಯಕವಾದ ಆ ತಂಗಾಳಿಯಲ್ಲಿ ಒಂದು ಹೊಸ ಸುಗಂಧ ಅವನಿಗೆ ತೋರಿತು. ಕೃಷ್ಣಮೂರ್ತಿ ತನ್ನನ್ನು ನಿರೀಕ್ಷಿಸುತ್ತ ಕುಳಿತಿರಬಹುದೆಂದು ಅವನು ಹೆಜ್ಜೆಯನ್ನು ಬೇಗ ಬೇಗ ಹಾಕತೊಡಗಿದನು. ಆ ಮನೆಯ ಕಾಂಪೌಂಡಿನ ಹತ್ತಿರ ಬಂದಾಗ ದೀಪವೇ ಇಲ್ಲದಿರುವುದು ಅವನಿಗೆ ಕಾಣಿಸಿತು. "ಹಾಗಾದರೆ ಇನ್ನೂ ಕೃಷ್ಣಮೂರ್ತಿ ಎದ್ದೇ ಇಲ್ಲವೇ ? ರೈಲಿಗೆ ಹೊತ್ತಾಗುತ್ತ ಬಂದಿತಲ್ಲ" ಎಂದುಕೊಂಡು ಸೂರಪ್ಪ ಬೇಗ ಬೇಗ ಮನೆಯ ಮುಂದಲ ಬಾಗಿಲಿಗೆ ಬಂದನು. ಸೂರಪ್ಪ ವರಾಂಡದ ಹತ್ತಿರಕ್ಕೆ ಬಂದಾಗ ಒಳಗಿನಿಂದ ಮಾತಿನ ಧ್ವನಿ ಕೇಳಿಸಿತು. ಕೃಷ್ಣಮೂರ್ತಿ ಲಲಿತ ಇಬ್ಬರೂ ಮಾತನಾಡುತ್ತಿದ್ದರು. ಸೂರಪ್ಪನಿಗೆ ಅವರ ಮಾತುಗಳನ್ನು ಕೇಳಬೇಕೆಂಬ ಇಷ್ಟವಿರಲಿಲ್ಲ. ಆದರೆ ಅವನು ಮತ್ತೇನನ್ನೂ ಮಾಡಲು ತೋಚದೆ ವರಾಂಡದಲ್ಲಿದ್ದ ಕುರ್ಚಿಯ ಮೇಲೆ ಕುಳಿತನು. ಒಳಗೆ ಸಂಭಾಷಣೆ ಒಂದೇ ಸಮನಾಗಿ ಸಾಗಿತ್ತು.

"ಇವತ್ತು ನೀನು ಬರುವುದು ಬೇಡ. ಮಾಪಿನಕೆರೆ ದೂರವಲ್ಲ. ಯಾವಾಗ ಬೇಕಾದರೂ ನಾವಿಬ್ಬರೇ ಹೋಗಿ ಬರಬಹುದು. ಅರ್ಧ ಗಂಟೆಯ ಪ್ರಯಾಣ. ಬೇಕಾದರೆ ಒಂದು ಟ್ಯಾಕ್ಸಿ ಮಾಡುತ್ತೇನೆ. ಇವತ್ತು ನಾನೂ ಸೂರಪ್ಪನೂ ಹೋಗಿ ಬರುತ್ತೇವೆ."

"ನಾನು ಬಂದರೆ ನಿಮಗೆ ಕಷ್ಟ ಏನು ? ಇನ್ನೊಂದು ದಿನವೂ ಹೋಗೋಣ. ನನಗೂ ಇಲ್ಲಿ ಕೂತುಕೊಂಡು ಬೇಜಾರಾಗಿದೆ. ನನ್ನ ಕಾಲಿನಲ್ಲಿ ನಾನು ನಡೆದುಕೊಂಡು ಬರುತ್ತೇನೆ."

"ಏನು, ಎಳೇ ಮಗುವಿನ ಹಾಗೆ ಆಡ್ತೀಯ. ನಾನು ಎಲ್ಲಾದರೂ ಹೊರಟುಬಿಟ್ಟರೆ ನೀನೂ ಬರಬೇಕು. ಎಲ್ಲ ಮನೆ ಹೆಂಗಸರೂ ಹೀಗೆಯೇ ಬರ್ತಾರ್ರೈ ? ನಿನ್ನ ಪಾಡಿಗೆ ನೀನು ಗಂಭೀರವಾಗಿ ಮನೇಲಿರೋದಕ್ಕೇನು....?"

ಲಲಿತ ಗಂಡನನ್ನು ಮುಂದೆ ಮಾತನಾಡಗೊಡದೆ "ನನ್ನ ಪಾಡಿಗೆ ನಾನು ಮನೆಕಾವಲಿಗೆ ಮುದಿಗೂಬೆಯಂತೆ ಬಿದ್ದಿರತೀನಿ ನೀವು ಮಾತ್ರ ಯಾವತ್ತು ರಜ ಬಂದರೂ ಊರು ಊರು ತಿರುಗುತ್ತ ವಿನೋದವಾಗಿರಿ. ಇನ್ನು ನನ್ನಿಂದ ಸಹಿಸುವುದಕ್ಕೆ ಆಗುವುದಿಲ್ಲ. ನನ್ನನ್ನು ಬಿಟ್ಟು ನೀವು ಎಲ್ಲಿಗೂ ಹೋಗಕೂಡದು. ಎಲ್ಲಿ ಹೋದರೂ ನಾನೂ ಜತೆಯಲ್ಲಿ ಬರುವವಳೆ, ಇವತ್ತಂತೂ ಬಂದೇ ಬರುತ್ತೇನೆ."

"ನಿನ್ನ ಮೊಂಡುತನದಿಂದ ಯಾವ ಕೆಲಸ ಮಾಡೋದಕ್ಕೂ ಆಗ್ತ ಇಲ್ಲ. ನಿನ್ನನ್ನು ಬಿಟ್ಟು ನಾನು ಬೇರೆ ಎಲ್ಲಿಗೆ ಹೋಗಿದ್ದೇನೆ? ನಿನ್ನ ಕೈಯಿಂದ ತಪ್ಪಿಸಿ ಕೊಳ್ಳಬೇಕಾದರೆ ನಾನು ಹೋಗಬೇಕಾದದ್ದು ಇನ್ನು ಒಂದು ಜಾಗ."

"ಅಯ್ಯೋ ಪಾಪ. ನಾನಿಲ್ಲದೆ ನೀವು ಎಲ್ಲಿಗೂ ಹೋಗೋದೆ ಇಲ್ಲ. ಅವತ್ತು ಮುನಸೀಫರ ಜತೆ ಹುಲಿ ಶಿಕಾರಿಗೆ ಹೋಗಲಿಲ್ಲವೆ ? ನವರಾತ್ರಿಯಲ್ಲಿ ಕರಡಿ ಬೆಟ್ಟಕ್ಕೆ ಹೋದಾಗ ನನ್ನನ್ನು ಕರೆದುಕೊಂಡು ಹೋದಿರಲ್ಲವೇ....?"

"ತಡಿ ತಡಿ, ಓಡಬೇಡ. ಅಲ್ಲಿಗೆಲ್ಲ ನಿನಗೆ ಬರುವುದಕ್ಕೆ ಆಗುತ್ತಿತ್ತೆ ? ಹುಲಿ ಬೇಟೆಗೆ ಹೋದಾಗ ನಾಜರರ ಸೊಂಟ ಮುರಿದುದನ್ನು ಜ್ಞಾಪಿಸಿಕೊ. ಕರಡಿ ಬೆಟ್ಟದಲ್ಲಿ ಮುನಸೀಫರ ಕಾಲು ಜಾರಿ ಮೂಳೆ ಬಾತುಕೊಂಡು ಒಂದು ತಿಂಗಳು ಆಸ್ಪತ್ರೆಯಲ್ಲಿ ಬಿದ್ದಿರಲಿಲ್ಲವೆ ? ಅದೆಲ್ಲ ಗಂಡುಪಾಳ್ಯ. ಇನ್ಯಾವ ಹೆಂಗಸೂ ಬಂದಿರಲಿಲ್ಲ. ಯಾರು ಬರುತ್ತೇನೆಂದೂ ಹೇಳುವುದಿಲ್ಲ. ಈಗದಲ್ಲ

ಯಾಕೆ ? ಇನ್ನೇನು ಸೂರಪ್ಪ ಬರುವ ಹೊತ್ತಾಯಿತು. ಅವನು ಬಂದಾಗ ಇನ್ನು ನಿನ್ನ ರಾದ್ಧಾಂತ ತೆಗೆಯಬೇಡ. ಎಲ್ಲಿ ಎದ್ದು ಒಲೆ ಹತ್ತಿಸಿ ಕಾಫಿ ಮಾಡಿ ಕೊಡುತ್ತೀಯೋ ? ಇಲ್ಲ, ನಾನೇ ಎಲೆಕ್ಟ್ರಿಕ್ ಒಲೆ ಹತ್ತಿಸಿ ಕಾಫಿ ಮಾಡಿ ಕೊಳ್ಳಲೊ. ಎಲ್ಲಿಗಾದರೂ ಹೊರಟ ದಿನ ನಿನ್ನ ಗೋಳು ಇದ್ದೇ ಇದೆ. ಇದು ಯಾವತ್ತೂ ತಪ್ಪಿದ್ದಲ್ಲ. ಎಲ್ಲ ಹೆಂಗಸರೂ ನಿನ್ನ ಹಾಗೆಯೇ ಆಡುತ್ತಾರೆಯೋ. ಈಗ ಸೂರಪ್ಪನ ಹೆಂಡತಿ ನಿನ್ನ ಹಾಗೆ ಮೊಂಡು ಹಿಡಿದು ಕೂತಿದ್ದಾಳೆಯೆ....?"

"ಸಾಕು ಸಾಕು, ಬಾಯಿ ಮುಚ್ಚಿ. ನನ್ನನ್ನು ಎಲ್ಲಿಗಾದರೂ ಕರೆದು ಕೊಂಡು ಹೋಗಬೇಕು ಅಂದರೆ ನಿಮಗೆ ಬಂದುಬಿಡುತ್ತೆ, ಎಲ್ಲೂ ಇಲ್ಲದ ಆಕ್ರೋಶ. ಸೂರಪ್ಪನ ಹೆಂಡ್ತಿ ಸಮಾಚಾರ ನನಗ್ಯಾಕೆ ? ಅವಳು ಗಂಡನ ಗುಲಾಮಳಾಗಿ ಹೆಗಲ್ಮೇಲೆ ನೊಗ ಹೇರ್ಕೊಂಡು ಮೂಗು ಬಾಯಿ ಮುಚ್ಚಿ ಕೊಂಡು ದುಡಿಯೋ ಮೂಗುಪ್ರಾಣಿ ಆಗಿರಬಹುದು. ಸೂರಪ್ಪನ್ನ ಮದುವೆ ಯಾಗಿದ್ರೆ ನಾನೂ ಹಾಗೇ ಇರ್ತಿದ್ದೆ. ನಮ್ಮಪ್ಪ ನಿಮ್ಮನ್ನ ಓದಿಸಿ ಮುನಸೀಫ ರಾಗೊ ಹಾಗೆ ಮಾಡಿ ನನ್ನನ್ನು ನಿಮಗೆ ಕೊಟ್ಟಿದ್ದು ನಾನು ನಿಮ್ಮ ಗುಲಾಮ ಳಾಗಿರೋಕಲ್ಲ. ನೀವು ಮೂರು ಹೊತ್ತೂ ಅವರ ಹೆಂಡ್ತಿ ಹೀಗೆ, ಇವರ ಹೆಂಡ್ತಿ ಹಾಗೆ ಅಂತ ನನ್ನನ್ನ ತೆಗಳಬೇಡಿ. ಸೂರಪ್ಪನ ಹೆಂಡ್ತಿ ಬೇಕಾದರೆ ಅವನ ಕಾಲಿನ ಎಕ್ಕಡವಾಗಿ ಸವೆಯಲಿ. ಸೂರಪ್ಪ ನಾನು ಕಾಣದವನಲ್ಲ. ಹೆಂಡತೀನ ಕರಕೊಂಡು ಹೋಗೋದಕ್ಕೆ ಅವನ ಹತ್ತಿರ ರೈಲು ಛಾರ್ಜು ಇಲ್ಲವೇನೊ ? ಈಗ ಬಹುಶಃ ಅವನಿಗೂ ರೈಲು ಛಾರ್ಜು ನೀವೇ ಕೊಡಬೇಕಾಗಬಹುದು."

ಕೃಷ್ಣಮೂರ್ತಿಯು ತನ್ನ ಕಣ್ಣಿಗೆ ಕಾಣದಿದ್ದರೂ, ಅವನು ಕೋಪದಿಂದ ಹಲ್ಲು ಕಡಿಯುತ್ತಿರುವುದು ಸೂರಪ್ಪನಿಗೆ ಗೊತ್ತಾಯಿತು. ಕೃಷ್ಣಮೂರ್ತಿಯು "ನೀನು ಹೆಂಗಸಲ್ಲ, ಪಿಶಾಚಿ ಹಠಮಾರಿ. ನಿನ್ನ ಕೈಯಿಂದ ತಪ್ಪಿಸಿಕೊಳ್ಳಬೇಕಾ ದರೆ ನಾನು ಸಾಯುವುದೊಂದೇ ಮಾರ್ಗ" ಎಂದು ಕಿರಚಿದನು. ಲಲಿತೆಯು ಅಷ್ಟೇ ರೊಚ್ಚಿನಿಂದ "ಯಾವು ಯಾವುದು ಹೇಗೆ ಆಗಬೇಕೋ ಹಾಗೇ ಆಗುತ್ತೆ. ಅದಕ್ಕೆ ಯಾರೇನು ಮಾಡುವುದಕ್ಕಾಗುತ್ತೆ?"ಎಂದಳು. ಕೃಷ್ಣಮೂರ್ತಿ 'ನೀನು ಹಾಳಾದೆ' ಎಂದುಕೊಂಡು ಮೇಜಿನ ಮೇಲಿದ್ದ ಪುಸ್ತಕಗಳು ಅವಳ ಮೇಲೆ ಎಸೆದು, ಹತ್ತಿಲ ಬಾಗಿಲನ್ನು ಧಡಾರನೆ ತೆರೆದುಕೊಂಡು ಹೊರಕ್ಕೆ ಹೋದನು.

ಸೂರಪ್ಪ ಅವನ ಕಣ್ಣಿಗೆ ಬೀಳದೆ ಸರ್ರನೆ ಕಾಂಪೌಂಡನ್ನು ದಾಟಿ ರೈಲ್ವೆ ಸ್ಟೇಷನ್ ಕಡೆಗೆ ನಡೆದನು.

ಸೂರಪ್ಪನ ಮನಸ್ಸು ಕೃಷ್ಣಮೂರ್ತಿಯ ಮನಸ್ಸಿಗಿಂತ ಹೆಚ್ಚು ತಳಮಳಗೊಂಡಿತ್ತು. ಅವನು ಒಂದು ಬಗೆಯ ಭ್ರಾಂತನಂತೆ ಏನನ್ನೂ ಯೋಚಿಸದೆ ರೈಲ್ವೆ ಸ್ಟೇಷನ್ ಕಡೆಗೆ ನಡೆದಿದ್ದರೂ, ರೈಲನ್ನು ಹಿಡಿಯಬೇಕೆಂಬುದು ಅವನ ಉದ್ದೇಶವಾಗಿರಲಿಲ್ಲ. ಅವನ ಮನಸ್ಸನ್ನು ಹಿಂದೆಂದೂ ಇಲ್ಲದಂತೆ ಜಗ್ಗಿಸಿ ಕುಲುಕಿಕೊಡುವಿದಂತಾಗಿತ್ತು. ಸ್ಟೇಷನ್ ಇನ್ನೂ ಹತ್ತುನೂರು ಇರುವಾಗಲೇ ರೈಲು ಹೊರಟುಬಿಟ್ಟಿತು. ಅದು ಹೊರಟ ಕೊಂಬಿನ ಕೂಗು ಅವನಿಗೆ ಕೇಳಿಸಿದರೂ ಅವನು ಅದನ್ನು ಗಮನಿಸದೆ ಕನಸಿನಲ್ಲಿರುವವನಂತೆ ಸ್ಟೇಷನ್ನನ್ನು ತಲುಪಿದನು. ಸ್ಟೇಷನ್ನಿನ ಮೂರನೆ ತರಗತಿಯ ವೇಟಿಂಗ್‌ರೂಂ ಎನ್ನಿಸಿಕೊಳ್ಳುತ್ತಿದ್ದ ಅಂಗಳದ ಒಂದು ಮೂಲೆಯಲ್ಲಿದ್ದ ಮುರುಕಲು ಬೆಂಚಿನ ಮೇಲೆ ಕುಳಿತುಬಿಟ್ಟನು. ರೈಲು ಹೊರಟುಹೋಗಿದ್ದುದರಿಂದ ಸ್ಟೇಷನ್ ನಿಶ್ಶಬ್ದವಾಗಿತ್ತು.

ಸುಮಾರು ಅರ್ಧಗಂಟೆ ಹೀಗೆ ಸೂರಪ್ಪ ಮಂಕನಂತೆ ಕುಳಿತಿದ್ದನಂತರ ಅವನ ಮನಸ್ಸು ನಿಧಾನವಾಗಿ ಬಾಹ್ಯಮುಖವಾಗತೊಡಗಿತು. 'ನಾನು ಸ್ಟೇಷನ್ನಿಗೆ ಯಾಕೆ ಬಂದೆ?' ಎಂದು ಅವನು ಯೋಚಿಸತೊಡಗಿದನು. ಕಳೆದ ಎರಡು ಗಂಟೆಗಳಲ್ಲಿ ಅವನಿಗೆ ಒಂದು ಜೀವಮಾನದ ಅನುಭವವುಂಟಾಗಿತ್ತು.

ಅವನ ಕಣ್ಣಿನಿಂದ ನಾನಾ ವಿಧವಾದ ಪರೆಗಳು ಕಳಚಿಬಿದ್ದಿದ್ದವು. "ಹೌದು, ನನ್ನ ಕಣ್ಣು ಎಲ್ಲಿ ಹೋಗಿತ್ತು?" ಎಂದು ಅವನಿಗೆ ತನ್ನಲ್ಲಿಯೇ ತಿರಸ್ಕಾರವುಂಟಾಯಿತು. 'ನನ್ನ ಹೆಂಡತಿ ಎಂತಹ ಸಾಧು ಪ್ರಾಣಿ. ಈ ಲಲಿತಳಂತೆ ಅವಳು ಇದ್ದಿದ್ದರೆ, ನಾನು ಒಂದು ಗಳಿಗೆ ಸುಖವಾಗಿರುವುದಕ್ಕೆ ಆಗುತ್ತಿತ್ತೆ? ಈ ರೈಲ್ವೆ ಕಂಬಿಗೆ ತಲೆಕೊಟ್ಟು ಸಾಯಬೇಕಾಗಿತ್ತು.' ತನ್ನ ಪ್ರಯಾಣದ ಸಿದ್ಧತೆಗಾಗಿ ತನ್ನ ಹೆಂಡತಿ ಮಾಡಿಕೊಟ್ಟ ಅನುಕೂಲಗಳನ್ನೂ ಆಕೆಯ ಶಾಂತ ಸ್ವಭಾವವನ್ನೂ ಸೂರಪ್ಪ, ಲಲಿತಳೊಂದಿಗೆ ಹೋಲಿಸಿ ನೋಡಿದನು. 'ಹೌದು, ನಾನು ಕಿರಾತ, ಮನೆಯಲ್ಲಿ ತಪಸ್ವಿನಿಯಂತೆ ಕಷ್ಟಗಳನ್ನೆಲ್ಲ ಸಹಿಸಿಕೊಂಡು ನನಗೆ ಬಲವಾಗಿ, ನನ್ನ ಗೃಹಶ್ರೀ ಆಗಿರುವ ಹೆಂಡತಿಯಿಂದ ನನಗೆ ಉಂಟಾಗಿರುವ ಸೌಭಾಗ್ಯ ನನಗೆ ಇಂದಿನವರೆಗೆ ಹೊಳೆಯಲಿಲ್ಲ.

ನಾನು ಇವತ್ತಿನವರೆಗೆ ನನ್ನ ಹೆಂಡತಿಯೊಡನೆ ಒಂದು ದಿನವಾಗಲಿ ಒಳ್ಳೆಯ ಮಾತನಾಡಲಿಲ್ಲ. ಅವಳ ಕಷ್ಟ ಸುಖ ಆಸೆಗಳಲ್ಲಿ ಭಾಗಿಯಾಗಲಿಲ್ಲ, ಆಕೆ ಕೇಳಿದ ಒಂದು ಪದಾರ್ಥವನ್ನೂ ತಂದು ಕೊಡಲಿಲ್ಲ.' ಸೂರಪ್ಪನ ದೃಷ್ಟಿ ತನ್ನ ಕೈಚೀಲದ ಕಡೆಗೂ ಅದರಲ್ಲಿದ್ದ ತಿಂಡಿಯ ಕಡೆಗೂ ಹೋಯಿತು. ಅವನ ಕಣ್ಣುಗಳಿಂದ ಫಳಫಳನೆ ನೀರು ಹರಿಯಿತು. ಸೂರಪ್ಪ, ತಪ್ಪು ಮಾಡಿದವನು ಪ್ರಾಯಶ್ಚಿತ್ತ ಮಾಡಿಕೊಳ್ಳುವಂತೆ ನಿಸ್ಸಂಕೋಚವಾಗಿ ಅತ್ತನು. ತನ್ನ ಕಣ್ಣುಗಳಲ್ಲಿ ಅಷ್ಟೊಂದು ಕೊಡ ನೀರಿರಬಹುದೆಂದು ಅವನು ಭಾವಿಸಿರಲಿಲ್ಲ. ಆ ಕಣ್ಣೀರಿನ ಪ್ರವಾಹದಿಂದ ಕೊಳೆ ಪಾಪಗಳೆಲ್ಲ ಕೊಚ್ಚಿ ಹೋಗಿ, ಅವನ ಮನಸ್ಸು ನಿರ್ಮಲವೂ ಹಗುರವೂ ಆಯಿತು. 'ನನ್ನ ಮಂಕು ಇನ್ನು ಎಂದೆಂದಿಗೂ ಹರಿಯಿತು. ನಾನು ಹಿಂದೆಂದೂ ಇಲ್ಲದಷ್ಟು ಮುಂದೆ ಸುಖಿಯಾಗಿರುತ್ತೇನೆ. ನನ್ನ ಹೆಂಡತಿಯ ಭಾಗ್ಯ ಇಂದು ನನಗೆ ತಿಳಿದುದರಿಂದ ನನ್ನಷ್ಟು ಅದೃಷ್ಟಶಾಲಿಗಳೇ ಯಾರೂ ಇಲ್ಲವೆಂದು ಅವನಿಗೆ ಸಮಾಧಾನವಾಯಿತು. ಹೆಂಡತಿಯಲ್ಲಿ ತನಗೆ ಉಂಟಾದ— ಹಿಂದಿನಿಂದಲೂ ಸುಪ್ತವಾಗಿದ್ದ ಈ ಪ್ರೇಮವನ್ನು ಆಕೆಗೆ ತೋರಿಸುವುದು ಹೇಗೆ ಎಂದು ಸೂರಪ್ಪ ಯೋಚಿಸಿದನು. ಅವನದು ಯಾವಾಗಲೂ ಸಂಕೋಚದ ಸ್ವಭಾವ. ಅವನ ದಾರಿದ್ರ್ಯ ತನ್ನ ಹೆಂಡತಿ ಮಕ್ಕಳೆದುರಿಗೆ ಸಹ ಅವನನ್ನು ಮಾತನಾಡದಂತೆ ಮಾಡಿತ್ತು. ಹೆಂಡತಿಗಾಗಲಿ ಮಕ್ಕಳಿಗಾಗಲಿ, ಯಾವ ಪದಾರ್ಥವನ್ನೂ ತೆಗೆದುಕೊಂಡು ಹೋಗಲು ಅವನ ಹತ್ತಿರ ಮೂರುಕಾಸೂ ಇರಲಿಲ್ಲ.

ಸೂರಪ್ಪ ಯೋಚಿಸುತ್ತಾ ಕುಳಿತಿರುವಾಗ ರೈಲು ಸ್ಟೇಷನ್ನಿನ ಹೊರಗಡೆಯ ಚಿಲ್ಲರೆ ಅಂಗಡಿ ತೆರೆಯಿತು. ಅಂಗಡಿಯಲ್ಲಿಟ್ಟಿದ್ದ ಹೊಸದಾಗಿ ಅರಳಿದ ಮಲ್ಲಿಗೆ ಮೊಗ್ಗಿನ ಸುಮನೋಹರ ಕೋಮಲ ಸೌರಭ ಅವನ ಮುಖದ ಮೇಲೆ ಹಾದು ಮನಸ್ಸಿನ ಮಾಲಿನ್ಯವನ್ನು ಪರಿಹರಿಸಿತು. ಮಲ್ಲಿಗೆ ಹೂವಿನ ಆ ವಾಸನೆಯಲ್ಲಿಯೇ ಒಂದು ವಿಧವಾದ ಮದವಿರುವುದು ಅವನಿಗೆ ಗೊತ್ತಾಯಿತು. ಮಲ್ಲಿಗೆ ಹೂವು ಅಷ್ಟು ವಾಸನೆಯಾಗಿರಬಹುದೆಂಬುದೇ ಅವನಿಗೆ ತಿಳಿದಿರಲಿಲ್ಲ. ಇದ್ದಕ್ಕಿದ್ದಂತೆ ಮಲ್ಲಿಗೆ ಹೂವಿನಲ್ಲಿ ತಿರುಮಲಮ್ಮನಿಗೆ ಬಹಳ ಆಸೆ ಎಂಬುದು ಅವನಿಗೆ ಹೊಳೆಯಿತು. ಮದುವೆಯಾದ ಪ್ರಾರಂಭದಲ್ಲಿ—ಈಗ ಅದು ನೂರಾರು ವರ್ಷಗಳ ಹಿಂದೆ ಎಂಬಂತೆ ಅವನಿಗೆ ತೋರಿತು

—ತಿರುಮಲಮ್ಮ ಒಂದೆರಡು ಸಲ "ಮಲ್ಲಿಗೆ ಹೂವನ್ನು ತನ್ನಿ" ಎಂದು ತನಗೆ ಹೇಳಿದುದು ಅವನ ಜ್ಞಾಪಕ್ಕೆ ಬಂದಿತು. ತನಗೆ ಬೇಕಾಗಿದ್ದ ಲಲಿತ ತನಗೆ ಸಿಕ್ಕಲಿಲ್ಲವೆಂಬ ನೋವಿನಿಂದ ಆಗ ಸೂರಪ್ಪ "ಈ ಮುಳ್ಳು ಗಿಡಕ್ಕೆ ಮಲ್ಲಿಗೆ ಹೂವು ಯಾಕೆ ?" ಎಂದು ಹೆಂಡತಿಗೆ ಕೇಳುವಂತೆಯೇ ಹೇಳಿಬಿಟ್ಟಿದ್ದನು. ಆನಂತರ ತಿರುಮಲಮ್ಮ ಮಲ್ಲಿಗೆ ಹೂವಿನ ಸುದ್ದಿ ಎತ್ತಿರಲಿಲ್ಲ.

ಇಂದು ಸ್ಟೇಷನ್ ಅಂಗಡಿಯಲ್ಲಿ ಮಲ್ಲಿಗೆ ಹೂವನ್ನು ನೋಡಿ ಸೂರಪ್ಪನಿಗೆ ಎಂದೂ ಇಲ್ಲದ ಆನಂದವಾಯಿತು. ಭಕ್ತನ ಮೊರೆಯನ್ನು ಕೇಳಿ ಭಗವಂತನು ಕರುಣಿಸಿದ ವರ ಅದು ಎಂದ ಅವನು. ಜೇಬಿನಲ್ಲಿ ಹಿಂದೆ ಯಾವಾಗಲೂ ದುಡ್ಡು ಇರುತ್ತಿರಲಿಲ್ಲ. ಆದರೆ ಅಂದು ತಿರುಮಲಮ್ಮನೇ ಕೊಟ್ಟಿದ್ದ ಹನ್ನೆರಡಾಣೆ ಇನ್ನೂ ವೆಚ್ಚವಾಗದೆ ಉಳಿದಿತ್ತು. ತಿರುಮಲಮ್ಮನಿಗಾಗಿ ಹೂವನ್ನು ಕೊಳ್ಳುವುದು ವ್ಯರ್ಥವೆಂದು ಅವನು ಹಿಂದೆ ಭಾವಿಸಿದ್ದನು. ಆದರೆ ಇಂದು ದುಡ್ಡಿಗೆ ಅದಕ್ಕಿಂತ ಉತ್ತಮವಾದ ವೆಚ್ಚ ಅವನಿಗೆ ಯಾವುದೂ ಇರಲಿಲ್ಲ. ಅಂಗಡಿಯವನು ಹೂವಿಗಾಗಿ ಕೇಳಿದ ದುಡ್ಡೂ ಅವನಿಗೆ ಬಹಳ ಕಡಿಮೆಯಾಗಿ ತೋರಿತು.

ಹೂವಿನ ಕುಚ್ಚುಗಳನ್ನು ತೆಗೆದುಕೊಂಡು ಸೂರಪ್ಪ ಮನೆಗೆ ಹಿಂದಿರುಗಿದನು. ಬೀದಿಯ ಬಾಗಿಲು ಮುಂದಕ್ಕೆ ಹಾಕಿತ್ತು. ಆದರೆ ಒಳಗಿನಿಂದ ಅಗಣಿ ಹಾಕಿರಲಿಲ್ಲ. ಬಾಗಿಲಿನಲ್ಲಿ ಕುಳಿತುಕೊಂಡು ಸೂರಪ್ಪ ಹೆಂಡತಿಗೆ ಒಂದು ಪ್ರೇಮಪತ್ರವನ್ನು ಬರೆದುಕೊಂಡನು. ಅದು ಹೊಸದಾಗಿ ಮದುವೆಯಾದ ತರುಣನ ಭಾವನಾಪೂರ್ಣವಾದ ಕಾವಿನ ಪ್ರಥಮ ಪ್ರೇಮದ ಚೆಲ್ಲಾಟವಾಗಿರಲಿಲ್ಲ. ಅದು ನೋವನ್ನು ಅನುಭವಿಸಿ, ನೋವಿನಿಂದ ಪುನೀತನಾಗಿ ನೋವಿನಿಂದ ಸುಸಂಸ್ಕೃತನಾದ ವಿವೇಕಿಯ ಆನಂದಬಾಷ್ಪಗಳಾಗಿದ್ದವು. "ನೀನು ಈ ಸಂಸಾರವೆಂಬ ಮುಳ್ಳುಗಿಡದ ಹೂವು, ಹಣ್ಣು. ನೀನಿಲ್ಲದಿದ್ದರೆ ಇದು ಸಂಸಾರವಾಗುತ್ತಿರಲಿಲ್ಲ, ಸಂಘೋರವಾಗುತ್ತಿತ್ತು. ನನಗೆ ಗೊತ್ತಿಲ್ಲದೆಯೇ ನೀನು ನನ್ನ ಮುಖ್ಯ ಬಲ. ರಬ್ಬರ್ ಚೆಂಡು ತನ್ನ ಒಳಗಿರುವ ಗಾಳಿಯ ಬಲದಿಂದ ಹೊರಗಿನ ಯಾವ ಪೆಟ್ಟು ಬಿದ್ದರೂ ಅದಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುವಂತೆ, ನಿನ್ನ ಬಲದಿಂದ ನಾನು ಈ ತಾಪತ್ರಯಗಳಿಂದ ಹುಚ್ಚನಾಗದೆ ಉಳಿದಿದ್ದೇನೆ. ಈ ಜಗತ್ತಿನಲ್ಲಿ ನನಗೆ ದೊರೆತ ನೀನು ನನ್ನ ಸಖೀ ಮಾತ್ರ

ವಲ್ಲ, ನನ್ನ ದೇವತೆಯೂ ಹೌದು. ಇಲ್ಲದಿದ್ದರೆ ತ್ಯಾಜ್ಯನಾಗಿ, ಯಾತಕ್ಕೂ ಅನರ್ಹನಾಗಿ, ಹೊಟ್ಟೆಯ ತುಂಬ ಅನ್ನ ಬಟ್ಟೆ ಸಹ ಕೊಡಲು ಅಶಕ್ತನಾದ ನನ್ನಂತಹ ದೀನನನ್ನು ನೀನು ಯಾವಾಗಲೋ ಬಿಟ್ಟು ಹೋಗಿರಬೇಕಾಗಿತ್ತು. ನೀನು ಪ್ರೇಮಮಯಿ, ಸಂಸಾರದ ಸಾರ. ಭಗವಂತ ನಿನ್ನನ್ನು ನನಗೆ ಕರುಣಿಸಿದುದರಿಂದ ನಾನು ತುಂಬ ಧನ್ಯ. ಇದು ತಿಳಿಯದೆ ಕುರುಡ ನಾಗಿದ್ದೆ."

ಹೂವಿನ ಪೊಟ್ಟಣವನ್ನೂ, ತಾನು ಬರೆದಿದ್ದ ಚೀಟಿಯನ್ನೂ ಹಿಡಿದು ಕೊಂಡು ಸೂರಪ್ಪ, ಬಾಗಿಲನ್ನು ತಳ್ಳಿ ಮನೆಯೊಳಕ್ಕೆ ಹೋದನು. ತಿರು ಮಲಮ್ಮ ಅಡಿಗೆ ಮನೆಯಲ್ಲಿ ಒಲೆಯ ಮುಂದೆ ಕುಳಿತು ತನ್ನ ಕೆಲಸದಲ್ಲಿ ತೊಡಗಿದ್ದಳು. ಒಂದು ಮಗು, "ಇಳಿ; ಬೇಡ" ಎಂದು ಅವಳು ಹೇಳು ತ್ತಿದ್ದರೂ ಕೇಳದೆ ಅವಳ ಬೆನ್ನಿನ ಮೇಲೆ ಏರಿ ಕುಳಿತಿತ್ತು. ಮತ್ತೆ ಎರಡು ಮಕ್ಕಳು ಮೂಲೆಯಲ್ಲಿ ಆಡುತ್ತಿದ್ದುವು. ಒಂದು ಮಗು ದೇವರ ಪೂಜೆ ಎಂಬ ನೆಪದಿಂದ ಗಂಟೆ ಬಾರಿಸುತ್ತಿತ್ತು. ದೇವರ ಗೂಡಿನಲ್ಲಿದ್ದ ದೇವರುಗಳಿಗೆಲ್ಲ ಪಿಟ ಪಿಟ ಎನ್ನುತ್ತಿತ್ತು. ತಿರುಮಲಮ್ಮ ನಗುತ್ತ "ಜವರಾಯ ದೇವರುಗಳನ್ನು ಒಳಗೆ ಇಡು" ಎಂದು ತನ್ನ ಪಾಡಿಗೆ ತನ್ನ ಕೆಲಸದಲ್ಲಿ ತೊಡಗಿದಳು. "ನನ್ನನ್ನು ಕಿತ್ತು ತಿನ್ನುವುದಕ್ಕೆ ಯಾಕೆ ಇಷ್ಟೊಂದು ಮಕ್ಕಳು ?" ಎಂದು ಯಾವಾಗಲೂ ಬೇಜಾರುಪಟ್ಟುಕೊಳ್ಳುತ್ತಿದ್ದ ಸೂರಪ್ಪನಿಗೆ, ತನ್ನ ಸಂಸಾರ ಇಂದು ಸುಖ ಮಯವಾದ ಸಂಸಾರವಾಗಿಯೇ ಕಂಡಿತು.

ಸೂರಪ್ಪ ಹಿಂದಿರುಗಿದುದನ್ನು ಕಂಡು ತಿರುಮಲಮ್ಮ "ಯಾಕೆ?" ಎನ್ನು ವಂತೆ ಅವನ ಕಡೆ ನೋಡಿದಳು. ಅವಳು ಮಾತನಾಡುವುದಕ್ಕೆ ಮುಂಚೆಯೇ ಸೂರಪ್ಪ ಹೂವಿನ ಪೊಟ್ಟಣವನ್ನು ಅವಳ ಕಡೆ ನೀಡಿದನು. ಅವಳು ಅದನ್ನು ಕೈಗೆ ತೆಗೆದುಕೊಂಡಳು. ಅದರಲ್ಲಿದ್ದುದು ಮಲ್ಲಿಗೆ ಮೊಗ್ಗು ಎಂದು ಅವಳಿಗೆ ವಾಸನೆಯಿಂದ ತಿಳಿದ ಕೂಡಲೇ ಅವಳ ಮುಖ ಒಂದೇ ಗಳಿಗೆ ಅರಳಿತು. ಸೂರಪ್ಪನು ಹೂವಿನ ಪೊಟ್ಟಣದಲ್ಲಿ ಇಟ್ಟಿದ್ದ ಚೀಟಿ ಕೆಳಗೆ ಬಿತ್ತು. ಆ "ಇದೇನು ?" ಎಂದಳು. ಸೂರಪ್ಪನಿಗೆ ಇದ್ದಕ್ಕಿದ್ದಂತೆ ಎಂದೂ ಇಲ್ಲದ ಸಂಕೋಚವುಂಟಾಯಿತು. ಹೆಂಡತಿಯು ಅಂದೇ ಮನೆಗೆ ಬಂದಿದ್ದರೆ ಹೇಗೋ ಹಾಗೆ ಅವನ ಮಾತುಗಳು ಗಂಟಲಿನಿಂದ ಹಿಂದಕ್ಕೆ ಸರಿಯತೊಡಗಿದವು.

ತಿರುಮಲಮ್ಮನಿಗೂ ಸಹ ಅಡಿಗೆ ಮನೆಯಲ್ಲಿ ಸೂರಪ್ಪ ಹಾಗೆ ಬಂದು ಸಂಕೋಚ ದಿಂದ ನಿಂತುದು ಹೊಸತರಹವಾಗಿ ತೋರಿತು. ತಿರುಮಲಮ್ಮನಿಗೆ, ಅವನ ಮುಖದ ಮೇಲೆ ಯಾವುದೋ ಹಿತವಾದ ಸ್ವಭಾವ ಕಂಡಿತು. ಸೂರಪ್ಪನು ಕಾಗದದ ಕಡೆ ಕೈ ತೋರಿಸಿ 'ಅದನ್ನು ಓದು' ಎಂದನು. ತಿರುಮಲಮ್ಮ ನಗುತ್ತ "ನನಗೆ ಓದುವುದಕ್ಕೆ ಬರುತ್ತದೆಯೆ ? ಬಂದಿದ್ದರೆ ಹೀಗ್ಯಾಕೆ ಒಲೆ ಊದ್ತ ಕೂತಿರುತ್ತಿದ್ದೆ. ನೀವೇ ಓದಿ ಹೇಳಿ" ಎಂದಳು. ಸೂರಪ್ಪ ಕಾಗದ ವನ್ನು ತೆಗೆದು ಬಿಚ್ಚಿ ಓದುವುದಕ್ಕೆ ಹೋದನು. ಅದು ಯಾಕೊ ಸರಿಹೋಗ ಲಿಲ್ಲ. ಅದನ್ನು ಮಡಿಸಿ ಉಗುಳು ನುಂಗುತ್ತ "ಇನ್ನೇನೂ ಇಲ್ಲ. ನಾನು ನಿನ್ನನ್ನು ಬಹಳ ಪ್ರೀತಿಸುತ್ತೇನೆ. ಅದು ಇವತ್ತಿನವರೆಗೆ ತಿಳಿದಿರಲಿಲ್ಲ. ನಿನಗೆ ನಾನು ಅರ್ಹನಲ್ಲ. ಬೇರೆ ಯಾರನ್ನಾದರೂ ಮದುವೆಯಾಗಿದ್ದರೆ ನೀನು ರಾಣಿ ಯಾಗಿರಬಹುದಾಗಿತ್ತು. ಆದರೆ ನನ್ನಂತಹ ದರಿದ್ರನ ಕೈಹಿಡಿದು...."

ತಿರುಮಲಮ್ಮ ತಡೆದು "ಅದೆಲ್ಲ ನನಗೆ ಏನು ತಿಳಿಯುತ್ತೆ ? ನೀವು ಹೇಳೋದೊಂದು ನನಗೆ ತಿಳಿಯೋದಿಲ್ಲ. ನಾನು ಪುಸ್ತಕ ಓದೋದನ್ನ ಕಲಿ ತಿದ್ದೇನೆಯೆ ? ನಾನೊಂದು ಹಳ್ಳಿ ಹೆಂಗಸು. ನನಗೇನು ಗೊತ್ತೆ ? ಮುಳ್ಳು ಗಿಡ ; ವಿದ್ಯೆ ಇಲ್ಲ, ರೂಪ ಇಲ್ಲ, ಸಂಗೀತ ಇಲ್ಲ...."

ಸೂರಪ್ಪನ ಮಧ್ಯೆ ಬಾಯಿ ಹಾಕಿ, ಮಕ್ಕಳ ಕಡೆ ನೋಡುತ್ತ "ನೀನು ಮುಳ್ಳುಗಿಡ ಇರಬಹುದು. ಆದರೆ ನೀನು ಎಷ್ಟು ಜನಕ್ಕೆ ಆಶ್ರಯವಾದ ಗಿಡ. ನಿನ್ನಲ್ಲಿ ಬಿಡುವ ಹೂವು ಹಣ್ಣುಗಳೋ...."

ತಿರುಮಲಮ್ಮ ನಾಚಿಕೆಯಿಂದ ಮಗುವನ್ನು ಸಮಾಧಾನಪಡಿಸಲು ಹೊರಟುಹೋದಳು.

೧೯೪೨ನೆಯ ಆಗಸ್ಟ್

ಇನ್‌ಸ್ಪೆಕ್ಟರ್ ಗುಂಡೂರಾಯನಿಗೆ ಸಾವಿರದ ಒಂಭೈನೂರ ಇಪ್ಪತ್ತರಿಂದಲೂ ಗಾಂಧಿ ಚಳುವಳಿ ಅನುಭವ. ೧೯೨೦, ೧೯೩೦, ೧೯೩೪, ೧೯೩೬ರ ಸತ್ಯಾಗ್ರಹಗಳಲ್ಲೆಲ್ಲ ಆತ ಯಶಸ್ವಿಯಾಗಿ ಬ್ರಿಟಿಷ್ ಪ್ರಭುಗಳ ಸೇವೆ ನಡೆಸಿ ತನ್ನ ಆಳ್ವಿಕೆಗೊಳಪಟ್ಟ ಪ್ರದೇಶದಲ್ಲಿ ಶಾಂತಿಯನ್ನೂ ಶಿಸ್ತನ್ನೂ ಸ್ಥಾಪಿಸಿದ್ದನು.

ಆದರೆ "ಭಾರತದಿಂದ ತೊಲಗಿ" ಚಳುವಳಿಯ ಪ್ರಾರಂಭದಲ್ಲಿಯೇ ರುದ್ರನ ಪ್ರಳಯಕಾಲದ ನರ್ತನವಾಯಿತು. ಅಗ್ನಿಪರ್ವತ ಕೆರಳಿದಂತೆ ಭಾರತದ ಜನಜೀವನ ಕೆರಳಿ ಜೀವದ ಹಂಗು ತೊರೆದು ಸ್ವಾತಂತ್ರ್ಯ ಸಮರದಲ್ಲಿ ಧುಮುಕಿತು. ಮಲಗಿದ್ದ ಭಾರತಸಿಂಹ ಎಚ್ಚೆತ್ತು ಕೈಕಾಲುಗಳನ್ನು ನೀಡಿ ಪಾರತಂತ್ರ್ಯ ಶೃಂಖಲೆಯನ್ನು ಕೊಡವಿತು. ತನ್ನ ಅರಿವು ಭಾರತಕ್ಕೆ ಆಯಿತು. ಹಿಂದಲ ಚಳುವಳಿಗಳಲ್ಲಿ ಸಾವಿರ, ಲಕ್ಷ ಜನರು ಸೇರಿದ್ದರು. ಆದರೆ ಈಗ ಭಾರತಕ್ಕೆ ಭಾರತವೇ "ಮಾಡು ಅಥವಾ ಮಡಿ" ಎಂದು ದಂಗೆ ಎದ್ದಿತು. ಭಾರತದ ಜನ ದನ ಮರ ಬಳ್ಳಿ ನದಿ ಬೆಟ್ಟ ಬಾನು ಬಯಲು ಸಾಗರಗಳೆಲ್ಲ "ಇನ್ನು ಪಾರತಂತ್ರ್ಯವಿಲ್ಲ" ಎಂದು ಜಪಿಸತೊಡಗಿದವು. ಪೋಲೀಸರಿಗೆ ಯಾರನ್ನು ಕಟ್ಟುವುದು, ಯಾರನ್ನು ಸೆರೆಹಿಡಿಯುವುದು, ಯಾರನ್ನು ಬಡಿವುದು ಎಂಬುದೇ ಸಮಸ್ಯೆಯಾಯಿತು. ಅವರ ಸ್ಥಿತಿ ದುರ್ಯೋಧನನ ಆಸ್ಥಾನದಲ್ಲಿ ಕೃಷ್ಣನನ್ನು ಬಂಧಿಸಲು ಹವಣಿಸಿದವರ ಸ್ಥಿತಿಯಾಯಿತು. ಪೋಲೀಸು ಇರಲಿ, ಸರ್ಕಾರದ ಯಂತ್ರವೇ ಕುಸಿದುಬಿತ್ತು.

ಇದ್ದಕ್ಕಿದ್ದಂತೆ ಪ್ರಾಂತ್ಯದ ಮುಖ್ಯ ಪಟ್ಟಣದಲ್ಲಿದ್ದ ಮದ್ದು ಗುಂಡುಗಳ ಉಗ್ರಾಣಕ್ಕೆ ಯಾರೋ ಬೆಂಕಿಯಿಟ್ಟರು. ಸರ್ಕಾರದವರು ಇಪ್ಪತ್ತುಸಾವಿರ ಮಂದಿಗಳನ್ನು ಕೊಲ್ಲುವ ಮದ್ದು ಗುಂಡುಗಳನ್ನು ಅಲ್ಲಿ ಶೇಖರಿಸಿದ್ದರು. ಅವುಗಳಿಗೆ ಬೆಂಕಿ ಬಿದ್ದದ್ದು ಅರ್ಧರಾತ್ರಿಯಲ್ಲಿ. ಅವು ಸಿಡಿದ ಶಬ್ದಕ್ಕೆ ನಗರದ ತಳಹದಿಯೇ ನಡುಗಿಹೋಯಿತು. ಕಾವಲುಗಾರರೂ ದಂಗೆಕೋರರಿಗೆ

ಸಹಾಯಕರಾಗಿದ್ದಿರಬೇಕೆಂದು ಸರ್ಕಾರ ಊಹಿಸಿತು. ಪೋಲೀಸಿನವರು ದೊಡ್ಡ ದೊಡ್ಡ ಆಪಾದನೆಗಳನ್ನು ಹೊರಿಸಿ ಒಬ್ಬನನ್ನು ದಸ್ತಗಿರಿಮಾಡಿ ಅವನ ವಿಚಾರಣೆಯನ್ನು ಸ್ಪೆಷಲ್ ಕೋರ್ಟಿನಲ್ಲಿ ಪ್ರಾರಂಭಿಸಿದರು.

ವಿಚಾರಣೆಯ ಮೊದಲ ದಿನ ಅಪರಾಧಿ ಸೆರೆಮನೆಯನ್ನು ಒಡೆದು ತಪ್ಪಿಸಿಕೊಂಡು ಹೋದನು. ಅಷ್ಟೊಂದು ಕಾವಲುಗಾರರ ಕಣ್ಣು ತಪ್ಪಿಸಿ ಆತ ಓಡಿ ಹೋದುದನ್ನು ನೋಡಿದರೆ ಕಾವಲುಗಾರರು ಅವನಿಗೆ ಸಹಾಯ ಮಾಡಿದ್ದಂತೆ ತೋರುತ್ತಿದ್ದಿತು. ಸೆರೆಯಾಳು ತಪ್ಪಿಸಿಕೊಂಡು ಹೋದುದರಿಂದ ಸರ್ಕಾರದ ಜಬರ್‌ದಸ್ತಿಗೇ ಕುಂದಕವುಂಟಾಯಿತು. ಸರ್ಕಾರ, ಭಾರತ ರಕ್ಷಣಾ ಕಾನೂನಿನ ಪ್ರಕಾರ ಸ್ಪೆಷಲ್ ನ್ಯಾಯಾಸ್ಥಾನವನ್ನು ನಿರ್ಮಿಸಿ ಉಳಿದವರಿಗೆ ಎಚ್ಚರಿಕೆಯಾಗುವಂತಹ ದಂಡನೆಯನ್ನು ವಿಧಿಸಬೇಕೆಂದು ಮಾಡಿತು. ರೈಲು ಕಂಬಿಯ ಮೇಲೆ ನಿಂತಿದ್ದವರಿಗೆ ಮರಣದಂಡನೆ ಆಗಿನ ಸಾಮಾನ್ಯ ಶಿಕ್ಷೆ. ಹೇಮು ಕಲಾನಿ ಎಂಬ ಇಪ್ಪತ್ತು ವರುಷದ ಹುಡುಗನಿಗೆ ಲಿನ್‌ಲಿತ್‌ಗೊ ಸರ್ಕಾರ ಮರಣದಂಡನೆ ವಿಧಿಸಿತು.

ಅಪರಾಧಿ ಸೆರೆಮನೆಯಿಂದ ತಪ್ಪಿಸಿಕೊಂಡು ಹೋದ ಕೆಲವೇ ದಿನಗಳಲ್ಲಿ ಪ್ರಾಂತದ ಆದ್ಯಂತ ಸರ್ಕಾರ ರೇಡಿಯೋ ಮೂಲಕ ಸುದ್ದಿ ಹೊರಡಿಸಿತು. ದೊಡ್ಡ ಚಿತ್ರಪಟದ ಹಸ್ತಪತ್ರಿಕೆಗಳನ್ನು ಪ್ರಕಟಿಸಿ ಅಪರಾಧಿಯ ಆಕಾರ, ಎತ್ತರ, ಬಣ್ಣ, ಸಾಧಾರಣ ಮುಖಚಹರೆ, ಸುಮಾರು ವಯಸ್ಸು ಇವನ್ನೆಲ್ಲ ವಿವರಿಸಿ, ಆತನನ್ನು ಹಿಡಿದು ಕೊಟ್ಟವರಿಗೆ ಐದು ಸಾವಿರ ರೂಪಾಯಿ ಬಹುಮಾನವನ್ನೂ ಕೊಡುವುದಾಗಿ ಆಸೆ ಹುಟ್ಟಿಸಿತು. ಪ್ರಾಂತ್ಯದ ಗಡಿಗಳಲ್ಲಿ ಮುಖ್ಯವಾಗಿ ಕಾವಲನ್ನು ಬಲಪಡಿಸಬೇಕೆಂದೂ ಅಂದಿನ ಸಂಜೆಯೇ ಗಡಿಯನ್ನು ಅಪರಾಧಿ ದಾಟಿ ಹೋಗುವ ಸಂಭವವೆಂದೂ, ಒಂದು ಸಲ ಗಡಿ ದಾಟಿದರೆ ಅಪರಾಧಿ ಮತ್ತೆ ಕೈಗೆ ಸಿಕ್ಕುವುದಿಲ್ಲವೆಂದೂ, ಅಪರಾಧಿ ಕಣ್ಣಿಗೆ ಬಿದ್ದು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೆ ಅವನ ಮೇಲೆ ಗುಂಡು ಹಾರಿಸಬೇಕೆಂದೂ ರೇಡಿಯೋಗಳು ಘೋರ್ಗರೆಯುತ್ತಿದ್ದುವು.

ಪ್ರಾಂತದ ಉತ್ತರ ದಿಕ್ಕಿನ ಗಡಿಯಲ್ಲಿ ದೊಡ್ಡ ಹೊಳೆ. ನದಿಯ ತೀರದಲ್ಲಿ ಉದ್ದಕ್ಕೂ ಕಾಡು ಇದ್ದುದರಿಂದ ಅಪರಾಧಿ ಕಾಡಿನಲ್ಲಿ ಅಡಗಿದ್ದು ರಾತ್ರಿ ನದಿಯನ್ನು ದಾಟಿ ತಪ್ಪಿಸಿಕೊಳ್ಳಬಹುದೆಂದು ಪೋಲೀಸಿನವರು

ಯೋಚಿಸಿ ನದಿಯ ತೀರದಲ್ಲಿ ಬಲವಾದ ಕಾವಲನ್ನು ಮೈಲಿ ಮೈಲಿಗೆ ಏರ್ಪಡಿಸಿದ್ದರು. ಆ ನದಿಯ ಮೂಲಕ ಅಪರಾಧಿ ತಪ್ಪಿಸಿಕೊಂಡು ಹೋಗ ಬಹುದೆಂದು ಊಹಿಸುವುದಕ್ಕೆ ಮತ್ತೊಂದು ಕಾರಣವೂ ಇತ್ತು. ನದಿಯ ಸೇತುವೆಯನ್ನು ಕ್ರಾಂತಿಕಾರರು ನಾಲ್ಕಾರು ದಿನಗಳ ಕೆಳಗೆ ಚಳುವಳಿ ಪ್ರಾರಂಭವಾದ ನಂತರ ಡೈನಾಮೈಟ್ ಇಟ್ಟು ಹಾರಿಸಿದ್ದರು. ಮಳೆಯಿಂದ ನದಿಯಲ್ಲಿ ಪೂರ್ಣಪ್ರವಾಹ. ಯಾವೆಡೆಯೂ ನದಿಯನ್ನು ಹಾಯಲು ಸಾಧ್ಯವಿರಲಿಲ್ಲ. ಇದ್ದಕ್ಕಿದ್ದಂತೆ ದೋಣಿಗಳನ್ನು ಒದಗಿಸಲೂ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಸೇತುವೆಗಳೂ ರೈಲುಮಾರ್ಗಗಳೂ ಸೈನ್ಯವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಿ ಭಾರತ ಸ್ವಾತಂತ್ರ್ಯ ಚಳುವಳಿ ಯನ್ನು ಮಟ್ಟ ಹಾಕಲು ಏರ್ಪಡಿಸಿದುವೆಂದು ಕ್ರಾಂತಿಕಾರರು ಭಾವಿಸಿದುದ ರಿಂದ ಆ ಪ್ರಯಾಣ ಸೌಕರ್ಯವನ್ನು ಅವರು ಕತ್ತರಿಸಿದರು. ಆದುದರಿಂದ ನದಿಯನ್ನು ದಾಟಿ ಒಂದು ಸಲ ಪಾರಾದರೆ ಸದ್ಯಕ್ಕೆ ಸುರಕ್ಷಿತವಾಗುವುದರಿಂದ ಯಾವ ಅಪರಾಧಿಯೂ ನದಿಯ ಮೂಲಕವೇ ತಪ್ಪಿಸಿಕೊಂಡು ಹೋಗುವ ನೆಂಬುದು ಸರ್ಕಾರಕ್ಕೆ ಗೊತ್ತಾಗಿದ್ದಿತು. ಸೆರೆಮನೆಯಿಂದ ತಪ್ಪಿಸಿಕೊಂಡವನು ಯಾರೇ ಆಗಿರಲಿ, ಅವನು ಆ ದಿನ ನದಿಯ ತೀರದ ಕಾಡುಗಳಲ್ಲಿ ಅಡಗಿದ್ದು ರಾತ್ರಿಯೇ ಗಡಿಯನ್ನು ದಾಟಿ ಹೋಗಬೇಕಾಗಿದ್ದಿತು. ಇಲ್ಲದಿದ್ದರೆ ಅವನಿಗೆ ಮುಂದೆ ತಪ್ಪಿಸಿಕೊಳ್ಳುವುದಕ್ಕೂ ಅವಕಾಶವಾಗುತ್ತಿರಲಿಲ್ಲ. ಮರುದಿವಸ ಸಾವಿರಾರು ಗುಪ್ತ ಪೋಲಿಸರು ಕಾಡಿನ ಅಂಗುಲವನ್ನು ಶೋಧಿಸಿ ಅಪರಾಧಿ ಎಲ್ಲಿದ್ದರೂ ಪತ್ತೆ ಹಚ್ಚುತ್ತಿದ್ದರು.

ಪೋಲೀಸ್ ಇನ್ಸ್ಪೆಕ್ಟರ್ ಗುಂಡೂರಾಯರನ್ನು ಒಂದು ಮುಖ್ಯವಾದ, ನದಿಗೆ ಇಳಿಯುವ ಸ್ಥಳದಲ್ಲಿ ಸರ್ಕಾರದವರು ಆ ರಾತ್ರಿ ಕಾವಲಿಗೆ ನೇಮಿಸಿ ದ್ದರು. ನದಿಯ ತೀರ ಉದ್ದಕ್ಕೂ ಕಡಿದಾಗಿ ವನಭರಿತವಾಗಿದ್ದುದರಿಂದ ಮಳೆ ಗಾಲದಲ್ಲಿ ಕೆಲವು ಕಡೆಗಳಲ್ಲಿ ಮಾತ್ರ ನದಿಗೆ ಇಳಿಯಲು ಅವಕಾಶವಿದ್ದಿತು. ನದಿಯ ಪಾತ್ರ ಪೂರ್ಣವಾಗಿ ತುಂಬಿ ಹೊಸ ನೀರು ವೇಗದಲ್ಲಿ ಓಡುತ್ತಿದ್ದುದ ರಿಂದ, ಅಪರಾಧಿ ಎಂತಹವನೇ ಆದರೂ ಕಾಲಿನಿಂದ ಹಾಯ್ದುಕೊಂಡಂತೂ ನದಿಯನ್ನು ದಾಟುವಂತೆ ಇರಲಿಲ್ಲ. ಸರ್ಕಾರದವರು ಪ್ರಾಂತದ ನಮ್ಮ ಕಡೆಯ ಎಲ್ಲಾ ದೋಣಿಗಳನ್ನೂ ಹರಗಲುಗಳನ್ನೂ ಸ್ವಾಧೀನಕ್ಕೆ ತೆಗೆದುಕೊಂಡಿದ್ದ

ರಿಂದ ಅಪರಾಧಿಗೆ ದೋಣಿ ಸಿಕ್ಕುವ ಸಂಭವವಿರಲಿಲ್ಲ.

ಇನ್‌ಸ್ಪೆಕ್ಟರ್ ಗುಂಡೂರಾಯ, ನದಿಯ ಪಾತ್ರಕ್ಕೆ ಇಳಿಯುವಲ್ಲಿಗೆ ಇಬ್ಬರು ಪೊಲೀಸ್ ಕಾನ್‌ಸ್ಟೇಬಲ್‌ಗಳೊಡನೆ ಆ ರಾತ್ರಿ ಮತ್ತೆ ಎಂಟು ಗಂಟೆಗೆ ಬಂದನು. ಧರಣಿಯನ್ನು ಮುಚ್ಚಿದಂತೆ ಅಂಧಕಾರ ಕವಿದಿತ್ತು. ಮಳೆಯು ತೂರಲು ಪ್ರಾರಂಭವಾಗಿತ್ತು. ಗಾಳಿ ಭರೋ ಎಂದು ಬೀಸುತ್ತಿದ್ದುದರಿಂದ ಅವರ ಕೈಯಲ್ಲಿದ್ದ ಲಾಂದ್ರ ಯಾವ ಗಳಿಗೆಗೆ ಬೇಕಾದರೂ ಹೋಗಿಬಿಡಬಹುದಾಗಿದ್ದಿತು. ಲಾಂದ್ರದ ಬೆಳಕಿನಲ್ಲಿ ಮೊದಲೇ ಭಯಂಕರವಾಗಿದ್ದ ಕತ್ತಲೆ ಇನ್ನೂ ಹೆಚ್ಚು ಭಯಂಕರವಾಗಿ ಕಾಣುತ್ತಿದ್ದಿತು. ಕತ್ತಲೆ ಮತ್ತು ತುಂತುರು ಮಳೆಯ ದೆಸೆಯಿಂದ ನದಿಯ ತೀರ ಗೊಂಡಾರಣ್ಯವಾಗಿ ಕಾಣುತ್ತಿದ್ದಿತು. ವಿಧವಿಧಗಳಾದ ಶಬ್ದಗಳು ಬರುತ್ತಿದ್ದವು.

ದಡದ ಮೇಲೆ ಒಂದು ದೊಡ್ಡ ಮರ ಬಿದ್ದಿದ್ದಿತು. ಅದಕ್ಕೂ ಒಂದು ಹಸ್ತಪ್ರತಿಯನ್ನು ಅಂಟಿಸಿದ್ದರು. ಗುಂಡೂರಾಯನು ಕಾನಸ್ಟೇಬಲ್‌ಗಳಿಗೆ "ನದಿಯ ತೀರದಲ್ಲಿ ಉದ್ದಕ್ಕೂ ಮೂರು ಮೈಲಿ ಹೋಗಿ ಅಪರಾಧಿಯ ಸೂಚನೆ ಏನಾದರೂ ಸಿಕ್ಕುವುದೇ ಎಂದು ನೋಡಿಕೊಂಡು ಬನ್ನಿ" ಎಂದನು. ಅವರು "ಈ ಕತ್ತಲೆಯಲ್ಲಿ ನಿಮ್ಮನ್ನು ಒಬ್ಬರನ್ನೇ ಹೇಗೆ ಬಿಟ್ಟು ಹೋಗುವುದು" ಎಂದರು. ತನಗೆ ಭಯವೆಂದು ಅವರು ಹೇಳುತ್ತಾರೆಂದು ಭಾವಿಸಿದುದರಿಂದ ಗುಂಡೂರಾಯನಿಗೆ ಅಸಮಾಧಾನವಾಯಿತು. "ನನಗೆ ಕತ್ತಲೆಯಾದರೆ ಭಯವಿಲ್ಲ, ಹೋಗಿ" ಎಂದು ಗದರಿಸಿದನು. ಕಾನಸ್ಟೇಬಲ್‌ಗಳು ಲಾಂದ್ರವನ್ನು ಹಿಡಿದುಕೊಂಡು ಕತ್ತಲೆಯಲ್ಲಿ ಮರೆಯಾದರು. ಅಪರಾಧಿ ಈ ದಾರಿಯಲ್ಲಿ ಬಂದರೆ ಬಹುಮಾನದ ಹಣವನ್ನು ನಮಗೂ ಹಂಚಬೇಕಾಗುವುದಲ್ಲ ಎಂದು ಇನ್‌ಸ್ಪೆಕ್ಟರ್ ನಮ್ಮನ್ನು ಹೀಗೆ ಕಣ್ಣು ತಪ್ಪಿಸುತ್ತಿದ್ದಾರೆಂದು ಅವರು ಭಾವಿಸಿಕೊಂಡರು.

ಕಾನ್‌ಸ್ಟೇಬಲ್‌ಗಳು ಮರೆಯಾದ ನಂತರ ಗುಂಡೂರಾಯನು ಯೋಚಿಸುತ್ತಾ ಬಿದ್ದಿದ್ದ ಮರದ ಬೊಡ್ಡೆಯ ಮೇಲೆ ಕುಳಿತನು. ಗುಂಡೂರಾಯನಿಗೆ ವಿಧಿ ತನ್ನ ವಿಷಯದಲ್ಲಿ ಬಹಳ ಕ್ರೂರವಾಗಿ ನಡೆದುಕೊಂಡಿದ್ದಂತೆ ತೋರಿತು. ಮೂವತ್ತು ವರುಷಗಳಿಂದ ಸರ್ಕಾರಿ ನೌಕರಿಯಲ್ಲಿದ್ದರೂ ಇನ್‌ಸ್ಪೆಕ್ಟರ್ ಹುದ್ದೆ

ಯಿಂದ ಆತ ಮೇಲಕ್ಕೆ ಏರಿರಲಿಲ್ಲ. ಈಗಿನ ಸಂದರ್ಭ ಅವನ ಭವಿಷ್ಯದ ಮಂಗಳಕ್ಕೆ ಅನುಕೂಲವಾಗಿ ತೋರಿತು. ಯೋಚಿಸಿದಂತೆ ಗುಂಡೂರಾಯ ನಿಗೆ ಸವಿಯಾಸೆಗಳು ಹೆಚ್ಚಾದುವು. ಐದು ಸಾವಿರ ರೂ. ಬಹುಮಾನ ಎಂದು ಅವನು ಚಪ್ಪರಿಸಿದನು. "ನನ್ನಂತಹ ಸಂಸಾರಿಗೆ ಐದು ಸಾವಿರ ರೂಪಾಯಿ ಸಿಕ್ಕಿದರೆ ಎಷ್ಟು ಅನುಕೂಲವಾಗುತ್ತೆ. ಈವರೆಗಿನ ಹಳೆ ಸಾಲ ಗಳೆಲ್ಲ ತೀರಿಹೋಗುತ್ತವೆ. ನನಗೆ ಈ ಅಪರಾಧಿಯನ್ನು ಕಂಡುಹಿಡಿದುದಕ್ಕೆ ಮೇಲಿನ ಹುದ್ದೆ ಸಹ ಸಿಕ್ಕಬಹುದು" ಎಂದು ಅವನು ಕನಸು ಕಾಣುತ್ತಿದ್ದನು.

ಇದ್ದಕ್ಕಿದ್ದಂತೆ ಮರದ ಹಿಂದಲ ಪೊದೆ ಶಬ್ದವಾಯಿತು. ಗುಂಡೂ ರಾಯನು ಸರ್ರನೆ ಆ ಕಡೆ ತಿರುಗಿದನು. ಕೈಯಲ್ಲಿ ಒಂದು ಏಕನಾದವನ್ನು ಹಿಡಿದುಕೊಂಡು ಕರಿಯ ಕಂಬಳಿ ಹೊದ್ದಿದ್ದ ಒಬ್ಬ ಮನುಷ್ಯನು ಪೊದೆಯಿಂದ ಹೊರಕ್ಕೆ ಬಂದು ನದಿಯ ಕಡೆಗೆ ಹೊರಟನು. ಗುಂಡೂರಾಯನು ಅವನನ್ನು ತಡೆದು "ನೀನು ಯಾರು, ನಿಲ್ಲು" ಎಂದನು. ಬಂದಿದ್ದವನು "ಸರ್ಕಾರ್, ನಾನೊಬ್ಬ ಗೋಸಾಯಿ. ಏಕನಾದವನ್ನು ನುಡಿಸುತ್ತಾ ದೇಶದ ಮೇಲೆ ತಿರುಗುತ್ತಿದ್ದೇನೆ. ನದಿಯ ತೀರದಲ್ಲಿ ಕುಳಿತು ಒಂದು ಗಳಿಗೆ ನುಡಿಸಿ ಕೊಳ್ಳೋಣ. ಈ ಬಿರುಗಾಳಿಯೇ ಶ್ರುತಿಯಾಗುತ್ತೆ ಎಂದು ಬಂದೆ" ಎಂದನು. ಗುಂಡೂರಾಯನು "ನೀನು ಗೋಸಾಯಿಯೇ ಆಗು, ದೇಸಾ ಯಿಯೇ ಆಗು. ಈ ರಾತ್ರಿ ಈ ನದಿಯ ತೀರಕ್ಕೆ ಯಾರೂ ಹೋಗ ಕೂಡದು. ಹೋದವರನ್ನು ಗುಂಡಿನಿಂದ ಸುಡುತ್ತೇನೆ" ಎಂದನು. ಬಂದಿ ದ್ದವನು "ಆಗಲಿ ಸರ್ಕಾರ್, ನಾವು ಬಡವರಾಗಿರುವುದೇ ಪಾಪ. ಬಡತನದ ಜತೆಗೆ ಇವನ್ನೆಲ್ಲ ಅನುಭವಿಸಬೇಕು" ಎಂದನು. ಗುಂಡೂರಾಯನು "ನಿನ್ನ ಹೆಸರೇನು" ಎಂದನು. ಬಂದಿದ್ದವನು "ನನ್ನ ಹೆಸರು ಭಾರತದಾಸ, ಊರು ರಾಮನಗರ. ನೀವು ಎಂದಾದರೂ ರಾಮನಗರಕ್ಕೆ ಬಂದಿದ್ದೀರಾ, ಸರ್ಕಾರ್" ಎಂದನು. ಗುಂಡೂರಾಯನು ಅವನ ಮಾತಿಗೆ ಪ್ರತ್ಯುತ್ತರವನ್ನು ಕೊಡದೆ "ಈ ಹಳ್ಳಿಗೆ ನೀನು ಯಾಕೆ ಬಂದೆ" ಎಂದನು. ಆಗಂತುಕನು "ದೇಶ ಸುತ್ತುವುದೇ ನನ್ನ ಕೆಲಸ. ಏಕನಾದವನ್ನು ನುಡಿಸುತ್ತಾ ಹೊಟ್ಟೆ ಹೊರೆ ಯುತ್ತಾ ತಿರುಗುತ್ತಿದ್ದೇನೆ. ದೇಶವನ್ನೆಲ್ಲಾ ಸುತ್ತುತ್ತಾ ಇಲ್ಲಿಗೂ ಬಂದೆ"

ಎಂದನು. ಗುಂಡೂರಾಯನು "ದೇಶವನ್ನೆಲ್ಲಾ ಸುತ್ತಿಕೊಂಡು ಬಂದಿದ್ದರೆ ಇಲ್ಲಿಂದಲೂ ಮುಂದೆ ಹೋಗು. ನಾನ್ಯಾಕೆ ತಡೆಯಲಿ ?'' ಎಂದನು.

ಆಗಂತುಕನು ಮತ್ತೆ ನದಿಯ ಕಡೆ ಹೊರಟನು. ಗುಂಡೂರಾಯನು ಕೋಪದಿಂದ ಅವನೆಡೆಗೆ ನುಗ್ಗಿ ''ನಿನಗೆ ಇವತ್ತು ನದಿಯ ಕಡೆ ಹೋಗ ಕೂಡದೆಂದು ಎಷ್ಟು ಸಲ ಹೇಳಬೇಕು ?'' ಎಂದು ಗದರಿಸಿ ಅವನ ಕಂಬಳಿಯನ್ನೂ ತಲೆಗೆ ಸುತ್ತಿದ್ದ ಬಟ್ಟೆಯನ್ನೂ ಕಿತ್ತುಕೊಂಡನು. ಆಗಂತುಕನು ''ಹೋಗಬಹುದೆಂದು ನೀವು ಹೇಳಿದುದರಿಂದ ಹೊರಟೆ, ಸರ್ಕಾರ್, ಬಡವರಾಗಿರುವುದೇ ಕಷ್ಟ. ಏಕನಾದದಲ್ಲಿ ನಿಮಗೆ ಒಂದು ಹಾಡು ಹಾಡಲೇ, ಕೇಳಿ" ಎಂದು ಏಕನಾದದ ಶ್ರುತಿಯನ್ನು ಶಬ್ದ ಮಾಡತೊಡಗಿದನು. ಗುಂಡೂರಾಯನು ಈ ಸ್ಥಳ ಬಿಟ್ಟು ಹೊರಡು" ಎಂದು ಗರ್ಜಿಸಿದನು. ಆಗಂತುಕನು "ಇಲ್ಲ, ಕೇಳಿ" ಎಂದು ಹಾಡತೊಡಗಿದನು.

ಸತ್ತ ಕಲ್ಲುಗಳ ಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯ ಮಳೆಯಲಿ ನಡೆವ ತಾಯ್ಗೆ ಹಾಕು
ಭಾರತಿಯೆ ನಮಗಿಂದು ಜೀವನದ ದೇವತೆಯು
ವಿಶ್ವರೂಪಿಣಿಯವಳು ವಿಶ್ವಮುಖಿಯೈ
ನಮ್ಮೆಲ್ಲ ರಂಗಗಳೆ ನಮ್ಮಂಬೆಯಂಗವೈ
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ

ಗುಂಡೂರಾಯನು "ನಿಲ್ಲಿಸು ನಿನ್ನ ಗದ್ದಲವನ್ನು. ಇಲ್ಲಿಂದ ತೊಲಗು ಎಂದು ಹೇಳಿದರೂ ಇಲ್ಲಿಯೇ ಯಾಕೆ ಪೊಂಚುಹಾಕುತ್ತಾ ನಿಂತಿದ್ದೀಯೆ" ಎಂದು ಕಿರುಚಿದನು.

ಆಗಂತುಕನು ಒಂದು ಘಳಿಗೆ ಸುಮ್ಮನಿದ್ದು, "ಸರ್ಕಾರ್, ನೀವು ಇಲ್ಲಿ ಯಾತಕ್ಕೆ ಕಾಯುತ್ತಿದ್ದೀರೆಂಬುದು ನನಗೆ ಗೊತ್ತು" ಎಂದನು. ಗುಂಡೂರಾಯನು "ಅದನ್ನು ಕಟ್ಟಿಕೊಂಡು ನಿನಗೇನು ? ತಲೆ ಹರಟೆ ?" ಎಂದನು. ಆಗಂತುಕನು "ಅವನನ್ನು ನಾನು ಚೆನ್ನಾಗಿ ಬಲ್ಲೆ" ಎಂದು ಹೇಳಿಕೊಂಡು ನರ್ರಾನೆ ಕಾಡಿನ ಕಡೆಗೆ ಹೊರಟನು. ಆ ಮಾತನ್ನು ಕೇಳಿ ಗುಂಡೂರಾಯನ

ದೇಹದಲ್ಲಿ ವಿದ್ಯುತ್ ಪ್ರವಹಿಸಿದಂತಾಯಿತು. ಅವನು ಆಗಂತುಕನನ್ನು "ಏನು, ಚೆನ್ನಾಗಿ ಬಲ್ಲೆಯ ? ಬಾ ಇಲ್ಲಿ. ಇಲ್ಲಿ ಬಾ" ಎಂದು ಕೈಹಿಡಿದು ಜಗ್ಗಿಸಿದನು. ಆಗಂತುಕನು "ಹಾ ಬರಬೇಕೆ" ಎಂದು ಹಿಂದಿರುಗಿದನು. ಗುಂಡೂರಾಯನು ಆತುರ ಆತುರವಾಗಿ ಅವನನ್ನು "ನೀನು ಎಲ್ಲಿ ನೋಡಿದ್ದೆ. ನೋಡುವುದಕ್ಕೆ ಹೇಗಿದಾನೆ ?" ಎಂದನು. ಆಗಂತುಕನು "ಅನೇಕ ಬಾರಿ ನೋಡಿದ್ದೆ. ಯಮನ ಹಾಗೆ ಇದ್ದಾನೆ. ಅವನ ದರ್ಶನವೇ ಯಮದರ್ಶನ. ಅವನ ಕಣ್ಣಿಗೆ ಬಿದ್ದವನಿಗೆ ಆಯುಸ್ಸು ತುಂಬಿತೆಂದೇ ಹೇಳಬೇಕು" ಎಂದನು.

ಆಗಂತುಕನ ಮಾತನ್ನು ಕೇಳುತ್ತಾ ಕೇಳುತ್ತಾ ಗುಂಡೂರಾಯನ ಮೈ ನಡುಗತೊಡಗಿತು. ಅದು ಆಗಂತುಕನಿಗೆ ತಿಳಿಯದೆ ಹೋಗಲಿಲ್ಲ. ಆತ ಮುಂದುವರಿಸಿದ. "ಈ ಬಹುಮಾನ ಐದು ಸಾವಿರದ ಬದಲು ಐವತ್ತು ಸಾವಿರ ಇದ್ದರೂ ನಿಮ್ಮ ಸ್ಥಳ ನನಗೆ ಬೇಡ ಸರ್ಕಾರ್" ಎಂದ. ಗುಂಡೂ ರಾಯನು ಬಹಳ ಕಷ್ಟದಿಂದ "ಯಾಕೆ ಹಾಗೆ ಹೇಳುತ್ತಿ" ಎಂದ. ಗೋಸಾ ಯಿಯು "ಮತ್ತೇನು ಸರ್ಕಾರ್, ಅವನ ಕಣ್ಣಿಗೆ ಬಿದ್ದರೆ ನಮ್ಮ ಕೆಲಸ ಮುಗಿಯಿತು. ಅವನು ಪ್ರವೇಶಿಸದ ಸ್ಥಳವಿಲ್ಲ. ಮುರಿಯದ ಸೆರೆಮನೆ ಯಿಲ್ಲ. ಉಪಯೋಗಿಸದ ಆಯುಧವಿಲ್ಲ. ಬೆಳಗಾಮಿನ ಪೋಲೀಸ್ ಇನ್ಸ್ ಪೈಕ್ಟರನ್ನು ಆತ ಮುಗಿಸಿದ್ದು ಒಂದು ಕಲ್ಲಿನಿಂದಲೇ. ಶೋಲಾಪುರದ ಪೋಲೀಸ್ ಸೂಪರಿಂಟೆಂಡ್‌ರನ್ನು ನದಿಯಲ್ಲಿ ಅಮುಕಿ ಮುಳುಗಿಸಿ ಉಸಿರು ಕಟ್ಟಿಸಿ...."

ಕೇಳುತ್ತ ಕೇಳುತ್ತ ಗುಂಡೂರಾಯನ ಮೈ ನಡುಗಿತು. ಬಾಯಿಂದ ಮಾತೇ ಹೊರಡಲಿಲ್ಲ. ಅವನು "ನನಗೆ ಇದೊಂದೂ ಗೊತ್ತೇ ಇಲ್ಲ" ಎಂದನು. ಗೋಸಾಯಿಯು "ನಡೆಯುವುದೆಲ್ಲ ಪತ್ರಿಕೆಗೆ ಬೀಳುವುದಿಲ್ಲ. ಸರ್ಕಾರ ಎಲ್ಲ ವನ್ನೂ ಮುಚ್ಚುತ್ತಾರೆ. ಆ ಮನುಷ್ಯ ಮಾಡುವುದನ್ನೆಲ್ಲ ಹಾಕಲು ಪ್ರಾರಂಭಿಸಿ ದರೆ ಅದಕ್ಕೇ ಎಷ್ಟು ಪತ್ರಿಕೆಗಳಿದ್ದರೂ ಸಾಲದು. ಅವನ ವೇಗ ಅಂಥಾದ್ದು. ಈಗ ನಮ್ಮ ಎದುರಿಗೆ ಕಾಣುತ್ತಾನೆ. ಎದುರು ಕಡೆಯಿಂದ ಬರುತ್ತಾನೆ ಎಂದು ನಾವು ನಿರೀಕ್ಷಿಸುತ್ತಿದ್ದರೆ ಸರ್ರನೆ ಹಿಂದಿನಿಂದ ಬಂದು ಬೀಳುತ್ತಾನೆ. ಅದಕ್ಕೇ ಬಹುಮಾನ ಐವತ್ತು ಸಾವಿರವಾದರೂ ಬೇಡವೆಂದು ನಾನು ಹೇಳಿದುದು,

ಸರ್ಕಾರ್" ಎಂದನು. ಗುಂಡೂರಾಯನು "ಇಂತಹವನನ್ನು ತಡೆಯಲು ಒಂದು ಸೈನ್ಯವೇ ಬೇಕು" ಎಂದನು.

ಗೋಸಾಯಿಯು "ಸರ್ಕಾರ್, ನಿಮ್ಮನ್ನು ನೋಡಿ ಕನಿಕರವಾಗುತ್ತೆ. ಪಾಪ ಊಟ ನಿದ್ರೆ ಇಲ್ಲದೆ, ಛಳಿ ಮಳೆಯಲ್ಲಿ ಇಲ್ಲಿ ಸಾಯಬೇಕು" ಎಂದನು. ಗುಂಡೂರಾಯನು "ಅದು ನಿತ್ಯ ನನ್ನ ಅಭ್ಯಾಸ. ಅದನ್ನು ಕಟ್ಟಿಕೊಂಡು ನಿನಗೇನು" ಎಂದನು. ಗೋಸಾಯಿಯು "ನಾನೂ ಬೇಕಾದರೆ ನಿನ್ನ ಜತೆಯಲ್ಲಿ ಕಾವಲಿರುತ್ತೇನೆ. ಆ ಮರದ ದಿಮ್ಮಿ ಒರಗಿಕೊಂಡು ಸ್ವಲ್ಪ ಕಣ್ಣು ಮುಚ್ಚಿಕೊಳ್ಳಿ, ಸರ್ಕಾರ್" ಎಂದನು. ಗುಂಡೂರಾಯನು "ಈ ರಾತ್ರಿ ನಿದ್ರೆ ಎಲ್ಲಿ. ನೀನು ಬೇಕಾದರೆ ಜತೆಯಲ್ಲಿ ಕಾವಲಿರಬಹುದು. ನಿನಗೆ ಆತ ಚೆನ್ನಾಗಿ ಗೊತ್ತೆ? ಬಹುಮಾನದಲ್ಲಿ ನೀನೂ ಅರ್ಧವನ್ನು ಕೇಳುವುದಿಲ್ಲ ತಾನೆ?" ಎಂದನು. ಗೋಸಾಯಿಯು ನಗುತ್ತಾ "ನನಗೆ ಬಹುಮಾನ ಯಾಕೆ ಸರ್ಕಾರ್. ಹಣವನ್ನು ತೆಗೆದುಕೊಂಡು ನಾನೇನು ಮಾಡಲಿ? ಒಂದು ತುತ್ತು ಅನ್ನ ಸಿಕ್ಕಿದರೆ ನನಗೆ ಸಾಕು.

"ಮನೇಲಿ ಮುದ್ದೆ ಗುಡೀಲಿ ನಿದ್ದೆ
ಇದ್ದರೆ ಇದ್ದೆ ಎದ್ದರೆ ಎದ್ದೆ"

ಎಂದನು. ಗುಂಡುರಾಯನೂ "ಹಾಗಾದರೆ ನೀನೂ ನನ್ನ ಜತೆ ಕಾವಲಿರು" ಎಂದನು.

ಇನ್‌ಸ್ಪೆಕ್ಟರ್ ಗುಂಡೂರಾಯನೂ ಗೋಸಾಯಿಯೂ ಮರದ ದಿಮ್ಮಿ ಒರಗಿಕೊಂಡು ಕಾವಲು ಕುಳಿತರು. ಒಂದು ಘಳಿಗೆಯ ನಂತರ ಗೋಸಾಯಿಯು "ಸರ್ಕಾರ್, ಸಾವಿಬ್ಬರೇ ಹೀಗೆ ಅಸಹಾಯಕರಾಗಿ ಕುಳಿತಿರುವಾಗ ಅವನು ಎಲ್ಲಿಯಾದರೂ ಬಂದು ಮೇಲೆ ಬಿದ್ದರೋ ಎಂದು ನಾನು ನಡುಗುತ್ತಿದ್ದೇನೆ" ಎಂದನು. ಗುಂಡೂರಾಯನು "ಜೋಪಾನ, ನದಿಯ ಕಡೆ ಇಟ್ಟ ದೃಷ್ಟಿ ತೆಗೆಯಬೇಡ" ಎಂದನು. ಗೋಸಾಯಿಯು ಮೆಲ್ಲನೆ ಏಕನಾದವನ್ನು ಪ್ರಾರಂಭಿಸಿದನು.

"ಜಯಜಯ ಭಾರತ ಜಗದಂಬಾ
ನಮಿಸೆವು ಕುವರರು ಹರಸಮ್ಮಾ
ಹರಸುತೆ ರಂಗಕೆ ಕಳುಹಮ್ಮಾ
ಧರೆಯರು ನೋಡಲಿ ಅಚ್ಚರಿಯ"

ಗುಂಡೂರಾಯನು "ಹುಷ್. ಅದಕ್ಕೆಲ್ಲ ಈಗ ಕಾಲವಿಲ್ಲ. ಸುಮ್ಮನಿರು" ಎಂದನು. ಗೋಸಾಯಿಯು ಕೇಳದವನಂತೆ,

"ತನು ಮನ ಧನ ಕಾಣಿಕೆಗಳನು
ಘನತರ ಪ್ರೇಮದುತ್ಸಾಹವನು
ಜನನಿ ನಿನ್ನಯ ಯಶ ಬೆಳಗಲ್ಕೆ
ನಿನಗೆಂದರ್ಪಿಸೆ ತಂದಿಹೆವು"

ಗುಂಡೂರಾಯನು ಕೋಪದಿಂದ "ನಿನ್ನ ಗದ್ದಲ ನಿಲ್ಲಿಸು. ಇಲ್ಲದಿದ್ದರೆ ಏಕನಾದವನ್ನು ಕಿತ್ತು ಹೊಳೆಗೆ ಎಸೆದುಬಿಡುತ್ತೇನೆ" ಎಂದನು. ಗೋಸಾಯಿಯು ಮೃದುವಾದ ಧ್ವನಿಯಲ್ಲಿ "ಬಿಡಿ ಸರ್ಕಾರ್. ಹಾಡಿದ್ದಿದ್ದರೆ ಸ್ವಲ್ಪ ಮನಸ್ಸಿನ ಸಂಕಟ ಕಡಿಮೆಯಾಗುತ್ತಿತ್ತು. ದುಃಖವನ್ನು ಮರೆಸಲು ಹಾಡಿಗಿಂತ ಬೇರೆ ಔಷಧಿಯಿಲ್ಲ" ಎಂದು ಸುಮ್ಮನಾದನು. ಗೋಸಾಯಿಯ ಧ್ವನಿಯ ದೀನತೆಯಿಂದ ಗುಂಡೂರಾಯನ ಹೃದಯವು ಕರಗಿತು. ಆತನು ನಿನಗೆ ಸಮಾಧಾನವಾಗುವುದಾದರೆ ಬೇಕಾದರೆ ಹಾಡಿಕೊ" ಎಂದನು. ಗೋಸಾಯಿಯು ಮುಂದುವರಿಸಿದನು.

"ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ
ಕೊರಕಲಿನ ಬಿಸಿಲ ಬೇಗುದಿಯ ಬಿರುಕಿನಲಿ ಮುಳ್ಳೆಡೆಯ
ಕಲ್ಲು ಹೂವಿಡಿದರೆಯ ಮೇಲೆ ಕುಳಿತಿದ್ದ ಳಾತಾಯಿ,
ಕೈಮೇಲೆ ತಲೆಯೂರಿ ಅಳಲಿನಾಳದಲಿ !
ಯಾರಮ್ಮ, ನೀ ತಾಯಿ ಏತಕಿಂತೊಬ್ಬಳೇ ಕುಳಿತೆ ಕಾಡಿನಲಿ !
ಏಕೆ ಮೊಗಬಾಡಿಹುದು ಕಂದಿಹುದು ನೊಂದಿಹುದು ಕಾಂತಿಗುಂದಿಹುದು"
"ಕೇಳಣ್ಣ, ನಾನೊಬ್ಬ ಹೆಳೆಯ ಮುತ್ತೈದೆ. ಹಿರಿದಾಗಿ ಬಾಳಿದವಳೊಮ್ಮೆ"

ಗುಂಡೂರಾಯನು "ಯಾಕೆ ಮಧ್ಯದ ಸಾಲುಗಳು ಬಿಟ್ಟೆ. 'ಕಂಬನಿಗಳೂರುತಿಹ ಕಳವಳದ ಕೂರ್ಮೆ ನಡುಗಿಪ ನುಡಿಯ ಕೇಳ್' ಅಲ್ಲವೇ" ಎಂದನು.

ಗೋಸಾಯಿಯು ಆಶ್ಚರ್ಯವನ್ನು ಸಟಿಸುತ್ತಾ "ನೀವೆಲ್ಲಿ ಈ ಹಾಡನ್ನು ಕಲಿತಿರಿ, ಸರ್ಕಾರ್" ಎಂದನು. ಗುಂಡೂರಾಯನು "ನಾನೂ ಅದನ್ನು ಒಂದು ಕಾಲದಲ್ಲಿ ಉತ್ಸಾಹದಿಂದ ಹಾಡುತ್ತಿದ್ದೆ" ಎಂದನು. ಗೋಸಾಯಿಯು "ಸರ್ಕಾರ್, ನಿಮ್ಮನ್ನು ನೋಡಿದರೆ ಹಾಗೆ ಕಾಣುತ್ತೆ. ನಿಮ್ಮ ಯುವ್ವನದಲ್ಲಿ ನೀವು ನೂರಾರು ದೇಶಪ್ರೇಮಿಗಳನ್ನು ನಿಮ್ಮ ಸುತ್ತಾ ಕೂರಿಸಿಕೊಂಡು ಹೀಗೆ ಹಾಡುತ್ತಿದ್ದಿರಬೇಕು. ಈ ಜಗತ್ತು ವಿಚಿತ್ರ. ಇಂದು, ನಿಮ್ಮ ಸುತ್ತ ಕುಳಿತಿದ್ದ ಆ ಯುವಕರ ಪೈಕಿ ಒಬ್ಬನನ್ನು ಸೆರೆಹಿಡಿಯಲು ನೀವು ಇಲ್ಲಿ ಕುಳಿತಿರಬಹುದು" ಎಂದನು. ಗುಂಡೂರಾಯನು "ಅದೂ ನಿಜವೇ" ಎಂದನು. ಗೋಸಾಯಿಯು "ಸರ್ಕಾರ್, ನೀವು ಹಾಗೆ ಹಾಡುತ್ತಾ ಕುಳಿತಿರುವಾಗ ನಿಮ್ಮ ಜತೆಗಾರರ್‍ಯಾರಾದರೂ ದೇಶದ ಸ್ವಾತಂತ್ರ್ಯಕ್ಕಾಗಿ ಒಂದು ಹಂಚಿಕೆಯನ್ನು ಸಾಧಿಸಲು ನಿಮ್ಮನ್ನೇ ಮುಂದಾಳನ್ನಾಗಿ ಕೇಳಿದ್ದರೆ ನೀವು ಆ ಗುಂಪಿಗೆ ನಾಯಕರಾಗುತ್ತಿರಲಿಲ್ಲವೆ ?" ಎಂದನು.

ಗುಂಡೂರಾಯನು ಉತ್ಸಾಹದಿಂದ "ಹೌದು, ಆಗುತ್ತಿದ್ದೆ. ಆಗ ನನಗೆ ಹುರುಪು ವಿಶೇಷವಾಗಿತ್ತು. ಯಾವುದಕ್ಕೂ ಹೆದರುತ್ತಿರಲಿಲ್ಲ. ಇಲ್ಲಿ ಕೇಳು, ನನಗೆ ಇಷ್ಟು ವಿವೇಕವೂ ವ್ಯವಹಾರಜ್ಞಾನವೂ ಹೆಂಡತಿ ಮಕ್ಕಳೂ ಇಲ್ಲದಿದ್ದರೆ ಪ್ರಾಯಶಃ ಇಂದು ನಾನೇ ಆ ನಾಯಕನಾಗಿ ಕಾನೂನನ್ನು ಮುರಿದು ಸೆರೆಮನೆ ಒಡೆದು ತಪ್ಪಿಸಿಕೊಂಡು ಹೋಗಲು ಇಲ್ಲಿಗೆ ಬರುತ್ತಿದ್ದೆ. ಈಗ ಅಪರಾಧಿಯಾಗಿರುವವನೇ ಪ್ರಾಯಶಃ ಇಲ್ಲಿ ಪೋಲಿಸ್ ಇನ್‌ಸ್ಪೆಕ್ಟರ್ ಆಗಿ ನನ್ನನ್ನು ಹಿಡಿಯಲು ಕಾಯುತ್ತಿದ್ದನೇನೋ ? ಯಾರು ಬಲ್ಲರು. ನೀನು ಹೇಳಿದಂತೆ ಈ ಜಗತ್ತು ವಿಚಿತ್ರ" ಎಂದು ನಿಟ್ಟುಸಿರು ಬಿಟ್ಟನು.

ಗೋಸಾಯಿಯು "ಸರ್ಕಾರ್, ನೀವು ಜನರ ಪಕ್ಷವೇ ಹೊರತು ಸರ್ಕಾರದ ಪಕ್ಷವಲ್ಲವೆಂದು ನನಗೆ ತೋರುತ್ತೆ" ಎಂದನು. ಗುಂಡೂರಾಯನು "ಹಿಂದೆ ಹಾಗೆ ಇದ್ದಿರಬಹುದು. ಇಂದು ಸಾಧ್ಯವಿಲ್ಲ" ಎಂದನು. ಗೋಸಾಯಿಯು "ಸರ್ಕಾರ್, ಈ ಖಾಕಿ ಅರಿವೆ, ಬೆಲ್ಟು ಧರಿಸಿದ್ದರೂ ಆ ಸ್ವಾತಂತ್ರ್ಯವೀರರನ್ನೇ ಅನುಸರಿಸಿದ್ದರೆ ಒಳ್ಳೆಯದಾಗುತ್ತಿದ್ದಿತೆಂದು ನಿಮಗೆ ಇಂದೂ ಒಂದೊಂದು ಸಲ ತೋರುವುದಿಲ್ಲವೆ?" ಎಂದನು. ಗುಂಡೂರಾಯನು "ನನಗೆ ಏನು ತೋರುತ್ತೋ ಅದನ್ನು ಕಟ್ಟಿಕೊಂಡು ನಿನಗೇನು ?" ಎಂದು ಗದರಿಸಿದನು. ಗೋಸಾಯಿಯು

"ಸರ್ಕಾರ್, ನೀವು ಈಗಲೂ ಸ್ವಾತಂತ್ರ್ಯಯೋಧರ ಪಕ್ಷವೇ ಎಂದು ನನಗೆ ತೋರುತ್ತದೆ" ಎಂದನು. ಗುಂಡೂರಾಯನು "ಹಾಗೆಲ್ಲ ಮಾತನಾಡಬೇಡ. ನನ್ನ ಕರ್ತವ್ಯಗಳು ನನಗೆ ಗೊತ್ತು. ನಾನು ಅವನ್ನು ನಡೆಸಬೇಕು" ಎಂದನು.

ಬರುಬರುತ್ತಾ ಅಂಧಕಾರ ಹೆಚ್ಚುತ್ತಲೇ ಇತ್ತು. ಮುಂದಲ ಹೆಜ್ಜೆ ಸಹ ಕಾಣುತ್ತಿರಲಿಲ್ಲ. ಆ ವೇಳೆಯಲ್ಲಿ ನದಿಯಲ್ಲಿ ಏನೋ ಶಬ್ದವಾಯಿತು. ಗುಂಡೂರಾಯನು ಬೆಚ್ಚಿಬಿದ್ದು "ಹಾ, ಏನು ಸದ್ದು. ಅದೊಂದು ದೋಣಿ. ಹುಟ್ಟೆಯ ಶಬ್ದ ಕೇಳುತ್ತಿದೆ" ಎಂದುಕೊಂಡು ನದಿಯ ಕಡೆ ನಾಲ್ಕು ಹೆಜ್ಜೆ ಇಳಿದನು. ಗೋಸಾಯಿಯು ತನ್ನ ಹಾಡನ್ನು ಮುಂದುವರಿಸಿದನು.

"ನೋಡದೋ ನೋಡಲ್ಲಿ ದರ್ಪರಥದಡಿಯಲ್ಲಿ
ಹೊರಳುತಿರುವಳು ತಾಯಿ ನೆತ್ತರಿನ ಪುಡಿಯಲ್ಲಿ
ಬಾಳನೊರೆಯಿಂದ ಹಿರಿ ನುಗ್ಗು ನಡೆ ಕಟ್ಟಿಹರಿ
ತಡೆಯೆ ಬಂದವರ ಇರಿ ಒಲಿಯುವಳು ಜಯದ ಸಿರಿ"

ಗುಂಡೂರಾಯನು "ನಿಲ್ಲಿಸು, ನಿನ್ನ ಗದ್ದಲ" ಎಂದು ಕೂಗಿದನು. ಗೋಸಾಯಿಯು ಇನ್ನೂ ಗಟ್ಟಿಯಾಗಿ ಹಾಡಿದನು.

"ತಡೆವ ಧೀರರಾರು ಬನ್ನಿ, ಕುಡಿವ ವೀರರಾರು ಬನ್ನಿ ಬನ್ನಿ ಮುಂದಕೆ
ಈಜಿ ಈಜಿ ದಡವ ಸೇರಿ ಬಲುವೆಯುಳ್ಳೊಡೆ
ಬೆದರುವೊಡೆ ಬೆಚ್ಚುವೊಡೆ ಮುಳುಗಿ ಸಾಯಿರಿ."

ಗುಂಡೂರಾಯನು ಕೋಪದಿಂದ "ನಿಲ್ಲಿಸು, ಇಲ್ಲದಿದ್ದರೆ ನಿನ್ನನ್ನು ಅರೆಸ್ಟ್ ಮಾಡುತ್ತೇನೆ" ಎಂದು ಕಿರುಚಿದನು. ಅದೇ ವೇಳೆಯಲ್ಲಿ ನದಿಯ ಮಧ್ಯದಿಂದ

"ಈಜಿ ಈಜಿ ದಡವ ಸೇರಿ ಬಲುವೆಯುಳ್ಳೊಡೆ
ಬೆದರುವೊಡೆ ಬೆಚ್ಚುವೊಡೆ ಮುಳುಗಿ ಸಾಯಿರಿ"

ಎಂಬ ಧ್ವನಿ ಕೇಳಿಸಿತು. ಒಂದು ಶಿಳ್ಳಿನ ಧ್ವನಿ ಕೇಳಿಸಿತು.

ಗುಂಡೂರಾಯನು ಗಾಬರಿಯಿಂದ ಗೋಸಾಯಿಗೂ ನದಿಗೂ ನಡುವೆ ನಿಂತನು. "ನೀನು ಯಾರು ? ನೀನು ಬರಿಯ ಗೋಸಾಯಿಯಲ್ಲ" ಎಂದನು. ಗೋಸಾಯಿಯ ಮರದ ದಿಮ್ಮಿಗೆ ಅಂಟಿಸಿದ್ದ ಹಸ್ತಪತ್ರಿಕೆಯ ಕಡೆ ತೋರಿಸಿ "ಈ ಚೀಟಿಯೇ ಹೇಳುತ್ತೆ" ಎಂದನು. ಗುಂಡೂರಾಯನು "ನಾನು ಈ ರಾತ್ರಿ

ಅರೆಸ್ಟ್ ಮಾಡಲು ಕಾಯುತ್ತಿರುವವನು ನೀನೆಯೆ" ಎಂದನು. ಗೋಸಾಯಿಯು "ಹೌದು, ನನ್ನನ್ನು ಹಿಡಿದರೆ ಐದು ಸಾವಿರ ರೂಪಾಯಿ ಬಹುಮಾನ ಸಿಕ್ಕುತ್ತೆ. ನದಿಯಲ್ಲಿ ನನ್ನ ಮಿತ್ರನೊಬ್ಬ ದೋಣಿಯೊಂದಿಗೆ ಸಿದ್ಧನಾಗಿದ್ದಾನೆ. ಅವನ ಜೊತೆಯಲ್ಲಿ ಹೋದರೆ ಸುರಕ್ಷಿತವಾದ ಸ್ಥಳಕ್ಕೆ ಸೇರಬಹುದು" ಎಂದನು. ಗುಂಡೂರಾಯನು "ಬಹಳ ಅನ್ಯಾಯ, ಬಹಳ ಅನ್ಯಾಯ. ನೀನು ನನ್ನನ್ನು ಚೆನ್ನಾಗಿ ಮೋಸಗೊಳಿಸಿದೆ" ಎಂದನು.

ಗೋಸಾಯಿಯು "ನಾನು ಸ್ವಾತಂತ್ರ್ಯ ಯೋಧ. ನನ್ನ ತಲೆಯ ಮೇಲೆ ಐದು ಸಾವಿರ ರೂಪಾಯಿ ಬಹುಮಾನವಿದೆ" ಎಂದನು. ಗುಂಡೂರಾಯನು "ಬಹಳ ಅನ್ಯಾಯ" ಎಂದನು. ಗೋಸಾಯಿಯು "ನನ್ನನ್ನು ಬಿಡುತ್ತೀರೋ ಅಥವಾ ನಾನೇ ಬಲಾತ್ಕರಿಸಲೇಬೇಕೊ" ಎಂದನು. ಗುಂಡೂರಾಯನು "ನಾನು ಇರುವುದು ಪೋಲಿಸಿನಲ್ಲಿ, ಬಿಡುವುದಕ್ಕಾಗುವುದಿಲ್ಲ" ಎಂದು ಹೇಳಿ ಗೋಸಾಯಿಯನ್ನು ಹಿಡಿದೇಕೊಂಡನು. ಗೋಸಾಯಿಯು "ಮಾತಿನಿಂದ ನಿನ್ನನ್ನು ಒಲಿಸಿಕೊಳ್ಳಬೇಕೆಂದು ಮಾಡಿದ್ದೆ. ಆಗಲಿಲ್ಲ" ಎಂದು ಹೇಳಿ ತನ್ನ ಎದೆಯಲ್ಲಿದ್ದ ಪಿಸ್ತೂಲಿಗೆ ಕೈ ಹಾಕಿದನು.

ಆ ವೇಳೆಗೆ ಕಾವಲು ಹೋಗಿದ್ದ ಪೋಲಿಸ್ ಕಾನ್‌ಸ್ಟೆಬಲ್‌ಗಳು ಮಾತನಾಡುತ್ತ ಬರುವ ಧ್ವನಿ ಕೇಳಿಸಿತು. ಗೋಸಾಯಿಯು "ಅದೇನು ಸದ್ದು" ಎಂದನು. ಗುಂಡೂರಾಯನು "ನನ್ನ ಕಾನ್‌ಸ್ಟೆಬಲ್‌ಗಳು ಬರುತ್ತಿದ್ದಾರೆ" ಎಂದು ಅವರ ಕಡೆ ನೋಡತೊಡಗಿದನು. ಗೋಸಾಯಿಯು "ನನ್ನನ್ನು ಬಿಟ್ಟು ಕೊಡಬೇಡ....ಸ್ವಾತಂತ್ರ್ಯ ಯೋಧ" ಎಂದು ಹೇಳಿ ಮರದ ದಿಮ್ಮಿಯ ಹಿಂದೆ ಅವಿತುಕೊಂಡನು.

ಹೋಗಿದ್ದ ಇಬ್ಬರು ಕಾನ್‌ಸ್ಟೆಬಲ್‌ಗಳೂ ಕೈಯಲ್ಲಿ ಲಾಂದ್ರವನ್ನು ಹಿಡಿದುಕೊಂಡು ಬಂದರು. "ನಮಗೂ ಹುಡುಕಿ ಸಾಕಾಯಿತು. ಅವನು ಈ ಕಾಡಿನಲ್ಲಿ ಎಲ್ಲಿ ಅವಿತುಕೊಂಡಿದ್ದಾನೊ" ಎಂದರು. ಗುಂಡೂರಾಯನು ಏಕನಾದವನ್ನೂ ಕಂಬಳಿಯನ್ನೂ ಮೆತ್ತಗೆ ತಳ್ಳಿದನು. ಕಾನ್‌ಸ್ಟೆಬಲ್‌ಗಳು "ಇಲ್ಲಿ ಯಾರಾದರೂ ಬಂದರೆ ?" ಎಂದು ಕೇಳಿದರು. ಗುಂಡೂರಾಯನು ಒಂದು ಘಳಿಗೆ ಯೋಚಿಸಿ "ಇಲ್ಲ" ಎಂದನು. ಪೋಲಿಸಿನವರು "ಮತ್ತೆ ಒಬ್ಬರು ಬರಲಿಲ್ಲವೆ ?" ಎಂದರು. ಗುಂಡೂರಾಯನು "ಯಾರೂ ಇಲ್ಲ" ಎಂದು ಮತ್ತೆ

ಖಂಡಿತವಾಗಿ ಹೇಳಿದನು. ಕಾನ್‌ಸ್ಟೆಬಲ್‌ಗಳು "ಇಲ್ಲಿಯೇ ರಾತ್ರಿ ಕಾವಲಿರೋಣ ಎಂದು ಬಂದೆವು" ಎಂದರು. ಗುಂಡೂರಾಯನು "ಬೇಕಿಲ್ಲ. ನೀವು ಹೋಗಿ" ಎಂದನು. ಕಾನ್‌ಸ್ಟೆಬಲ್‌ರು "ಇಲ್ಲಿಗೆ ಬನ್ನಿ. ಕಾವಲಿರಬೇಕೆಂದು ನೊದಲು ಹೇಳಿದ್ದಿರಲ್ಲ" ಎಂದರು. ಗುಂಡೂರಾಯ–"ಬೇಕಿಲ್ಲ. ನೀವು ಹೀಗೆ ಕೂಗಾಡುತ್ತಿದ್ದರೆ ಈ ದಾರಿಯಲ್ಲಿ ಯಾರು ತಾನೆ ಬರುತ್ತಾರೆ ? ಇಲ್ಲಿ ಸದ್ದಿಲ್ಲದೆ ಇದ್ದರೆ ವಾಸಿ" ಎಂದನು.

ಕಾನ್‌ಸ್ಟೆಬಲ್‌ಗಳು ಲಾಂದ್ರವನ್ನು ಮರದ ದಿಮ್ಮಿಯ ಮೇಲೆ ಇಡಲು ಹೋದರು. ಗುಂಡೂರಾಯನು "ಲಾಂದ್ರ ಬೇಡ. ಈಚೆಗೆ ತೆಗೆದುಕೊಂಡು ಬಾ" ಎಂದನು. ಕಾನ್‌ಸ್ಟೆಬಲ್ "ಈ ಕತ್ತಲೆಯಲ್ಲಿ ಲಾಂದ್ರ ಇರಬೇಕು. ಲಾಂದ್ರ ಇದ್ದರೆ ಒಬ್ಬ ಮನುಷ್ಯ ಜತೆಗೆ ಇದ್ದಂತೆ. ಲಾಂದ್ರವನ್ನು ಆಚೆ ಈಚೆ ತೋರಿಸುತ್ತಾ ಅದರ ಹೊಳಪನ್ನು ಕತ್ತಲೆಯಾದೆಡೆಗೆಲ್ಲಾ ಬಿಡುತ್ತಿದ್ದರೆ ಮನಸ್ಸಿಗೆ ಎಷ್ಟೋ ಧೈರ್ಯವಾಗುತ್ತೆ" ಎಂದುಕೊಂಡು ಅಲ್ಲಿ ಇಲ್ಲಿ ಮರದ ದಿಮ್ಮಿ ಮೇಲೆ ಬಿಟ್ಟನು. ಗುಂಡೂರಾಯನು ಕೋಪದಿಂದ "ಲಾಂದ್ರವನ್ನೂ ತೆಗೆದುಕೊಂಡು ಆಚೆಗೆ ತೊಲಗು" ಎಂದು ಗರ್ಜಿಸಿದನು. ಕಾನಸ್ಟೆಬಲ್‌ಗಳು ಹೊರಟುಹೋದರು.

* * * *

ಎರಡು ಘಳಿಗೆಯ ನಂತರ ಗೋಸಾಯಿ ಮರದ ಹಿಂದಲಿಂದ ಬಂದನು. ಗುಂಡೂರಾಯನು "ಇನ್ನು ಯಾಕೆ ಇಲ್ಲಿ ನಿಂತೆ ?"ಎಂದನು.ಗೋಸಾಯಿಯು "ಎಲ್ಲಿ ನನ್ನ ಕಂಬಳಿ. ನಾನು ಚಳಿಯಲ್ಲಿ ಸಾಯಬೇಕೆ?" ಎಂದನು. ಗುಂಡೂರಾಯನು ಕಂಬಳಿಯನ್ನು ಕೊಟ್ಟನು. ಗೋಸಾಯಿಯು ನದಿಯ ಕಡೆಗೆ ಹೋಗುತ್ತಾ "ಮಿತ್ರನೆ, ಬಹಳ ವಂದನೆ. ಈ ಉಪಕಾರವನ್ನು ಮರೆಯುವುದಿಲ್ಲ. ನಿನಗೂ ನನ್ನಿಂದ ಪ್ರತ್ಯುಪಕಾರವಾಗಬಹುದು, ದೊಡ್ಡವರು—ಬಿದ್ದಾಗ, ಬಡವರು ಎದ್ದಾಗ—ಎಂದುಕೊಂಡು ನದಿಯ ಕಡೆಗೆ ಹೋಗಿ ದೋಣಿಯಲ್ಲಿ ಮರೆಯಾದನು.

ಗುಂಡೂರಾಯನ ದೃಷ್ಟಿ ಏಕನಾದದ ಮೇಲೆ ಬಿತ್ತು. ಆವನು ಆದನ್ನು ತೆಗೆದುಕೊಂಡು

"ಈಜಿ ಈಜಿ ದಡವ ಸೇರಿ ಬಲುಮೆಯುಳ್ಳೊಡೆ
ಬೆದರುವೊಡೆ ಬೆಚ್ಚುವೊಡೆ ಮುಳುಗಿ ಸಾಯಿರಿ"

ಎಂದು ಹಾಡಿದನು. ತನ್ನಷ್ಟಕ್ಕೆ ತಾನು "ನಾನು ನಿಜವಾಗಿಯೂ ಮೂರ್ಖನೇ ಇರಬೇಕು" ಎಂದುಕೊಂಡನು.

ಪುಂಗಿ

೧

ರೈಲು ಬೆಂಗಳೂರು ಸ್ಟೇಷನ್ ಫ್ಲಾಟ್‌ಫಾರಂನಿಂದ ಹೊರಡುವುದಕ್ಕೆ ಇನ್ನೂ ಬಹಳ ಹೊತ್ತು ಇತ್ತು. ಸ್ಟೇಷನ್‌ನಲ್ಲಿ ತಾನು ಬಹಳ ಹೊತ್ತು ಕಳೆಯಬೇಕಾಗುವುದೆಂಬುದು ರಂಗಸ್ವಾಮಿಗೆ ಗೊತ್ತಿತ್ತು. ಆದರೂ ಅವನು ಕಾಲೇಜು ಹಾಸ್ಟಲ್ ಬಿಟ್ಟು, ಎಷ್ಟು ಬೇಗ ಊರಿನ ಕಡೆಗೆ ಹೊರಡುತ್ತೇನೆಯೋ ಎಂಬ ಕಾತರದಿಂದ, ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಹಾಕಿದ್ದ ಬೆಂಚಿನ ಮೇಲೆ ಬಂದು ಕುಳಿತುದರಿಂದಲೇ ಅವನಿಗೆ ಬೆಂಗಳೂರು ಬಿಡುಗಡೆಯಾದಂತಾಗಿ, ಬೆಂಗಳೂರಿನ ತೀವ್ರ ಜೀವನದ ಗತಿ ಮಂದವಾಗಿ ತನ್ನ ಗ್ರಾಮವಾದ ಹರಿಹರಪುರದ ಶಾಂತ ವಾತಾವರಣದ ಅನುಭವವಾಯಿತು. 'ತನ್ನ ಊರಿಗೆ ಹೋದಕೂಡಲೇ ತನ್ನ ತಾಯಿ ತನ್ನನ್ನು ನೋಡಿ ಎಷ್ಟು ಆನಂದಗೊಳ್ಳುವಳು ! ಆ ಮಾತೃಪ್ರೇಮಕ್ಕೆ ತಾನು ಏನನ್ನು ತಾನೇ ಕೊಡಬಲ್ಲೆ ? ಸರೋಜಳ ಗತಿ ಏನಾಗಿದೆಯೋ' ಎಂಬ ಯೋಚನೆ ಮುಂದಲ ಕ್ಷಣದಲ್ಲಿ ಅವನಿಗೆ ಬಂದಿತು.

ಸರೋಜಳ ಜ್ಞಾಪಕದಿಂದಲೇ ಅವನ ಮೈ ರೋಮಾಂಚವಾಯಿತು. ಹೌದು. ಅವಳು ಮತ್ತೊಬ್ಬನ ಹೆಂಡತಿ. ಆ ಮುದಿಯ ಉಗ್ರಯ್ಯನ ಹೆಂಡತಿ. ಈ ಲೋಕದ ನ್ಯಾಯವೇ ಹೀಗೆ. ಆ ಕಿರಾತನಿಗೆ ಈ ಕಿನ್ನರಿ. ನವರಾತ್ರಿಯಲ್ಲಿ ಸರೋಜಳನ್ನು ಹರಿಹರಪುರದಲ್ಲಿ ನೋಡಿದಂದಿನಿಂದ ಇಲ್ಲಿಯವರೆಗೆ ಒಂದು ಗಳಿಗೆಯೂ ಅವಳು ರಂಗಸ್ವಾಮಿಯ ಮನಸ್ಸನ್ನು ಬಿಟ್ಟು ಹೋಗಿರಲಿಲ್ಲ. ತನ್ನ ಮನಸ್ಸನ್ನು ತಾನು ನಿಧಾನವಾಗಿ ಪರೀಕ್ಷಿಸಿದಾಗ ರಂಗಸ್ವಾಮಿಗೆ ತಾನು ರಜ ಬಂದ ದಿನವೇ ಊರಿಗೆ ಹೊರಟ ಕಾರಣವು ತಾಯಿಯನ್ನು ನೋಡುವುದಕ್ಕಿಂತ ಹೆಚ್ಚಾಗಿ ಸರೋಜಳನ್ನು ನೋಡುವುದಕ್ಕೆ ಎಂದು ಗೊತ್ತಾಯಿತು. ಸರೋಜಳನ್ನು ಕುರಿತು ಆಲೋಚಿಸುವುದೇ ಮನೋಹರವಾದ ಉದ್ಯಾನವನದಲ್ಲಿ ವಿಹರಿಸುವಂತೆ ಎಂದು ರಂಗಸ್ವಾಮಿಗೆ ತೋರಿತು.

ಮದುವೆಯಾಗದ ಯುವಕರಿಗೆಲ್ಲ ತೋರುವಂತೆ ಅವನಿಗೂ 'ಆಹಾ, ಇಂತಹ ಚೆಲುವೆ ಆ ಮುದಿಯನಿಗೆ ಯಾಕೆ? ಈಕೆಯನ್ನು ನಾನು ಮದುವೆಯಾಗಿದ್ದರೆ ಆನಂದಸಾಗರದಲ್ಲಿ ಪ್ರೇಮ ನೌಕೆಯಲ್ಲಿ ಅಮೃತಸ್ವಾದನೆ ಮಾಡುತ್ತಿದ್ದೆ' ಎಂದು ತೋರಿತು. ಆದರೆ ವಾಸ್ತವವಾಗಿ ಉಗ್ರಯ್ಯ ಮುದುಕನೆಂದು ರಂಗಸ್ವಾಮಿ ಭಾವಿಸಿದ್ದರೂ, ಅವನು ಉಗ್ರಯ್ಯನನ್ನು ನೋಡಿರಲಿಲ್ಲ.

ಆ ವೇಳೆಗೆ ಹರಿಹರಪುರದ ಮಾರ್ಗವಾಗಿ ಬರುವ ರೈಲು ಬೆಂಗಳೂರಿಗೆ ಬಂತು. ರಂಗಸ್ವಾಮಿಗೆ ಆ ರೈಲಿನ ಕಡೆ ಗಮನವಿರಲಿಲ್ಲ. ಅವನು ಕಣ್ಣು ಮುಚ್ಚಿಕೊಂಡೇ ಪ್ರೇಮಸಾಮ್ರಾಜ್ಯದ ಹಗಲುಗನಸನ್ನು ಕಾಣುತ್ತಿದ್ದನು. ಹರಿಹರಪುರದಿಂದ ಬಂದ ರೈಲು ಪ್ಲಾಟ್‌ಫಾರಂನಲ್ಲಿ ನಿಂತಕೂಡಲೇ, ರಂಗಸ್ವಾಮಿ ಸ್ವಾಭಾವಿಕವಾಗಿ ಕಣ್ಣು ಬಿಟ್ಟು ತನ್ನ ಎದುರಿಗೆ ಬಂದು ನಿಂತ ಗಾಡಿಯ ಕಡೆ ನೋಡಿದನು. ಸುಂದರಿಯಾದ ಯುವತಿಯೊಬ್ಬಳು ಹುಲ್ಲೆ ಕರುವಿನಂತೆ ಚಂಗನೆ ಗಾಡಿಯಿಂದಿಳಿದು ಸ್ಟೇಷನ್ ಕಡೆಗೆ ಬೆನ್ನು ತಿರುಗಿಸಿ ನಿಂತುಕೊಂಡು ಒಳಗಿನಿಂದ ಪುರುಷನೊಬ್ಬನು ಕೊಡುತ್ತಿದ್ದ ಹಾಸಿಗೆ ಪೆಟ್ಟಿಗೆಗಳನ್ನು ತೆಗೆದು ಕೆಳಕ್ಕೆ ಇಡುತ್ತಿದ್ದಳು. ಅವಳು ಇಳಿದ ವೇಗದಲ್ಲಿ ರಂಗಸ್ವಾಮಿಗೆ ಮುಖ ಸ್ಪಷ್ಟವಾಗಿ ಕಾಣಿಸಿರಲಿಲ್ಲ. ಒಂದು ಮಿಂಚಿನ ಹೊಳಪಿನಂತೆ ಹೊಳೆದು ಮರೆಯಾಗಿತ್ತು. ಅವಳು ರಂಗಸ್ವಾಮಿಯ ಕಡೆಗೆ ಬೆನ್ನು ತಿರುಗಿಸಿ ನಿಂತುಕೊಂಡಿದ್ದರೂ ಆ ಸುದೃಢವಾದ ಸುಂದರಾಕೃತಿ, ಅತ್ಯಂತ ಮನೋಹರ ರೂಪವೆಂದು ರಂಗಸ್ವಾಮಿಗೆ ಹೇಗೆಯೋ ಹೊಳೆಯಿತು. ಗಾಡಿಯಿಂದ ಸಾಮಾನುಗಳನ್ನು ಕೊಡುತ್ತಿದ್ದ ಕರಿಯ ಕೋಣಪ ಹಾಸಿಗೆ ಹೊತ್ತುಕೊಂಡು ಕೆಳಕ್ಕೆ ಇಳಿದನು. ಯುವತಿಯು ಕೈಯ್ಯಲ್ಲಿ ಸೂಟ್‌ಕೇಸನ್ನೂ ಕೂಜಾ ಚೆಂಬನ್ನೂ ಹಿಡಿದುಕೊಂಡು ಅವನ ಜತೆ ನಡೆಯುತ್ತಾ ಸ್ಟೇಷನಿನ ಮತ್ತೊಂದು ಭಾಗದಲ್ಲಿದ್ದ ಬೆಂಚಿನ ಕಡೆಗೆ ಹೊರಟಳು. ಯುವತಿಯ ಮುಖ ತನ್ನೆಡೆಗೆ ತಿರುಗಿದ ಕೂಡಲೇ ಆಕೆ, ಸರೋಜಳೆಂಬುದು ತತ್‌ಕ್ಷಣ ರಂಗಸ್ವಾಮಿಗೆ ಗೊತ್ತಾಯಿತು. ಸರೋಜಳೂ ರಂಗಸ್ವಾಮಿಯನ್ನು ಗುರುತಿಸಿದಳು. ರಂಗಸ್ವಾಮಿಯು ಸರೋಜಳೊಂದಿಗೆ ಮಾತನಾಡಬೇಕೆಂದು ಬಾಯಿ ತೆರೆಯುವಷ್ಟರಲ್ಲಿ ಆಕೆ, ಗಂಡ ಸ್ವಲ್ಪ ಮುಂದಾದಾಗ ತುಟಿಯ ಮೇಲೆ ಬೆರಳಿಟ್ಟು ಮೌನವಾಗಿರಬೇಕೆಂದು ಸೂಚಿಸಿದಳು. ರಂಗಸ್ವಾಮಿಗೆ ಏನೂ

ತೋರಲಿಲ್ಲ. ಅವನ ದೃಷ್ಟಿ ಅವನ ಪ್ರಯತ್ನವಿಲ್ಲದೆಯೆ ಸರೋಜಳನು ಹಿಂಬಾಲಿಸಿತ್ತು.

ರಂಗಸ್ವಾಮಿಯ ಕಣ್ಣಿಗೆ ಸರೋಜ, ನವರಾತ್ರಿಯಲ್ಲಿ ನೋಡಿದುದಕ್ಕಿಂತ ಬಹಳ ಹೆಚ್ಚು ಚೆಲುವಾಗಿ ತೋರಿದಳು. ಅಂದು ಗಂಡ ಬೇಡವೆಂದುದರಿಂದ ಅಲಂಕರಿಸಿಕೊಳ್ಳದೆ ಕಾಡುಹೂವಿನಂತಿದ್ದಳು. ಆದರೆ ಇಂದು ನೋಡಿದರೆ ಆ ಮೋಹನಾಕಾರಕ್ಕೆ ಅನುಗುಣವಾದ ನಾಗರಿಕ ಅಲಂಕಾರ—ಹೂವು, ಹೇರ್‌ಪಿನ್, ರಿಬ್ಬನ್. ರಂಗಸ್ವಾಮಿಗೆ ಆಶ್ಚರ್ಯವಾಯಿತು. ಕೆದರಿದ ತಲೆಯನ್ನು ಬಾಚಿಕೊಂಡಿದ್ದಕ್ಕೆ ಮೈಮೂಳೆ ಪುಡಿಯಾಗುವಂತೆ ಹೊಡೆದಿದ್ದ ಗಂಡ ಇಂತಹ ಅಲಂಕಾರಗಳನ್ನು ಯಾಕೆ ಒಪ್ಪಿದ ? ರಂಗಸ್ವಾಮಿಗೆ ಉಂಟಾದ ಆಶ್ಚರ್ಯವೆಂದರೆ, ಸರೋಜ ಇಂದಿನ ಆ ಒಂದೇ ಒಂದು ಗಳಿಗೆಯ ನೋಟದಲ್ಲಿ "ನಾನು ಸುಖವಾಗಿದ್ದೇನೆ. ನನ್ನ ತಂಟೆ ಬರಬೇಡ. ನನ್ನ ದಾರಿ ಬಿಟ್ಟು ಹೋಗು" ಎಂದು ಹೇಳುತ್ತಿರುವುದು ಅವನಿಗೆ ಸ್ಪಷ್ಟವಾಯಿತು. ಇದರಿಂದ ಅವನ ಆತ್ಮಾಭಿಮಾನಕ್ಕೇ ಕುಂದುಂಟಾದಂತೆ ತೋರಿತು. ಅದೇ ನವರಾತ್ರಿಯಲ್ಲಿ ಆಕೆ ತನ್ನನ್ನು ತನ್ನ ಮನೆಯಲ್ಲಿ ಸಂಧಿಸುತ್ತಿದ್ದಾಗ, ಗಂಡ, ಬೇಡವೆಂದರೂ ಅವನ ಕೈಯಿಂದ ಏಟನ್ನಾದರೂ ತಿಂದು ತಮ್ಮ ಮನೆಗೆ ಬರುತ್ತಿರುವಾಗ, ಅವಳ ಕಣ್ಣುಗಳು "ನೀನೇ ಪ್ರಾಣ. ನಿನ್ನೊಂದಿಗಿರಲು ಏನು ಮಾಡಲು ಸಿದ್ಧ" ಎಂದು ಸ್ಪಷ್ಟವಾಗಿ ಹೇಳುತ್ತಿದ್ದವು. ಆಗ ಕರಡಿಯಾಗಿದ್ದ ಇವಳ ಗಂಡ, ಈಗ ನಾಯಿ ಮರಿಯಂತೆ ಪಳಗಿದ ಪ್ರಾಣಿಯಾಗಿ ಇವಳ ಮೂಟೆಗಳನ್ನು ಹೊತ್ತುಕೊಂಡು ಹೋಗುತ್ತಿರುವುದೇನು ? ರಂಗಸ್ವಾಮಿಗೆ ಇದೊಂದೂ ಅರ್ಥವಾಗಲಿಲ್ಲ. ಸರೋಜಳೂ ಅವಳ ಗಂಡನೂ ರಂಗಸ್ವಾಮಿ ಕುಳಿತ ಬೆಂಚಿನಿಂದ ನಾಲ್ಕು ಬೆಂಚು ಆಚೆಯ ಬೆಂಚಿನ ಮೇಲೆ ಕುಳಿತರು. ರಂಗಸ್ವಾಮಿಯ ರೈಲಿಗೆ ಇನ್ನೂ ಮೂರು ಗಂಟೆ ಇದ್ದುದರಿಂದ ಅವನು ಮತ್ತೆ ಬೆಂಚಿನ ಮೇಲೆ ಕುಳಿತು ಯೋಚಿಸತೊಡಗಿದನು. ಅವನ ಕಣ್ಣುಗಳು ಪದೇ ಪದೇ ಸರೋಜಳ ಕಡೆ ನೋಡುತ್ತಿದ್ದವು. ಅವನ ಪುಣ್ಯಕ್ಕೆ, ಅವಳ ಗಂಡ ಇವನ ಕಡೆ ನೋಡಲಿಲ್ಲ.

೨

ಅಂದು ಬೆಳಗ್ಗೆ ಹರಿಹರಪುರದಿಂದ ಗಂಡನ ಜತೆ ಹೊರಟಿದ್ದ ಸರೋಜಳು ದಕ್ಷಿಣ ದೇಶದ ದಿವ್ಯಕ್ಷೇತ್ರಗಳ ಯಾತ್ರೆಯ ನೆಪದಲ್ಲಿ ದೇಶಸಂಚಾರಕ್ಕೆ ಹೊರಟಿದ್ದಳು. ಬೆಂಗಳೂರು ಮದರಾಸು ಶ್ರೀರಂಗ ತಿರುಪತಿ ಮಧುರೆ ರಾಮೇಶ್ವರ ಕನ್ಯಾಕುಮಾರಿ, ಇವನ್ನೆಲ್ಲ ನೋಡಬೇಕೆಂಬ ಅವಳ ಆಸೆಗೆ ಇಂದು ರೆಕ್ಕೆಬಂದಿತ್ತು. ತನ್ನ ಬಾಳಿನಲ್ಲಿ ಇಂತಹ ದಿನ ಬರಬಹುದೆಂದು ಈಗ ಮೂರು ತಿಂಗಳ ಹಿಂದೆ ಆಕೆ ಕನಸಿನಲ್ಲಿಯೂ ನೆನಸಿರಲಿಲ್ಲ. ಅದಕ್ಕೆ ಒಂದು ರೀತಿಯಲ್ಲಿ ರಂಗಸ್ವಾಮಿಯೇ ಜವಾಬ್ದಾರನೆಂದೂ ಅವಳಿಗೆ ಗೊತ್ತಿತ್ತು. ಹಿಂದೆ ತನಗೆ ರಂಗಸ್ವಾಮಿಯಲ್ಲಿದ್ದ ಆಸೆ, ಇಂದು ಅವನ ವಿಷಯದಲ್ಲಿ ಪೂರ್ಣವಾದ ತನ್ನ ಔದಾಸೀನ್ಯ, ಇವನ್ನು ಕಂಡು ಅವಳಿಗೇ ಆಶ್ಚರ್ಯವಾಯಿತು. ಇದ್ದಕ್ಕಿದ್ದಂತೆ ಅವಳ ಮನಸ್ಸು ಮೂರು ತಿಂಗಳ ಹಿಂದಲ ಆ ದಿನಕ್ಕೆ ಹೋಯಿತು. ಚಲನಚಿತ್ರದಲ್ಲಿ ನೋಡುವಂತೆ ತನ್ನ ಹಿಂದಲ ಆ ಬಾಳನ್ನು ಅವಳು ನೋಡಿದಳು.

ಅವಳ ತವರುಮನೆ ಆನಂದಪುರದಲ್ಲಿ. ತಂದೆ ಇರಲಿಲ್ಲ. ಸರೋಜಳಿಗೆ ನಾಲ್ಕು ವರುಷವಾಗಿದ್ದಾಗ ತಂದೆ ತೀರಿಹೋಗಿದ್ದ. ಬೇರೆ ಮಕ್ಕಳಿಲ್ಲ. ತಾಯಿ ಸರೋಜಳನ್ನು ಹದಿನಾಲ್ಕು ಹದಿನೈದು ವರುಷ ಕೂಲಿಯಿಂದಲೇ ಸಾಕಿದಳು. ಕಂಡವರ ಮನೆಯಲ್ಲಿ ಮುಸುರೆ ತಿಕ್ಕುವುದು, ಮೆಣಸಿನಪುಡಿ ಮಾಡುವುದು, ಬೀಸುವುದು, ಇದೇ ಅವಳ ಜೀವನ ಮಾರ್ಗ. ಸರೋಜಳಿಗೆ ಇಪ್ಪತ್ತು ವರುಷಗಳಾಗಿ ಅವಳು ಸ್ಫುರದ್ರೂಪಿಯಾಗಿದ್ದರೂ ಯಾರೂ ಸರಿಯಾದ ವರಗಳು ಅವಳನ್ನು ಮದುವೆಯಾಗಲು ಬರಲಿಲ್ಲ. ಅವರ ಬಂಧುಗಳಲ್ಲಿಯೇ ಬೇಕಾದಂತೆ ವರಗಳಿದ್ದರು. ಆದರೆ ಐದುನೂರು ರೂಪಾಯಿಗಳಿಗೆ ಕಡಿಮೆ ವರದಕ್ಷಿಣೆ ತೆಗೆದುಕೊಂಡು ಸರೋಜಳನ್ನು ಮದುವೆಯಾಗಲು ಯಾರೂ ಸಿದ್ಧರಾಗಿರಲಿಲ್ಲ. ಆದರೆ ಸರೋಜಳ ತಾಯಿಯ ಬಳಿ ಇದ್ದುದು ಇನ್ನೂರೈವತ್ತು ರೂಪಾಯಿಗಳು ಮಾತ್ರ ಅವಳು ಆ ಹಣವನ್ನೂ ಸರೋಜಳನ್ನೂ, ಎರಡನೆಯ ಸಂಬಂಧವಾದರೂ ಚಿಂತೆಯಿಲ್ಲವೆಂದುಕೊಂಡು ಐವತ್ತರ ಹತ್ತಿರದ ವಯಸ್ಸಿನ ಉಗ್ರಯ್ಯನಿಗೆ ಒಪ್ಪಿಸಿಬಿಟ್ಟಳು.

ಉಗ್ರಯ್ಯನಿಗೆ ಮೊದಲನೆಯ ಹೆಂಡತಿಯಲ್ಲಿ ಮಕ್ಕಳಿರಲಿಲ್ಲ. ಅವನು ಇದ್ದದ್ದು ಹರಿಹರಪುರದ ಕಂಟ್ರಾಕ್ಟರ್ ಹತ್ತಿರ ಮೇಸ್ತ್ರಿಯಾಗಿ. ಅವನಿಗೆ

ಪ್ರಾರಂಭದಿಂದಲೂ ಹೆಂಡತಿಯಲ್ಲಿ ಸಂದೇಹ. ಮದುವೆಯಾದ ನಾಲ್ಕು ತಿಂಗಳ ವರೆಗೆ ಉಗ್ರಯ್ಯ ಆಚೆ ಈಚೆ ಹೋಗಲು ಸರೋಜನಿಗೆ ಅವಕಾಶ ಕೊಡಲಿಲ್ಲ. ವಠಾರದಲ್ಲಿದ್ದ ಇತರ ಮನೆಗಳಿಗೆ ಹೋಗಲು ಮಾತ್ರ ಅನುಮತಿ ಇತ್ತು. ಅನಂತರ ವಠಾರದಲ್ಲಿದ್ದ ಸ್ತ್ರೀಯರ ಜತೆ ನದಿಗೆ ಹೋಗಲು ಅಪ್ಪಣೆ ದೊರಕಿತು. ಹಾಗೆ ಅವಳು ಹೊಳೆಗೆ ಹೋಗುತ್ತಿದ್ದಾಗ, ದಾರಿಯಲ್ಲಿ ನದಿಯಿಂದ ಸ್ನಾನ ಮಾಡಿಕೊಂಡು ಒದ್ದೆ ಪಂಚೆ ಉಟ್ಟುಕೊಂಡು ಬರುತ್ತಿದ್ದ ರಂಗಸ್ವಾಮಿ ಅವಳ ಕಣ್ಣಿಗೆ ಬಿದ್ದ. ಆ ದಿನ ಅವಳಿಗೆ ಚೆನ್ನಾಗಿ ಜ್ಞಾಪಕ. ರಂಗಸ್ವಾಮಿಯದು ಎಂತಹ ಸ್ಫುರದ್ರೂಪ ! ಅಂದಿನಿಂದ ಪ್ರತಿದಿನವೂ ಅದೇ ಕಾಲಕ್ಕೆ ಸರಿಯಾಗಿ ರಂಗಸ್ವಾಮಿ ತಪ್ಪದೆ ಅವಳ ಕಣ್ಣಿಗೆ ಬೀಳುತ್ತಿದ್ದ. ಅವನ ಎದುರಿಗೆ ಬಂದ ಕೂಡಲೇ ಅವಳಿಗೆ ರೋಮಾಂಚವಾಗುತ್ತಿತ್ತು ! ನಿಧಾನವಾಗಿ ನಡೆಯಬೇಕೆಂದರೂ ಸಾಧ್ಯವಾಗದೆ ಕಾಲು ಸರಸರನೆ ಓಡಿಬಿಡುತ್ತಿತ್ತು ; ಇವೆಲ್ಲ ಅವಳಿಗೆ ಜ್ಞಾಪಕ ಬಂದವು. ಒಂದು ದಿನ ನದಿಯ ದಾರಿಯಲ್ಲಿ ಅವರಿಬ್ಬರೂ ಸಂಧಿಸಿದಾಗ ಎಲ್ಲಿಯೂ ಯಾರೂ ಕಾಣ ಲಿಲ್ಲ. ರಂಗಸ್ವಾಮಿ ಧೈರ್ಯವಾಗಿ "ಹೀಗೆ ಸುಮ್ಮನೆ ಒಬ್ಬರನ್ನೊಬ್ಬರು ನೋಡಿ ಕೊಂಡು ಹೋಗುತ್ತಿರುವುದೇಯೇ ?" ಎಂದು ಕೇಳಿಬಿಟ್ಟಿದ್ದನು. ಅವಳು ಪ್ರತ್ಯುತ್ತರ ಕೊಡದೆ ಸರಸರನೆ ನದಿಗೆ ಹೋಗಿಬಿಟ್ಟಳು. ತಾನು ಕೇಳಬೇಕೆಂದಿದ್ದ ಪ್ರಶ್ನೆಯನ್ನು ರಂಗಸ್ವಾಮಿಯೇ ಕೇಳಿಬಿಟ್ಟನೆಂದು ಅವಳು ಭಾವಿಸಿದಳು. "ಹಾಳು ಬಾವಿಗೆ ಬಿದ್ದಾಯಿತು. ಇನ್ನು ಕೈಗೆ ಎಟುಕದ ಈ ಫಲವನ್ನು ನೆನೆಸಿ ಕೊಂಡು ಫಲವೇನು, ಫಲವೇನು ?" ಎಂದು ಅವಳು ಗಳಗಳನೆ ಅತ್ತಿದ್ದಳು.

ಬೆಂಚಿನ ಇನ್ನೊಂದು ಕೊನೆಯಲ್ಲಿ ಕುಳಿತಿದ್ದ ಅವಳ ಗಂಡನಿಗೆ ಸರೋಜಳು ಕಾಣುತ್ತಿದ್ದ ಹಿಂದಲ ಯಾವ ದೃಶ್ಯದ ಅರಿವೂ ಇರಲಿಲ್ಲ. ಅವನು ತನ್ನ ಪಾಡಿಗೆ ತಾನು "ನಾಳೆ ಬೆಳಿಗ್ಗೆ ಶ್ರೀರಂಗಕ್ಕೆ ಹೋಗುತ್ತೇವೆ. ಅಲ್ಲಿ ಇಳಿದುಕೊಳ್ಳುವುದು ಇಂತಹ ಕಡೆ" ಎಂದೆಲ್ಲ ಹೇಳುತ್ತಿದ್ದನು. ಸರೋಜ ಅಭ್ಯಾಸಬಲದಿಂದ ಅವನ ಮಾತಿಗೆ ಹೂಗುಟ್ಟುತ್ತಿದ್ದಳು. ಅವಳ ಮನಸ್ಸು ಮತ್ತೆ ಹಿಂದಲ ನವರಾತ್ರಿಗೆ ಹೋಯಿತು.

ಆ ದಿವಸ ಅವಳು ಹೊಳೆಯಲ್ಲಿ ತಾನಾಗಿಯೇ ರಂಗಸ್ವಾಮಿಯ ತಾಯಿ ಲಕ್ಷ್ಮಮ್ಮನನ್ನು ಮಾತನಾಡಿಸಿದ್ದಳು. ಲಕ್ಷ್ಮಮ್ಮನನ್ನು ಮಾತನಾಡಿಸಿದುದು ರಂಗಸ್ವಾಮಿಗಾಗಿಯೋ ಲಕ್ಷ್ಮಮ್ಮನಿಗಾಗಿಯೋ ಅವಳಿಗೆ ಇನ್ನೂ ದೃಢವಾಗಿರ

ಲಿಲ್ಲ. ಲಕ್ಷ್ಮಮ್ಮನೊಂದಿಗೆ ಅದೇ ಅವಳ ಮೊದಲ ಸಂಭಾಷಣೆಯಾಗಿತ್ತು. ಆ ಸಂಭಾಷಣೆ ಆಗಿ ಎರಡು ತಿಂಗಳಾಗಿದ್ದರೂ ಇವತ್ತು ಎಂಬಂತೆ ಆಕೆಗೆ ಜ್ಞಾಪಕ. ಲಕ್ಷ್ಮಮ್ಮ "ನಿನ್ನ ಗಂಡ ಯಾರು ?" ಎಂದು ಕೇಳಿದಾಗ ಸರೋಜ ನಗುತ್ತ "ಐವತ್ತು ವರುಷದ ಚಿಕ್ಕ ಹುಡುಗ" ಎಂದಿದ್ದಳು. ಲಕ್ಷ್ಮಮ್ಮನ ಮನೆ ಬಾಗಿಲಿನಲ್ಲಿ ರಂಗಸ್ವಾಮಿ ನಿಂತಿದ್ದ. ಲಕ್ಷ್ಮಮ್ಮ "ಒಳಗೆ ಬಂದು ಕುಂಕುಮ ತೆಗೆದುಕೊಂಡು ಹೋಗು" ಎಂದಳು. "ನಾಳೆಯೂ ಬಾ, ಒಂದುಗಳಿಗೆ ಇದ್ದು ಹೋಗುವಿಯಂತೆ" ಎಂದಿದ್ದಳು. ಸರೋಜ "ಆಗಲಿ" ಎಂದು ಹೇಳಿ ತನ್ನ ಮನೆಗೆ ಹೋದಳು.

ಆದರೆ ಉಗ್ರಯ್ಯ ನಿತ್ಯ ಎದ್ದವನೆ ಹೊರಗೆ ಕೆಲಸಕ್ಕೆ ಹೋಗುತ್ತಿದ್ದವನು ಅಂದು ಬೆಳಿಗ್ಗೆ ಒಂಬತ್ತು ಗಂಟೆಯಾದರೂ ಹಾಸಿಗೆಯಿಂದ ಏಳಲೇ ಇಲ್ಲ. ರಂಗಸ್ವಾಮಿಯ ಮನೆಗೆ ಬೆಳಿಗ್ಗೆ ಹೋಗುವ ಸರೋಜಳ ಆಸೆ ಮಣ್ಣುಗೂಡಿ ಹೋಯಿತು. ಮುದುಕ ಹೀಗೆ ಆಗಿಂದಾಗ್ಗೆ ಹಾಸಿಗೆಯ ಮೇಲೆ ದಿನಗಟ್ಟಲೆ ಹೊಟ್ಟೆನೋವು ಮೈನೋವೆಂದು ಬಿದ್ದುಬಿಟ್ಟಿರುತ್ತಿದ್ದ. ಆಗಲೆಲ್ಲ ಸರೋಜ ಅವನ ಹಾಸಿಗೆಯ ಬಳಿಯೇ ತಾನು ಇರಬೇಕಾಗಿತ್ತು. ತಾನು ಸ್ವಲ್ಪ ದೂರದಲ್ಲಿ ಕುಳಿತರೆ ಮುದುಕ 'ನಾನೇನು ಬೆಂಕಿಯೆ, ತಗಲಿದರೆ ಪ್ರಾಣಹೋಗುತ್ತದೆಯೆ. ಅಷ್ಟು ದೂರದಲ್ಲಿ ಯಾಕೆ ಕುಳಿತಿದ್ದಿ? ಹತ್ತಿರ ಒರಗಿ ಕುಳಿತುಕೊ" ಎನ್ನುತ್ತಿದ್ದ. ಒಂದು ಸಲ ಹಾಗೆ ಮುದುಕ ಹೇಳಿದಾಗ ಸರೋಜ ತಿರಸ್ಕಾರದಿಂದ "ಎಲ್ಲ ಸಾಕು'' ಎಂದುಬಿಟ್ಟಳು. ಮುದುಕನಿಗೆ ಕೋಪ ಬಂದು ಹಾಗೆಯೇ ಅವಳ ಕತ್ತನ್ನು ಅಮುಕಿಬಿಟ್ಟಿದ್ದ. ಅನಂತರ ಮುದುಕ ಎದ್ದು ಸ್ನಾನಮಾಡಿ ತನ ಕೆಲಸಕ್ಕೆ ಹೋದ.

ಸರೋಜಳಿಗೆ ಆ ದಿನ ಚೆನ್ನಾಗಿ ಜ್ಞಾಪಕ. ಅದು ಅವಳ ಜೀವಮಾನದಲ್ಲಿ ಬಹಳ ಪ್ರಾಮುಖ್ಯವಾದ ದಿನ. ಅದೇ ಗಾಂಢಾಂಧಕಾರದ ಮತ್ತು ಬೆಳಗಿನ ಮಂಗಳ ಪ್ರಭಾತದ ದಿನ. ಅಂದು ನಡೆದ ಘಟನೆಗಳೆಲ್ಲ ತನಗೆ ಸಂಭವಿಸಿದ್ದರೂ ಬೇರೊಂದು ಪ್ರಾಣಿಗೆ ಸಂಭವಿಸಿದ್ದಂತೆ ಸರೋಜ ಆ ದಿನವನ್ನು ಅನಾಸಕ್ತಿಯಿಂದಲೇ ನೋಡಿದಳು.

ಆ ಸಂಜೆ ಸರೋಜ ಸ್ನಾನದ ಮನೆಯಲ್ಲಿ ಲಕ್ಷ್ಮಮ್ಮನ ಮನೆಗೆ ಹೋಗುವುದಕ್ಕಾಗಿ ಮುಖ ತೊಳೆದುಕೊಳ್ಳುತ್ತಿದ್ದಳು. ಅವಳು ಮುಚ್ಚಿದ್ದ ಬಾಗಿಲು ಧಡಾರನೆ ಸದ್ದಾಯಿತು. "ಏನೇ ಥಳಕು ಸುಂದರಿ, ಯಾರಿಗಾಗಿ ಇದೆಲ್ಲ ?''

ಎಂಬ ಪ್ರಶ್ನೆ, ಕಣ್ಣಿನಲ್ಲಿ ಮೆತ್ತಿಕೊಂಡಿದ್ದ ಸಾಬೂನನ್ನು ತೊಳೆದುಕೊಳ್ಳು ತ್ತಿದ್ದ ಸರೋಜ, ಧ್ವನಿ ಕೇಳಿ ಬೆಚ್ಚಿಬಿದ್ದಳು. ಭಯದಿಂದ ಮೈ ನಡುಗುತ್ತಿರಲು ಬಾಗಿಲಿನಲ್ಲಿ ನಿಂತಿದ್ದ ಗಂಡನನ್ನು ನೋಡಿದಳು. ಕೊಳೆ ಪಂಚೆ, ಬಿಳಿ ತಲೆ, ಬೆವತ ಮೈ, ನೆರೆತ ಕೂದಲು, ಮೂಗಿನ ಕೆಳಗೆ ಆಚೆ ಈಚೆ ಹೊರಟುಕೊಂಡಿರುವ ಹಲ್ಲುಗಳು. ಮುದಿಯ–ನೋಡಿ ಅವಳಿಗೆ ವಾಂತಿ ಬರುವಂತೆ ಆಗಿತ್ತು. "ಕೂದಲು ಒಣಗಿ ಬರುಗಾಗಿತ್ತು. ಬಾಚಿ ಹೆಣೆದುಕೊಂಡೆ. ಮುಖ ಬೆವರಿತ್ತು. ತೊಳೆದುಕೊಂಡೆ. ನಾನು ಹೆಣ್ಣಾಗಿ ಹುಟ್ಟಿದುದಕ್ಕೆ ನನಗೆ ಥಳಕು ಬೇರೆಯೆ?" ಎಂದಳು.

ಅವಳು ಹೇಳಿದ್ದುದು ಅಷ್ಟೇ, ಅವನು ಒಂದೇ ಏಟಿಗೆ ಅವಳ ಮೇಲೆ ಹಾಯ್ದನು. ಹೆಣೆದು ಮೇಲಕ್ಕೆ ಗಂಟುಹಾಕಿಕೊಂಡಿದ್ದ ಅವಳ ತಲೆ ಜಡೆಯನ್ನು ಹಿಡಿದನು. ನಾಯಿ, ಮುಡಿಯನ್ನು ಎಳೆದಾಡುತ್ತಿರುವಂತೆ ಅವಳಿಗೆ ಭಾಸವಾಯಿತು. ಹಲ್ಲನ್ನು ಕಡಿಯುತ್ತಾ "ಏನಂದೆ ? ಏನಂದೆ ? ಇನ್ನೊಂದು ಸಲ ಹೇಳು'' ಎಂದು ಗರ್ಜಿಸಿದನು.

ನೆರೆತ ಕೂದಲಿನ ಮುದಿಯ ! ಅವಳಿಗೆ ಭಯ ಸಹ ಆಗಲಿಲ್ಲ. ಬರಿ ಜುಗುಪ್ಸೆ. ''ಈಗ ಏನು ಹೇಳಿಬಿಟ್ಟೆ ಹೇಳಬಾರದ್ದನ್ನ ?'' ಎಂದಳು.

''ನಾನು ನಿನಗೆ ಏನು ಕಟ್ಟು ಮಾಡಿದ್ದೆ ?''

'ಏನು ?''

''ತಲೆ ಹೆಣದುಕೊಳ್ಳಬಾರದೆಂದು ಹೇಳಿರಲಿಲ್ಲ ?''

''..................''

''ಸಾಬೂನು ಹಾಕಿಕೊಳ್ಳಬಾರದೆಂದು ಹೇಳಿಲ್ಲ ?''

"ತಲೆಕೂದಲನ್ನು ಬಿಡಿ."

"ನಾನು ಕೇಳಿದ್ದಕ್ಕೆ ಜವಾಬು ಹೇಳು. ಸಾಬೂನು ಹಾಕಿಕೊಳ್ಳಕೂಡದೆಂದು ಹೇಳಿದೆನೋ ಇಲ್ಲವೋ ?''

ಕೊನೆಗೆ ಸರೋಜ ''ನನಗೆ ಬೇಕಾಯಿತು, ಹಾಕಿಕೊಂಡೆ'' ಎಂದುಬಿಟ್ಟಳು.

'ಏನು ? ಏನು ? ನಿನಗೆ ಬೇಕಾಯಿತೆ ?'' ಎಂದುಕೊಂಡು ಮುದುಕ ತಲೆಗೆ ಒಂದು ಗುದ್ದನ್ನು ಗುದ್ದಿದನು. ಬೆನ್ನಿನ ಮೇಲೆ ಗುಡ್ ಗುಡ್ ಎಂದು ಗುದ್ದಿದನು.

ಬಾಯಿಯ ಮೇಲೆ ಗುದ್ದಿದನು. ತನ್ನ ಕೈ ಸೋಲುವವರೆಗೆ ಗುಡ್ ಗುಡ್ ಎಂದು ಮೂಗು, ಬಾಯಿ, ಕಣ್ಣು ನೋಡದೆ ಗುದ್ದಿದನು. ಕೆನ್ನೆಯ ಮೇಲೆ ಏಟು ಬಿದ್ದುದರಿಂದ ಅವಳು ತಲೆತಿರುಗಿ ಕೆಳಕ್ಕೆ ಬಿದ್ದಳು. ಮುದುಕ ಅವಳನ್ನು ಅಲ್ಲೂ ಬಿಡದೆ ಒದ್ದನು. ನೋವನ್ನು ತಾಳಲಾರದೆ ಸರೋಜ "ಅಯ್ಯೋ, ಕೊಲ್ಲುತ್ತಾನಲ್ಲ ಪಾಪಿ, ಕೊಲ್ಲುತ್ತಾನಲ್ಲ'' ಎಂದು ಕೂಗಿದ್ದಳು.

ಅದು ನಾಲ್ಕಾರು ಮನೆಗಳ ವಠಾರ. ಮಧ್ಯದಲ್ಲಿ ಭಾವಿ. ಸರೋಜಳ ಧ್ವನಿಯನ್ನು ಕೇಳಿ ಎಲ್ಲ ಮನೆಯ ಸ್ತ್ರೀಯರೂ ಬೀದಿ ಬಾಗಿಲಿಗೆ ಬಂದು ನಿಂತರು. ಆ ಎಲ್ಲ ಸ್ತ್ರೀಯರಿಗೂ ಉಗ್ರಯ್ಯನನ್ನು ನುಂಗುವಷ್ಟು ಕೋಪ ಬಂತು. ಆದರೆ ಅವರಾರಿಗೂ ಮಾತನಾಡುವ ಧೈರ್ಯ ಇರಲಿಲ್ಲ. ಸರೋಜಳ ಮಗ್ಗುಲ ಮನೆಯಲ್ಲಿದ್ದವರು ಶೇಕದಾರರು. ಅವರ ಹೆಂಡತಿಯವರೂ ಸರೋಜಳನ್ನು ನೋಡುತ್ತಾ ನಿಂತಿದ್ದರು. ಶೇಕದಾರರು ಮುಚ್ಚಳ ತೆರೆದ ಪೇನಾವನ್ನು ಕೈಯಲ್ಲಿ ಹಿಡಿದುಕೊಂಡು ಬಾಗಿಲಿಗೆ ಬಂದರು.

೩

"ಏನ್ರಿ ಉಗ್ರಯ್ಯ ? ನೀವೇನು ಮನುಷ್ಯರೇನ್ರಿ ?"

"ನಿಮಗೆ ಹೇಗೆ ತೋರುತ್ತೆ ?"

"ಅಲ್ಲರೀ ಇದೇನು ? ದನ ಹೊಡೆಯುವ ಹಾಗೆ ಆ ಹುಡುಗೀನ ಹೊಡೀತೀರಲ್ಲ ?"

"ನನ್ನ ಹೆಂಡತೀನ ನಾನು ಹೊಡೆಯುತ್ತೇನೆ. ನಿಮ್ಮ ವಕಾಲತ್ತು ಬೇಕಿಲ್ಲ. ಅದಿರಲಿ, ಸುಳ್ಳು ಫುಡ್ ಲೆಕ್ಕಗಳನ್ನೆಲ್ಲ ಬರೆದಾಯಿತೆ ? ಲಂಚ ಕಿತ್ತುಕೊಳ್ಳಲು ಇವತ್ತು ಯಾವ ಬಡಪಾಯಿ ರೈತನೂ ಸಿಕ್ಕಲಿಲ್ಲ ಅಂತ ಕಾಣತ್ತೆ."

"ಹೌದು, ಸಿಕ್ಕದ್ದರಿಂದಲೇ ನಿಮ್ಮಲ್ಲಿಗೆ ಬಂದೆ. ಹೀಗೆ ಮನೆ ಸುತ್ತ ರಾದ್ಧಾಂತವಾಗುತ್ತಿದ್ದರೆ ಯಾವ ಕೆಲಸ ತಾನೇ ಆಗುತ್ತೆ ? ಇವಳೇನು ಹೆಣ್ಣೋ ಕತ್ತೆಯೋ ?"

ಸರೋಜಳ ನೆತ್ತಿಯಿಂದ ಒಂದೇ ಸಮನೆ ರಕ್ತ ಕೆಳಕ್ಕೆ ಸುರಿಯುತ್ತಿತ್ತು. ಶೇಕದಾರರು ಮಾತನಾಡುವವರೆಗೆ ಯಾರಿಗೂ ಧೈರ್ಯವಿರಲಿಲ್ಲ. ಈಗ

ಮೇಷ್ಟರ ಹೆಂಡತಿ ಮುಂದೆ ಬಂದು ಅವಳನ್ನು ಬಾಚಿ ತಬ್ಬಿಕೊಂಡು ನೆತ್ತಿಗೆ ಅರಿಶಿನವನ್ನು ಮೆತ್ತಿ ಬಟ್ಟೆ ಕಟ್ಟಿ ಸುರಿಯುತ್ತಿದ್ದ ರಕ್ತವನ್ನು ನಿಲ್ಲಿಸಿದಳು. ಸ್ತ್ರೀಯರೆಲ್ಲ ಆಕೆಯ ಸುತ್ತಲೂ ಸೇರಿ ಉಪಚಾರದ ಮಾತುಗಳನ್ನಾಡಿದರು. ಮೇಷ್ಟರ ಹೆಂಡತಿ "ಹೀಗೆ ಹೊಡೆಯುವುದುಂಟೆ ? ಈ ಸೌಭಾಗ್ಯಕ್ಕೆ ಇವಳಿಗೆ ಮದುವೆ ಯಾಕೆ ಮಾಡಬೇಕಾಗಿತ್ತು ?" ಎಂದು ಹೇಳುತ್ತಾ ಸರೋಜಳನ್ನು ತನ್ನ ಮನೆಯೊಳಕ್ಕೆ ಕರೆದುಕೊಂಡು ಹೋದಳು. ಉಗ್ರಯ್ಯ ಕೋಪದಿಂದ "ನಿನಗೆ ನಿತ್ಯ ಸಾಬೂನು ಬೇಕೆ ? ಸಾಬೂನು ? ಈಗ ಹೇಗಿದೆ ?" ಎಂದು ಕೂಗಾಡಿದನು.

ಶೇಕದಾರರು 'ಸಾಕಪ್ಪಾ ಸಾಕು. ಬೆಳಗಾದರೆ ಇದೇ ರಾಮಾಯಣ ವಾಯಿತು. ಈ ದೊಂಬಿಯಲ್ಲಿ ವಾಸಿಸುವುದಕ್ಕಿಂತ ಎಲ್ಲಿಯಾದರೂ ಮೀನಿನ ಅಂಗಡಿಯಲ್ಲಿ ಇರುವುದು ವಾಸಿ."

''ಹೋಗುವುದು ತಾನೆ ? ಗದ್ದಲಮಾಡಬೇಡ ಎಂದು ನೀವು ಹೇಳುವುದಕ್ಕೆ ಅದೂ ಸಹ ಒಳ್ಳೆಯ ಸ್ಥಳವೆ. ಆದರೆ ನಿಮಗೆ ಅಲ್ಲಿ ಲಂಚ ಕೊಡುವವರು ಯಾರೂ ಇಲ್ಲವಲ್ಲ ?''

''ಇನ್ನೇನ್ರಿ ಮತ್ತೆ ? ಎಲ್ಲಿಯಾದರೂ ತೆಗೆದುಕೊಂಡು ಹೋಗಿ ನಿರ್ಜನ ಪ್ರದೇಶದಲ್ಲಿ ನಿಮ್ಮ ಹೆಂಡತಿಯನ್ನು ಕೊಂದು ಬನ್ನಿ. ನಿತ್ಯ ನರಕ ಇಲ್ಲಿ ಸಾಕು.''

''ಇನ್ನು ಸಾಕು ನಿಮ್ಮ ಬೋಧನೆ. ಸುಮ್ಮನೆ ಒಳಕ್ಕೆ ಹೋಗಿ'' ಎಂದ ಉಗ್ರಯ್ಯ.

''ಒಳಕ್ಕೆ ಹೋಗುವುದಂತೆ ಒಳಕ್ಕೆ. ನಿಮ್ಮ ಯೋಗ್ಯತೆಗೆ ? ನನ್ನನ್ನು ಹೆದರಿಸಲು ನಾನು ನಿಮ್ಮ ಹೆಂಡತಿಯಲ್ಲ.''

"ಸುಮ್ಮನೆ ಒಳಕ್ಕೆ ಹೋಗಿ ಅಂತೀನಿ."

ಶೇಕದಾರರಿಗೂ ಉಗ್ರಯ್ಯನಿಗೂ ಮಾತು ಇನ್ನೂ ವಿರಸವಾಗುವುದರಲ್ಲಿದ್ದಿತು. ಅಷ್ಟರಲ್ಲಿಯೇ ಅವರ ಹೆಂಡತಿ ''ಈಗ ಅವರ ಹತ್ತಿರ ಯಾಕೆ ನಿಮಗೆ ? ಸುಮ್ಮನೆ ಒಳಕ್ಕೆ ಬನ್ನಿ'' ಎಂದು ಶೇಕದಾರರನ್ನು ಮನೆಯೊಳಕ್ಕೆ ಕರೆದುಕೊಂಡು ಹೋದರು. ಗಾಯದ ಬಾಧೆಯಲ್ಲಿ ನರಳುತ್ತಿದ್ದ ಸರೋಜಳಿಗೆ ಹೆಂಗಸರ ಮಾತುಗಳ ಮೇಲೆ ಅಷ್ಟು ಗಮನವಿರಲಿಲ್ಲ. ಒಬ್ಬಳು ''ಅಬ್ಬ, ಬರುವಾಗಲೇ

ಉಗ್ರ ಅವತಾರವಾಗಿ ಬರುತ್ತಾನೆ. ಮುಖ ನೋಡಿದರೆ ಉರಿಯುವಂತೆ ಕಾಣುತ್ತೆ" ಎಂದಳು. ಉಪಾಧ್ಯಾಯರ ಹೆಂಡತಿ "ಈಗ ಯಾಕೆ ಬಂದ, ಕೆಲಸ ಬಿಟ್ಟು ?" ಎಂದಳು. ಸರೋಜಳು "ಯಾಕೆ ? ಮನೇಲಿ ಇದೇನೆಯೋ ಬೀದಿ ತಿರುಗುತ್ತಾ ಇದೇನೆಯೋ ನೋಡೋದಕ್ಕೆ, ಇನ್ಯಾಕೆ ಬರ್‍ತಾನೆ ?" ಎಂದಳು.

"ಹೀಗೆ ಯಾಕೆ ಬಡಿದ ? ನೀನು ಏನು ಹೇಳಿದೆ ?"

ಮತ್ತೊಬ್ಬಳು "ಅವಳು ಹೇಳಬೇಕಾದುದೇನಿದೆ ? ಅವಳನ್ನು ನೋಡಿದ ರೇನೇ ಅವನಿಗೆ ಕೋಪ, ರೌದ್ರವಾಗಿ ಬರುವುದಲ್ಲ !"

ಸರೋಜಳು "ಅದೆಲ್ಲ ಇಲ್ಲ. ತಲೆ ಕೆದರಿ ಗಂಟು ಬಿದ್ದುಕೊಂಡು ನಾರು ನಾರಾಗಿ ಜೇಡನ ಬಲೆಯಾಗಿತ್ತು. ಒಂದು ಬೆರಳು ಎಣ್ಣೆ ಸವರಿಕೊಂಡು ಬಾಚಿ ಕೊಂಡೆ ! ಹೀಗೆ ಸರ್‍ರನೆ ಬರುತ್ತಾನೆಂದು ನಾನು ಸ್ವಪ್ನ ಕಂಡಿದ್ದೆನೆ ?"

"ತಲೆ ಬಾಚಿಕೊಳ್ಳಬಾರದು, ಸಾಬೂನು ಹಾಕಿಕೊಳ್ಳಬಾರದು ? ಇದು ಒಳ್ಳೆಯ ಆಜ್ಞೆ ! ಹುಚ್ಚಿಯಂತೆ ಇರಬೇಕು !"

"ಅವನು ಮುದುಕ. ನಾನೂ ಮುದುಕಿಯಾಗಿರಬೇಕು ಎನ್ನುತ್ತಾನೆ ಅಷ್ಟೆ."

ಮತ್ತೊಬ್ಬಳು "ಅವನೂ ಮುದುಕಿಯನ್ನೇ ಮದುವೆ ಮಾಡಿಕೊಳ್ಳ ಬೇಕಾಗಿತ್ತು" ಎಂದಳು.

ಮತ್ತೊಬ್ಬಳು "ಈಗ ಮುದುಕಿಯರೆಲ್ಲ ಹುಡುಗಿಯರಾಗುತ್ತಿದ್ದಾರೆ. ಇವನದು ತಲೆಕೆಳಕು."

ಈ ಯಾವ ಮಾತುಗಳಿಂದಲೂ ಸರೋಜಳಿಗೆ ಸಮಾಧಾನವಾಗಲಿಲ್ಲ. ಅವಳು ಅಲ್ಲಿಗೆ ಬಂದಂದಿನಿಂದ ಉಗ್ರಯ್ಯ ಅವಳನ್ನು ಹೊಡೆದಾಗಲೆಲ್ಲ ಇದು ನಡೆಯುತ್ತಿದ್ದ ಮಾತುಗಳೇ.

ಸರೋಜ ಎದ್ದು ತನ್ನ ಮನೆಯೊಳಕ್ಕೆ ಹೋದಳು. ಕೆದರಿದ ತಲೆಯನ್ನು ಮತ್ತೆ ಹಿಂದಕ್ಕೆ ಬಾಚಿಕೊಂಡು ಹಣೆಯ ಕುಂಕುಮ ಸರಿಮಾಡಿಕೊಂಡಳು. ನೆತ್ತಿಯ ಮೇಲಿನ ಗಾಯ ಒಂದು ರೂಪಾಯಿ ಅಗಲವಾಗಿ ಕಾಣುತ್ತಿತ್ತು. 'ಈ ಗಾಯದ ನೆತ್ತಿಯನ್ನು ರಂಗಸ್ವಾಮಿಗೆ ತೋರಿಸಬೇಕೆ ?' ಎಂದು ಯೋಚಿಸಿ ದಳು. ಆದರೆ ಅವನನ್ನು ನೋಡುವ ಆಸೆಯನ್ನು ಜಯಿಸಲು ಅವಳಿಗೆ ಸಾಧ್ಯ ವಾಗಲಿಲ್ಲ. ಅದೇ ಬೀದಿಯ ಕೊನೆಯ ಮನೆಯಲ್ಲಿದ್ದ ಅವನ ಮನೆಗೆ

ಹೋದಳು. ಆರಾಮುಕುರ್ಚಿಯ ಮೇಲೆ ಆತ ಹಿಂದಕ್ಕೆ ಬಾಗಿ ಒರಗಿಕೊಂಡು ಓದುತ್ತಿದ್ದ.

ಸರೋಜ 'ಚಿಕ್ಕಮ್ಮ' ಎಂದು ಕೂಗಿಕೊಂಡು ಒಳಕ್ಕೆ ಹೋದಳು. ಚಿಕ್ಕಮ್ಮ, ಅವನ ತಾಯಿ ಲಕ್ಷ್ಮಮ್ಮ—ವಿಧವೆ, ಬಿ. ಎ. ಓದಬೇಕೆಂಬುದು ರಂಗಸ್ವಾಮಿಯ ಆಸೆಯಾಗಿತ್ತು. ಲಕ್ಷ್ಮಮ್ಮನ ವಯಸ್ಸು ನಲವತ್ತೈದಕ್ಕೆ ಮೇಲೆ ಆಗಿತ್ತು. ಸರೋಜಳಿಗೆ ಅಲ್ಲಿ ಮತ್ತಾರೂ ಬಂಧುಗಳಿಲ್ಲದುದರಿಂದ ಲಕ್ಷ್ಮಮ್ಮನನ್ನೇ ಚಿಕ್ಕಮ್ಮನೆಂದು ಕರೆಯುತ್ತಿದ್ದಳು. ಸರೋಜ ಬಂದುದನ್ನು ನೋಡಿ ರಂಗಸ್ವಾಮಿ ಮುಗುಳುನಗೆ ನಕ್ಕನು. ಒಳಗಿದ್ದ ಲಕ್ಷ್ಮಮ್ಮನನ್ನು 'ಅಕ್ಕಾ' ಎಂದು ಕೂಗಿದನು. ಹೊಸಬರನ್ನು ಕುರಿತು ಹೇಳುವಂತೆ 'ಯಾರೋ ಬಂದಿದ್ದಾರೆ' ಎಂದೇ ಕೂಗುತ್ತಿದ್ದನು.

"ಯಾರು? ನೀನೇ. ಬಾಮ್ಮ" ಎಂದಳು ಲಕ್ಷ್ಮಮ್ಮ. "ಬಾ ಕುಳಿತುಕೊ"

"ಇಲ್ಲ ಚಿಕ್ಕಮ್ಮ, ಹೊತ್ತಾಯಿತು."

"ಬರುವಾಗಲೇ ಹೊತ್ತಾಯಿತು ಎನ್ನುತ್ತಿ. ಒಂದೇ ಗಳಿಗೆ ಕುಳಿತುಕೊ. ಹೋಗುವಿಯಂತೆ."

ಗೋಡೆಯ ಆಚೆ ರಂಗಸ್ವಾಮಿ ಕುಳಿತಿದ್ದ. ಯೋಚನೆಯಿಂದಲೇ ಅವಳ ಮೈ ರೋಮಾಂಚನವಾಯಿತು. ಅವಳು ಒಂದು ಗಳಿಗೆ ಕುಳಿತಳು.

"ಬೆಳಗ್ಗೆಯೇ ಬರಹೇಳಿದ್ದೆನಲ್ಲ. ಯಾಕೆ ಬರಲಿಲ್ಲ?"

"ಆಗಲಿಲ್ಲ, ಚಿಕ್ಕಮ್ಮ, ಕೆಲಸ ಇತ್ತು."

"ಇದೇನು? ಹಣೆ ಮೇಲೆ."

ಸರೋಜಳಿಗೆ ದುಃಖ ಉಕ್ಕಿ ಬಂತು. ಆ ದುಃಖ ಅವಳ ಮೈಯನ್ನೇ ಅಲುಗಾಡಿಸಿತು. ಕಣ್ಣೀರು ಧಾರೆಧಾರೆಯಾಗಿ ಬಂತು. ಅವಳು ಹೇಗೋ ಕಣ್ಣೀರನ್ನು ತಡೆದುಕೊಂಡಳು.

"ಬಿದ್ದೆಯಾ?"

"ಏನೂ ಇಲ್ಲ."

"ನನ್ನ ಹತ್ತಿರ ಯಾಕೆ ಮುಚ್ಚುತ್ತೀಯಾ? ಪರವಾಗಿಲ್ಲ ಹೇಳು."

ಸರೋಜಳಿಗೆ ಇನ್ನು ಸಹಿಸುವುದು ಆಗಲಿಲ್ಲ. ತಡೆದಿದ್ದ ನೀರು ಧಾರೆ ಧಾರೆಯಾಗಿ ಕೆನ್ನೆಯ ಮೇಲೆ ಹರಿಯಿತು.

“ಏನು ಅವರು ಹೊಡೆದರೆ ?”

ಸರೋಜಳ ಬಾಯಲ್ಲಿ ಮಾತು ಹೊರಡದಿದ್ದರೂ ಅವಳು, ಹೌದು ಎಂಬಂತೆ ತಲೆಯಲ್ಲಾಡಿಸಿದಳು.

“ಏನು ನಡೆಯಿತು, ಹೇಳು ?”

“ನನ್ನ ಸಣ್ಣ ವಯಸ್ಸೇ ನನ್ನ ತಪ್ಪು. ನಾನು ಸಾಬೂನು ಹಾಕಿಕೊಳ್ಳಬಾರದು. ತಲೆ ಬಾಚಿಕೊಳ್ಳಬಾರದು.”

“ಮದುವೆಯಾದ ಹೆಂಡತಿ ಮೇಲೆ ಸಂಶಯವಿಟ್ಟುಕೊಂಡರೆ ಮುಂದೆ ಬಾಳುವುದು ಹೇಗೆ ? ಮುದುಕ ಅಂತ ತಿಳಿದು ತಾನೇ ನೀನು ಮದುವೆಯಾದೆ ?”

“ತಿಳಿದಿತ್ತು ಚಿಕ್ಕಮ್ಮ, ಆದರೂ ಪ್ರೀತಿಯಿಂದ ಇಟ್ಟುಕೋತಾನೆ ಅಂತ ಆಸೆಪಟ್ಟಿದ್ದೆ.”

“ಮದುವೆಯಾಗಿ ಎಷ್ಟು ದಿನಗಳಾದವು?”

“ಎಂಟು ತಿಂಗಳಾಯಿತು ಚಿಕ್ಕಮ್ಮ. ನನಗಂತೂ ಎಂಬತ್ತು ವರುಷಗಳಾದಂತೆ ತೋರುತ್ತೆ. ನಾನೇನು ಮಾಡಲಿ ಚಿಕ್ಕಮ್ಮ?” ಎಂದು ಸರೋಜ ನಿಟ್ಟುಸಿರು ಬಿಟ್ಟಳು. ದುಃಖದಿಂದ ಅದು ಬೆಂಕಿಯ ಜ್ವಾಲೆಯಾಗಿತ್ತು. “ಇನ್ನೆಷ್ಟು ದಿನ ಹೀಗೆ ಅನುಭವಿಸಬೇಕೋ ಕಾಣೆ. ನಾನು ಏನು ತಾನೇ ಮಾಡಲಿ, ಚಿಕ್ಕಮ್ಮ, ನನಗೇನೂ ತೋರುವುದೇ ಇಲ್ಲವಲ್ಲ ?”

“ತವರುಮನೆಗಾದರೂ ಹೋಗಿ ಸ್ವಲ್ಪ ದಿನ ಇದ್ದು ಬರಬಾರದೆ ?”

“ನನಗೆಲ್ಲಿ ತವರು ಮನೆ ? ತಂದೆ ಇಲ್ಲ, ತಾಯಿ ಇದ್ದಾಳೆ. ಕಂಡವರ ಮನೆಯಲ್ಲಿ ಮೆಣಸಿನಪುಡಿ ಕುಟ್ಟಿಕೊಂಡು ದೋಸೆಹಿಟ್ಟು ತಿರುವಿಕೊಂಡು ಜೀವಿಸುತ್ತಿದ್ದಾಳೆ. ಇಪ್ಪತ್ತೆರಡು ವರುಷ ಅವಳಿಗೆ ಹೊರೆಯಾಗಿದ್ದುದು ಸಾಲದೆ ?”

“ಈ ಮುದುಕನಲ್ಲದೆ ನಿಮ್ಮ ತಾಯಿಗೆ ಬೇರೆ ಅಳಿಯ ಸಿಕ್ಕಲಿಲ್ಲವೆ ?”

“ಏನು ಮಾಡುವುದು ಚಿಕ್ಕಮ್ಮ. ನೆಂಟರಲ್ಲಿಯೇ ಬೇಕಾದಷ್ಟು ವರಗಳಿದ್ದರು. ಆದರೆ ಐದುನೂರು ರೂಪಾಯಿಗೆ ಕಡಿಮೆ ತೆಗೆದುಕೊಂಡು ನನ್ನನ್ನು ಮದುವೆಯಾಗಲು ಅವರಾರೂ ಒಪ್ಪಲಿಲ್ಲ. ನಮ್ಮ ತಾಯಿಯ ಹತ್ತಿರ ಇದ್ದದ್ದು

ಇನ್ನೂರೈವತ್ತು ರೂಪಾಯಿ ಮಾತ್ರ. ನಮ್ಮ ತಾಯಿ ಅದನ್ನೂ ನನ್ನನ್ನೂ ತಂದು ಮುದುಕನಿಗೆ ಒಪ್ಪಿಸಿಬಿಟ್ಟಳು."

''ಇನ್ನೂರೈವತ್ತು ರೂಪಾಯಿ ಇರಲಿಲ್ಲವೆಂದು ನಿಮ್ಮ ತಾಯಿ ನಿನ್ನನ್ನು ಬಾವಿಗೆ ಹಾಕಿಬಿಟ್ಟಳು !''

''ನಿನಗೆ ಏನು ಕಡಿಮೆ ? ದೀವಟಿಗೆಯಂತೆ ಪ್ರಕಾಶಿಸುತ್ತಿ. ನಿನ್ನ ಮೈ ಕೆಂಪು. ಕಣ್ಣನ್ನು ಕೋರೈಸುತ್ತೆ. ನಿನ್ನ ಚೆಲುವನ್ನು ನೋಡಿಯಾದರೂ ನೆಂಟರಾದ ಯುವಕರ್ಯಾರಿಗೂ ಕರುಣೆ ಬರಲಿಲ್ಲವೆ ?"

''ಕರುಣೆ ಯಾರಿಗೂ ಇಲ್ಲ, ಚಿಕ್ಕಮ್ಮ. ಮುದುಕನಾದರೂ ಪ್ರೀತಿಯಿಂದ ಇಟ್ಟುಕೊಳ್ಳುವನೆಂದು ಇವನಿಗೆ ಕೊಟ್ಟಳು ಅಮ್ಮ. ಆದರೆ ನನ್ನ ಹಣೆಬರಹ. ಯಾರು ಏನು ಮಾಡಿಯಾರು ?''

ನಡುಮನೆಯಲ್ಲಿ ಕುಳಿತು ಇದನ್ನೆಲ್ಲ ಕೇಳುತ್ತಿದ್ದ ರಂಗಸ್ವಾಮಿ ''ಹಣೇಬರಹವೂ ಇಲ್ಲ. ಮಣ್ಣೂ ಇಲ್ಲ. ನೀನು ಬೇರೆ ಮದುವೆಮಾಡಿಕೊಂಡುಬಿಡು" ಎಂದನು. 'ಯಾಕೆ ಮಾಡಿಕೊಳ್ಳಬಾರದೆ ಅಕ್ಕ ?' ಎಂದುಕೊಂಡು ಒಳಕ್ಕೆ ಬಂದನು. ಸರೋಜ ಕುಳಿತಿದ್ದವಳು ಎದ್ದು ನಿಂತಳು. ಬೆಳದಿಂಗಳನ್ನೇ ಎರಕಹೊಯ್ದು ಮಾಡಿದಂತಿದ್ದ ಅವಳ ದೇಹ, ತುಂಬಿ ಬೆಳದಿದ್ದ ನೀಳವಾದ ತೋಳುಗಳು, ಅದುವರೆಗೆ ಅಮೃತ ರಸದಂತೆ ಮಾತನಾಡಿದ್ದ ಆಕೆಯ ಆಕರ್ಷಣೀಯವಾದ ಕೊರಳು, ಕಟ್ಟಿಗೆ ಅಡಗದಂತೆ ಮೀರಿ ಬೆಳೆದಿದ್ದ ಕೇಶರಾಶಿ—ಎಷ್ಟು ನೋಡಿದರೂ ಅವನಿಗೆ ತೃಪ್ತಿಯೇ ಆಗಲಿಲ್ಲ.

ಲಕ್ಷ್ಮಮ್ಮನು "ಸರಿ, ನಿನ್ನ ಮಾತೆಲ್ಲ ಹೀಗೆಯೇ ; ನಮ್ಮಲ್ಲಿ ಅದೆಲ್ಲ ಆಗುತ್ತದೆಯೇ ? ಹಣೆಯಲ್ಲಿ ಬರೆದಿದ್ದನ್ನ ಯಾರಿಗೆ ಮೀರುವುದಕ್ಕಾಗುತ್ತೆ."

"ಹೌದು, ಆಗುವುದಿಲ್ಲ ಎಂದೇ ಮುಂಕರಿ ಮುಂಕರಿಯಲ್ಲಿ ಮಣ್ಣನ್ನು ತೆಗೆದು ತಲೆಯ ಮೇಲೆ ಸುರಿಯುತ್ತಿದ್ದೇವೆ."

ಲಕ್ಷ್ಮಮ್ಮ ಅವನ ಮಾತನ್ನು ಗಮನಿಸದೆ ಸರೋಜಳಿಗೆ "ಸರಿ, ಒಂದು ಗುಟುಕು ಕಾಫಿ ಕುಡಿ" ಎಂದಳು.

"ಬೇಡ, ನನಗೆ ಕಾಫಿ ಅಭ್ಯಾಸವಿಲ್ಲ."

"ಇದೊಳ್ಳೆ ಚೆನ್ನಾಗಿದೆ. ಕಾಫಿ ಅಭ್ಯಾಸವಿಲ್ಲವೆ ?"

"ಕಾಫಿ ಎಲ್ಲಿ ? ಸದ್ಯ ಅಕ್ಕಿ ಸಿಕ್ಕಿದರೆ ಸಾಲದೆ ? ಅರ್ಧ ದಿನವೆಲ್ಲ ತಂಗ

ಳನ್ನವೆ ? ಅದೂ ಹೊಟ್ಟೆ ತುಂಬ ಇಲ್ಲ...ನನ್ನ ಮಾತೇ ನಿಮಗೆ ಬೇಸರಿಕೆ ಯಾಗುತ್ತೆ;ಯಾರೊಂದಿಗೂ ಬಾಯಿ ತೆಗೆಯುವುದೇ ಇಲ್ಲ. ಆದರೆ ನಿಮ್ಮನ್ನು ಕಂಡರೆ ಹೇಗೋ ಮಾತನಾಡಬೇಕು ಎನಿಸುತ್ತೆ."

"ಹೇಳಿದರೆ ತಪ್ಪೇನಮ್ಮ. ಕುಳಿತುಕೊ, ಇದನ್ನು ಕುಡಿ."

ಸರೋಜ ಕಾಫಿ ಕುಡಿದಳು. ಲಕ್ಷಮ್ಮನು "ನಿತ್ಯಾ ಸಾಯಂಕಾಲ ಒಂದು ಗಳಿಗೆ ಹೀಗೆಯೇ ಬಾ" ಎಂದಳು.

''ಅಬ್ಬ, ನಿತ್ಯಾ ಬರುವುದೇ ? ನಾನಿಲ್ಲಿ ಬರುವುದು ತಿಳಿದರೆ ಸಾಕು. ಬೆನ್ನು ಮೂಳೆಯನ್ನೇ ಪುಡಿಮಾಡಿಬಿಡುತ್ತಾನೆ.''

"ಯಾಕಂತೆ ?"

"ನಾನು ಮನೆ ಬಿಟ್ಟು ಹೊರಗೆ ಹೋಗಬಾರದು. ಯಾರೊಂದಿಗೂ ಮಾತನಾಡಬಾರದು. ನಮ್ಮ ವಠಾರದಲ್ಲಿರುವವರ ಮನೆಗೆ ಹೋಗಬಹುದು. ಮತ್ತೆಲ್ಲಿಗೂ ಹೋಗಬಾರದು. ಇದೇ ಆಜ್ಞೆ."

ರಂಗಸ್ವಾಮಿ ನಗುತ್ತಾ "ನೀನು ಚತುರೆಯಾದರೆ ಇಲ್ಲಿಗೆ ಬರುವ ದಾರಿ ನಿನಗೆ ಕಷ್ಟವೇ ? ಅವನು ಏನು ಬೇಕಾದರೂ ಹೇಳಲಿ. ಹರಶಿವ ಎನ್ನದೆ ಸಹಿಸಿಕೊ. ಸ್ವಲ್ಪ ಪ್ರಿಯವಾಗಿ ನಡೆಯುವಂತೆ ನಟಿಸಿದರೆ ತಾನೇ ಪಳಗುತ್ತಾನೆ. ಹೇಳಿದಂತೆ ಕೇಳುತ್ತಾನೆ" ಎಂದನು.

ಸರೋಜ ನಗುತ್ತಾ "ಬರುತ್ತೇನೆ" ಎಂದು ಹೊರಟಳು. ಲಕ್ಷಮ್ಮ "ಸರಿ" ಎಂದು ಬೀಳ್ಕೊಟ್ಟಳು. ರಂಗಸ್ವಾಮಿ ಬಂದು ಮತ್ತೆ ತನ್ನ ಆರಾಮಕುರ್ಚಿಯ ಮೇಲೆ ಒರಗಿದ್ದನು. ಅವಳು ಅವನನ್ನು ದಾಟಿ ಮುಂದೆ ಹೋದಾಗಲೂ ಅವನ ಕಣ್ಣುಗಳು ತನ್ನನ್ನೇ ಅನುಸರಿಸುತ್ತಿರುವುದು ಅವಳಿಗೆ ಅನುಭವವಾಯಿತು. ಆ ಕಣ್ಣುಗಳಲ್ಲಿ ತೋರುತ್ತಿದ್ದ ಆಸೆಯನ್ನು ಕಂಡು ಅವಳಿಗೆ ದಿಗ್ಭ್ರಮೆಯಾ ಯಿತು. ಹಿಂದಿರುಗಿ ನೋಡಬೇಕೆಂದು ಯೋಚಿಸಿದಳು. ಧೈರ್ಯವುಂಟಾಗಲಿಲ್ಲ. ರಂಗಸ್ವಾಮಿಯ ಧೈರ್ಯವನ್ನೇ ನೆನೆದು ಆಶ್ಚರ್ಯಪಡುತ್ತಾ ತನ್ನ ಮನೆ ಕಡೆ ಹೊರಟಳು.

೪

ಸರೋಜಳಿಗೆ ತನ್ನ ಕನಸುಗಳಿಂದ ಇದ್ದಕ್ಕಿದ್ದಂತೆ ಎಚ್ಚರವಾಯಿತು. ಉಗ್ರಯ್ಯನು "ಯಾಕೆ ನಿದ್ರೆಯೆ ? ಇನ್ನೂ ಹೀಗೆ ಎರಡು ಗಂಟೆ ಕೂತಿರ

ಬೇಕಲ್ಲ. ಬೆಳಗಿನಿಂದ ಪ್ರಯಾಣಮಾಡಿ ಆಯಾಸವಾಗಿದೆ. ಕಾಫಿ ತರಿಸುತ್ತೇನೆ" ಎಂದು ಹೇಳಿ, ಅಲ್ಲಿಯೇ ಇದ್ದ ಹೋಟೆಲಿನಿಂದ ಕಾಫಿ ತರಲು ಹೋದನು. ಆ ವಿಧೇಯ ಪ್ರಾಣಿಯನ್ನು ನೋಡಿ ರಂಗಸ್ವಾಮಿಗೆ ಆಶ್ಚರ್ಯವಾಯಿತು. ಸರೋಜ ಕಾಫಿಕುಡಿದಳು. ಅವಳ ಮನಸ್ಸು ಕಾಫಿಯಲ್ಲಿರಲಿಲ್ಲ. ಮತ್ತೆ ಆ ಹಿಂದಲ ದಿನಕ್ಕೆ ಹೋಯಿತು.

* * * *

"ಲಕ್ಷಮ್ಮನ ಮನೆಯಿಂದ ಬಂದು ಸರೋಜ ಹಾಸಿಗೆ ಹಾಸಿಕೊಂಡು ಮಲಗಿದ್ದಳು. ನೆತ್ತಿಯ ಗಾಯ ದುಡಿಯುತ್ತಲೇ ಇತ್ತು. ಕ್ರಾಪು ಬಾಚಿಕೊಂಡ ನಗುಮುಖದ ರಂಗಸ್ವಾಮಿ ತನ್ನನ್ನು, ನದಿಯ ನೀರಿನಲ್ಲಿ ಸ್ನಾನ ಮಾಡುತ್ತಿರುವಾಗ, ಅಲೆಅಲೆಗಳಾಗಿ, ಮುತ್ತಿಡುತ್ತಿರುವಂತೆ ತೋರಿತು. ಆಗ ಅವಳು 'ನಾನು ರಂಗಸ್ವಾಮಿಯ ಮನೆಗೆ ಹೋಗುವುದು ಮುದುಕನಿಗೆ ತಿಳಿದರೊ' ಎಂದು ನಡುಗಿದ್ದಳು. ರಂಗಸ್ವಾಮಿ ಹೇಳಿದ್ದ 'ಸ್ವಲ್ಪ ಪ್ರಿಯವಾಗಿ ನಡೆದುಕೊಂಡರೆ ತಾನೇ ಪಳಗುತ್ತಾನೆ' ಎಂಬ ಮಾತು ಅವಳ ಜ್ಞಾಪಕಕ್ಕೆ ಬಂದಿತು. 'ಈ ಕರಡಿಯೊಂದಿಗೆ ಪ್ರಿಯವಾಗಿ ನಡೆದುಕೊಳ್ಳುವುದೆ ? ಈಶ್ವರಾ' ಎಂದುಕೊಂಡಳು. ಆ ವೇಳೆಗೆ ಸರಿಯಾಗಿ ಉಗ್ರಯ್ಯ ಒಳಕ್ಕೆ ಬಂದನು.

"ಯಾಕೆ ಈಶ್ವರನನ್ನು ಕೂಗಿದೆ ?" ಎಂದನು.

ಸರೋಜಳಿಗೆ ಗಾಬರಿಯಾಯಿತು. ಈಶ್ವರನನ್ನಲ್ಲದೆ ಇನ್ನಾರನ್ನು ಕೂಗಲಿ ? ಎಂಬ ಮಾತು ಅವಳ ತುಟಿಯವರೆಗೆ ಬಂದಿತ್ತು. ಆದರೆ ಅವಳು "ಹತ್ತು ಗಂಟೆ ಆಗಿರಬೇಕು, ಇನ್ನೂ ಬರಲಿಲ್ಲವಲ್ಲ ? ಎಷ್ಟು ಹೊತ್ತು ಹೀಗೆ ಪಿಶಾಚಿಯ ಹಾಗೆ ಒಬ್ಬಳೇ ಕುಳಿತಿರುವುದು ? ಎಂದು ಯೋಚಿಸುತ್ತಿದ್ದೆ" ಎಂದಳು.

ಉಗ್ರಯ್ಯನು "ಅಬ್ಬ ! ಅಬ್ಬ ಹಾಗೋ ? ಆಮೇಲೆ ?" ಎಂದನು.

"ನಿಮಗೆ ಯಾವಾಗಲೂ ಹಾಸ್ಯವೇ, ಯಾಕೆ ಇಷ್ಟು ಹೊತ್ತು ?"

"ನಾಳೆ ಸಂತೆ, ಕೆಲಸ ಇಲ್ಲ. ಇವತ್ತು ಜಲ್ಲಿಗಳನ್ನೆಲ್ಲ ಒಂದೆಡೆ ಸುರಿಸಿ ಎಲ್ಲವನ್ನು ಅಳತೆಮಾಡಿಸಿ ಕೂಲಿ ಲೆಕ್ಕ ಸರಿಮಾಡಿಸಿ ಯಜಮಾನನಿಗೆ ಕೊಡಬೇಕು."

"ಈ ಹೆಚ್ಚಿಗೆ ಕೆಲಸಕ್ಕೆ ಬೇರೆ ಕೂಲಿ ಉಂಟೆ ?"

"ಬೇರೆ ಕೂಲಿ ಕೇಳಿದರೆ ಮನೆಗೆ ಕಳುಹಿಸುತ್ತಾನೆ. ಕಂಟ್ರಾಕ್ಟರನು ನನ್ನ ಜತೆ ಎಸ್ ಎಸ್.ಎಲ್.ಸಿ. ಓದುತ್ತಿದ್ದುದರಿಂದ ಈ ಕೆಲಸವಾದರೂ ಕೊಟ್ಟಿದ್ದಾನೆ. ಅವನ ಕೆಲಸ ಸರಿಯಾಗಿ ಆಗಲಿ ಅಂತ ಅವನ ಜತೇಲಿ ಊಟ ತಿಂಡಿ ; ಊಟಕ್ಕೆ ಮನೆಗೆ ಬಂದರೆ, ಕಾಲ ಹೋಗುತ್ತೆ ಅಂತ ಊಟಕ್ಕೂ ಬಿಡೋದಿಲ್ಲ."

"ಅವನ ಮನೆ ಹಾಳಾಗಲಿ, ಸ್ವಲ್ಪ ಮಜ್ಜಿಗೇನಾದರೂ ಕುಡಿಯಿರಿ" ಎಂದಳು ಸರೋಜ.

"ಬೇಡ, ಈಗ ಯಾಕೆ ಮಜ್ಜಿಗೆ ?"

"ಮಜ್ಜಿಗೆ ಚೆನ್ನಾಗಿದೆ, ಸ್ವಲ್ಪ ಕುಡಿಯಿರಿ."

"ಹೂ, ಕುಡಿಯುತ್ತೇನೆ."

ಉಗ್ರಯ್ಯ ಮಜ್ಜಿಗೆ ಕುಡಿದನು. ಸರೋಜ "ಯಾಕೆ ಊಟ ಸರಿಯಾಗಿರಲಿಲ್ಲವೆ ?'' ಎಂದಳು.

"ಯಾಕೆ ?''

"ಮುಖವೆಲ್ಲ ಒಂದು ಬಗೆ ಬಾಡಿದೆ. ಹೊಟ್ಟೆ ತುಂಬ ಊಟಮಾಡಿದಂತೆ ಕಾಣುವುದಿಲ್ಲ.''

"ಅದೇನೂ ಇಲ್ಲ, ಊಟ ಸರಿಯಾಗಿ ಆಯಿತು. ಒಂದು ಗುಡ್ಡೆ ಜಲ್ಲಿ ಆಗೆದು ಪರೀಕ್ಷಿಸುವಾಗ, ಕೈ ಬೆರಳು ಜಲ್ಲಿಯಲ್ಲಿದ್ದ ಚೂಪಾದ ಕಲ್ಲಿಗೆ ತಗಲಿ ಬಹಳ ರಕ್ತ ಬಂತು. ತುಂಬ ಉರಿಯುತ್ತಿದೆ.''

ಉಗ್ರಯ್ಯ 'ಅಪ್ಪಪ್ಪಪ್ಪ' ಎಂದು ನಿಟ್ಟುಸಿರು ಬಿಡುತ್ತಾ ಬಲಗೈಯಿನ ಬೆರಳನ್ನು ಮುಂದಕ್ಕೆ ನೀಡಿದನು. ಬೆರಳಿಗೆ ಬಲವಾಗಿ ಬಟ್ಟೆ ಕಟ್ಟಿದ್ದನು. ಬಟ್ಟೆಯ ಮೇಲೆ ರಕ್ತದ ಕಲೆ ಕಾಣುತ್ತಿತ್ತು. ಸರೋಜ "ಬಲವಾಗಿ ಕಟ್ಟಿದ್ದೀರಲ್ಲ ? ತುಂಬ ಗಾಯವಾಗಿದೆಯೇ ? ಏನು ಔಷಧ ಹಾಕಿದಿರಿ ?'' ಎಂದಳು.

"ಆಳುಗಳು ಚದುರಂಗಿ ಸೊಪ್ಪಿನ ರಸ ತಂದು ಸವರಿದರು. ಸ್ವಲ್ಪ ಎಣ್ಣೆ ಮೇಲೆ ಹಾಕಿ ಕಟ್ಟಿದೆ.''

"ಎಲ್ಲಿ ಬಿಚ್ಚಿ, ನೋಡುತ್ತೇನೆ.''

"ಈಗ ಬಿಚ್ಚುವುದು ಯಾಕೆ ? ಸರಿಯಾಗಿ ಕಟ್ಟಿದ್ದೇನಲ್ಲ?''

ಸರೋಜ, ಕೇಳದೆ, ಗಾಯಕ್ಕೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿದಳು. ಗಾಯ ಬಹಳ ಬಲವಾಗಿತ್ತು. "ಮಗ್ಗಲು ಮನೆಗೆ ಹೋಗಿ ಔಷಧಿ ತರುತ್ತೇನೆ" ಎಂದು ಹೇಳಿ ಹೋಗಿ ಒಂದು ಭರಣಿಯನ್ನು ತಂದಳು. ಅದರಿಂದ ಔಷಧಿ ತೆಗೆದು ಉಗ್ರಯ್ಯನ ಬೆರಳಿಗೆ ಸವರಿದಳು. "ಹಾ ಹಾ ಉರಿಯುತ್ತೆ. ಉರಿಯುತ್ತೆ'' ಎಂದ ಉಗ್ರಯ್ಯ.

"ಯಾಕೆ ಹೀಗಾಡ್ತೀರಿ. ಔಷಧಿ ಹಾಕುವವರೆಗೆ ತಡೆದುಕೊಳ್ಳಬಾರದೆ ? ನೋಡಿ ನನಗೆ ಗಾಯವಾಗಿಲ್ಲವೆ ?''

ಉಗ್ರಯ್ಯ "ನೀನು ಭೂದೇವಿ, ಸಹಿಸ್ಕೊಂಡೆ.... ತುಂಬ ನೋವಾಯಿತೆ ?''

ಉಗ್ರಯ್ಯ ಔಷಧಿ ಡಬ್ಬಿ ತೆಗೆದುಕೊಂಡು ಅವಳ ನೆತ್ತಿ ಗಾಯಕ್ಕೆ ಸವರಿದನು.

ಸರೋಜ ಮಾತನಾಡಲಿಲ್ಲ. "ಹೀಗೆ ಪ್ರಿಯವಾಗಿ ಒಂದು ಮಾತು ಹೇಳಿಬಿಟ್ಟರೆ ಸಾಕಲ್ಲ. ನನಗೆ ಇನ್ನೇನು ಬೇಕು ? ನಾನು ಮನುಷ್ಯನಾಗುತ್ತೇನೆ" ಎಂದ ಉಗ್ರಯ್ಯ.

"ಇನ್ನು ನಿಮ್ಮ ಮಾತಿಗೆ ಎಂದಿಗೂ ಎದುರು ಮಾತನಾಡುವುದಿಲ್ಲ. ನೀವಲ್ಲದೆ ನನಗೆ ದಿಕ್ಕು ಇನ್ಯಾರು ?''

ಸರೋಜ ಅವನ ಹೆಗಲಿನ ಮೇಲೆ ಮುಖವಿಟ್ಟುಕೊಂಡು ಅತ್ತುಬಿಟ್ಟಳು.

''ಆಗಲಿ, ಆಗಲಿ, ಸಾಕು ಬಿಡು'' ಎಂದ ಉಗ್ರಯ್ಯ.

''ಎಸಾಸ್ಸಿ ಮಾಡಿ, ಹೀಗೆ ಯಾಕೆ ಹಗಲು ರಾತ್ರಿ ದುಡಿಯಬೇಕು?''

''ಏನು, ಅದೇನು ನನಗೆ ತಿಳಿಯದಂತೆ ನಾನು ಮಾಡಿರುವುದು. ಇನ್ನೊಂದು ಸಲ ಹೇಳು.''

''ಆಗಲಿ, ನನ್ನನ್ನು ಹಾಸ್ಯಮಾಡಬೇಡಿ.''

"ಎಸ್.ಎಸ್.ಎಲ್.ಸಿ ಎಂದು ಹೇಳು.''

"ಸರಿ, ಈ ಕಲ್ಲು ಒಡೆಯುವ ಕೆಲಸ ಯಾಕೆ ತೆಗೆದುಕೊಂಡಿರಿ?''

"ನಾನಾಗಿಯೇ ಈ ಕೆಲಸಕ್ಕೆ ಬರಲಿಲ್ಲ. ಇಂಜಿನಿಯರ್ ಆಫೀಸಿನಲ್ಲಿ ಗುಮಾಸ್ತನಾಗಿದ್ದೆ. ನೂರು ರೂಪಾಯಿ ಸಂಬಳ ಬರುತ್ತಿತ್ತು. ಒಂದು ದಿನ ಲೆಕ್ಕದಲ್ಲಿ ತಪ್ಪುಮಾಡಿದೆ. ಮೇಲಧಿಕಾರಿ ನನಗಿಂತ ದಡ್ಡ. ತಿದ್ದುವುದಕ್ಕೆ ತಿಳಿಯದೆ ಹಾಗೆಯೇ ಮೇಲಕ್ಕೆ ಕಳುಹಿಸಿದ. ಕೊನೇಲಿ ಸರ್ಕಾರದಲ್ಲಿ ತಪ್ಪು ಕಂಡುಹಿಡಿದು ನಮ್ಮ ಆಫೀಸಿಗೆ ತಿಳಿಸಿದರು. ನನ್ನ ಮೇಲಧಿಕಾರಿ ನನ್ನನ್ನು ಕರೆದು "ನಿನಗೆ ತಲೆಯಿಂದೆಯೇನಯ್ಯ ಗೂಸ್'' ಎಂದ. ನಾನು "ನೀನು ದೊಡ್ಡ ಗೂಸ್'' ಎಂದು ಶಾಯಿಕುಡಿಕೆಯನ್ನು ಅವನ ಮುಖದ ಮೇಲೆ ಎಸೆದುಬಿಟ್ಟೆ. ರಾದ್ಧಾಂತವಾಯಿತು. ನನಗೆ ಕೆಲಸ ಹೋಯಿತು. ಮೇಲಧಿಕಗಿರಿಗೆ ಪ್ರಮೋಷನ್ ದೊರೆಯಿತು. ಅದೇ ಆಫೀಸಿನಲ್ಲಿ ಕಂಟ್ರಾಕ್ಟ ರಾಗಿದ್ದ ಇವನ ಜತೆ ಸೇರಿದೆ. ಈ ಕೆಲಸದಲ್ಲಿ ಏನು ಕಡಿಮೆ ? ಅವನ ಮನೆ ಯಲ್ಲಿ ಸುಖವಾಗಿ ಊಟ ತಿಂಡಿ ಕಳೆಯುತ್ತೆ. ನಲವತ್ತು ರೂಪಾಯಿ ಬರುತ್ತೆ. ಮೈತುಂಬ ಕೆಲಸ, ಕಲ್ಲು ಒಡೆಯುವುದರಲ್ಲಿ ನನ್ನ ಸಮ ಈ ಊರಿನಲ್ಲೇ ಯಾರೂ ಇಲ್ಲ. ಎಲ್ಲಿ ಈ ಭುಜ ಅಮುಕು; ನಿನ್ನ ಶಕ್ತಿ ನೋಡೋಣ."

ಕೆಲಸಮಾಡಿ ಕಬ್ಬಿಣದ ತುಂಡಾಗಿದ್ದ ಆ ಕರಿಯ ಭುಜವನ್ನು ಅವಳು ಅಮುಕಿದಳು. ಎಷ್ಟು ಅಮುಕಿದರೂ ಅವನಿಗೆ ನೊಣ ಸಹ ಕುಳಿತಂತೆ ಆಗಲಿಲ್ಲ. "ಅಮುಕು ನೋಡೋಣ. ಈ ಕೆಲಸದಲ್ಲಿ ಏನು ಕಮ್ಮಿ. ಇನ್ನೂ ೨೦ ವರುಷ ಇದೇ ರೀತಿ ಗಾಡಿ ಓಡುತ್ತೆ. ನಮ್ಮ ವಂಶದಲ್ಲಿ ಆರು ಅಡಿಗೆ ಕಡಿಮೆಯಾದ ಆಳು ಜನಿಸಿದುದೇ ಇಲ್ಲ.''

"ಇಂತಹ ವಂಶದ ಏಟನ್ನು ತಡೆಯಲು ನನಗೆ ಸಾಧ್ಯವೇ ?'' ಎಂದು ಕೊಂಡು ಅವಳು, ಹೆಬ್ಬಾವು ಹೊರಳುವಂತೆ ಆ ತೋಳುಗಳ ಮೇಲೆ ಒರಗಿ ದಳು.

ಉಗ್ರಯ್ಯನು "ಇವತ್ತು ಹಾಲುಹಾಲಾಗಿ ಉಕ್ಕುತ್ತಿದ್ದೀಯಲ್ಲ ! ನನಗೇನೂ ತೋರುವುದಿಲ್ಲವಲ್ಲ !'' ಎಂದನು. ಸರೋಜ ಏನೂ ಮಾತ ನಾಡಲಿಲ್ಲ. ಅವಳ ಮನಸ್ಸು ಎಲ್ಲಿಯೋ ಅಲೆಯುತ್ತಿತ್ತು. ಉಗ್ರಯ್ಯನು

ಮೃದುವಾಗಿ "ತಿಳಿಯದೆ ಬೈದುಬಿಟ್ಟೆ. ತಪ್ಪಾಯಿತು. ಇದೋ ನಿನ್ನ ಪಾದ ಹೊತ್ತೆ. ಹೀಗೆ ನಗುನಗುತ್ತಾ ಇರು'' ಎಂದನು.

ರಾತ್ರಿ ಬಹಳ ಹೊತ್ತಿನವರೆಗೆ ಅವರಿಗೆ ನಿದ್ರೆ ಬರಲಿಲ್ಲ. ಅವಳಿಗಂತೂ ಬೇರೆ ಊರಿಗೆ ಹೋದಂತೆ ಒಂದು ಅಶಾಂತಿ ಸಂಭ್ರಮ ಉಂಟಾಗಿತ್ತು. ಅನಂತರ ಅವನಿಗೆ ನಿದ್ದೆ ಬಂತು. ಬೆಳಗಿನ ಜಾವದವರೆಗೆ ಅವನು ಗೊರಕೆ ಹೊಡೆಯುತ್ತಲೇ ಇದ್ದನು. ಸೆಖೆ ಅಸಾಧ್ಯವಾಗಿತ್ತು. ಅವಳು ಬೀಸಣಿಗೆ ಯಿಂದ ಅವನಿಗೆ ಗಾಳಿ ಹಾಕುತ್ತಿದ್ದಳು. ಸೂರಿನ ಕಂಡಿಯಲ್ಲಿ ಬೆಳಕು ಆಗಲೇ ಬರತೊಡಗಿತ್ತು. ಅವನು "ನೀನು ಮಲಗಲೇ ಇಲ್ಲವೆ ? ಎಚ್ಚರ ವಾಗಿಯೇ ಇದ್ದೀಯಾ ?'' ಎಂದನು. ಸರೋಜ ಎದ್ದು ಅವನಿಗೆ ನಮ ಸ್ಕರಿಸಿ "ಬಿತ್ತಿದ್ದು ಬೆಳೆಯುತ್ತೆ. ಕೇಡನ್ನು ಬಿತ್ತಿದರೆ ಕೇಡು ಬೆಳೆಯುತ್ತೆ. ನಾನು ಏನೂ ಅರಿಯದ ಮೂಢೆ. ನನ್ನ ಮೇಲೆ ಕೋಪಿಸಿಕೊಳ್ಳಬಾರದು" ಎಂದಳು. ಅವಳ ಕಣ್ಣೀರನ್ನು ತೊಡೆಯುತ್ತಾ ಅವನು "ನಿನಗಿಂತ ಜಾಣೆ ಯಾರೂ ಇಲ್ಲ. ಇನ್ನು ಸ್ವಲ್ಪ ಮಲಗಿಕೋ. ಬಿಂದಿಗೆ ಎತ್ತಿಕೊಂಡು ನದಿಗೆ ಹೋಗಿಬಿಡಬೇಡ, ತಿಳಿಯಿತೆ ?'' ಎಂದನು.

"ನದಿಗೇ ? ಕಣ್ಣು ನಿದ್ರೆಯಿಲ್ಲದೆ ಉರಿಯುತ್ತಿದೆ. ಮೈಯೋ ನೋವು. ಹೀಗೆ ನೀರಿಗೆ ಇಳಿದರೆ ಜ್ವರ ಕಾಯ್ದುಕೊಂಡು ನಮ್ಮನ್ನು ಹಿಡಿದುಕೊಳ್ಳುತ್ತೆ. ಬಿಸಿ ನೀರಿಗೇನು ದರಿದ್ರ ?'' ಎಂದಳು.

"ಹಾಗಾದರೆ ನಾನು ಹೊಳೆಗೆ ಹೋಗಿ ಸ್ನಾನ ಮಾಡಿಕೊಂಡು ಬರುತ್ತೇನೆ'' ಎಂದು ಹೇಳಿ ಉಗ್ರಯ್ಯ ಬಿಂದಿಗೆ ತೆಗೆದುಕೊಂಡು ಹೋದನು.

ಅಂದು ಅವಳಿಗೆ ಹೊಳೆಯ ಜ್ಞಾನವೇ ಬರಲಿಲ್ಲ. ಚೆನ್ನಾಗಿ ನಿದ್ರೆ ಬಂದು ಬಿಟ್ಟಿತ್ತು. ಉಗ್ರಯ್ಯನೇ ಹೊಳೆಯಿಂದ ನೀರು ತಂದು ಅಡಿಗೆಮಾಡಿ ಅವಳನ್ನು ಊಟಕ್ಕೆ ಎಬ್ಬಿಸಿದನು. ಅಂದಿನಿಂದಲೇ ಅವಳು ಉಗ್ರಯ್ಯನ ಒಡತಿಯಾದಳು. ಅವಳ ಬಾಳು ಸುಖವಾಯಿತು.

ಅವಳು ಎಲ್ಲಿಗೆ ಹೋದರೂ ಯಾರೊಂದಿಗೆ ಮಾತನಾಡಿದರೂ ಹೇಗೆ ಅಲಂಕರಿಸಿಕೊಂಡರೂ ಉಗ್ರಯ್ಯನಿಗೆ ಸಂತೋಷವೇ ; ಅವನು ಕೂಡಿಟ್ಟಿದ್ದ ಹಣದಲ್ಲಿ ಸ್ವಲ್ಪಭಾಗ ತೆಗೆದುಕೊಂಡು ಅವನನ್ನೂ ಕರೆದುಕೊಂಡು ಅವಳು ದೇಶಸಂಚಾರ ಹೊರಟಿದ್ದಳು.

ಸ್ವಲ್ಪ ದೂರದ ಬೆಂಚಿನ ಮೇಲೆ ಕುಳಿತಿದ್ದ ರಂಗಸ್ವಾಮಿಗೆ, ನವರಾತ್ರಿಯಲ್ಲಿ ಹೆಂಡತಿಯ ತಲೆ ಒಡೆದ ಕಿರಾತ, ಕ್ರಿಸ್‌ಮಿಸ್ ಹೊತ್ತಿಗೆ ಅವಳ ವಿಧೇಯ ಸೇವಕನಾಗಿ ಹೀಗೆ ಅವಳ ಕೈಗೆ ಮೂಗುದಾರ ಕೊಟ್ಟು ಸವಾರಿಮಾಡಿಸಿಕೊಳ್ಳುತ್ತಿರುವುದು ಅರ್ಥವಾಗಲಿಲ್ಲ. ಕ್ರಿಸ್‌ಮಿಸ್ ರಜವನ್ನು ಊರಿನಲ್ಲಿ, ದೂರದಿಂದಲಾದರೂ ಸರೋಜಳ ಸಾನಿಧ್ಯದಲ್ಲಿ ಕಳೆಯಬಹುದೆಂದು ಹೊರಟಿದ್ದ ಅವನಿಗೆ ಬಹಳ ನಿರುತ್ಸಾಹವಾಯಿತು. ಅಷ್ಟರಲ್ಲಿ ಫ್ಲಾಟ್‌ಫಾರಂ ಕೊನೆಯಲ್ಲಿ ಕಾಣುತ್ತಿದ್ದ ನದಿಯಲ್ಲಿ ನೀರು ತರಲು ಉಗ್ರಯ್ಯ, ಕೂಜ ಚೊಂಬಿನೊಂದಿಗೆ ಹೊರಟು ರಂಗಸ್ವಾಮಿ ಕುಳಿತಿದ್ದ ಬೆಂಚಿನ ಮುಂದೆ ಹೋದನು. ಅಲ್ಲಿ ಕುಳಿತಿದ್ದವನಿಂದ ತನ್ನ ಮೇಲೂ ತನ್ನ ಹೆಂಡತಿಯ ಬಾಳಿನ ಮೇಲೂ ಆದ ಪರಿಣಾಮದ ಅರಿವೇ ಅವನಿಗೆ ಇರಲಿಲ್ಲ.

ಉಗ್ರಯ್ಯ ನಲ್ಲಿಯ ಬಳಿಗೆ ಹೋದ ಮೇಲೆ, ರಂಗಸ್ವಾಮಿ, ಸರೋಜ ಕುಳಿತಿದ್ದ ಬೆಂಚಿನ ಮುಂದೆ ಹೋದನು. ಅವಳನ್ನು ಅವನು ಹಿಂದಲ ಸರೋಜಳೆಂದೇ ಭಾವಿಸಿದ್ದನು. ಆತನನ್ನು ಕಂಡಕೂಡಲೇ ಸರೋಜ "ದಯವಿಟ್ಟು ನನ್ನನ್ನು ಗುರುತಿಸಬೇಡಿ ; ನಮ್ಮ ಪಾಡಿಗೆ ನಾವು ಸುಖವಾಗಿದ್ದೇವೆ. ನೀವು ನನ್ನೊಂದಿಗೆ ಮಾತನಾಡಿದರೆ ನನ್ನ ಬಾಳು ಹಾಳಾಗುವುದು" ಎಂದಳು. ರಂಗಸ್ವಾಮಿ ಪ್ರತ್ಯುತ್ತರ ಹೇಳುವುದಕ್ಕೆ ಮುಂಚೆಯೇ ದೂರದಲ್ಲಿ ಉಗ್ರಯ್ಯ ಹಿಂದಿರುಗುತ್ತಿದ್ದುದನ್ನು ಕಂಡು ಸುಮ್ಮನಾದನು.

ಶ್ರೀರಂಗದ ಕಡೆ ಹೊರಡುವ ರೈಲು ಹೊರಟಿತು. ಸರೋಜಳೂ ಉಗ್ರಯ್ಯನೂ ಅದರಲ್ಲಿ ಕುಳಿತರು. ರಂಗಸ್ವಾಮಿ ಎವೆಯಿಕ್ಕದೆ ಅವರನ್ನೇ ನೋಡುತ್ತಿದ್ದನು. ಅವನ ಏಕಾಗ್ರತೆಯಲ್ಲಿ ಅವನ ಬಳಿ ಅವನ ಮತ್ತೊಬ್ಬ ಗೆಳೆಯ ಬಂದು ನಿಂತುದೂ ಅವನಿಗೆ ಗೊತ್ತಾಗಲೇ ಇಲ್ಲ. ರಂಗಸ್ವಾಮಿಯ ದೃಷ್ಟಿ ಹೋದ ಕಡೆ ಸ್ನೇಹಿತನ ದೃಷ್ಟಿಯೂ ಹೋಯಿತು. "ಆಕೆ ನಿನಗೆ ಗೊತ್ತೆ ?" ಎಂದು ಸ್ನೇಹಿತ ರಂಗಸ್ವಾಮಿಯನ್ನು ಕೇಳಿದ. ರಂಗಸ್ವಾಮಿ ಮಾತನಾಡಲಿಲ್ಲ. ಸ್ನೇಹಿತನು ಮತ್ತೆ "ಆಕೆ ಯಾರು ?" ಎಂದ. ರಂಗಸ್ವಾಮಿಯು ಒಂದು ಗಳಿಗೆ ಸುಮ್ಮನಿದ್ದು "ಫ್ರಂಗಿ" ಎಂದ. ಸ್ನೇಹಿತ ಏನೂ ಅರ್ಥವಾಗದುದರಿಂದ ಸುಮ್ಮನಾದ.

ರಂಗಸ್ವಾಮಿ ತನ್ನಲ್ಲಿಯೇ 'ನಿಜ, ಪುಂಗಿ ಆ ನಾಗರವನ್ನು ಹೇಗೆ ಪಳಗಿಸಿದ್ದಾಳೆ' ಎಂದುಕೊಂಡ. ರಂಗಸ್ವಾಮಿಗೆ ಹರಿಹರಪುರಕ್ಕೆ ಹೋಗಲು ಇದ್ದ ಉತ್ಸಾಹವೇ ಅಡಗಿಹೋಯಿತು.

ತಪ್ಪಿದ ರೈಲಿನಲ್ಲಿ

"ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ" ಎಂದು ಹಿರಿಯರು ಹೇಳುವುದು ಪದ್ಧತಿ. "ಇದು ಮುದುಕರ ಮಾತು. ಯುವಕರಿಗೆ ಇದು ಅನ್ವಯಿಸುವುದಿಲ್ಲ" ಎಂಬುದು ಯುವಕ ಬಹದ್ದೂರರ ಮತ. ಅಂತಹ ಯುವಕ ಬಹದ್ದೂರರೂ ಸಹ ಅರ್ಧ ರಾತ್ರಿ ಅಥವಾ ಬೆಳಗಿನ ಜಾವದ ರೈಲಿನಲ್ಲಿ, ತಾವು ಇಳಿಯಬೇಕಾದ ಸ್ಟೇಷನ್ನನ್ನು ಬಿಟ್ಟು ಮುಂದಲ ಸ್ಟೇಷನ್ನಿಗೆ ಹೋಗಿರುವುದುಂಟು. ಅಂತಹ ಸಂದರ್ಭದಲ್ಲಿ ಅವರು ತಪ್ಪನ್ನು ಸಾಧಾರಣವಾಗಿ ನಿದ್ರೆಯ ಮೇಲೆ ಹಾಕುತ್ತಾರೆ. ಈಗ ಸ್ವಲ್ಪ ದಿನಗಳ ಕೆಳಗೆ ನಾನು ಒಂದು ದಿನ ಬೆಂಗಳೂರಿನಿಂದ ರಾತ್ರಿ ರೈಲಿನಲ್ಲಿ ಹಾಸನಕ್ಕೆ ಹೊರಡಬೇಕಾಗಿತ್ತು. ಸ್ಟೇಷನ್ನಿನ ಟಿಕೆಟ್ ದ್ವಾರದಲ್ಲಿ ಒಬ್ಬನೇ ಪ್ರಯಾಣಿಕ ನಿಂತಿದ್ದ. ಒಳ್ಳೆ ಲಕ್ಷಣವಾದ ಯುವಕ. ಅವನು ಗಟ್ಟಿಯಾಗಿಯೇ "ತುಮಕೂರಿಗೆ ಟಿಕೆಟ್ ಕೊಡಿ"ಎಂದು ಕೇಳಿ ಟಿಕೆಟ್ ತೆಗೆದುಕೊಂಡ. ಅವನ ಹಿಂದೆಯೇ ನಾನೂ ಹಾಸನಕ್ಕೆ ಟಿಕೆಟ್ ತೆಗೆಸುಕೊಂಡೆ.ಇಬ್ಬರೂ ಒಂದೇ ದಾರಿಯಲ್ಲಿ ಹೋಗುವವರಾದುದರಿಂದ ನಾನೂ ಸ್ವಾಭಾವಿಕವಾಗಿ, ಮುಂದೆ ಸರಸರನೆ ಹೋಗುತ್ತಿದ್ದ ಅವನನ್ನೇ ಅನುಸರಿಸಿದೆ. ಅವನು ಫ್ಲಾಟ್‌ಫಾರಂನಲ್ಲಿ ನಿಂತಿದ್ದ ಗಾಡಿಗಳ ಸಮೀಪಕ್ಕೆ ಹೋಗಿ, ಏನೋ ಹುಡುಕುತ್ತಿರುವವನಂತೆ ಪ್ರತಿ ಗಾಡಿಯಲ್ಲಿಯೂ ಇಣಕಿ ನೋಡುತ್ತಾ ಮುಂದೆ ಹೋಗುತ್ತಿದ್ದನು. ಅವನು ಕುಳಿತುಕೊಳ್ಳುವ ಗಾಡಿಗೆ ನಾನು ಕುಳಿತುಕೊಳ್ಳಬೇಕೆಂದು ಅವನ ಹಿಂದೆಯೇ ನಾನೂ ಹೋಗುತ್ತಿದ್ದೆ. ಕೊನೆಯಲ್ಲಿ ಒಂದು ಗಾಡಿಯನ್ನು ಒಳಗಡೆ ನೋಡಿ ತನಗೆ ಬೇಕಾದವರೋ ಬೇಕಾದುದೋ ಅಲ್ಲಿದ್ದುದನ್ನು ಕಂಡು ಗಾಡಿ ತುಂಬಿದ್ದರೂ ಆತ ಅದರೊಳಕ್ಕೆ ಕುಳಿತ. ಗಾಡಿಯ ಮೇಲೆ ಇದ್ದ ಬೋರ್ಡ್ ನೋಡಿದೆ. "ಮೈಸೂರು" ಎಂದಿತ್ತು. ತುಮಕೂರಿಗೆ ಟಿಕೇಟು ತೆಗೆದುಕೊಂಡವನು ಮೈಸೂರು ಎಂದು ಬರೆದಿದ್ದ ಗಾಡಿಯಲ್ಲಿ ಕುಳಿತುದರಿಂದ ನನಗೆ ಏನೂ ಗಾಬರಿಯಾಗಲಿಲ್ಲ. ಏಕೆಂದರೆ ಬೆಂಗಳೂರಿನಿಂದ ಪೂನಾಕ್ಕೆ ಹೋಗುವ ರಾತ್ರಿ ಗಾಡಿಯಲ್ಲಿ ಅರಸೀಕೆರೆಯ ಮಾರ್ಗವಾಗಿ

ಮೈಸೂರಿಗೆ ಹೋಗುವ ಒಂದು ಬದಲಾಯಿಸದ (ಥ್ರೂ-ಸೀದಾ) ಗಾಡಿ ಹಾಕಿರುತ್ತಾರೆ. ಹಾಸನಕ್ಕೆ ಹೋಗುವವರೆಲ್ಲ ಸಾಧಾರಣವಾಗಿ ಸೀದಾ ಗಾಡಿಯಲ್ಲಿಯೇ ಕುಳಿತುಕೊಳ್ಳುವುದು ಪದ್ಧತಿ. ಅದರಲ್ಲಿ ಕುಳಿತುಬಿಟ್ಟರೆ ಬೆಳಗಿನ ಜಾವ ಹಾಸನದಲ್ಲಿಯೇ ಇಳಿಯುವುದು. ನಾನೂ ತೃಪ್ತನಾಗಿ ಗಾಡಿ ಏರಿದೆ. ಒಳಗಡೆ ನಿಲ್ಲುವುದಕ್ಕೂ ಸಹ ಸ್ಥಳವಿರಲಿಲ್ಲ. ಹೇಗೋ ನನ್ನ ಚೀಲವನ್ನು ಹೆಗಲಿನ ಮೇಲೆ ಹಾಕಿಕೊಂಡು ಮೇಲಿನ ಆಸನವನ್ನು ಹಿಡಿದುಕೊಂಡು ನಿಂತುಕೊಂಡೆ.ನಾಲ್ಕಾರು ಕಾಲೇಜು ವಿದ್ಯಾರ್ಥಿಗಳು ಕೈಕಾಲು ನೀಡಿಕೊಂಡು, ಎಂಟು ಜನರ ಜಾಗವನ್ನು ಆಕ್ರಮಿಸಿಕೊಂಡು ಗಾಡಿಯ ತುಂಬ ಸಿಗರೇಟಿನ ಹೊಗೆಯನ್ನು ತುಂಬಿ, "ಭಾರತ ಸಂವಿಧಾನದಲ್ಲಿ ಎಲ್ಲರೂ ಸಮಾನ" ಎಂದು ಬಹಳ ದಪ್ಪ ಧ್ವನಿಯಲ್ಲಿ ಚರ್ಚಿಸುತ್ತಿದ್ದರು.ನಾನು ಕನಿಕರದಿಂದ ಅವರ ಕಡೆ ನೋಡಿದೆ. ಆ ನೋಟದಲ್ಲಿ'ಅಯ್ಯೋ ಮೃಗವೇ, ಸಮಾನತೆಯನ್ನು ಕುರಿತು ಯಾಕೆ ಹೀಗೆ ಚರ್ಚಿಸುತ್ತಿ. ನೀವು ನಾಲ್ಕು ಜನ ಎಂಟು ಜನರ ಜಾಗ ಆಕ್ರಮಿಸಿರುವುದೂ, ನಾನು ಹೆಗಲಿನ ಮೇಲೆ ಚೀಲ ಹಾಕಿಕೊಂಡು ನಿಂತಿರುವುದೂ ನಿನ್ನ ಕಣ್ಣಿಗೆ ಕಾಣುವುದಿಲ್ಲವೇ?' ಎಂದು ನನ್ನ ಭಾವನೆಯಿತ್ತು.ಅವರ ಪೈಕಿ ಒಬ್ಬ ವಿದ್ಯಾರ್ಥಿಗಂತೂ ನನ್ನ ಆ ಭಾವನೆ ತಿಳಿದಂತೆ ತೋರಿತು. ಅವನು ಮಗ್ಗುಲಲ್ಲಿದ್ದ ಸ್ನೇಹಿತನಿಗೆ "ಸ್ವಲ್ಪ ಈಚೆಗೆ ಸರಿದು ಕುಳಿತುಕೊ, ಅವರು ಕುಳಿತುಕೊಳ್ಳಲಿ"ಎಂದನು. ಆ ಮಿತ್ರ ಹೊಗೆ ಬಿಡುತ್ತಾ ಅದರ ಸಂದಿಯಲ್ಲಿ ನನ್ನನ್ನು ಒಂದು ಸಲ ನೋಡಿದನು. ಅವನಿಗೆ ನನ್ನ ಮುಖದಲ್ಲಿ ಏನು ತೋರಿತೋ ! ಅವನು "ಎಲ್ಲಿದೆ ಜಾಗ ಮುಂದಲ ಸ್ಟೇಷನ್‌ನಲ್ಲಿ ಕೆಲವರು ಇಳಿಯುತ್ತಾರೆ. ಆಗ ಜಾಗ ಆಗುತ್ತೆ" ಎಂದನು. ನನ್ನ ಮುಖವನ್ನು ನೋಡದೆ ಇದ್ದಿದ್ದರೆ ಅವನು ನನಗೆ ಜಾಗ ಕೊಡುತ್ತಿದ್ದನೆಂದು ತೋರುತ್ತದೆ. ನನಗೆ ವಿರೋಧವಾಗಿ ನನ್ನ ಮುಖದಲ್ಲಿ ಏನೋ ಇರಬೇಕು. ಆ ವಾರದ ಪತ್ರಿಕೆಯ ರಾಶಿಫಲದಲ್ಲಿ ನನ್ನ ರಾಶಿಯಲ್ಲಿ "ಪತ್ರ ವ್ಯವಹಾರದಿಂದ ಫಲ ಉತ್ತಮ. ಎದುರಿಗೆ ಭೇಟಿ ಸುಖವಿಲ್ಲ"ಎಂದು ಇದ್ದುದು ಜ್ಞಾಪಕಕ್ಕೆ ಬಂತು. ವಿದ್ಯಾರ್ಥಿಯ ಎದುರುಗಡೆ ಇದ್ದ ಮುದುಕರು ವಿದ್ಯಾರ್ಥಿ ಅವರ ಮುಖದ ಮೇಲೆಯೇ ಹೊಗೆಬಿಡುತ್ತಿದ್ದುದನ್ನು ನೋಡಿ "ಕಿಟಕಿಯಿಂದ ಸ್ವಲ್ಪ ಹೊರಕ್ಕೆ ಹೊಗೆ ಬಿಡಪ್ಪ"ಎಂದರು. ವಿದ್ಯಾರ್ಥಿಯು ಭಾರತ ಸಂವಿಧಾನವನ್ನು ಮಾತನಾಡಿದಷ್ಟೇ ದೊಡ್ಡ ದನಿಯಿಂದ "ಈ ಕಾಲದಲ್ಲಿ ಇದಕ್ಕೆಲ್ಲ ಹೊಂದಿ

ಕೊಳ್ಳಬೇಕು ಸ್ವಾಮಿ. ಇಲ್ಲದಿದ್ದರೆ ನೀವು ರೈಲಿನಲ್ಲಿ ಪ್ರಯಾಣಾನೇ ಮಾಡಬಾರದು. ನೆಹ್ರೂ ಕೂಡ ಸಿಗರೇಟು ಸೇದುತ್ತಾರೆ" ಎಂದನು. ಮುದುಕರು "ಅಯ್ಯೋ ಪಾಪ" ಎನ್ನುವಂತೆ ಕನಿಕರದಿಂದ ಅವನನ್ನು ನೋಡಿ ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡು ಮೂಗಿಗೆ ಬಟ್ಟೆಹೊದೆದುಕೊಂಡರು.ಮುದುಕರು ನನಗೆ ವಿನಯದಿಂದ"ಹಾಳಾದ್ದು ಸೆಕೆ. ಈ ಹೊಗೆ ಕುಡಿದರೆ ನನಗೆ ಆಗುವುದಿಲ್ಲ, ವಾಂತಿ ಬರುತ್ತೆ. ನೀವು ಕುಳಿತುಕೊಳ್ಳಿ. ನಾನು ಸ್ವಲ್ಪ ಕಿಟಕಿ ಹೊರಕ್ಕೆ ತಲೆ ಇಡುತ್ತೇನೆ"ಎಂದು ಎದ್ದರು.ಅವರು ಬಿಟ್ಟ ಸ್ಥಳದಲ್ಲಿ ನಾನು ಹೇಗೋ ಕುಳಿತುಕೊಂಡೆ. ನಾನು ಹೀಗೆ ಮುದುಕರು ಬಿಟ್ಟ ಸ್ಥಳದಲ್ಲಿ ಕುಳಿತುದನ್ನು ನೋಡಿ ಆ ಸಿಗರೇಟ್ ಸುಂದರನಿಗೆ ಅಷ್ಟು ತೃಪ್ತಿಯಾದಂತೆ ತೋರಲಿಲ್ಲ.

ನಾನು ನಿಧಾನವಾಗಿ ಗಾಡಿಯಲ್ಲಿದ್ದವರನ್ನೆಲ್ಲ ನೋಡಿದೆ. ಒಂದು ಕೊನೆಯಲ್ಲಿ ಶಾಲು ಹೊದೆದಿದ್ದ ಮುದುಕರು ಅವರ ಸಮೀಪದಲ್ಲಿ ವಯಸ್ಸಾದ ಅವರ ಹೆಂಡತಿ ಆಕೆಯ ಸಮೀಪದಲ್ಲಿ ಚೆಲುವೆಯಾದ ಸುಮಾರು ೧೬–೧೭ ವರುಷದ ಯುವತಿ. ಯುವತಿ ಜರಿಸೀರೆ ಉಟ್ಟಿದ್ದಳು. ಅವರು ಯಾವುದೋ ಶುಭಕಾರ್ಯದಿಂದ ಹಿಂದಿರುಗುತ್ತಿದ್ದಂತೆ ನನಗೆ ತೋರಿತು. ನನ್ನ ಎದುರಿಗೆ ಕುಳಿತಿದ್ದ ಸಿಗರೇಟು ಸೇದುತ್ತಿದ್ದ ಭೂಪನಿಗೆ ಮುದುಕನು ಸೋದರಮಾವನಾಗಬೇಕೆಂಬುದನ್ನು ಅವರ ಮಾತುಗಳಿಂದ ಅರಿತೆ. ಇನ್ನೂ ಒಂದು ಗಳಿಗೆ ಅವರ ಸಂಭಾಷಣೆ ಕೇಳುವುದರೊಳಗೆ ಅವರೆಲ್ಲ ಕೋಲಾರಕ್ಕೆ ಮದುವೆಗಾಗಿ ಹೋಗಿದ್ದರೆಂದೂ, ಹೆಣ್ಣಿನ ತಂದೆ ತಾಯಿಗಳು ಕೋಲಾರದಲ್ಲಿರುವರೆಂದೂ ಸಿಗರೇಟು ಸೇದುತ್ತಿದ್ದ ಭೂಪನೇ ವರನೆಂದೂ ಆ ಯುವಕರೆಲ್ಲ ಅವನ ಜತೆಯ ವಿದ್ಯಾರ್ಥಿಗಳೆಂದೂ, ಅವರೆಲ್ಲರೂ ವರನೂ ಇಂಟರ್‌ಮಿಡಿಯೇಟ್ ತರಗತಿಯವರೆಂದೂ, ನನಗೆ ತಿಳಿಯಿತು. ಮುದುಕರು ಸೋದರಮಾವನಾಗಿದ್ದುದರಿಂದ ಯುವಕ ಅವರ ಎದುರಿಗೆ ಹೀಗೆ ಸ್ವಲ್ಪ ಸ್ವೇಚ್ಛೆಯಿಂದಲೇ ನಡೆಯುತ್ತಿರುವುದಾಗಿಯೂ, ತಂದೆ ತಾಯಿಗಳಿಲ್ಲದ ಹುಡುಗನನ್ನು, ಮಕ್ಕಳಿಲ್ಲದುದರಿಂದ ಬಾಲ್ಯದಿಂದ ಸೋದರಮಾವನೇ ಬೆಳೆಸಿದ್ದುದರಿಂದ ಹುಡುಗನನ್ನು ಕೊಬ್ಬಿಸಿರುವರೆಂದೂ ಗೊತ್ತಾಯಿತು. ಮದುವೆಯಾದ ಮೇಲಂತೂ ಪೆಚ್ಚುಪೆಚ್ಚಾಗಿ ಆಡುವುದು ತನ್ನ ಹಕ್ಕು ಎಂದೇ ಆ ಯುವಕ ಭಾವಿಸಿದಂತಿತ್ತು. ಮದುವೆಯನ್ನು ಮುಗಿಸಿಕೊಂಡು ಹುಡುಗಿಯೊಬ್ಬಳನ್ನೇ ಕರೆದುಕೊಂಡು,

ಮದುವೆ ಜನ ವರನ ಸೋದರಮಾವನ ಮನೆಗೆ ಹಿಂದಿರುತ್ತಿದ್ದರು. ನಾನು ಹುಡುಗಿಯನ್ನು ನೋಡಿದೆ. ಗೆಲುವಾಗಿ ಸುಂದರಿಯಾಗಿ ಸುಂದರಿಯಾಗಿ ನಿಸ್ಸಂದೇಹವಾಗಿ ರಾಣಿಯಾಗಲು ಅರ್ಹಳಾಗಿದ್ದಳು. ವಿದ್ಯಾವತಿಯಂತೆಯೂ ತೋರಿದಳು. ಗಂಡನ ಮಾತು, ಕೇಕೆ, ಸಿಗರೇಟು, ಕಾಲು ನೀಡಿಕೊಂಡು ಅವನು ಇಬ್ಬರ ಸ್ಥಳವನ್ನು ಆಕ್ರಮಿಸಿದುದು, ಮುದುಕರನ್ನು ಅವನು ಗದರಿಸಿದುದು ಇವನ್ನೆಲ್ಲ ನೋಡಿ ಆಕೆ ನಾಚಿಕೆಯಿಂದ ತನ್ನಲ್ಲಿಯೇ ಹೆದರಿ ಹುದುಗಿಕೊಳ್ಳುತ್ತಿದ್ದಳು. ಆಕೆ ಅವನ ನೂತನ ಭಾರ್ಯೆ ಎಂದು ತಿಳಿದ ಮೇಲೆ ನಾನು ಅವನ್ನೆಲ್ಲ ಗಮನಿಸಿದೆ.

ರೈಲು ಹೊರಟಿತು. ನನ್ನ ಜತೆಯಲ್ಲಿ ಬಂದು ಗಾಡಿ ಏರಿದ್ದ ಯುವಕ ಮೆತ್ತಗೆ ಜಾಗ ಮಾಡಿಕೊಂಡು ನನ್ನ ಸಮೀಪದಲ್ಲಿ ಬಂದು ಕುಳಿತ. ನಾನು ಅವನನ್ನು ನೋಡಿ, ಅವನು ತುಮಕೂರಿಗೆ ಟಿಕೆಟ್ ತೆಗೆದುಕೊಂಡುದು ಜ್ಞಾಪಕವಿದ್ದುದರಿಂದ "ಈ ರೈಲು ತುಮಕೂರಿಗೆ ಎಷ್ಟು ಹೊತ್ತಿಗೆ ಹೋಗುತ್ತೆ ?" ಎಂದೆ. ಆತ ತನ್ನ ಜೇಬಿನಲ್ಲಿದ್ದ ಟಿಕೆಟ್ಟನ್ನು ಹೊರಕ್ಕೆ ತೆಗೆದು ಅದನ್ನು ನೋಡಿದಂತೆ ಮಾಡಿ "ಹನ್ನೆರಡು ಗಂಟೆಗೆ ಹೋಗಬೇಕು" ಎಂದ. ನಮ್ಮ ಎದುರಿಗೆ ಕುಳಿತಿದ್ದವರೆಲ್ಲ ಒಂದೇ ಏಟಿಗೆ "ತುಮಕೂರಿಗೆ ? ಇದಕ್ಕೆ ಯಾಕೆ ಕುಳಿತಿರಿ" ಎಂದರು. "ಕೆಲವರು ಸರಪಳೀನಾದರೂ ಎಳೀರಿ ಸಾರ್" ಎಂದರು. ನಾನು "ಇದೇನಪ್ಪ ಹೀಗಾಯಿತು. ಈ ಯುವಕನ ದಾರಿ ತಪ್ಪಿದೆ. ನೋಡಿದರೆ ಶೀಕ್ ಠಾಕ್ ಆಗಿ ಬುದ್ಧಿವಂತನಾಗಿದ್ದಾನೆ. ಆದರೆ ರೈಲಿಗೆ ಕುಳಿತುಕೊಳ್ಳೋಕೆ ಕೂಡ ಗೊತ್ತಿಲ್ಲವಲ್ಲ" ಎಂದುಕೊಂಡೆ. ತುಮಕೂರಿನ ಟಿಕೆಟ್ ಯುವಕ ಯಾರಿಗೂ ಜವಾಬನ್ನೇ ಕೊಡಲಿಲ್ಲ. ಸ್ವಲ್ಪ ಪೆಚ್ಚು ಮುಖ ಹಾಕಿಕೊಂಡಂತೆ ತೋರಿಸಿಕೊಂಡ. ಹಿಂದುಗಡೆ ಒಬ್ಬರು "ತುಮಕೂರಿಗೆ ಹೋಗೋರು ಮೈಸೂರು ಗಾಡಿಗೆ ಯಾಕೆ ಕೂತಿರಿ ?" ಎಂದರು. ಅಷ್ಟರಲ್ಲಿ ಮದುವೆಯಾದ ಯುವಕ ತಿರಸ್ಕಾರ ಧ್ವನಿಯಲ್ಲಿ "ಇಷ್ಟಕ್ಕೆ ಬೀಳೋದನ್ನು ಕಾಣದೆ ಯಾಕೆ ಬಂದು ಕೂತ್ಕೋಬೇಕಾಗಿತ್ತು. ತಿಳೀದೆಹೋದರೆ ಕೇಳೋದಕ್ಕೇನು ? ದೇವರು ಬುದ್ಧಿಕೊಡದೆ ಹೋದರೆ ಬಾಯನ್ನಾದರೂ ಕೊಟ್ಟಿಲ್ಲವೆ ?" ಎಂದ. ತುಮಕೂರು ಟಿಕೆಟ್ಟಿನ ಯುವಕನು "ನನಗೆ ದೇವರು ಬುದ್ಧಿ ಕೊಟ್ಟಿಲ್ಲ ನಿಜ; ಆದರೆ ಕೊಟ್ಟಿರುವ

ಬುದ್ಧಿಯನ್ನು ನಾನು ನಿಮ್ಮಂತೆ ಮಂಕು ಮಾಡಿಕೊಂಡು, ಪೂನಾ ರೈಲನ್ನು ಮೈಸೂರು ರೈಲು ಎನ್ನುತ್ತಿರಲಿಲ್ಲ" ಎಂದ. ಸುತ್ತ ಇದ್ದವರೆಲ್ಲ ಗೊಳ್ಳೆಂದು ನಕ್ಕರು. ನನಗೂ ನಗು ಬಂತು. ಮದುವೆಯಾದ ಯುವಕ "ಹಾಗಾದರೆ ಇದು ಪೂನಾಕ್ಕೆ ಹೋಗುವ ರೈಲು ಎನ್ನಿ" ಎಂದ. ತುಮಕೂರು ಟಿಕೆಟ್‌ನ ಯುವಕ "ಹೌದು, ಸಂದೇಹವಿಲ್ಲ. ಆದರೆ ಬುದ್ಧಿ ಇಲ್ಲದವರಿಗೆ ಏನು ಹೇಳಿದರೆ ತಾನೇ ಪ್ರಯೋಜನವೇನು" ಎಂದ. ಇಬ್ಬರ ಸಂಭಾಷಣೆಯು ಒಳ್ಳೆ ರೇಗಿದ ಎದ್ದ ಧ್ವನಿಯಲ್ಲಿ ನಡೆಯುತ್ತಿತ್ತು. ಗಾಡಿಯಲ್ಲಿ ಮತ್ತಾರ ಮಾತಿನ ಧ್ವನಿಯೂ ಇರಲಿಲ್ಲ. ವಿವಾಹಿತನಾದ ಯುವಕನು ಕೋಪದಿಂದ "ಹಾಗಾದರೆ ಪೂನಾಕ್ಕೆ ಹೋಗಬೇಕಾದವರೆಲ್ಲ ಈ ಗಾಡಿಗೇ ಕುಳಿತುಕೊಳ್ಳುತ್ತಾರೆ !" ಎಂದ. ತುಮಕೂರು ಟಿಕೆಟಿನ ಯುವಕ "ಮದುವೆಯಿಂದ ಅವರ ತಲೆ ಕೆಡದಿದ್ದರೆ" ಎಂದ.

ಆಗ ಹಿಂದುಗಡೆ ಕುಳಿತಿದ್ದ ನೂತನ ವಧು ಸ್ವಲ್ಪ ಕೆಮ್ಮಿದಳು. ವಿದ್ಯುತ್ ಆಕರ್ಷಿಸಿದಂತೆ ತುಮಕೂರು ಟಿಕೆಟ್ ಯುವಕ ಹಿಂದಿರುಗಿದ ಸ್ವಾಭಾವಿಕವಾಗಿ ನಾನೂ ಹಿಂದೆ ತಿರುಗಿದೆ. ಒಂದೇ ಒಂದು ಕ್ಷಣ ಮಾತ್ರ ಆ ಹುಡುಗಿ ಮುಖದಲ್ಲಿ ಏನೋ ಸಂಜ್ಞೆ ಮಾಡಿದಂತೆ ನನಗೆ ತೋರಿತು. ಆ ದೃಷ್ಟಿಯಲ್ಲಿ ಹುಡುಗನನ್ನು "ದಯವಿಟ್ಟು ಬೇಡ" ಎಂದು ಬೇಡುವ ಧ್ವನಿ ಇತ್ತು. ನಾನು ಅವಳನ್ನು ನೋಡಿ ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ಹುಡುಗಿ ಮುಖ ತಗ್ಗಿಸಿಬಿಟ್ಟಳು. ಎಷ್ಟು ಮಿಂಚಿನ ವೇಗದಲ್ಲಿ ಅದು ನಡೆಯಿತೆಂದರೆ ಒಬ್ಬರಿಂದ ಒಬ್ಬರಿಗೆ ಏನಾದರೂ ಸೂಚನೆ ಬಂದಿತೋ ಎಂಬುದು ಕೂಡ ನನಗೆ ಖಂಡಿತವಾಗಲಿಲ್ಲ.

ಮದುವೆಯಾದ ಯುವಕ ಕೋಪದಿಂದ "ನೀನು ಸರ್ವ ಪ್ರಾಜ್ಞನೇ ಇರಬಹುದು. ಹಾಗಾದರೆ ನೀನು ಹೇಳುವಂತೆ ಮುಂದಲ ಸ್ಟೇಷನ್ ಯಶವಂತಪುರ ತಾನೆ ?'' ಎಂದನು. ತುಮಕೂರು ಯುವಕನು "ಹಾಗಾದರೆ ಯಶವಂತಪುರ ವಲ್ಲದೆ ಕೆಂಗೇರಿ ಬರುತ್ತೆ ಎಂದು ಭಾವಿಸಿದ್ದೀಯಾ ?'' ಎಂದನು. ವಿವಾಹಿತ ಯುವಕನು "ಹೌದು ಕೆಂಗೇರಿಯೇ ಬರುತ್ತೆ" ಎಂದನು. ಎದುರಾಳಿ "ನಿನ್ನ ತಲೆ" ಎಂದನು. ಮದುವೆಯಾಗಿದ್ದ ಯುವಕನ ಮುಖ ಕೆಂಪಾಯಿತು. ಅವನು ತುಮಕೂರು ಟಿಕೇಟಿನವನನ್ನು ಹೊಡೆಯುವಂತೆಯೇ ಕೈ ಎತ್ತಿದನು. ನಾನು

ಅವನನ್ನು ತಡೆದು "ಅಪ್ಪಾ, ಯಾಕೆ ನಿಮಗೆ ಹೋರಾಟ. ಅರ್ಧಗಂಟೆ ಸುಮ್ಮನಿರಿ, ತೀರ್ಮಾನವಾಗುತ್ತೆ. ಮೊದಲನೆಯ ಸ್ಟೇಷನ್ ಬಂದ ಕೂಡಲೇ ಯಾರದು ಕತ್ತೆ, ಯಾರದು ಕುದುರೆ ಎಂದು ಗೊತ್ತಾಗುತ್ತೆ" ಎಂದೆ. ತುಮಕೂರು ಟಿಕೆಟ್‌ನವನು "ಯಾರದು ಕತ್ತೆ ಎಂದು ಯಾಕೆ ? ಯಾರು ಕತ್ತೆ ಎಂದೇ ಹೇಳಿ" ಎಂದನು. ಮದುವೆಯಾಗಿದ್ದವನು "ನನ್ನನ್ನು ಕತ್ತೆ ಎನ್ನುತ್ತೀಯಾ 'ಯು ಈಡಿಯಟ್', ಅಷ್ಟು ಹೊತ್ತಿನಿಂದ ಸಹಿಸಿಕೊಂಡು ಬಂದೆ. ಇನ್ನು ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ" ಎಂದು ಎದ್ದನು. ತುಮಕೂರು ಟಿಕೆಟ್‌ನವನು "ಹೊಡೆಯುವುದಕ್ಕೆ ಬರವೆ ಏನು ಮಾಡುತ್ತಾನೆ. ನೀವು ಹೇಳಿದ ಹಾಗೆ ಕತ್ತೆಯಾದ ಮೇಲೆ ಒದೆಯಲೇಬೇಕಲ್ಲ" ಎಂದನು. ವರನು ನನಗೇ ಎರಡು ಕೊಡುವಂತೆ ನನ್ನ ಕಡೆ ಕೋಪದಿಂದ ನೋಡಿದನು. ನನಗೆ "ಇದೊಳ್ಳೆ ಪೀಕಲಾಟಕ್ಕೆ ಬಂತಲ್ಲ" ಎಂಬ ಗಾಬರಿಯಾಯಿತು. ತುಮಕೂರು ಟಿಕೆಟ್ಟನವನು "ಈ ಒರಟಾಟದಿಂದ ಏನ್ರಿ ಪ್ರಯೋಜನ ? ನೀವು ನಿಜವಾಗಿ ವಿದ್ಯಾವಂತರಾದರೆ, ಎಲ್ಲಿ ಜೂಜು ಕಟ್ಟಿರಿ. ಯಶವಂತಪುರ ಸಿಕ್ಕಿದರೆ ಏನು ಕೊಡುತ್ತೀರಿ ?" ಎಂದನು. ವರನು "ಯಶವಂತಪುರವಂತೆ ಯಶವಂತಪುರ, ನಿನ್ನ ತಲೆ ? ಯಾವ ಸ್ಕೂಲಿನಲ್ಲಿ ಓದಿದೆಯೋ ಬೃಹಸ್ಪತಿ. ಮುಂದಲ ಸ್ಟೇಷನ್ ಯಾವುದು ಇವರನ್ನೇ ಕೇಳೋ. ಎಲ್ಲರೂ ನಿನ್ನಂತೆ ಗಾಂಪರೊಡೆಯರ ಶಿಷ್ಯರಲ್ಲ" ಎಂದನು. ನನ್ನನ್ನು "ನಿಮ್ಮದು ಯಾವ ಟಿಕೆಟ್ ತೆಗೆಯಿರಿ ಸಾರ್. ಅದರಿಂದಲಾದರೂ ಈ ಅಧಿಕ ಪ್ರಸಂಗಿಗೆ ತಿಳಿಯಲಿ, ಜೂಜಂತೆ ಜೂಜು" ಎಂದನು. ನಾನು ನನ್ನ ಟಿಕೆಟ್ ತೆಗೆಯದೆ ಸುಮ್ಮನೆ ಕುಳಿತಿದ್ದೆ. ವರನು "ತೆಗೆಯಿರಿ ಸ್ವಾಮಿ. ತೋರಿಸಿ ಓದುವುದಕ್ಕೆ ಬಂದರೆ ಓದಲಿ" ಎಂದನು. ನಾನು ವಿಧಿಯಿಲ್ಲದೆ ನನ್ನ ಹಾಸನದ ಟಿಕೆಟ್ಟನ್ನು ತೆಗೆದು ತೋರಿಸಿದೆ. ವರನು ಒಂದು ಗಳಿಗೆ ಮಂಕಾಗಿ ಅನಂತರ "ಮೂಢೋ ಮೂರ್ಖೋ ಗಾರ್ಧಭೋ ಏಕರಾಶಿಃ" ಎಂದನು. ನನ್ನ ಟಿಕೆಟ್ಟನ್ನು ನೋಡಿ ತುಮಕೂರು ಟಿಕೆಟ್ಟಿನ ಮಿತ್ರನಿಗೂ ಸ್ವಲ್ಪ ಅಚ್ಚರಿಯಾದಂತೆ ತೋರಿತು. ಆದರೆ ಅವನು ಅದನ್ನು ತೋರ್ಪಡಿಸದೆ ವರನ ಮೇಲೆಯೇ ರೇಗಿದನು. "ಎಲ್ಲರೂ ನಿಮ್ಮಂತೆ ಕತ್ತೆಗಳಲ್ಲ ಕಣ್ರಿ, ಈಗ ಪುರಾಣವೆಲ್ಲ ಇರಲಿ. ಹೇಳ್ರಿ ಯಶವಂತಪುರ ಸಿಕ್ಕಿದರೆ ಏನು ಜೂಜು ಕಟ್ಟುತ್ತೀರಿ" ಎಂದನು. ಎಲ್ಲರೂ ಅವನಿಗೆ "ಬೇಡಿ, ಈ ರೈಲು ಖಂಡಿತ ಕೆಂಗೇರಿಗೆ ಹೋಗುತ್ತೆ. ಜೂಜು ಕಟ್ಟಿದರೆ ನೀವೇ ಕಳೆದುಕೊಳ್ಳ

ತ್ತೀರಿ. ವಿದ್ಯಾವಂತರಾಗಿ ಇಷ್ಟು ತಿಳಿಯಬೇಡವೆ ?" ಎಂದರು. ತುಮಕೂರು ಟಿಕೆಟ್ಟಿನ ಯುವಕ ಯಾರ ಮಾತನ್ನೂ ಕೇಳಲೇ ಇಲ್ಲ. ವರನನ್ನೇ ಕುರಿತು "ಆ ಜೂಜು ಕಟ್ಟಲು ಹೆದರಿಬಿಟ್ಟಿರಿ. ಪಾಪ, ಜೇಬಿನಲ್ಲಿ ದುಡ್ಡು ಇಲ್ಲವೇನೋ ? ಅತ್ತೆಮನೆಯ ಸಾಮಾನಿನಲ್ಲಿಯೋ ಜಬರ್ ಮಾಡುವವರಿಗೆ ಕಷ್ಟವೇ. ಹೋಗಲಿ ಆ ಗಡಿಯಾರಾನೆ ಇಡಿ, ನೀವೇನು ಕಷ್ಟಪಟ್ಟು ಸಂಪಾದಿಸಿದ್ದಲ್ಲವಲ್ಲ ಅದು" ಎಂದನು. ವರನ ಮುಖ ಕೆಂಕಿಕೆಂಕಿಯಾಯಿತು. ಅವನು ಕೋಪದಿಂದ "ಆಗಲಿ. ಗಡಿಯಾರವನ್ನೇ ಇಟ್ಟೆ. ನೀನು ಏನು ಇಡುತ್ತೀಯ ಇದಕ್ಕೆ ಪ್ರತಿಯಾಗಿ ?" ಎಂದನು. ತುಮಕೂರು ಯುವಕನು ಜೇಬಿಗೆ ಕೈಹಾಕಿ "ನಾನು ಇದನ್ನು ಇಡುತ್ತೇನೆ" ಎಂದು ಕಾಗದದ ಪೊಟ್ಟಣವನ್ನು ಹೊರಕ್ಕೆ ತೆಗೆದು ಬಿಚ್ಚಿದನು. ಅದು ಒಳ್ಳೆಯ ಚಿನ್ನದ ಸರ. ಫಳಫಳನೆ ಥಳಥಳಿಸುತ್ತಿತ್ತು. ಅದನ್ನು ನೋಡಿ ಎಲ್ಲರೂ ಆಶ್ಚರ್ಯಭರಿತರಾದರು. ನಾನು ಕನಿಕರದಿಂದ "ಅಪ್ಪಾ ಬೇಡ. ನಿನಗೆ ತಿಳಿಯದು. ಈ ರೈಲು ಯಶವಂತಪುರಕ್ಕೆ ಹೋಗುವುದಿಲ್ಲ. ಇದು ಹೋಗುವುದು ಮೈಸೂರಿಗೇ. ನಾನು ತಿಳಿಯದೆ ಕುಳಿತೆ. "ಈ ಜೂಜು ಬೇಡಿ. ಸರ ಹಿಂದಕ್ಕೆ ಹಾಕಿಕೊ" ಎಂದೆ. ತುಮಕೂರು ಯುವಕ "ನೋಡಿಯೇಬಿಡೋಣ ಸ್ವಾಮಿ, ಜೂಜು ಅಂದ ಮೇಲೆ ಜೂಜು. ನಿಮಗೆ ತಿಳಿಯದು. ಇದು ತೀರ್ಮಾನವಾಗುವವರೆಗೆ ನಿಮ್ಮಲ್ಲಿಯೇ ಇರಲಿ" ಎಂದು ನನ್ನ ಕೈಗೇ ಕೊಟ್ಟನು. ವರನೂ ಸಹ ತನ್ನ ಕೈಯಿನ ಚಿನ್ನದ ಗಡಿಯಾರವನ್ನು ನನ್ನ ಕೈಗೇ ಕೊಟ್ಟನು. ವರನ ಸುತ್ತಾ ಇದ್ದ ಮಿತ್ರರು "ಎಲೊ ಸುಬ್ಬು, ನಿನ್ನ ಅದೃಷ್ಟವೇ ಅದೃಷ್ಟ ಕಣೊ. ಮದುವೆಯಾದ ಕೂಡಲೆ ನಿನ್ನ ಹೆಂಡತಿಗೆ ಒಂದು ಚೈನ್" ಎಂದರು. ಅವರ ಪೈಕಿ ಮತ್ತೊಬ್ಬ ನವವಧುವಿನ ಕಡೆ ಆಸೆಯಿಂದ ನೋಡುತ್ತಾ "ಇವನದೇನು ಅದೃಷ್ಟ ಮಣ್ಣು, ಇವನ ಅದೃಷ್ಟ ಗೊತ್ತೇ ಇದೆಯಲ್ಲ ಪ್ರತಿ ಪರೀಕ್ಷೆಯಲ್ಲೂ ಮೂರು ಸಲ ಗೋತ. ಮುಖ್ಯವಾಗಿ ಇವನ ಹೆಂಡತಿಯ ಅದೃಷ್ಟ" ಎಂದನು. ಮತ್ತೊಬ್ಬ ಸ್ನೇಹಿತನು "ಅದೆಲ್ಲ ಇರಲಿ, ನಿಜವಾದ ಚಿನ್ನವೋ ಮೊದಲು ನೋಡಿ. ಈ ಕಾಲದ ಹುಡುಗರನ್ನು ನಂಬುವುದಕ್ಕೆ ಆಗುವುದಿಲ್ಲ. ಮೋಸಗಾರರೆಲ್ಲ ಜೆಂಟ್ಲ್‌ಮನ್ ಗಳಾಗಿಯೇ ಕಾಣುತ್ತಾರೆ" ಅಂದನು. ಅನಂತರ ಅವರೆಲ್ಲ ಸರವನ್ನು ತೆಗೆದುಕೊಂಡು ನೋಡಿದರು. ವರನ ಸೋದರಮಾವ, ಸೋದರತ್ತೆ ಅವರೂ ನೋಡಿ

"ಭರ್ಜರಿ ಚಿನ್ನ, ಒಪೆಳ ಚೆನ್ನಾಗಿ ಕೆಲಸಮಾಡಿದ್ದಾನೆ" ಎಂದು ಹೇಳಿ ಮತ್ತೆ ತುಮಕೂರು ಹುಡುಗನಿಗೆ "ಈ ಹುಡುಗಾಟ ಸಾಕು. ಸರ ತೆಗೆದುಕೊಂಡು ಇಟ್ಟುಕೊಳ್ಳಿ. ಜೋಪಾನ" ಎಂದರು. ಅವನು "ಒಂದು ಸಲ ಹೇಳಿದ ಮೇಲೆ ಅದೇನು ನಾಲಗೆಯೋ ಏನು ಸ್ವಾಮಿ? ಸ್ವಲ್ಪ ತಡಿಯಿರಿ. ಗಡಿಯಾರವೂ ನನ್ನ ಕೈಗೆ ಬರುತ್ತೆ" ಎಂದನು.

ಸ್ಟೇಷನ್ ಇನ್ನೇನು ಬರುವುದಾಗಿದ್ದುದರಿಂದ ಯಾರೂ ಮಾತನಾಡಲಿಲ್ಲ. ಎಲ್ಲರಿಗೂ ಏನೋ ಒಂದು ಉತ್ಸಾಹ, ಏನೋ ಒಂದು ಸಂಭ್ರಮ. ಎಂಟು ಹತ್ತು ನಿಮಿಷಗಳೊಳಗಾಗಿ ಮುಂದಲ ಸ್ಟೇಷನ್ ಬಂದಿತು. ರೈಲು ಇನ್ನೂ ನಿಲ್ಲುವುದಕ್ಕೆ ಮುಂಚಿತವಾಗಿಯೇ ಪೋರ್ಟರ್ "ಕೆಂಗೇರಿ" ಎಂದು ನಿದ್ರೆಗಣ್ಣಿನಲ್ಲಿ ಕೂಗಿದನು. ರೈಲು ನಿಂತ ಕೂಡಲೇ ತುಮಕೂರ್ ಟಿಕೆಟ್ ಹುಡುಗನು ಕೆಳಗೆ ಇಳಿದೇಬಿಟ್ಟನು. ನಾನು "ತಕೋ ನಿನ್ನ ಸರ" ಎಂದು ಕೂಗಿದೆ. ಆತ ಖಂಡಿತ ದೃಷ್ಟಿಯಿಂದ ನನ್ನ ಕಡೆ ನೋಡುತ್ತಾ "ನನ್ನ ಪಣ ಹೋಯಿತು. ನಾನು ಸೋತೆ. ಅವರೇ ಗೆದ್ದರು. ನಾನು ಅದೃಷ್ಟಹೀನ. ಆವರೆ ಜೂಜಿನಲ್ಲಿ ಸೋತ ಮೇಲೆ ಮತ್ತೆ ತೆಗೆದುಕೊಳ್ಳುವುದಕ್ಕೆ ನಾನೇನು ಮನುಷ್ಯನೋ ಕತ್ತೆಯೋ?" ಎಂದು ಹೇಳಿ ಕೆಳಗೆ ಇಳಿದು ಕತ್ತಲೆಯಲ್ಲಿ ಕಣ್ಮರೆಯಾದನು. ವರನ ಸೋದರಮಾವ "ಹಾಗೆ ಬೇಡ. ಹುಡುಗಾಟ ದೊಡ್ಡಾಟವಾಗಬಾರದು" ಎಂದು ಕೂಗಿದುದು ಗಾಳಿಗೇ ಹೋಯಿತು. ತಾನೂ ಭ್ರಾಂತನಾಗಿ "ನಾನೂ ಬೆಂಗಳೂರಿಗೇ ಹೋಗಿ ಹಾಸನದ ರೈಲು ಹಿಡಿಯಬೇಕು. ಇಲ್ಲಿಯೇ ಇಳಿಯುತ್ತೇನೆ" ಎಂದು ಹೇಳಿ ಗಡಿಯಾರವನ್ನೂ ಸರವನ್ನೂ ವರನ ಕೈಗೆ ಕೊಟ್ಟು ನನ್ನ ಚೀಲದ ಸಮೇತ ಇಳಿದೆ. ನಾನು ಇನ್ನೂ ಗಾಡಿಯಿಂದ ಕೆಳಗೆ ಇಳಿಯುವುದಕ್ಕಿಂತ ಮುಂಚಿತವಾಗಿಯೇ ಸ್ನೇಹಿತರು ವರನಿಗೆ "ಮಾವನ ಮನೆಯಿಂದ ಅಷ್ಟೊಂದನ್ನು ಹೊಡೆದುದಕ್ಕೆ ಇದೊಂದನ್ನಾದರೂ ನಿನ್ನ ಹೆಂಡತಿಗೆ ಕೊಡು" ಎನ್ನುತ್ತಿದ್ದುದು ಕೇಳಿಸಿತು. ಪ್ಲಾಟ್‌ಫಾರಂ ಅಂಧಕಾರಮಯವಾಗಿತ್ತು. ನಾನು ಸ್ಟೇಷನ್ ಮುಂದೆ ಒಬ್ಬನೇ ನಿಂತಿದ್ದು, ನನ್ನ ಎದುರಿಗೇ ಇದ್ದ, ನಾನು ಇಳಿದಿದ್ದ ಗಾಡಿಯನ್ನೇ ನೋಡುತ್ತಿದ್ದೆ. ಒಂದೆರಡು ನಿಮಿಷ ಚರ್ಚೆಯಾದ ನಂತರ ಸರ ಕೈಯಿಂದ ಕೈಗೆ ಬಂತು. ಕೊನೆಯಲ್ಲಿ [illegible] ಕೈಗೂ ಬಂತು. ಅನಂತರ ಅವರ

ಹೆಂಡತಿಯ ಕೈಗೆ ಬಂತು! ಅವರು ಒಂದು ಗಳಿಗೆ ಅದನ್ನು ತಿರುಗಿಸಿ ನೋಡಿ ಕೊನೆಗೆ ನೂತನ ವಧುವಿಗೆ ಅದನ್ನು ಕೊಟ್ಟರು. ಹುಡುಗಿ ಎಲ್ಲಿಯೋ ನೋಡುತ್ತಾ ಸರವನ್ನು ಕೈಯಲ್ಲಿ ಹಿಡಿದಿದ್ದಳು. ವೃದ್ಧ ಸುಮಂಗಲಿ ಬಲಾತ್ಕಾರವಾಗಿ ಅದನ್ನು ಅವಳ ಕತ್ತಿಗೆ ಹಾಕಿದಳು. ಹುಡುಗಿ ಕತ್ತನ್ನು ಗಾಡಿಯ ಕಿಟಕಿಯಿಂದ ಹೊರಕ್ಕೆ ಬಗ್ಗಿಸಿಕೊಂಡು ಕತ್ತಲೆಯಲ್ಲಿ ಏನನ್ನೋ ಹುಡುಕುತ್ತಿರುವಂತೆ ಸುತ್ತ ನೋಡಿದಳು. ಗಂಟೆ, ಸಿಳ್ಳು, ಆಯಿತು. ರೈಲು ನಿಧಾನವಾಗಿ ಹೊರಟಿತು. ಚಕ್ರ ಅರ್ಧ ಉರುಳುವುದರೊಳಗಾಗಿ ಆ ಗಾಡಿ ದೀಪದ ಬೆಳಕಿಗೆ ಬಂತು, ಹುಡುಗಿಯನ್ನು ನೋಡಿದೆ. ಬಿಸಿಲಿನ ಮಧ್ಯೆ ಮಳೆ ಹನಿ ಬೀಳುತ್ತಿರುವಂತೆ ಆ ಚಂದ್ರನಂತಹ ಮುಖದ ಮೇಲೆ ಕಣ್ಣೀರಿನ ಹನಿಗಳು! ನನಗೆ ಏನೂ ಅರ್ಥವಾಗಲಿಲ್ಲ. ಉದ್ದೇಶವಿಲ್ಲದೆ ನಾನು ಭಾಗ ವಹಿಸಿದ್ದ ಈ ನಾಟಕದ ಹಿನ್ನೆಲೆಯೇನೋ ಎಂದು ಯೋಚಿಸುತ್ತಾ ಬೆಳಗಿನ ವರೆಗೆ ಸ್ಟೇಷನ್‌ನಲ್ಲಿ ಮಲಗಲು ಸ್ಟೇಷನ್ ಕಡೆ ತಿರುಗಿದೆ. ತುಮಕೂರಿನ ಯುವಕ ನನ್ನ ಹಿಂದೆಯೇ ನಿಂತಿದ್ದ. ಅವನು ಗಾಡಿಯಿಂದ ಇಳಿದ ಮೇಲೆ ಅದರಲ್ಲಿ ನಡೆದ ಕೊನೆಯ ಅಂಕವನ್ನು ಅವನೂ ನೋಡಿದನೆಂಬುದು ಅವನನ್ನು ನೋಡಿದ ಕೂಡಲೇ ನನಗೆ ಗೊತ್ತಾಯಿತು.

ರೈಲಿನಿಂದ ಇಳಿದ ನಾಲ್ಕಾರು ಪ್ರಯಾಣಿಕರ ಟಿಕೆಟ್‌ಗಳನ್ನು ತೆಗೆದು ಕೊಂಡು ನಮ್ಮ ಪೂನಾ ಗಾಡಿಯ ಟಿಕೆಟ್‌ಗಳನ್ನು ಕಂಡು ನಕ್ಕು ಸ್ಟೇಷನ್ ಮಾಸ್ಟರ್ "ಬೆಳಗಿನ ಜಾವ ನಾಲ್ಕು ಗಂಟೆಗೆ ಮೈಸೂರು ಕಡೆಯಿಂದ ಬರುವ ರೈಲಿನಲ್ಲಿ ಬೆಂಗಳೂರಿಗೆ ಹೋಗಿ ಅಲ್ಲಿಂದ ಪೂನಾ ರೈಲು ಹಿಡಿಯಿರಿ" ಎಂದು ಹೇಳಿ ಸಮೀಪದಲ್ಲಿದ್ದ ತಮ್ಮ ಮನೆಗೆ ಹೊರಟುಹೋದರು. ನನ್ನ ಸ್ನೇಹಿತನ ಕೈಯಲ್ಲಿ ಗಂಟು ಆಗಲಿ ಮೈ ಮೇಲೆ ಶರಟು ಚೌಕದ ಹೊರತು ಬೇರೆ ಬಟ್ಟೆಯಾಗಲಿ ಇರಲಿಲ್ಲ. ನಾವು ೩-೪ ಗಂಟೆಯಾದರೂ ಸ್ಟೇಷನ್‌ನ ಚಳಿಯಲ್ಲಿ ಕಾಲ ಕಳೆಯಬೇಕಾಗಿದ್ದುದರಿಂದ ನಾನು ಪ್ಲಾಟ್‌ಫಾರಂನಲ್ಲಿ ನನ್ನ ಗಂಟಿನಿಂದ ಶಾಲನ್ನು ತೆಗೆದು ಹಾಸಿ "ಬಾಪ್ಪ, ಹೇಗೂ ನಾಲ್ಕು ಗಂಟೆಯವರೆಗೆ ಇಲ್ಲಿ ಇದ್ದಿರಬೇಕಲ್ಲ. ಸ್ವಲ್ಪ ವಿಶ್ರಮಿಸಿಕೊಳ್ಳೋಣ" ಎಂದೆ. ಅತ ಬಂದು ಶಾಲಿನ ಮೇಲೆ ಕುಳಿತ. ನಾನು ಗಂಟನ್ನು ತಲೆದಿಂಬಿಗೆ ಇಟ್ಟುಕೊಂಡು ಹಾಗೆಯೇ ಕಣ್ಣು ಮುಚ್ಚಿದೆ. ನನಗೆ ನಿದ್ರೆ ಬಂದೇಬಿಟ್ಟಿತು. ಸ್ಟೇಷನ್ನ

ದೊಡ್ಡ ಗಡಿಯಾರ ಮೂರು ಗಂಟೆ ಹೊಡೆದಾಗ ನನಗೆ ಎಚ್ಚರಿಕೆಯಾಯಿತು. ರೈಲು ಹೋಗಿಯೇಬಿಟ್ಟಿದೆಯೋ ಎಂದು ಗಾಬರಿಯಿಂದ ನಾನು ಕಣ್ಣು ಬಿಟ್ಟು ನೋಡಿದೆ. ನನ್ನ ಮಿತ್ರ ನಾನು ಮಲಗುವಾಗ ಕುಳಿತಿದ್ದಂತೆಯೇ ಕುಳಿತಿದ್ದ. ಆದರೆ ಅವನು ಬಿಕ್ಕಿ ಬಿಕ್ಕಿ ಅಳುತ್ತಿರುವುದು ನನಗೆ ಗೊತ್ತಾಯಿತು. ನಾನು ಎದ್ದು ಕುಳಿತು ಆತನ ಬೆನ್ನಿನ ಮೇಲೆ ಮೆತ್ತಗೆ ಕೈಯಿಟ್ಟು ಸವರಿದೆ. ನಾನು ಏನೂ ಮಾತನಾಡಲಿಲ್ಲ. ಆತನ ದುಃಖ ಮಾತಿನಿಂದ ಸಮಾಧಾನವಾಗುವುದಾಗಿ ನನಗೆ ತೋರಲಿಲ್ಲ.

ಆತ ನಿಧಾನವಾಗಿ ಸುಧಾರಿಸಿಕೊಂಡ. "ಸ್ವಾಮಿ, ನಾನು ಹುಚ್ಚನೋ ಮೂರ್ಖನೋ ಆಗಿರಬೇಕೆಂದು ನೀವು ಭಾವಿಸಿರಬೇಕು. ನಾನು ಹುಚ್ಚನೇ ಆಗಿರಬೇಕಾಗಿತ್ತು. ಇಂದು ನೀವು ಅನಿರೀಕ್ಷಿತವಾಗಿ ಪಾತ್ರವಹಿಸಿದ ಈ ನಾಟಕದಿಂದ ಹುಚ್ಚನಾಗುವುದು ತಪ್ಪಿದೆ. ಆದರೆ ನೀವು ಯಾಕೆ ಸ್ವಾಮಿ ಹಾಸನದ ಟಿಕೀಟು ತೆಗೆದುಕೊಂಡು ಮೈಸೂರು ಗಾಡಿ ಹತ್ತಿದಿರಿ ?" ಎಂದು ಕೇಳಿದ. ನಾನು "ನೀನು ಹುಚ್ಚನಾದರೆ ನಾನು ಮೂರ್ಖನಪ್ಪ. ಹುಚ್ಚನನ್ನು ಅನುಸರಿಸಿದ್ದುದರಿಂದ ನಾನೂ ಮೂರ್ಖನಾದೆ" ಎಂದೆ. ಯುವಕನು "ಸ್ವಾಮಿ, ಈವತ್ತಿನ ಕಾರ್ಯದಲ್ಲಿ ನೀವು ನನಗೆ ಸಹಾಯ ಮಾಡಿದಿರಿ. ನನಗೆ ನಿಮಗಿಂತ ಹೆಚ್ಚು ಆಪ್ತಮಿತ್ರರು ಮತ್ತಾರೂ ಇಲ್ಲ. ಈಗ ನಡೆದುದನ್ನು ನೀವು ನೋಡಿದಿರಿ. ಉಳಿದುದನ್ನು ನೀವೇ ಊಹಿಸಿಕೊಳ್ಳಬಹುದು. ಆ ಹುಡುಗಿ ರಾಧಾ ನನಗೆ ಗೊತ್ತಾಗಿತ್ತು ಸ್ವಾಮಿ. ಆದರೆ ಹಾಳಾದ ಜೋಯಿಸ ಕಲ್ಲುಹಾಕಿಬಿಟ್ಟ. ನಮ್ಮ ತಂದೆಯವರೂ ಜೋಯಿಸರೇ, ಇಬ್ಬರಿಗೂ ನಮ್ಮದು ಸರಿ ನಮ್ಮದು ಸರಿ ಎಂಬ ಜಗಳ ಬಂದು ರಾಧೆಯ ತಂದೆ ಆ ಜೋಯಿಸನ ಮಾತನ್ನು ನಂಬಿ ಲಗ್ನ ಕೊಡುವುದಿಲ್ಲವೆಂದುಬಿಟ್ಟರು ಹಾಳು ಜೋಯಿಸರು ನಮ್ಮಿಬ್ಬರನ್ನು ಕೊಂದುಬಿಟ್ಟರು, ಸ್ವಾಮಿ. ಪಂಚಾಂಗಗಳನ್ನೆಲ್ಲ ಬೆಂಕಿಗೆ ಹಾಕಿಬಿಡಬೇಕು. ಜೋಯಿಸರನ್ನೆಲ್ಲ ಗಡೀಪಾರು ಮಾಡಬೇಕು. ನಕ್ಷತ್ರಗಳು, ಗ್ರಹಗಳು, ಸೂರ್ಯ ಎಲ್ಲರನ್ನೂ ಪಾತಾಳಕ್ಕೆ ಕಿತ್ತು ಎಸೆಯಬೇಕು. ಹಿಂದೆ ಪರೀಕ್ಷಿತ ಸರ್ಪಯಾಗ ಮಾಡಿದಂತೆ ಜೋತಿಷ್ಯಯಾಗ ಮಾಡಿಬಿಡಬೇಕು. ಈಗ ನಾಲ್ಕು ದಿನದಲ್ಲಿ ನನ್ನ ರಾಧೆಗೆ-ಇನ್ನೆಲ್ಲಿ ನನ್ನ ರಾಧ-ಮದುವೆಯಾಯಿತು. ಅದೇ ಲಗ್ನದಲ್ಲಿ ಆಕೆಗೂ ನನಗೂ ಮದುವೆ ಆಗಬೇಕಾಗಿತ್ತು. ನನ್ನ ಅವಳ ಮದುವೆ

ಹಿಂದಿತ್ತನೆಂದು ತಿಳಿದು, ನಾವಿಬ್ಬರೂ ಒಟ್ಟಿಗೆ ಚಿನ್ನದ ಅಂಗಡಿಗೆ ಹೋಗಿ ಈ ಸರ ಆರಿಸಿಬಂದಿದ್ದೆವು. ಇದು ನನ್ನ ಸ್ವಂತ–ಪೂರ್ಣಸ್ವಂತ–ನನ್ನ ಸಬ್ಜೆಕ್ಟ್ ಸ್ಕಾಲರ್‌ಶಿಪ್‌ನ ಹಣ. ನಮ್ಮ ತಂದೆ ತಾಯಿಯರಿಗೆ ಸಹ ತಿಳಿಯದು. ರಾಧೆ ಎಷ್ಟು ಬೇಡವೆಂದರೂ ಕೇಳದೆ, ಅವಳನ್ನು ಒಪ್ಪಿಸಿದ್ದೆ. ಮದುವೆಗೆ ನಾಲ್ಕು ದಿನ ಮುಂಚೆ ಹಾಳು ಜೋಯಿಸ ಗೃಹಮೈತ್ರಿಕೂಟದ ಭೂತ ಎಬ್ಬಿಸಿಬಿಟ್ಟ. ನನಗೂ ರಾಧೆಗೂ ಮೈತ್ರಿಕೂಟ ಎಲ್ಲಿ ಬಂತು, ಇಬ್ಬರ ಪ್ರಾಣವೂ ಒಂದೇ ಆಗಿರುವಾಗ? ರಾಧೆಯ ಅಪ್ಪ ಅದೇ ಲಗ್ನದಲ್ಲಿ ಹೋಗಿ, ಈ ಕನ್ನಂಬಾಡಿಯ ಕತ್ತೆಯನ್ನು ಹಿಡಿದುಕೊಂಡು ಬಂದು ರಾಧೆಗೆ ಕಟ್ಟಿ ಬಿಟ್ಟಿದ್ದರು. ಕನ್ನಂಬಾಡಿ ಕತ್ತೆಗಳ ಪರಿಚಯ ನನಗೆ ಇಲ್ಲ. ಇವತ್ತು ಅವರು ಈ ದಾರಿಯಲ್ಲಿ ಹೋಗುತ್ತಾರೆಂದು ಹೇಗೋ ತಿಳಿಯಿತು. ಸರವನ್ನು ರಾಧೆಗೆ ಹೇಗೆ ಮುಟ್ಟಿಸುವುದೆಂದು ಮೊದಲು ಹೊಳೆಯಲಿಲ್ಲ. ನಿಮ್ಮಿಂದ ಬಹಳ ಉಪಕಾರವಾಯಿತು. ಹೀಗಲ್ಲದೆ ಮತ್ತೆ ಹ್ಯಾಗೆ ಕೊಟ್ಟಿದ್ದರೂ ಸರ ಸರ್ಪವೇ ಆಗುತ್ತಿತ್ತು. ಈಗ ನಾನು ಕೃತಾರ್ಥನಾದೆ."

ಬೆಳಗಿನ ಜಾವದ ನೀರವದಲ್ಲಿ ಆತನ ಮಾತು ನಿಂತಿತು. ನಾನು ಉಸಿರಾಡದೆ ಸುಮ್ಮನೆ ಇದ್ದೆ. ಮತ್ತೆ ಆತನ ಕಣ್ಣುಗಳಿಂದ ನೀರು ಸುರಿಯುತ್ತಿರುವುದು ನನಗೆ ಅನುಭವವಾಯಿತು. ಪ್ರೇಮ ಇವನನ್ನು ಹೀಗೆ ಪೂರ್ಣವಾಗಿ ಪ್ರವಾಹವಾಗಿ ಕೊಚ್ಚಿಕೊಂಡು ಹೋಗುತ್ತಿರುವುದಲ್ಲ. ಯೌವನವೇ ಧನ್ಯ ಎಂದು ನನಗೆ ಅವನಲ್ಲಿ ಹೊಟ್ಟೆಕಿಚ್ಚು ಉಂಟಾಯಿತು. ಒಂದೆರಡು ಸಮಾಧಾನದ ಮಾತುಗಳನ್ನು ಹೇಳಿದೆ. ರೈಲನ್ನು ಏರಿ ಬೆಂಗಳೂರಿಗೆ ಬಂದು ನಮ್ಮ ನಮ್ಮ ದಾರಿ ಹಿಡಿದೆವು. ಒಬ್ಬರ ವಿಳಾಸವನ್ನು ಮತ್ತೊಬ್ಬರು ಕೇಳಲಿಲ್ಲ. ನಾವಿಬ್ಬರೂ ರಾತ್ರಿ ಸಂಧಿಸಿದುದರಿಂದ ಒಬ್ಬರನ್ನೊಬ್ಬರು ಮತ್ತೆ ನೋಡಿದರೂ ಗುರುತಿಸುವ ಸಂಭವವಿಲ್ಲ.

ಕಾಮಧೇನುವಿನ ಕೃಪೆ

ಜನ್ನಪ್ಪ ಹೊತ್ತಿಗೆ ಮುಂಚೆ ಎದ್ದು ಸ್ನಾನಮಾಡಿ ಪದ್ಧತಿಯಂತೆ ಸಂಧ್ಯಾವಂದನೆ ಜಪಮಾಡಿ ಹಸುವನ್ನು ಹೊಡೆದುಕೊಂಡು ತೋಟದ ಕಡೆಗೆ ಹೊರಟ. ವೈದಿಕರ ಮನೆಯಲ್ಲಿ ಹುಟ್ಟಿ ಬೆಳೆದಿದ್ದ ಅವನಿಗೆ ಹೊತ್ತಿಗೆ ಮುಂಚೆ ಎದ್ದು ಸ್ನಾನ, ಸಂಧ್ಯಾವಂದನೆ ಮಾಡುವುದು ಹಿಂದಲಿಂದ ಬಂದ ಪದ್ಧತಿಯಾಗಿತ್ತು. ಗೋವನ್ನು ಹಿಡಿದುಕೊಂಡು ಅವನು ತನ್ನ ಬಾಲ್ಯದಲ್ಲಿ ತನ್ನ ತಂದೆಯವರಿಂದಲೇ ಕಲಿತಿದ್ದ ಶ್ಲೋಕಗಳನ್ನು ಉಚ್ಚರಿಸುತ್ತಾ ತೋಟದ ಕಡೆ ಹೊರಟನು.

ಅದೂ ಇನ್ನೂ ನಾಲ್ಕು ವರುಷದ ಕಡಸು. ಆ ಹಸು ಅವನ ಅಜ್ಜನ ಕಾಲದಿಂದ ಬಂದ ತಳಿ. ಅವನ ಅಜ್ಜ ತಿರುನಾರಣ, ಈ ಕಡಸಿದ ಮುತ್ತಜ್ಜಿಯನ್ನು ರೈತನೊಬ್ಬನಿಂದ ಒಂದು ನೂರು ರೂಪಾಯಿಗಳಿಗೆ ಕೊಂಡುಕೊಂಡರು. ಆಗ ನೂರು ರೂಪಾಯಿ ಎಂದರೆ ಬಹಳ ದೊಡ್ಡ ಹಣ; ಈಗಿನ ಸಾವಿರ ರೂಪಾಯಿಗಳಿಗೆ ಸಮ. ಆ ಹಸು ಮೊದಲನೆಯದಾಗಿ ಒಂದು ಹೆಣ್ಣು ಕರುವನ್ನು ಹಾಕಿತು. ಅದೊಂದೇ ಹೆಣ್ಣು ಕರು; ಅನಂತರ ಅದು ವರುಷಕ್ಕೆ ಒಂದರಂತೆ ಹತ್ತು ಹೋರಿ ಕರುಗಳನ್ನು ಹಾಕಿತು. ತಿರುನಾರಣ ಆ ಹತ್ತು ಕರುಗಳನ್ನೂ, ಒಂದೊಂದಕ್ಕೂ ನೂರು ರೂಪಾಯಿಗಳಂತೆ ಮಾರಿದನು. ತಿರುನಾರಣನಿಗೆ ಒಂದು ಸಣ್ಣ ತೋಟದ ಹೊರತು ಮತ್ತಾವುದೂ ಆಸ್ತಿ ಇರಲಿಲ್ಲ. ಅವನ ಸಂಸಾರವೆಲ್ಲವೂ ಆ ತೋಟದ ಉತ್ಪತ್ತಿಯಿಂದಲೇ ನಡೆಯಬೇಕಾಗಿತ್ತು. ತಿರುನಾರಣ ಬೆಳಗಿನಿಂದ ಸಂಜೆಯವರೆಗೆ ತೋಟದಲ್ಲಿ ಹಸು ಮೇಯಿಸುವನು. ತೋಟವನ್ನು ಅಗೆದು ಅಡಿಕೆ ಬಾಳೆ ವೀಳೆಯದೆಲೆಗೆ ಕೃಷಿಮಾಡುವನು. ಸಂಸಾರದ ನಿತ್ಯವೆಚ್ಚಕ್ಕೆ ತೋಟದ ಉತ್ಪತ್ತಿ. ಮದುವೆ, ಮುಂಜಿ ಮುಂತಾದ ಅನಿರೀಕ್ಷಿತ ವೆಚ್ಚಗಳಿಗೆ ಹಸುವಿನ ಹೋರಿಗಳ ಮಾರಾಟ, ಹೀಗೆ ಅವನ ಕಾಲ ಸುಖವಾಗಿ ತಳ್ಳಿಹೋಯಿತು. ಆಕಸ್ಮಿಕವಾದರೂ ಅದು ದೇವರ ಇಚ್ಛೆಯೇ ಇರಬಹುದೇನೋ ಎಂಬಂತೆ ತಿರುನಾರಣನೂ ಅವನ ಹಸುವೂ ಇಬ್ಬರೂ ಒಂದೇ ತಿಂಗಳಿನಲ್ಲಿ ಇಹಲೋಕ ವ್ಯಾಪಾರವನ್ನು ತ್ಯಜಿಸಿದರು. ತಿರುನಾರಣನ

ಹೆಂಡತಿ ಮೊದಲೇ ಸ್ವರ್ಗಸ್ಥಳಾಗಿದ್ದಳು. ಹಿಂದೆ ಉಳಿದವರು ತಿರುನಾರಣನ ಮಗ–ನಲವತ್ತು ವಯಸ್ಸಿನ ಗೋವಿಂದ ; ಮತ್ತು ಮನೆಯಲ್ಲಿಯೇ ಇದ್ದ ಹಸುವಿನ ಮೊದಲನೆಯ ಹೆಣ್ಣು ಕರು.

ಹಸುವಿನ ಬಾಳಿನಲ್ಲಿ ಹೇಗೆ ಬದಲಾವಣೆ ಇರಲಿಲ್ಲವೋ ಹಾಗೆಯೇ ಗೋವಿಂದನ ಬಾಳಿನಲ್ಲಿಯೂ ಬದಲಾವಣೆ ಇರಲಿಲ್ಲ. ತಂದೆಯಂತೆ ಗೋವಿಂದನೂ ತೋಟದಲ್ಲಿ ಕೆಲಸಮಾಡಿ ಅದರ ಉತ್ಪತ್ತಿಯಿಂದ ಸಂಸಾರವನ್ನು ಸಾಗಿಸುತ್ತಿದ್ದನು. ಆದರೆ ಹಸುವಿನ ಬಾಳಿನಲ್ಲಿ ಒಂದು ಸಣ್ಣ ವ್ಯತ್ಯಾಸವುಂಟಾಗಿತ್ತು. ತಿರುನಾರಣ ತಂದ ಮೊದಲನೆಯ ಕಡಸು, ಹೆಣ್ಣು ಕರುವನ್ನು ಹಾಕಿ ಅನಂತರ ಎಲ್ಲವನ್ನೂ ಹೋರಿಗರು ಹಾಕಿತ್ತು. ಆದರೆ ಆ ಹೆಣ್ಣು ಕರು ಎರಡನೆಯ ಕರುವನ್ನು ಹೆಣ್ಣು ಕರು ಹಾಕಿ, ಮೊದಲನೆಯ ಮತ್ತು ಮೂರರಿಂದ ಹತ್ತರವರೆಗಿನ ಕರುಗಳನ್ನು ಹೋರಿಗರು ಹಾಕಿತ್ತು. ಗೋವಿಂದ ಎಲ್ಲ ಹೋರಿಗಳನ್ನೂ ನೂರ ಇಪ್ಪತ್ತೈದು, ನೂರ ಐವತ್ತು ಹೀಗೆ ಹೆಚ್ಚು ಹಣಕ್ಕೇ ಮಾರಿದ್ದನು. ಒಂದಕ್ಕಿಂತ ಹೆಚ್ಚು ಹೆಣ್ಣು ಕರುವನ್ನು ಹಾಕುವುದಿಲ್ಲವೆಂದು ತಿಳಿದ ಕೂಡಲೇ ತಿರುನಾರಣನೂ ಅವನ ನಂತರ ಗೋವಿಂದನೂ ಆ ಒಂದೇ ಆಗಿದ್ದ ಹೆಣ್ಣು ಕರುವನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚು ಮಮತೆ ಕಾತರತೆಯಿಂದ ಕಾಪಾಡುತ್ತಿದ್ದರು. ತಿರುನಾರಣನು ಸಾಯುವಾಗ ಗೋವಿಂದನಿಗೆ–"ಕಡಸನ್ನು ಸರಿಯಾಗಿ ನೋಡಿಕೊ" ಎಂಬ ಒಂದೇ ಒಂದು ವಾಕ್ಯವನ್ನು ಹೇಳಿ ಸತ್ತು ಹೋದುದನ್ನು, ಊರಿನವರು ತಿರುನಾರಣನ ಮರಣಶಾಸನವೆಂದು ಹಾಸ್ಯ ಮಾಡುತ್ತಿದ್ದರು.

ತಿರುನಾರಣ ತನ್ನ ಹಸುವನ್ನು ಸರ್ವಮಂಗಳೆ ಎಂದು ಕರೆಯುತ್ತಿದ್ದನು, ಅದರ ಮಗಳಿಗೆ ಗೌರಿ ಎಂದು ಹೆಸರಿಟ್ಟಿದ್ದನು. ಸರ್ವಮಂಗಳೆ ಸರ್ವಾಂಗ ಸುಂದರವಾಗಿತ್ತು. ಸೌಮ್ಯವಾದ ಶಾಂತವಾದ ಮುಖ, ನಿಮ್ಮನ್ನು ನೋಡಿ ಗುರುತಿಸಿ, ಪ್ರೀತಿಸುವ ಅಗಲವಾದ ಕಣ್ಣುಗಳು. ಆ ಕಣ್ಣುಗಳು ಮನುಷ್ಯರ ಮಾತಿನಲ್ಲಿ ತೋರಿಸುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಅಕೃತ್ರಿಮವಾಗಿ ಪ್ರೇಮ ಕೃತಜ್ಞತೆ ಹಾಗೂ ಹಾಸ್ಯ ಜುಗುಪ್ಸೆ ನೋವು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದುವು. ಕೋಡುಗಳು ಒಳ್ಳೆಯ ಮಾಟವಾಗಿ ಕಡೆದುಮಾಡಿದಂತೆ ಇದ್ದುವು. ಮೈ ಬೆಳ್ಳಗೆ ಬೇಸಿಗೆ ಕಾಲದಲ್ಲಿ ರೇಶಿಮೆಯಂತೆಯೂ, ಮಳೆಗಾಲದಲ್ಲಿ ಶೋಭಿಸಿ

ಶುದ್ಧಿ ಮಾಡಿದ ಪತ್ತಿಯಂತೆಯೂ ತೋರುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಆ ಪ್ರಾಂತದಲ್ಲಿ ಪ್ರಸಿದ್ಧವಾಗಿದ್ದುದು ಸರ್ವಮಂಗಳೆಯ ಗುಣ ಮತ್ತು ಬುದ್ಧಿ. ಆ ಹಸುವನ್ನು ನೋಡಿದ ಕೂಡಲೇ ಜನಕ್ಕೆ ಅದರಲ್ಲಿ ಪ್ರೇಮವುಂಟಾಗುತ್ತಿದ್ದಿತು. ತಿರುನಾರಣರು ಆ ಹಸುವನ್ನು ಬೀದಿಯಲ್ಲಿ ಹೊಡೆದುಕೊಂಡು ಮನೆಗೆ ಬರುತ್ತಿದ್ದರೆ ಆ ಬೀದಿಗೇ ಒಂದು ವಿಧವಾದ ಶೋಭೆ ಉಂಟಾಗುತ್ತಿತ್ತು. ಗೋವು ಸರ್ವಸಮೃದ್ಧಿಯ ಗುರುತು ಎಂದೂ "ಗೋರಸಂ ವಿನಾ ನೀರಸಂ ಭೋಜನಂ" ಎಂದು ವೇದದಲ್ಲಿ ಹೇಳಿದುದು ಇಂತಹ ಗೋವನ್ನು ಕುರಿತೇ ಹೊರತು, ಮನೆಯಲ್ಲಿಯೇ ಕಟ್ಟಿಹಾಕಿಕೊಳ್ಳದೆ ಹೊರಕ್ಕೆ ನಾವು ಓಡಿಸುವ ಮೂಳೆ ಚಕ್ಕಳದ ಆ ಬಡ ದನಗಳನ್ನು ಕುರಿತು ಅಲ್ಲ. ಸರ್ವಮಂಗಳೆಯ ಮಗಳು ಗೌರಿ ಸರ್ವವಿಧದಲ್ಲಿಯೂ ಸರ್ವಮಂಗಳೆಯನ್ನೇ ಹೋಲುತ್ತಿದ್ದಿತು. ಆ ಮನೆಯಲ್ಲಿ ಮಕ್ಕಳನ್ನು ಸಹ ಅಷ್ಟು ಅಕ್ಕರೆಯಿಂದ ಪಾಲನೆ ಮಾಡುತ್ತಿರಲಿಲ್ಲ. ಗೌರಿ ಹಾಕಿದ ಎರಡನೆಯ ಹೆಣ್ಣು ಕರುವಿಗೆ ಗೋವಿಂದ ಕಾಮಧೇನುವೆಂದು ಹೆಸರಿಟ್ಟನು.

ಆದರೆ ಕಾಲಮಹಿಮೆಯಿಂದ ಗೋವಿಂದನಿಗೆ ಮನೆಯಲ್ಲಿ ವೆಚ್ಚ ಹೆಚ್ಚಾಯಿತು. ಹೆಣ್ಣು ಮಕ್ಕಳು ಹೆಚ್ಚಾದುದರಿಂದ ಅವನ ದುಡಿಮೆಯೆಲ್ಲ ಅವರ ಮದುವೆಗೇ ಆಗಿ, ಸಾಲದೆ, ಸಾಲದ ಹೊರೆ ಆಯಿತು. ಸಂಸಾರ ದೊಡ್ಡದಾದರೂ ಗೋವಿಂದನ ಆಸ್ತಿ ಇದ್ದಂತೆಯೇ ಇತ್ತು. ಗೌರಿಯ ಹತ್ತು ಕರುಗಳನ್ನು ಮಾರಿದ್ದರೂ ಇನ್ನೂ ಎರಡು ಸಾವಿರ ಸಾಲ ಉಳಿದಿತ್ತು. ಗೌರಿ, ಇನ್ನು ಹದಿನೈದು-ಇಪ್ಪತ್ತು ಕರುಗಳನ್ನು ಹಾಕಿದ್ದರೆ, ಅವನ ಸಾಲದ ಹೊರೆ ಪೂರ್ಣವಾಗಿ ಇಳಿಯುತ್ತಿತ್ತು. ಆದರೆ ಗೌರಿ ಕರು ಹಾಕುವ ಕಾಲ ಮುಗಿದು ಮುಪ್ಪು ಬಂದ ಕೂಡಲೇ ಸತ್ತುಹೋಯಿತು. ಅದು ಸತ್ತ ವರುಷವೇ ಗೋವಿಂದನೂ ಮಗ ಜನ್ನಪ್ಪನಿಗೆ "ಅಪ್ಪಾ, ನಮಗೆ ಇರುವುದು ಎರಡೇ ಆಸ್ತಿ. ಕಾಮಧೇನು ಮತ್ತು ತೋಟ. ಈ ಎರಡರಿಂದಲೇ ಹಿಂದಲವರು ಸಾಲ ಮಾಡದೆ ಬಾಳಿದರು. ನನ್ನ ಕಾಲಕ್ಕೆ ಹೇಗೊ ಖರ್ಚು ಹೆಚ್ಚಾಗಿಬಿಟ್ಟಿತು. ಆದರೆ ತೋಟ ಚೆನ್ನಾಗಿದೆ. ಬೆಳೆ ಬರುತ್ತೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಮಧೇನುವನ್ನು ನಂಬು. ಅದು ಸಾಮಾನ್ಯ ಹಸುವೆಂದುಕೊಳ್ಳಬೇಡ. ಅದರ ಅನುಗ್ರಹ ಉಂಟಾದರೆ, ಈ ಈ ಎರಡು ಸಾವಿರ ಸಾಲವೇಕೆ ? ಹತ್ತು ಸಾವಿರವಿದ್ದರೂ ಸುಲಭವಾಗಿ ತೀರಿಸ

ಬಹುದು. ಕಾಮಧೇನುವನ್ನು ಪೂಜಿಸು. ಅದು ನಿನಗೆ ನಿಜವಾದ ಕಾಮಧೇನುವೇ ಆಗುವುದು" ಎಂದು ಹೇಳಿ ಕಣ್ಣು ಮುಚ್ಚಿದನು.

ಗೋವಿಂದನಿಗೆ ಸಾಲ ಕೊಟ್ಟಿದ್ದ ಸಾಹುಕಾರರು ನಿಜವಾಗಿಯೂ ಬಹಳ ಪ್ರಬಲರೂ ಕ್ರೂರಿಯೂ ಆಗಿದ್ದರು. ಅವರಿಗೆ ಗೋವಿಂದನ ತೋಟದ ಮೇಲೆಯೇ ಕಣ್ಣಿತ್ತು. ಹಣ ಬಡ್ಡಿ ಎರಡೂ ಸೇರಿ ದೊಡ್ಡ ಗಂಟಾಗುವವರೆಗೆ ಅವರು ಹಣಕ್ಕೆ ತಗಾದೆಯೇ ಕೊಟ್ಟಿರಲಿಲ್ಲ. ಗೋವಿಂದನು ಸತ್ತ ಮಾರನೆಯ ದಿನವೇ ಸಾಹುಕಾರರು ಜನ್ನಪ್ಪನ ಮೇಲೆ ದಾವಾ ದಾಖಲ್ಮಾಡಿ ಇಂಜಕ್ಷನ್ ಜಫ್ತಿ ತಂದರು. ಒಬ್ಬಿಬ್ಬರು ಜನ್ನಪ್ಪನಿಗೆ "ಸಾಹುಕಾರ ನೀಚ. ಇಂತಹ ಕಾಲದಲ್ಲಿಯೇ ದಾವಾ ಮಾಡುವುದು ! ಅವನು ಹೃದಯಹೀನ ಪಿಶಾಚಿ. ಯಾವುದಾದರೂ ತಕರಾರು ಹಾಕಿಬಿಡು. ಎರಡು ವರ್ಷ ಎಳೆಯಲಿ" ಎಂದು ಹೇಳಿಕೊಟ್ಟರು. ಜನ್ನಪ್ಪನು "ನಾವು ಅವನಿಗೆ ಹಣ ಕೊಡಬೇಕಾಗಿರುವುದುಂಟು" ಎಂದು ಹೇಳಿಕೊಂಡು ಸುಮ್ಮನಾಗಿದ್ದನು. ಈ ಕತೆ ಪ್ರಾರಂಭವಾದ ದಿವಸ ಸಾಹುಕಾರರು ಸಮನ್ ಜವಾನನೊಂದಿಗೆ ಬರುವವರಾಗಿದ್ದರು.

ಮನೆಯಿಂದ ಹೊರಟ ಅರ್ಧ ಗಂಟೆಯೊಳಗಾಗಿ ಜನ್ನಪ್ಪ ತೋಟವನ್ನು ಸೇರಿದನು. ಕಾಮಧೇನು ಅಲ್ಲಿ ಮೇಯಲು, ಮುಂದೆ ಇನ್ನು ಅವಕಾಶವಿಲ್ಲವೆಂಬುದು ಅವನ ಕೊರಗು. ದಾರಿಯಲ್ಲಿ ಬರುತ್ತಾ ಉದ್ದಕ್ಕೂ 'ಈ ತೋಟ ಎಷ್ಟು ತಲೆಮಾರುಗಳಿಂದ ನಮ್ಮ ವಂಶದವರ ವಶದಲ್ಲಿತ್ತೋ ? ನನ್ನ ಕಾಲಕ್ಕೆ ಇದು ಹೋಯಿತು' ಎಂದು ಯೋಚಿಸಿದಾಗ, ಅವನ ಪ್ರಯತ್ನವೇ ಇಲ್ಲದೆ ಅವನು ಎಷ್ಟು ತಡೆದರೂ ನಿಲ್ಲದೆ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಿತು. ಕಾಮಧೇನುವಿಗೂ ಒಡೆಯನ ಮನಸ್ಸಿನ ಶೋಕ ತಿಳಿದಿದ್ದಿರಬೇಕು. ಅದು ನಿತ್ಯ ಜನ್ನಪ್ಪನ ಕೈಯಿಂದ ಹಗ್ಗವನ್ನು ದರದರನೆ ಎಳೆದುಕೊಂಡು ಹೋಗುತ್ತಿದ್ದುದು ಇಂದು ತಾನೂ ನಿಧಾನವಾಗಿ, ಮೇವಿನ ಆತುರವನ್ನೇ ಬಿಟ್ಟು ನಡೆಯತೊಡಗಿತ್ತು. ತೋಟಕ್ಕೆ ಹೋದ ಮೇಲೆ ಸಹ ಕಾಮಧೇನು ಮೇಯುವುದರಲ್ಲಿ ಹೆಚ್ಚು ಉತ್ಸಾಹ ತೋರದೆ ಒಂದು ಸಲ ಜನ್ನಪ್ಪನನ್ನೂ ಮತ್ತೊಂದು ಸಲ ಅಂತರಿಕ್ಷವನ್ನೂ ನೋಡುತ್ತಾ ಕಾಲ ಕಳೆಯುತ್ತಿತ್ತು.

ಜನ್ನಪ್ಪ ತೋಟಕ್ಕೆ ಬಂದ ಅರ್ಧ ಗಂಟೆಯೊಳಗಾಗಿ ಅವನ ಮಗ ...ನ

ಏದುತ್ತಾ ಓಡಿಬಂದನು. ದೂರದಲ್ಲಿ ಶೀನ ಬರುತ್ತಿರುವುದನ್ನು ನೋಡಿಯೇ ಜನ್ನಪ್ಪನಿಗೆ ಸಾಹುಕಾರರು ಅಮೀನನೊಂದಿಗೆ ದಾವಾ ಸಮನ್ಸ್‌ನೊಂದಿಗೆ ಬಂದಿರಬಹುದೆಂದು ಹೊಳೆಯಿತು. ಎಷ್ಟೋ ದಿನಗಳಿಂದಲೂ ಅವನು ಇದಕ್ಕೆ ಸಿದ್ಧನಾಗಿದ್ದರೂ ಅವನ ಎದೆ ಮತ್ತೆ ಢವಢವನೆ ಹೊಡೆದುಕೊಳ್ಳತೊಡಗಿತು. ಶೀನನು ದೂರದಿಂದಲೇ ತಂದೆಯನ್ನು ನೋಡಿ ಏದುತ್ತಾ, "ಅಣ್ಣ, ಸಾಹುಕಾರರು ಕೋರ್ಟಿನವರ ಜೊತೆಯಲ್ಲಿ ಬಂದಿದ್ದಾರೆ" ಎಂದನು. ಮನೆಯಲ್ಲಿ ಮಾತನಾಡಿ ಚರ್ಚಿಸಿ ಅತ್ತು ಕರೆದ ವಿಷಯ ಮನೆಮಕ್ಕಳಿಗೆಲ್ಲ ಗೊತ್ತಾಗಿತ್ತು. ಮಗನ ಮಾತನ್ನು ಕೇಳಿ ಜನ್ನಪ್ಪನು ಎದೆಯ ಮೇಲೆ ಕೈಯಿಟ್ಟುಕೊಂಡು ನಿಧಾನವಾಗಿ ಚೇತರಿಸಿಕೊಂಡನು.

ಜನ್ನಪ್ಪನು ಕಾಮಧೇನುವನ್ನು ತೋಟದಲ್ಲಿಯೇ ಬಿಟ್ಟು ಮನೆಗೆ ಹೋಗಿ ಸಮನ್ ತೆಗೆದುಕೊಳ್ಳುವುದೆಂದು ನಿಶ್ಚಯಿಸಿ ಮನೆ ಕಡೆ ಹೊರಟನು. ಇವನು ಹೊರಟುದನ್ನು ಕಂಡು ಗೂಟದ ಹಗ್ಗಕ್ಕೆ ಬಿಗಿದಿದ್ದ ಕಾಮಧೇನುವೂ ತನ್ನ ಹಗ್ಗವನ್ನು ಜಗ್ಗಿತು. ಜನ್ನಪ್ಪ ಅದನ್ನು ಕಂಡು ಅದರ ಬೆನ್ನನ್ನು ಸವರುತ್ತಾ, "ಈಗ ನಿನ್ನನ್ನು ಕೈಬಿಡುವುದಿಲ್ಲ. ತೋಟದಿಂದೊಂದೇ ಈಗ ಹೋಗುತ್ತಿರುವುದು. ಮತ್ತೆ ಬರುತ್ತೇನೆ, ಇರು" ಎಂದು ಸಮಾಧಾನ ಹೇಳಿ ಮನೆಯ ಕಡೆ ಹೊರಟನು. ಕಾಮಧೇನುವು "ನನ್ನನ್ನೂ ಕರೆದುಕೊಂಡು ಹೋಗಿ" ಎಂಬ ಭಾವವನ್ನು ಕಣ್ಣಿನಿಂದಲೂ ದೈನ್ಯದೃಷ್ಟಿಯಿಂದಲೂ ಪ್ರಕಟಿಸಿತು. ಜಗತ್ತಿನಲ್ಲಿ ತಾನು ಒಂಟಿಯೇ ಎಂದುಕೊಂಡಿದ್ದ ಜನ್ನಪ್ಪನಿಗೆ ಅದರ ಮಿತ್ರತ್ವದಿಂದ ತುಂಬ ಆನಂದವೂ ಮನಶ್ಶಾಂತಿಯೂ ಉಂಟಾಯಿತು. ದಿಲೀಪ ಮಹಾರಾಜನು ನಂದಿನೀಧೇನುವನ್ನು ಸೇವಿಸಿದ್ದುದು ಜನ್ನಪ್ಪನಿಗೆ ಜ್ಞಾಪಕಕ್ಕೆ ಬಂದಿತು.

"ಪ್ರಸ್ಥಿತಾಯಾಂ ಪ್ರತಿಷ್ಠೇತಾಃ ಸ್ಥಿತಾಯಾಂ ಸ್ಥಿತಿಮಾಚರೇಃ ||
ನಿಷಣ್ಣಾಯಾಂ ನಿಷೀದಾಸ್ಯಾಂ ಪೀತಾಂಭಸಿ ಪಿಬೇರಪಃ ||

ಧೇನು ನಿಂದೊಡೆ ನಿಂದು
ಧೇನು ನಡೆದೊಡೆ ನಡೆದು
ಧೇನು ಉದಕವ ಕುಡಿಯೆ ತಾನುದಕವನು ಕುಡಿದು
ಧೇನುವಿನ ನೆಳಲಂತೆ ನಡೆದನವನು"

ಹಾಗಾದರೆ ಬಾ, ನಿನ್ನ ಇಷ್ಟ ಎಂದು ಹೇಳಿ ಹಗ್ಗವನ್ನು ಹಿಡಿದುಕೊಂಡು ಹೊರಟನು.

ಊರಿನ ಜನವೆಲ್ಲ ತನ್ನ ಮನೆ ಬಾಗಿಲಿನಲ್ಲಿ ಸೇರಿದ್ದುದು ಜನ್ನಪ್ಪನಿಗೆ ದೂರದಿಂದಲೇ ಕಂಡಿತು. ಜನ್ನಪ್ಪ ಹಸುವನ್ನು ಬಾಗಿಲಿನ ಮುಂದಿದ್ದ ಬೂರುಗದ ಮರಕ್ಕೆ ಕಟ್ಟಿಹಾಕಿ ಕೂತುಕೊಂಡನು. ಅಲ್ಲಿ ಸೇರಿದ್ದವರಿಗೆಲ್ಲ ಅವನಲ್ಲಿ ಕನಿಕರವಿದ್ದರೂ ಯಾರೂ ಏನೂ ಮಾಡುವಂತೆ ಇರಲಿಲ್ಲ. 'ಪಾಪ ಜೀವನೋಪಾಯಕ್ಕಿದ್ದ ಒಂದು ತೋಟ ಸಾಹುಕಾರರಿಗೆ ಸೇರಿ ಹೋದರೆ ಇವನ ಗತಿ ಏನು ?' ಎಂಬುದು ಎಲ್ಲರ ಮನಸ್ಸನ್ನೂ ಕೊರೆಯುತ್ತಿದ್ದ ಪ್ರಶ್ನೆಯಾಗಿತ್ತು. ಅಮೀನರು ಜನ್ನಪ್ಪನಿಗೆ "ಸ್ವಾಮೀ, ತೋಟದ ಜಪ್ತಿಗೆ ಒಪ್ಪುತ್ತೀರಾ ?" ಎಂದು ಕೇಳಿದರು. ಜನ್ನಪ್ಪ ನಿದ್ರೆಯಲ್ಲಿ ಕನವರಿಸುವಂತೆ ಹೂ ಎಂದನು. ಅಮೀನರು "ಹಣ ತೀರಿಸಲು ಬೇರೆ ಏನಾದರೂ ರಹ ಇದೆಯೋ ಸ್ವಾಮಿ ?" ಎಂದರು. ಸಾಹುಕಾರರು "ಏನಿದೆ ರಹ ? ರಹವೂ ಇಲ್ಲ, ಗಿಹವೂ ಇಲ್ಲ; ಇದ್ದಿದ್ದರೆ ಈ ಹದಿನೈದು ವರುಷಗಳಿಂದ ತೀರಿಸದೆ ಇರುತ್ತಿದ್ದನೇ ? ನಡೆಯಿರಿ. ತೋಟ ಜಪ್ತಿ ಮಾಡೋಣ. ತೋಟ ಮನೆ ಎರಡನ್ನೂ ತೆಗೆದುಕೊಂಡರೂ ನನ್ನ ಸಾಲ ತೀರೋದಿಲ್ಲ. ಆದರೆ ಮನೆ ತೆಗೆದುಕೊಂಡುಬಿಟ್ಟರೆ ಇವರು ವಾಸಕ್ಕೆ ಎಲ್ಲಿ ಹೋಗ್ತಾರೆ, ಪಾಪ ಅಂತ ಬಿಟ್ಟಿದ್ದೇನೆ" ಎಂದರು.

ಜನ್ನಪ್ಪನ ನೆರೆಮನೆಯ ಕಸ್ತೂರಿ—ಅವನಿಗೆ ಜನ್ನಪ್ಪನ ಮನೆಯ ಹಸುವನ್ನು ಕಂಡರೆ ಯಾವಾಗಲೂ ದ್ವೇಷ. ಹಸುವನ್ನು ನೋಡುತ್ತಾ ಸ್ವಲ್ಪ ತಿರಸ್ಕಾರದಿಂದ "ಏನಿದೆ ರಹ ? ಇರೋದೆಲ್ಲ ಈ ಹಸುವೊಂದೇ. ಕಾಮಧೇನು ಕೇಳಿದ್ದನ್ನು ಕೊಡುತ್ತೆ. ಬಾಲಕ್ಕೆ ಗಡಿಗೆ ಕಟ್ಟಿದರೆ ಸಾಕು" ಎಂದನು. ಆ ಮಾತನ್ನು ಕೇಳಿ ಹಸು ತನಗೆ ಅರ್ಥವಾಯಿತೋ ಎಂಬಂತೆ ಸ್ವಲ್ಪ ನಾಚಿಕೆಯಿಂದ ತಲೆ ತಗ್ಗಿಸಿತು. ಆದರೆ ಜನ್ನಪ್ಪನಿಗೆ ನಿಜವಾಗಿಯೂ ಕಸ್ತೂರಿಯ ಮಾತು ಒಂದು ದಿವ್ಯವಾಣಿಯಂತೆ ಭಾಸವಾಯಿತು. ಜನ್ನಪ್ಪನು "ಹೌದು, ಇದರಿಂದಲೇ ತೀರಿಸುತ್ತೇನೆ" ಎಂದನು. ಸಾಹುಕಾರರು ಕನಿಕರದಿಂದಲೂ ತಿರಸ್ಕಾರದಿಂದಲೂ ಬಾಗಿಲಿನ ಬೂರುಗದ ಮರಕ್ಕೆ ಕಟ್ಟಿದ್ದ ಹಸುವನ್ನು ನೋಡಿದರು. [illegible]

ಕೊಡುತ್ತೆ. ಇದರಿಂದ ಸಾಲ ತೀರಿಸುವುದೇ ?" ಎಂದರು. ಜನ್ನಪ್ಪನಿಗೆ ಇದ್ದ ಕ್ಕಿದ್ದಂತೆ ಪಸು ಪ್ರತ್ಯಕ್ಷವಾದಂತೆ, ತನ್ನ ಬಯಕೆಯನ್ನೆಲ್ಲ ಈಡೇರಿಸುವು ದಾಗಿ ವಾಗ್ದಾನ ಕೊಟ್ಟಂತೆ, ಧೈರ್ಯವೂ ಮನಸ್ಸಮಾಧಾನವೂ ಆಯಿತು. ಅಮೀನರೂ ಸಾಹುಕಾರರೂ ಸಾಮಾನುಗಳನ್ನು ಕೊಟ್ಟು ಹೊರಟುಹೋದರು. ಒಂದು ತಿಂಗಳಿಗೆ ಹಿಯರಿಂಗ್ ತಾರೀಖು ಬದ್ದಿತ್ತು. ಜನ್ನಪ್ಪನ ತೋಟ, ಮನೆ ಸಾಹುಕಾರರಿಗೆ ಸೇರಿಯೇಹೋಯಿತು ಎಂಬಂತೆ ಜನ ಮಾತನಾಡು ತ್ತಿದ್ದರು.

ಹಿಯರಿಂಗ್ ದಿನ ಜನ್ನಪ್ಪ ಕೋರ್ಟಿಗೆ ಹೋದನು. "ಕೊಡತಕ್ಕದ್ದು ಉಂಟು. ನಾನು ವ್ಯವಸಾಯಗಾರ. ವಾಯಿದೆ ಕೊಡಿ" ಎಂದು ಬೇಡಿ ದನು. ಸಾಹುಕಾರರ ವಕೀಲರೂ ವಾಯಿದೆ ಕೊಡಲು ಹಿಂತೆಗೆಯಲಿಲ್ಲ. "ಹೇಗಿದ್ದರೂ ಇವನು ತೀರಿಸುವುದಿಲ್ಲ. ಯಾವತ್ತಿದ್ದರೂ ತೋಟ ನಮ್ಮದೇ. ಜನರೆದುರಿನಲ್ಲಿ ನಮಗ್ಯಾಕೆ ನಿಷ್ಠೂರ, ಕೇಳಿದ ವಾಯಿದೆ ಕೊಡೋಣ" ಎಂದರು, ಸಾಹುಕಾರರು. ಮುನಸೀಫರು ಎಲ್ಲವನ್ನೂ ಸಾವಧಾನವಾಗಿ ವಿಚಾರಿಸಿದರು. ಜನ್ನಪ್ಪನಿಗೆ ಇರುವುದು ತೋಟ ಒಂದೇ. ಆದರಿಂದ ಎರಡು ಸಾವಿರ ರೂಪಾಯಿಗಳನ್ನು ಬಡ್ಡಿ ಸಹಿತ ಐದು ವರ್ಷದ ಅವಧಿಯಲ್ಲಿ ವರುಷದ ಕಂತಿನಂತೆ ತೀರಿಸಬೇಕೆಂದು ಡಿಕ್ರಿ ಕೊಟ್ಟರು. ಇದರಿಂದ ಸಾಹು ಕಾರರಿಗೂ ಸಮಾಧಾನವಾಯಿತು. ಜನ್ನಪ್ಪನಿಗೆ ಹಣಪ್ರಾಪ್ತಿ ಮಾಡಲು ಸಾಧ್ಯವೆಂದು ಅವರೂ ನಂಬಲಿಲ್ಲ.

* * * *

ಜನ್ನಪ್ಪನ ತಪಸ್ಸು ಅಂದಿನಿಂದಲೇ ಪ್ರಾರಂಭವಾಯಿತು. ಅವನು ದಿಲೀಪ ಚಕ್ರವರ್ತಿಯ ಕತೆಯನ್ನೇ ಜ್ಞಾಪಿಸಿಕೊಳ್ಳುತ್ತ ನಿತ್ಯ ಹಸುವನ್ನು ತೋಟಕ್ಕೆ ಹೊಡೆದುಕೊಂಡು ಹೋಗಿ ಸಂಧ್ಯಾಕಾಲದವರೆಗೆ ಮೇಯಿಸಿಕೊಂಡು ಮನೆಗೆ ಬರುತ್ತಿದ್ದನು. ಹಸುವನ್ನು ಅವನು ಮನೆಗೆ ಹೊಡೆದುಕೊಂಡು ಬರುತ್ತಿರುವಾಗ ಅವನನ್ನು ನೋಡಿದವರು ವಿನೋದವಾಗಿ, ಎರಡು ಸಾವಿರ ರೂಪಾಯಿನ ಹಸು ಎಂದು ಹಾಸ್ಯಮಾಡುತ್ತಿದ್ದರು.

ಸಾಹುಕಾರರು ದಾವಾ ಹಾಕಿದ ಮುಂದಲ ತಿಂಗಳಲ್ಲಿಯೇ ಕಾಮಧೇನು ಕರು ಹಾಕಿತು. ಜನ್ನಪ್ಪ ನಿರೀಕ್ಷಿಸಿದ್ದಂತೆ ಅದು ಹೋರಿಕರು. ಹತ್ತಿಯ

ರಾಶಿಯಂತೆ ಬೆಳ್ಳಗೆ ಹುಲ್ಲೆಯ ಕರುವಿನಂತೆ ಗೆಲುವಾಗಿ ಸರ್ವ ಶುಭಲಕ್ಷಣ ಸಂಪನ್ನವಾಗಿದ್ದ ಆ ಕರುವನ್ನು ನೋಡಿ ಜನ್ನಪ್ಪನಿಗೆ ಪುತ್ರೋತ್ಸವವಾದಷ್ಟು ಆನಂದವಾಯಿತು. ಆತನ ಧರ್ಮಪತ್ನಿ ಹಸುವಿನ ಕ್ರೋಡುಗಳ ಮಧ್ಯೆ ಅರಸಿನ ಕುಂಕುಮವನ್ನಿಟ್ಟು ಪೂಜಿಸಿ ಅದಕ್ಕೆ ಪ್ರದಕ್ಷಿಣೆ ಮಾಡಿ ನಮಸ್ಕಾರ ಮಾಡಿದಳು.

ಇನ್ನೊಂದು ತಿಂಗಳು ಕಳೆಯುವುದರೊಳಗಾಗಿ ಕರು ನಾಲ್ಕು ಅಡಿ ಬೆಟ್ಟ ದಂತೆ ಬೆಳೆಯಿತು. ಆ ಪ್ರಾಂತದಲ್ಲಿಯೇ ಅದಕ್ಕೆ ಸಮನಾದ ಕರು ಇರಲಿಲ್ಲ. ಜನ್ನಪ್ಪ ಅದನ್ನು ಆರುನೂರು ರೂಪಾಯಿಗಳಿಗೆ ಮಾರಿದನು. 'ಹಣ ಬರುವುದಿಲ್ಲ. ಜಾರಿಗೆ ಕೊಡಬೇಕೆಂದು' ಯೋಚಿಸುತ್ತಿದ್ದ ಸಾಹುಕಾರರಿಗೆ ಆರುನೂರು ರೂಪಾಯಿಗಳನ್ನು ಜನ್ನಪ್ಪ ಕೋರ್ಟಿನಲ್ಲಿ ಕಟ್ಟಿರುವುದಾಗಿ ಕೋರ್ಟಿನಿಂದ ತಿಳುವಳಿಕೆ ಬಂದ ಕೂಡಲೇ, ಆಶ್ಚರ್ಯವೂ ಗಾಬರಿಯೂ ಉಂಟಾಯಿತು. ಅದರ ಮುಂದಲ ತಿಂಗಳು ಕಾಮಧೇನು ಮತ್ತೆ ಗಬ್ಬವಾಯಿತು. ಹತ್ತು ತಿಂಗಳಿಗೆ ಮೊದಲನೆಯ ಹೋರಿಗಿಂತಲೂ ಹೆಚ್ಚು ಬಲವಾದ ಮತ್ತೊಂದು ಹೋರಿಕರುವನ್ನು ಹಾಕಿತು. ಜನ್ನಪ್ಪ ಆ ಕರುವನ್ನೂ ಹತ್ತು ತಿಂಗಳ ನಂತರ ಮತ್ತೆ ಆರುನೂರು ರೂಪಾಯಿಗಳಿಗೇ ಮಾರಿ ಆ ಹಣವನ್ನೂ ಕೋರ್ಟಿಗೆ ಕಟ್ಟಿದನು. ಆ ಹಣ ಬಂದಾಗ ಸಾಹುಕಾರರಿಗೆ ನಿಜವಾಗಿಯೂ ತೋಟ ತಮ್ಮ ಕೈ ತಪ್ಪಿಹೋಯಿತೆಂದು ಖಾತರಿಯಾಯಿತು.

ಎರಡು ವರ್ಷಗಳ ಅವಧಿಯಲ್ಲಿ ಜನ್ನಪ್ಪ ಕೋರ್ಟಿಗೆ ಮೂರು ವರ್ಷದ ವಾಯಿದೆಯ ಹಣವನ್ನು ಕೊಟ್ಟಿದ್ದನು. ಕಾಮಧೇನು ಮೂರನೆಯ ಕರುವನ್ನು ಹೆಣ್ಣು ಕರು ಹಾಕಿತ್ತು. ಜನ್ನಪ್ಪ ಅದನ್ನು ಮುಂದಲ ತಳಿಗೆ ಇಟ್ಟುಕೊಂಡನು. ನಾಲ್ಕನೆಯ ಕರು, ಐದನೆಯ ಕರು ಇವುಗಳನ್ನು ಮಾರಿ ಜನ್ನಪ್ಪ ಸಾಲವನ್ನೆಲ್ಲ ತೀರಿಸಿಬಿಟ್ಟನು. ಕಾಮಧೇನು ಸಾಲ ತೀರಿದ ಮೇಲೂ ಎರಡು ಹೋರಿಗರುಗಳನ್ನು ಹಾಕಿತು. ಅವನ ಪಾಲಿಗೆ ಕಾಮಧೇನು, ನಿಜವಾಗಿ ಕಾಮಧೇನುವೇ ಆಯಿತು.

ಸಾಹುಕಾರರು ಮಾತ್ರ, "ನೋಡುವುದಕ್ಕೆ ಕುಳ್ಳಗಿರುವ ಆ ಬಡಕಲು ಹಸು ನನಗೆ ಬರಬೇಕಾಗಿದ್ದ ತೋಟವನ್ನು ಎತ್ತಿಹಾಕಿಬಿಟ್ಟಿತಲ್ಲ!" ಎನ್ನು

ತ್ತಾರೆ. ಹಳ್ಳಿಯವರಿಗೆ ಇರುವ ಸಾಲದ ಮಾತು ಬಂದಾಗ "ಕಾಮಧೇನುವಿನ ಕೃಪೆಯಾದರೆ ತೀರುವುದು ಎಷ್ಟು ಹೊತ್ತು" ಎಂದುಕೊಂಡು ತಮ್ಮ ಹಸುಗಳನ್ನೇ ಚೆನ್ನಾಗಿ ಮೇಯಿಸುತ್ತಿದ್ದಾರೆ. ಜನ್ನಪ್ಪನಂತೂ ಹಸುವನ್ನು "ನನ್ನ ಮನೆದೇವರು" ಎನ್ನುತ್ತಿದ್ದಾನೆ.

ಈಗ ಹಳ್ಳಿಯಲ್ಲಿ ಒಂದಾದರೂ ಬಡಕಲು ಹಸು ಇಲ್ಲ.

ಕಾನ್‌ಸ್ಟೇಬಲ್ ಕೆಂಪಯ್ಯನಿಗೆ ಬಿದ್ದ ತಪರಾಕು

೧

ಕಾನ್‌ಸ್ಟೇಬಲ್ ಕೆಂಪಯ್ಯನನ್ನು ಜಿಲ್ಲೆಯ ಮುಖ್ಯ ಪಟ್ಟಣಕ್ಕೆ ವರ್ಗ ಮಾಡಿದಾಗ, ಅವನಿಗೆ ತನ್ನ ಪ್ರಾಣವೇ ಹಾರಿಹೋದಂತೆ ಆಯಿತು. ಕೆಲಸಕ್ಕೆ ಸೇರಿದಂದಿನಿಂದ ಅವನು ಹೇಗೋ ರಸ್ತೆಯಿಂದ ದೂರವಾಗಿದ್ದ ಹಳ್ಳಿಗಳಲ್ಲಿಯೇ ಇರಲು ಅವಕಾಶಮಾಡಿಕೊಂಡಿದ್ದನು. ಅದರಿಂದ ಅವನಿಗೆ ನಾನಾ ವಿಧವಾದ ಅನುಕೂಲಗಳಾಗುತ್ತಿದ್ದವು. ಹಳ್ಳಿಯ ಪೋಲೀಸ್ ಠಾಣೆಯಲ್ಲಿ ಇದ್ದವನು ಅವನು,ದಫೇದಾರರು ಮತ್ತು ಇನ್ನೊಬ್ಬ ಕಾನ್‌ಸ್ಟೇಬಲ್.ದಫೇದಾರರ ಸಂಸಾರ ಬೇರೆ ಊರಿನಲ್ಲಿದ್ದುದರಿಂದ ದಫೇದಾರರು ವಾರಕ್ಕೆ ಐದು ದಿನ ಪೋಲೀಸ್ ಠಾಣೆಯಲ್ಲಿರುತ್ತಿರಲಿಲ್ಲ. ದಫೇದಾರರು ಇಲ್ಲದ ಕಾಲದಲ್ಲಿ ಕೆಂಪಯ್ಯ ವಾರಕ್ಕೆ ಮೂರು ದಿನ ಹಳ್ಳಿಗಳ ಮೇಲೆ ಹೋಗುತ್ತಿದ್ದನು. ಹೋಗುತ್ತಿದ್ದ ಉದ್ದೇಶ, ಹಳ್ಳಿಗಳಲ್ಲಿ ಕಾವಲು ಕಾಯುವುದಕ್ಕೆ (ಬೀಟ್) ಎಂದು. ಮನೆಗೆ ಹಿಂದಿರುಗುವಾಗ ಪ್ರತಿದಿನವೂ ಕೆಂಪಯ್ಯ ತರಕಾರಿ, ಬೆಣ್ಣೆ-ಮೊಸರು, ಮೊಟ್ಟೆ, ಕೋಳಿ, ಒಂದೊಂದು ದಿನ ಸೌದೆ ಗಾಡಿ ಹೀಗೆ ಸಮೃದ್ಧನಾಗಿ ಹಿಂದಿರುಗುತ್ತಿದ್ದನು. ಅವನು ಕಾವಲಿದ್ದ ಪೋಲೀಸ್ ಠಾಣೆಯ ಮುಂದೆ ನಾಲ್ಕು ಬಸ್ಸುಗಳು ಓಡುತ್ತಿದ್ದವು. ಮಾಮೂಲು ನಿತ್ಯ ಒಂದು ಬಸ್ಸಿಗೆ ನಾಲ್ಕು ಆಣೆ. ಜನರನ್ನು ಹೆಚ್ಚಿಗೆ ಹಾಕಿದ್ದರೆ ಹೆಚ್ಚು ದುಡ್ಡು. ಬಂದುದರಲ್ಲಿ ಅರ್ಧವನ್ನು ದಫೇದಾರರಿಗೆ ಕೊಟ್ಟು ಉಳಿದುದನ್ನು ಕೆಂಪಯ್ಯನೂ ಅವನ ಜತೆ ಕಾನಸ್ಟೇಬಲನೂ ಹಂಚಿಕೊಳ್ಳುತ್ತಿದ್ದರು. ಹೀಗೆ ಹಳ್ಳಿಯ ಪೋಲೀಸ್ ಠಾಣೆಯಲ್ಲಿಯೇ ಎಂಟು ವರ್ಷ ಕಳೆದು ಹೋಯಿತು.

ಇದ್ದಕ್ಕಿದ್ದಂತೆ ಕೆಂಪಯ್ಯನನ್ನು ಜಿಲ್ಲೆಯ ಮುಖ್ಯ ನಗರಕ್ಕೆ ವರ್ಗಾಯಿಸಿಬಿಟ್ಟರು. ಕೆಂಪಯ್ಯನಿಗೆ ಸ್ಥಳ ಹೊಸದು.ಅಲ್ಲದೆ ಪಟ್ಟಣದಲ್ಲಿ ಸಬ್‌ಇನ್ಸ್‌ಪೆಕ್ಟರು,

ಇನ್‌ಸ್ಪೆಕ್ಟರು, ಸೂಪರಿಂಟೆಂಡೆಂಟರು, ಜಿಲ್ಲಾಧಿಕಾರಿಗಳು ಮುಂತಾದ ಅನೇಕ ಅಧಿಕಾರಿಗಳ ಕಾಟ. ಕಾಲಕ್ಕೆ ಸರಿಯಾಗಿ ಕೆಲಸಕ್ಕೆ ಹೋಗಬೇಕು; ಕಛೇರಿಯಲ್ಲಿ "ಹಾಜರ್" ಆಗಬೇಕು. ಕೆಂಪಯ್ಯನಿಗೆ ಕಾಲಕ್ಕೆ ಸರಿಯಾಗಿ ಯಾವ ಕೆಲಸವನ್ನೂ ಮಾಡಿಯೇ ಅಭ್ಯಾಸವಿರಲಿಲ್ಲ. ಅವನಿಗೆ ತನ್ನ ಸಮವಸ್ತ್ರವನ್ನು ಸಹ ಶಿಸ್ತಿನಿಂದ ಸರಿಯಾಗಿ ಧರಿಸುವುದು ಅಭ್ಯಾಸವಿರಲಿಲ್ಲ. ಹಳ್ಳಿಯ ಪೋಲೀಸ್ ಠಾಣೆಯಲ್ಲಿದ್ದಾಗ ಅವನು ಹೇಗೋ ತನ್ನ ನಿಕ್ಕರ್ [ಚಡ್ಡಿ] ನ್ನು ಸಡಿಲವಾಗಿ ಸಿಗೆಹಾಕಿಕೊಂಡುಬಿಡುತ್ತಿದ್ದನು. ಪೋಲೀಸಿನವರಿಗೆ "ಅರಿವೆ ಕಾಲು" ಎಂಬ ಹೆಸರೇ ಇದ್ದರೂ ಅವನು ಕಾಲಿನ ಪಟ್ಟಿಯನ್ನು ಕಟ್ಟಿಕೊಳ್ಳುತ್ತಲೇ ಇರಲಿಲ್ಲ. ಅಲ್ಲದೆ ಬೇರೆ ಬಟ್ಟೆಗಳನ್ನೇ ಅವನು ಕೊಂಡುಕೊಳ್ಳದೆ ಯಾವಾಗಲೂ ಹಳ್ಳಿಯಲ್ಲಿ ತನ್ನ ಸಮವಸ್ತ್ರವನ್ನೇ ಧರಿಸಿಕೊಂಡಿರುತ್ತಿದ್ದನು. ಜಿಲ್ಲಾ ಮುಖ್ಯ ಪಟ್ಟಣಕ್ಕೆ ವರ್ಗವಾದಾಗ, ಅವನ ಸಮವಸ್ತ್ರಗಳೆಲ್ಲ ತೂತು ಬಿದ್ದಿದ್ದವು. ರುಮಾಲು ತರ್ಕಾರಿ ಕಲೆಯಿಂದ ಕಲುಷಿತವಾಗಿತ್ತು. ಪಟ್ಟಣದಲ್ಲಿ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಸಬ್‌ಇನ್‌ಸ್ಪೆಕ್ಟರರ ಮುಂದೆ ಹಾಜರಾಗುವುದೇ ಕೆಂಪಯ್ಯನಿಗೆ ಯಮಯಾತನೆಯಾಗಿತ್ತು. ಅದರ ಜತೆಗೆ "ನಿನ್ನ ಯೂನಿಫಾರಂ ! ಇದೇನು ಗೋಣೀಚೀಲ. ರಾತ್ರಿಯೆಲ್ಲ ಕೆಸರಿನ ಗದ್ದೆಯಲ್ಲಿ ಮೀನು ಹಿಡಿಯುತ್ತಿದ್ದೆಯೊ? ನೀನೇನು ಪೋಲೀಸೋ ಝಾಡಮಾಲಿಯೋ?" ಎಂದು ಸಬ್‌ಇನ್ಸ್‌ಸ್ಪೆಕ್ಟರು ಗದರಿಸಿದಾಗ ಕೆಂಪಯ್ಯ ಮನಸ್ಸಿನಲ್ಲಿ 'ನನಗೆ ಆಗಲೇ ಎಂಟು ವರ್ಷ ಪೋಲೀಸ್ ಠಾಣೆಯ ಸರ್ವಿಸ್ ; ಅದಕ್ಕೆ ಹಿಂದೆ ನಾಲ್ಕು ವರ್ಷ ಹಳ್ಳಿಯ ಸರ್ವಿಸ್ ; ಇಂತಹ ಅನುಭವದಾರನನ್ನ ಇವತ್ತು ಕೆಲಸಕ್ಕೆ ಸೇರಿದ ಪಡ್ಡೆ ಹುಡುಗರ ಎದುರಿಗೆ, ಈ ಸಬ್‌ಇನ್ಸ್‌ಸ್ಪೆಕ್ಟರ್ ಸಾಹೇಬ ಬಯ್ಯುತ್ತಾನಲ್ಲ. ಪಕ್ಕೀಯವರ ಮಾನ ಪಟ್ಟಣದಲ್ಲಿ ಹೋಯ್ತು' ಎಂದು ಯೋಚಿಸಿಕೊಳ್ಳುತ್ತಿದ್ದನು. ಪಟ್ಟಣದಲ್ಲಿ ಅವನ ಜೊತೆಯ ಕಾನ್‌ಸ್ಟೇಬಲ್‌ಗಳು ನಿತ್ಯ ಅಗಸನಿಗೆ ಹಾಕಿದ ಸಮವಸ್ತ್ರವನ್ನು ಧರಿಸಿಕೊಂಡು ಒಳ್ಳೆ ಜಬರ್ದಾಗಿ ಗೆಲುವಾಗಿ ಬರುತ್ತಿದ್ದರು. ಕೆಂಪಯ್ಯನಿಗೂ ತಾನು ಹೊಸದಾಗಿ ಒಂದು ಜತೆ ಸಮವಸ್ತ್ರವನ್ನು ತನ್ನ ಸ್ವಂತ ದುಡ್ಡಿನಿಂದಲೇ ಹೊಲಿಸಿಕೊಳ್ಳಬೇಕೆಂದು ಆಸೆಯಾಯಿತು. ಆದರೆ ಅವನ ಕೈಯಲ್ಲಿ ಹಣವಿರಲಿಲ್ಲ.

ಪಟ್ಟಣವನ್ನು ಸೇರಿದ ಮೇಲೆ ಕೆಂಪಯ್ಯನಿಗೆ ಮತ್ತೊಂದು ಅನಿರೀಕ್ಷಿತ

ಮಾಡ ವೆಚ್ಚ ಒದಗಿತು. ಅದು ಅವನ ಕ್ಷೌರದ ಖರ್ಚು. ಒಬ್ಬ ಮನುಷ್ಯನಿಗೆ ಕ್ಷೌರಕ್ಕೆ ಎಷ್ಟು ವೆಚ್ಚವಾಗಬಹುದೆಂದು, ಹಳ್ಳಿಯಲ್ಲಿದ್ದಾಗ ಯಾರಾದರೂ ಅವನಿಗೆ ಹೇಳಿದ್ದರೆ, ಅವನು ಖಂಡಿತ ಅದನ್ನು ನಂಬುತ್ತಿರಲಿಲ್ಲ. ಕೆಂಪಯ್ಯ ಹಳ್ಳಿಯಲ್ಲಿದ್ದಾಗ ಎರಡು ತಿಂಗಳಿಗೆ ಒಂದು ಸಲ ಕ್ಷೌರ ಮಾಡಿಸಿಕೊಳ್ಳುತ್ತಿದ್ದನು. ಅದಕ್ಕೂ ದುಡ್ಡು ಕೊಡುತ್ತಿರಲಿಲ್ಲ. ಹಳ್ಳಿಯ ರಕ್ಷಣೆ ಮಾಡುವವನ ಗಡ್ಡವನ್ನೂ ತಲೆಯನ್ನೂ ಬೋಳಿಸುವುದು ಹಳ್ಳಿಯ ಹಜಾಮನ ಹಣೆಬರಹ. ತಿಂಗಳಿಗೊಂದು ಸಲ ಕೆಂಪಯ್ಯ ಮಾಡಿಸಿಕೊಂಡಿದ್ದರೂ ಕ್ಷೌರಿಕ ಮಾಡುತ್ತಿದ್ದ. ಆದರೆ ಕೆಂಪಯ್ಯನಿಗೆ ಗಡ್ಡ ಮೀಸೆ ಬೆಳೆದಿಲ್ಲದಿದ್ದರೆ ಏನೋ ಒಂದು ಅರಕೆ ಅನುಭವವಾಗುತ್ತಿದ್ದಿತು. ಅವನು ಎಚ್ಚರವಾಗಿರುವ ಕಾಲದಲ್ಲೆಲ್ಲ ಎಡಗೈಯಿಂದ ಗಡ್ಡ ನೀವುವುದು, ಮೀಸೆಯನ್ನು ಪಾಲೀಸ್ ಮಾಡುವುದು ಈ ಕಾರ್ಯದಲ್ಲಿಯೇ ತೊಡಗಿರುತ್ತಿದ್ದನು. ಆ ಗಡ್ಡ ಮೀಸೆ ಹತ್ತಿಯಂತೆ ಕೈಗೆ ಸಿಕ್ಕಿದರೆ ಮಾತ್ರ ಸಮಾಧಾನವಾಗುತ್ತಿದ್ದಿತು. ಇಲ್ಲದಿದ್ದರೆ ಇಲ್ಲ. ಕ್ಷೌರ ಮಾಡಿಸಿಕೊಂಡ ಎಂಟು ದಿವಸ ಅವನಿಗೆ ಯಾವಾಗಲೂ ಎಲ್ಲರ ಮೇಲೆಯೂ ಅಸಮಾಧಾನವೇ ಇರುತ್ತಿದ್ದಿತು. ಇದಕ್ಕೆ ಮುಖ್ಯ ಕಾರಣ, ಆ ದಿನಗಳಲ್ಲಿ ಅವನ ಗಡ್ಡಕ್ಕೆ ಕೈಹಾಕಿದ ಕೂಡಲೇ ಅವನಿಗೆ ಪದ್ಧತಿಯಂತೆ ಮುಖಮಲ್ಲಿನಂತಿರುವ ಮೆತ್ತನೆಯ ಗಡ್ಡ ಸಿಕ್ಕುವುದರ ಬದಲು ಮುಳ್ಳಿನ ಮೊನೆಯಂತೆ ತರಿತರಿಯಾಗಿ ಸಿಕ್ಕುತ್ತಿದ್ದಿತು. ಆ ವಾರವೆಲ್ಲ ಅವನು ಕಂಡ ಕಂಡವರ ಮೇಲೆ ರೇಗುತ್ತಲೇ ಇರುತ್ತಿದ್ದನು. ಎಡಗೈ, ಗಡ್ಡದ ಕೆಲಸ ಮಾಡುತ್ತಿರುವಾಗಲೇ ಅವನು ಸಮಾಧಾನದಿಂದ ಹಿತವಾಗಿ ಇತರರೊಂದಿಗೆ ಮಾತನಾಡುತ್ತಿದ್ದುದು.

ಇಂತಹವನಿಗೆ ಮೂರು ದಿನಕ್ಕೊಂದು ಸಲ ಪಟ್ಟಣದಲ್ಲಿ ಕ್ಷೌರಮಾಡಿಸಿಕೊಳ್ಳುವುದೆಂದರೆ ಅದು ದೊಡ್ಡ ಅನಾಹುತವಲ್ಲದೆ ಮತ್ತೇನು ? ಆ ಸೆಲೂನ್ ಅಂಗಡಿಯವರು ಮೂರು ಆಣೆ ಕೊಟ್ಟಲ್ಲದೆ ಕ್ಷೌರ ಮಾಡುತ್ತಿರಲಿಲ್ಲ. ಆ ಗಡ್ಡವೋ! ರಾಮಾ ರಾಮಾ, ಎಲ್ಲಿ ಎಷ್ಟು ಗೊಬ್ಬರ ನೀರು ಹಾಕಿದರೂ ಯಾವ ಪೈರೂ ಅಷ್ಟು ಪುಷ್ಟವಾಗಿ ಬೆಳೆಯುವುದಿಲ್ಲ. ಕ್ಷೌರಿಕ ಕೂದಲನ್ನು ಹೆರೆದು ಕತ್ತಿಯನ್ನು ಕೆಳಕ್ಕೆ ಇನ್ನೂ ಇಡುವುದಕ್ಕೆ ಮುಂಚೆಯೇ, ಅವನು ಹೊರಟು ಹೋದನೋ ಎಂದು ಗಡ್ಡ ಇಣಿಕಿ ನೋಡುವಂತೆ ತೋರುತ್ತಿತ್ತು. ಮೂರು ಮೂರು ದಿನಕ್ಕೆ ಒಂದೊಂದು ಸಲ ಹೆರೆಸಿಕೊಂಡು ಕೆಂಪಯ್ಯನಿಗೆ ಚರ್ಮದ

ಮೇಲಿನ ಒಂದು ಪ್ರೊರೆಯನ್ನೆ ಹೆರೆಸಿ ಹಾಕಿದ ಅನುಭವವುಂಟಾಗಿತ್ತು. ಳಿಗೆ ಗಡ್ಡಕ್ಕೇ ಎರಡು ರೂಪಾಯಿ ! ಇಷ್ಟಾದರೂ ಜತೆಯ ಕಾನಸ್ಟೇಬಲ್ ಅವನ ಮೀಸೆ ಗಡ್ಡ ಕುರಿತು ಹಾಸ್ಯ ಮಾಡುತ್ತಲೇ ಇದ್ದರು. ಹಳ್ಳಿಯಲ್ಲಿ ತನ್ನನ್ನೂ ಸಾಹೇಬರು ಎಂದು ಕರೆದಾಗ, ಅದು ತನ್ನ ಹುದ್ದೆಯ ಗೌರವವೇ ಕೆಂಪಯ್ಯ ಭಾವಿಸಿದ್ದನು. ಪಟ್ಟಣಕ್ಕೆ ಬಂದ ಮೇಲೆ ಜನ, ತನ್ನ ಗಡ್ಡವ ನೋಡಿ ತನಗೆ ಇಟ್ಟ ಹೆಸರೆಂದು ಅವನಿಗೆ ಅರ್ಥವಾಯಿತು.

ಹಳ್ಳಿಯ ಠಾಣೆಯಲ್ಲಿ ಕೆಲಸವನ್ನೇ ಮಾಡದಿದ್ದರೂ ಹನ್ನೆರಡು ವರ ಕಾಲ ಯಾರ ಆಕ್ಷೇಪಣೆಗಳಿಗೂ ಒಳಗಾಗದೆ 'ಕೆಲಸಮಾಡಿದ್ದ' ಕೆಂಪಯ್ಯ ಪಟ್ಟಣದಲ್ಲಿ ಎಂಟು ತಿಂಗಳು ಕಳೆಯುವುದರೊಳಗಾಗಿ ಐದು ಅಲಕ್ಷ ಆಪಾದನೆಗಳು (ಬ್ಲಾಕ್ ಮಾರ್ಕ್) ಬಂದುವು. ಅವನ ಆಪಾದನೆಯ ಪ್ರ ವನ್ನು ಇನ್ಸ್‌ಪೆಕ್ಟರ್ ಒಂದು ದಿನ ನೋಡಿ 'ನಿನ್ನ ಮೇಲೆ ಇನ್ನೊಂದು ಆಪಾ ಬಂದರೆ ನಿನಗೆ ಡಿಗ್ರೇಡ್ ಅಥವಾ ಸಸ್ಪೆಂಡ್ ಆಗುತ್ತದೆ" ಎಂದು ಗದರಿಸಿದ್ದ ಹಳ್ಳಿಯಲ್ಲಿ ಯಕ್ಷಗಾನ ಪ್ರಸಂಗ ನೋಡಿದ್ದ ಕೆಂಪಯ್ಯನಿಗೆ ಶಿಶುಪಾಲನ ತ ಗಳ ಜ್ಞಾಪಕ ಬಂತು. "ಇನ್ನೊಂದು ತಪ್ಪು! ಅಲ್ಲಿಗೆ ನನ್ನ ತಲೆ ಹಾರಿಹೋಗು ನಾನೇನೋ ಶಿಶುಪಾಲ ಇರಬಹುದು. ಇನ್ಸ್‌ಪೆಕ್ಟರ್ ಏನು ಕೃಷ್ಣ ಅಲ್ಲವಲ್ಲ ಎಂದು ಕೆಂಪಯ್ಯ ಯೋಚಿಸಿದನು. "ಸಸ್ಪೆಂಡ್ ಏನೋ ಸರಿ. ಆದರೆ ಇವ ಡಿಗ್ರೇಡ್ ಎನ್ನುತ್ತಾರಲ್ಲ. ಪೋಲೀಸ್ ಇಲಾಖೆಯಲ್ಲಿ ಕಾನಸ್ಟೇಬಲ್ ಕೊನೇ ಹುದ್ದೆ. ಅದಕ್ಕಿಂತ ಡಿಗ್ರೇಡ್ ಯಾವುದು ?" ಎಂದು ಅವನು ಅರ್ಥ ವಿನೋ ವಾಗಿಯೂ ಸ್ವಲ್ಪ ತಿರಸ್ಕಾರದಿಂದಲೂ ಯೋಚಿಸತೊಡಗಿದನು.

ಇದ್ದಕ್ಕಿದ್ದಂತೆ ಕೆಂಪಯ್ಯನಿಗೆ ಮತ್ತೊಂದು ಅಪಾಯ ಎದುರಾಯಿತ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟರು ಕಾನ್‌ಸ್ಟೇಬಲ್‌ಗಳನ್ನೆಲ್ಲ ಕರ ಅವರಲ್ಲಿ ಕೆಲವನ್ನು ಅದೇ ನಗರದ ವಾಹನ ಸಂಚಾರ ವ್ಯವಸ್ಥೆಯ ಹತೋಟಿ ನಿಯಮಿಸಿದರು. ಆ ಕಾರ್ಯವನ್ನು ಕೆಂಪಯ್ಯ ಹಿಂದೆ ಎಂದೂ ಮಾಡಿರಲಿ ಆದರೆ, ಹೊಸದಾಗಿ ಕಾನ್‌ಸ್ಟೇಬಲ್ ಆದವರಿಗಿಂತ ಹನ್ನೆರಡು ವರ್ಷ ಅನುಭ ಯನಾದ ಕೆಂಪಯ್ಯ ಉತ್ತಮನೆಂದು ಸೂಪರಿಂಟೆಂಡೆಂಟರು ಭಾವಿಸಿದ್ದರ ತನ್ನನ್ನು ಆ ಕಾರ್ಯಕ್ಕೆ ಎಂದಿಗಾದರೂ ನಿಯಮಿಸಬಹುದೆಂದು ಕೆಂಪಯ್ಯನಿ ಕನಸಿನಲ್ಲಿ ಸಹ ಹೊಳೆದಿರಲಿಲ್ಲ. "ದುಷ್ಕಾಲ ನನ್ನ ಬೆನ್ನು ಹತ್ತಿದೆ" ಎಂ

ಕೆಂಪಯ್ಯ, ಸಂಚಾರ ವ್ಯವಸ್ಥೆಯ ಹತೋಟಿಗೆ ತನಗೆ ಕೊಟ್ಟ ಶಿಕ್ಷಣವನ್ನು ಇತರ ಕಾನ್‌ಸ್ಟೇಬಲ್‌ಗಳೊಡನೆ ತೆಗೆದುಕೊಂಡನು. ಅನಂತರ ಎಲ್ಲರನ್ನೂ ನಿಯಮಿಸಿದಂತೆ ಕೆಂಪಯ್ಯನನ್ನೂ ಒಂದು ವರ್ತುಲ(ಸರ್ಕಲ್)ದಲ್ಲಿ ಸಂಚಾರದ ಹತೋಟಿಗಾಗಿ ನಿಲ್ಲಿಸಿದರು.

ವರ್ತುಲದಲ್ಲಿ ಸ್ವಲ್ಪ ಎತ್ತರವಾಗಿದ್ದ ಪಾದಪೀಠದ ಮೇಲೆ ನಿಂತುಕೊಂಡ ಕೆಂಪಯ್ಯ, ಜನರಿಗೂ ವಾಹನಗಳಿಗೂ ಕೈಯಿಂದ ಸಂಜ್ಞೆ ಮಾಡಿ ದಿಕ್ಕನ್ನು ತೋರಿಸತೊಡಗಿದನು. ಹಿಂದೆ "ಇದು ಯಾವ ಮಹಾ ಕೆಲಸ?" ಎಂದು ಹಾಸ್ಯ ಮಾಡುತ್ತಿದ್ದ ಕೆಂಪಯ್ಯನಿಗೆ, ಪಾದಪೀಠದ ಮೇಲೆ ನಿಂತುಕೊಂಡು ಸುತ್ತ ನೋಡಿದಾಗ, ತಾನೇ ಒಂದು ಗಾಳಿಗಿರಿಗಟ್ಟೆಯ ಮೇಲೆ ಕುಳಿತಿದ್ದಂತೆ ಭಾಸ ವಾಯಿತು. ಆ ಪಟ್ಟಣದಲ್ಲಿ ವಾಹನಗಳು ಕಡಿಮೆಯಾಗಿದ್ದರೂ ಅವೆಲ್ಲವೂ ಪಿಶಾಚಿಗಳಂತೆ ತನ್ನ ಮೇಲೆಯೇ ನುಗ್ಗುತ್ತಿದ್ದವು. ಕೆಂಪಯ್ಯನಿಗೆ ವಾಹನಗಳಲ್ಲಿ ಹೋಗುವವರ ಮೇಲೆಲ್ಲ ಕೋಪವುಂಟಾಯಿತು. "ಇವರು ಯಾಕೆ ಹೀಗೆ ಅಲೆಯುತ್ತಾರೆ ? ಗಂಭೀರವಾಗಿ ಮನೆಯಲ್ಲಿರುವುದಕ್ಕೆ ಇವರಿಗೆ ಆಗಿರುವು ದೇನು ?" ಎಂದು ಅವನು ತನ್ನಲ್ಲಿಯೇ ಗೊರೆಯುತ್ತಿದ್ದನು. ಮೋಟಾರಿನಲ್ಲಿ ಇರುವವರು ಮುಂದಕ್ಕೆ ಹೋಗುತ್ತೇವೆ ಎಂದು ಅದೇ ದಾರಿಯಲ್ಲಿ ಮುಂದಕ್ಕೆ ಕೈನೀಡಿದಾಗ, ಕೆಂಪಯ್ಯನಿಗೆ ಅವರು ತನ್ನ ಮುಖವನ್ನೇ ತಿವಿಯುತ್ತಿರುವಂತೆ ಭಾಸವಾಗುತ್ತಿತ್ತು. ತಾನೂ ಪ್ರತಿಯಾಗಿ ಅವರ ಮುಖದ ಕಡೆಗೆ ತನ್ನ ಮುಷ್ಟಿ ಯನ್ನು ಯಾಕೆ ನೀಡಬಾರದು ? ಎಂದು ಅವನು ಎಷ್ಟೋ ವೇಳೆ ಯೋಚಿಸಿ ದ್ದನು. ವರ್ತುಲದಲ್ಲಿ ಮೋಟಾರು ಬಳಸಿಕೊಂಡು ಹೋಗಬೇಕಾದಾಗ, ಸಾರ ಥಿಯು ತನ್ನ ಕೈಯನ್ನು ಒಂದು ವಿಧವಾಗಿ ಸುತ್ತಿ ದಿಕ್ಕನ್ನು ತೋರಿಸುತ್ತಿದ್ದನು. ಕೆಂಪಯ್ಯನಿಗೆ ಅದು ಹೇಗೋ ವಿಚಿತ್ರವಾಗಿ ಒಂದು ನರ್ತನ ಭಂಗಿಯಂತೆ ತೋರುತ್ತಿತ್ತು. ಬೈಸಿಕಲ್‌ನ ಪ್ರಯಾಣಿಕ ಬಂದು "ಹೀಗೆ ಹೋಗುತ್ತೇನೆ" ಎಂದು ದಾರಿ ತೋರಿಸಿದಾಗ ಕೆಂಪಯ್ಯನಿಗೆ ಸಿಟ್ಟು ಬರುತ್ತಿದ್ದಿತು. ಅವನು ಮನಸ್ಸಿನಲ್ಲಿ "ಹೋದರೆ ಹೋಗು. ಅದಕ್ಕೆ ನಾನು ಮಾಡಬೇಕಾದುದೇನು?" ಎಂದು ಸುಮ್ಮನಾಗಿಬಿಡುತ್ತಿದ್ದನು. ಎಲ್ಲ ಕಡೆಗಳಿಂದಲೂ ಬೈಸಿಕಲ್‌ಗಳು ಮೋಟಾರುಗಳು ಬಂದಾಗ ಏನೂ ತೋರದೆ ಎರಡು ಕೈಗಳನ್ನೂ ಮೇಲಕ್ಕೆತ್ತಿ ಬಿಡುತ್ತಿದ್ದನು. ಗಾಬರಿಯುಂಟಾದಾಗ ಕೈಯನ್ನು ಒಂದು ಕಡೆ ತೋರಿಸಿ,

ಮುಂದಲ ಗಳಿಗೆಯಲ್ಲಿಯೇ ಬೇಡವೆಂದು ತಲೆಯಲ್ಲಾಡಿಸುತ್ತಿದ್ದನು. ಮತ್ತೊಂದು ಸಲ ಕೆಂಪಯ್ಯ ಗಡ್ಡ ಕೆರೆಯುತ್ತಾ ಆಕಾಶ ನೋಡಿಕೊಂಡು ಸುಮ್ಮನೆ ನಿಂತುಬಿಟ್ಟಿದ್ದಾಗ, ವರ್ತುಲದ ಸುತ್ತ ಗಾಡಿಗಳೂ ಮೋಟಾರುಗಳೂ ಲಾರಿ ಬಸ್ ಸೈಕಲ್ಲುಗಳೂ, ಇರುವೆಯ ಸಾಲಿನಂತೆ ಬಂದು ನಿಂತುಬಿಟ್ಟವು. ಅವರೆಲ್ಲ ಕೈ ತೋರಿಸಿದರೂ ಕೊಂಬು ಊದಿದರೂ ಗಂಟೆ ಬಾರಿಸಿದರೂ ಕೂಗಿದರೂ, ಕೆಂಪಯ್ಯ ಅನ್ಯಮನಸ್ಕನಾಗಿ ಆಕಾಶ ನೋಡುತ್ತ ಗಡ್ಡ ಕೆರೆಯುತ್ತಿದ್ದುದರಿಂದ, ಆ ಸುತ್ತ ಬಂದು ನಿಂತ ವಾಹನಗಳ ಸಾಲಿನ ಕಡೆ, ಅವನ ದೃಷ್ಟಿ ಹೋಗಿಯೇ ಇರಲಿಲ್ಲ ದೂರದಲ್ಲಿ ಮೋಟಾರ್ ಬೈಸಿಕಲ್‌ನಲ್ಲಿ ಹೋಗುತ್ತಿದ್ದ ಸಬ್‌ಇನ್ಸ್‌ಪೆಕ್ಟರು. ಪ್ರಯಾಣ ಒಂದೆಡೆ ತಡೆದುದನ್ನು ಕಂಡು ವರ್ತುಲಕ್ಕೆ ಬಂದರು. ಅವರು ಮೋಟಾರು ಬೈಸಿಕಲಿನಿಂದ ಇಳಿದು, ಪಾದಪೀಠವನ್ನು ಏರಿ, ಕೆಂಪಯ್ಯನ ಹಿಂದೆ ನಿಂತು ಬೆನ್ನು ತಟ್ಟಿದಾಗಲೇ ಕೆಂಪಯ್ಯ ಗಡ್ಡದಿಂದ ಕೈ ತೆಗೆದು ಕನಸಿನಲ್ಲಿ ಎಚ್ಚರಗೊಂಡವನಂತೆ, ಸುತ್ತ ನಿಂತಿದ್ದ ವಾಹನಗಳ ಸಾಲನ್ನು ನೋಡಿದುದು.

ಕೊನೆಗೊಮ್ಮೆ ಕೆಂಪಯ್ಯನಿಗೆ ಮಲೆನಾಡ ಕುದೂರು ಠಾಣೆಗೆ ವರ್ಗವಾಯಿತು. ಆ ವರ್ಗ ಶಿಕ್ಷೆಯೆಂದು ಅಲ್ಲ, ಸ್ವಾಭಾವಿಕವಾಗಿ ಆಯಿತು. ಪೋಲೀಸ್ ಇಲಾಖೆಯಲ್ಲಿ "ದಕ್ಷನಲ್ಲದವ, ಅಪರಾಧಿ" ಎಂಬ ಆಪಾದನೆ ಹೋಗಬೇಕಾದರೆ, ಇನ್ನೂ ಹೆಚ್ಚು ಅನಾಚಾರಗಳನ್ನು ಮಾಡಬೇಕು. ಮತ್ತೊಬ್ಬ ಕಾನ್ಸ್ಟೇಬಲ್‌ನ ಮಗನಿಗೆ, ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದುದರಿಂದ, ಆತ ಪಟ್ಟಣದ ಪ್ರೌಢ ಪಾಠಶಾಲೆಗೆ ಸೇರಲಿಚ್ಛಿಸಿದನು. ಸೂಪರಿಂಟೆಂಡೆಂಟರು ಇತರ ಎಲ್ಲ ಕಾನ್ಸ್ಟೇಬಲ್‌ಗಳನ್ನೂ, ಯಾರು ಮಲೆನಾಡಿನ ಕುದೂರಿಗೆ ಹೋಗುತ್ತೀರೆಂದು ವಿಚಾರಿಸಿದರು. ಯಾರೂ ಹೋಗಲು ಒಪ್ಪಲಿಲ್ಲ. ಕೊನೆಗೆ, ತಮಗೆ ಯಾರು ಬೇಕಿಲ್ಲ ಎಂದು ಅವರು ಯೋಚನೆ ಮಾಡಿ ಕೆಂಪಯ್ಯನನ್ನು ಅಲ್ಲಿಗೆ ವರ್ಗ ಮಾಡಿದರು.

೨

ಮಲೆನಾಡಿನ ಮಧ್ಯದಲ್ಲಿದ್ದ ಕುದೂರುಠಾಣೆ ಕೆಂಪಯ್ಯನಿಗೆ ಅಪರಿಚಿತವಾಗಿರಲಿಲ್ಲ. ಅವನು ಅಲ್ಲಿ ಹಿಂದೆ ಉದ್ಯೋಗದಲ್ಲಿ ಇಲ್ಲದಿದ್ದರೂ ಆ ಭಾಗ

ಗಳನ್ನು ನೋಡಿದ್ದನು. ಪಟ್ಟಣಕ್ಕೆ ಅವನಿಗೆ ವರ್ಗವಾಗುವುದಕ್ಕಿಂತ ಮುಂಚೆ ಅವನು ಇದ್ದ ಹಳ್ಳಿಗಿಂತ ಕುದೂರು ಹೆಚ್ಚು ಕುಗ್ರಾಮ. ಹಿಂದಲ ಹಳ್ಳಿಯ ರಸ್ತೆಯ ಎದುರಿಗೆ ನಾಲ್ಕು ಬಸ್ಸುಗಳಾದರೂ ಹೋಗುತ್ತಿದ್ದವು. ಕುದೂರಿಗೆ ಯಾವ ಕಡೆಯಿಂದಲೂ ರಸ್ತೆ ಇರಲಿಲ್ಲ. ಅದರ ಸುತ್ತಮುತ್ತಲಿನ ಹಳ್ಳಿಗಳಿಗೆ ಕಾಲುದಾರಿಯಿಂದ ಮಾತ್ರ ಹೋಗಬಹುದಾಗಿದ್ದಿತು. ಅಲ್ಲಿಗೂ ಒಬ್ಬ ದಫೇದಾರರು ಕೆಂಪಯ್ಯ ಇನ್ನೊಬ್ಬ ಕಾನ್‌ಸ್ಟೇಬಲ್, ಕಾವಲುಗಾರರು. ಆ ದಫೇದಾರರೂ ವಾರಕ್ಕೆ ಐದು ದಿನ ಜಿಲ್ಲಾ ಮುಖ್ಯ ಪಟ್ಟಣದಲ್ಲಿಯೇ ಇರುತ್ತಿದ್ದರು. ಇನ್ಸ್‌ಪೆಕ್ಟರೇ ಆಗಲಿ ಸಬ್‌ಇನ್ಸ್‌ಪೆಕ್ಟರೇ ಆಗಲಿ ಆರು ತಿಂಗಳಿಗೆ ಒಂದು ದಿನವೂ ಆ ದಾರಿಯಲ್ಲಿ ಬರುತ್ತಿರಲಿಲ್ಲ. ಸುತ್ತಲಿನ ಹಳ್ಳಿಯವರಿಗೆ ಪೋಲೀಸ್ ಸ್ಟೇಷನ್ ಕಡೆ ಲಕ್ಷ್ಯವೇ ಇರಲಿಲ್ಲ. "ಠಾಣೆಗೆ ಯಾರು, ಯಾರು ?" ಎಂಬುದಾವುದನ್ನೂ ಅವರು ಯೋಚಿಸುತ್ತಲೇ ಇರಲಿಲ್ಲ.

ವಾರಕ್ಕೆ ಒಂದು ದಿನ ನಡೆಯುತ್ತಿದ್ದ ಕುದೂರ ಸಂತೆಯೇ ಆ ಪ್ರಾಂತಕ್ಕೆ ಜನ ಒಂದಾಗಿ ಸೇರುವ ದೊಡ್ಡ ಪರಸೆ. ಆ ಸಂತೆಯಲ್ಲಿ ಕೆಂಪಯ್ಯ ತನಗೆ ಬೇಕಾದ ತರಕಾರಿ, ಬೆಣ್ಣೆ, ಮೊಟ್ಟೆ, ಕೋಳಿ, ಎಲ್ಲವನ್ನೂ ಶೇಖರಿಸಿಕೊಳ್ಳುತ್ತಿದ್ದನು. ಸಂತೆಗೆ ಬರುತ್ತಿದ್ದ ಹನುಮನಹಳ್ಳಿಯ ಕೋಳಿಗಳೂ ಮೊಟ್ಟೆಗಳೂ ಆ ಪ್ರಾಂತದಲ್ಲಿಯೇ ಪ್ರಸಿದ್ಧವಾದವು. ಹನುಮನ ಹಳ್ಳಿಯಲ್ಲಿ ಪ್ರತಿಯೊಬ್ಬರೂ ಸುಧಾರಿಸಿದ ಸೀಮೆಕೋಳಿಗಳನ್ನು ಸಾಕುತ್ತಿದ್ದರು. ಉಳಿದ ಕೋಳಿಗಳಿಗಿಂತ ಆ ಕೋಳಿಗಳಿಗೆ ಗಿರಾಕಿಗಳೂ ಹೆಚ್ಚು. ಆ ಕೋಳಿಮೊಟ್ಟೆಗಳು ನಾಡಕೋಳಿ ಮೊಟ್ಟೆಗಳ ಎರಡರಷ್ಟು ಗಾತ್ರವಾಗಿದ್ದು, ಗಜನಿಂಬೆ ಹಣ್ಣಿನಂತೆ ಇರುತ್ತಿದ್ದವು. ಒಂದು ದಿನ ಆ ಮೊಟ್ಟೆ ಮತ್ತು ಕೋಳಿಯ ರುಚಿ ನೋಡಿದ ಮೇಲೆ, ಕೆಂಪಯ್ಯನಿಗೆ ನಿತ್ಯಾ ಅದೇ ಬೇಕೆನ್ನಿಸಿತು. ಪಟ್ಟಣದಲ್ಲಿ ಹೊಟ್ಟೆಗೆ ಹಿಟ್ಟಿಲ್ಲದೆ, ಗೊಂತಿನಲ್ಲಿ ಕಟ್ಟಿದ ಹಸು, ಮುಂದೆ ಹಾಕಿದ ಹುಲ್ಲನ್ನು ಮಾತ್ರ ತಿನ್ನುತ್ತಿದ್ದಂತೆ, ಬರಿಯ ಸಂಬಳದ ಮೇಲೆಯೇ, ಜೀವಿಸಿ, ಹೊಟ್ಟೆ ಬೆನ್ನು ಅಂಟಿಕೊಂಡು ಅರ್ಧ ಜೀವದಿಂದಿದ್ದ ಅವನಿಗೆ, ಹನುಮನಹಳ್ಳಿ ಕೋಳಿ ಒಳ್ಳೆ ಅಶ್ವಗಂಧಿ, ಮಕರಧ್ವಜದಂತೆ ಆಯಿತು. ನಾಲ್ಕು ವಾರ ಅವನ್ನು ತಿನ್ನುವುದರೊಳಗಾಗಿ ಕೆಂಪಯ್ಯ ಹಿಂದಲಂತೆ ಆದನು. ನಿತ್ಯಾ

ಒಂದು ಕೋಳಿಯನ್ನಾದರೂ ಸಂಪಾದಿಸುವ ಬಗೆ ಹೇಗೆ ಎಂಬ ಚಿಂತೆ ಅವನಿಗೆ ಹಿಡಿಯಿತು.

ಮಲೆನಾಡಿನ ಹಳ್ಳಿಗಳಲ್ಲಿ ಈಗಲೂ ರಾತ್ರಿಯ ಹೊತ್ತು, ಸರದಿಯಾಗಿ ಗ್ರಾಮಸ್ಥರು ಗ್ರಾಮದ ಕಾವಲಿರಬೇಕೆಂಬ ನಿಯಮವಿದೆ. ಇದಕ್ಕೆ ಪೊಲೀಸ್ ಕಾವಲು ಎಂದು ಹೆಸರು. ಗ್ರಾಮದ ಕುಳಗಳೆಲ್ಲ ನಿತ್ಯ ಇಬ್ಬರು ಮೂವ ರಂತೆ, ರಾತ್ರಿ ಹೊತ್ತು ಊರು ಗಸ್ತು ಹೊಡೆಯುತ್ತಾರೆ. ಸುತ್ತ ಎಲ್ಲಿ ಯಾದರೂ ಕಳವು ಸಂಭವಿಸಿದರೆ ಕೂಡಲೆ ಪ್ರತಿ ಹಳ್ಳಿಯಲ್ಲಿಯೂ ಕಾವಲನ್ನು ಹೆಚ್ಚು ಬಿಗಿ ಮಾಡುತ್ತಾರೆ. ಇಲ್ಲದಿದ್ದರೆ ಹಾಗೂ ಹೀಗೂ ಕಾವಲುಗಾರರು ಅರ್ಧ ರಾತ್ರಿಯಲ್ಲಿ ಒಂದು ಸಲ ಎಲ್ಲರನ್ನೂ ಎಬ್ಬಿಸಿ, ಜೋಪಾನ ಎಂದು ಹೇಳಿ ಮನೆಯಲ್ಲಿ ಹೋಗಿ ಮಲಗುತ್ತಾರೆ. ಈ ಕಾವಲು ವ್ಯವಸ್ಥೆಯನ್ನು ಏರ್ಪಡಿಸುವುದು, ಇಂತಿಂತಹ ದಿನಗಳಲ್ಲಿ ಇಂಥವರು ಕಾವಲಿರಬೇಕೆಂದು ಗೊತ್ತುಮಾಡುವುದು, ಅವರು ಹಾಗೆ ಕಾವಲಿದ್ದಾರೆಯೋ ಎಂದು ನೋಡು ವುದು, ಇಲ್ಲದಿದ್ದರೆ ಅವರ ಹೆಸರನ್ನು ಮೇಲಕ್ಕೆ ತಿಳಿಸಿ ಅವರಿಗೆ ಸರಿಯಾಗಿ ಶಿಕ್ಷೆ ಮಾಡಿಸುವುದು, ಇವೆಲ್ಲ ಆ ಹಳ್ಳಿಯ ಹತ್ತಿರದ ಪೊಲೀಸ್ ಠಾಣೆಗೆ ಸೇರಿದ ಜವಾಬ್ದಾರಿ.

ಕಾನ್‌ಸ್ಟೇಬಲ್ ಕೆಂಪಯ್ಯನಿಗೆ ಇದ್ದಕ್ಕಿದ್ದಂತೆ ಹನುಮನಹಳ್ಳಿ ಪೊಲೀಸ್ ಕಾವಲಿನ ವಿಷಯದಲ್ಲಿ ತುಂಬ ಶ್ರದ್ಧೆಯುಂಟಾಗಿಹೋಗಿತ್ತು. ಕೆಂಪಯ್ಯ ಅಂದೇ ಹನುಮನ ಹಳ್ಳಿಗೆ ಹೋದನು. ಆ ಊರು ಪೊಲೀಸ್ ಠಾಣೆಗೆ ಅಷ್ಟು ಸಮೀಪದಲ್ಲಿದ್ದರೂ ಪೊಲೀಸಿನವರು ಊರಿಗೆ ಬರುವುದೇ ಅಪ ರೂಪವಾಗಿದ್ದುದರಿಂದ, ಊರಿನವರಿಗೆ ಕೆಂಪಯ್ಯನನ್ನು ನೋಡಿ ಸ್ವಲ್ಪ ಆಶ್ಚರ್ಯವೂ ಗಾಬರಿಯೂ ಉಂಟಾಯಿತು. ಪಟೇಲ ಹನುಮೇಗೌಡನು ಕೆಂಪಯ್ಯನನ್ನು ಊರ ಮುಂದಲ ಚಾವಡಿಯಲ್ಲಿ ಕೂರಿಸಿ, "ಈಗ ಅಂತಹ ಕಾವಲೇನೂ ಬೇಕಿಲ್ಲ. ಎಚ್ಚರಿಕೆಯಿಂದ ಇದ್ದೇವೆ. ಪೋಲೀಸ್ ಸ್ಟೇಷನ್ ಇಷ್ಟು ಹತ್ತಿರದಲ್ಲಿರುವುದರಿಂದ. ಈ ಪ್ರಾಂತಕ್ಕೆ ಕಳ್ಳರು ಸುಳಿಯಲು ಹೆದರು ತ್ತಾರೆ" ಎಂದು ಹೇಳಿದರೂ ಕೆಂಪಯ್ಯ ಒಪ್ಪಲಿಲ್ಲ. "ಈ ಕಾಲದ ಕಳ್ಳರ ವಿಚಾರ ನಿಮಗೆ ತಿಳಿಯದು ; ಅವರು ಬಹಳ ತಂತ್ರಿಗಳು. ಬೇಕಾದ ವೇಷ ಬದಲಾಯಿಸುತ್ತಾರೆ. ಪೊಲೀಸ್ ಠಾಣೆಯ ಎದುರಿಗೆ ಕದಿಯುತ್ತಾರೆ. ಈ

ಹಳ್ಳಿಗಳ ಜವಾಬ್ದಾರಿ ನನಗೆ ಸೇರಿದುದು. ನಿಮ್ಮ ಮಾತು ಕೇಳಿಕೊಂಡು ನಾನು ಎಚ್ಚರ ತಪ್ಪಿದರೆ ನೀವ್ಯಾರೂ ಬಂದು ನನ್ನ ಉಳಿಸೋದಿಲ್ಲ. ರಾತ್ರಿ ಕಾವಲು ಇರಲೇಬೇಕು" ಎಂದನು. ಪಟೇಲ ಹನುಮೇಗೌಡ ವಿಧಿಯಿಲ್ಲದೆ ಒಪ್ಪಿಕೊಂಡು ಸುಮ್ಮನಾದನು. ಕಾನಸ್ಟೇಬಲ್ ಕೆಂಪಯ್ಯ ದಿನಕ್ಕೆ ಇಬ್ಬರಂತೆ ಕಾವಲುಪಟ್ಟಿ ಮಾಡಿ, ಅದರಂತೆ ರಾತ್ರಿಯೆಲ್ಲ ಕಾವಲಿರಬೇಕೆಂದೂ, ತಪ್ಪಿದರೆ ಸಜ ಆಗುವುದೆಂದೂ ಹೇಳಿ ಹೊರಟುಹೋದನು.

ಆ ರಾತ್ರಿ, ತಿಮ್ಮಪ್ಪನಿಗೂ ಬೋರಯ್ಯನಿಗೂ ಕಾವಲಿನ ಸರದಿ ಬಿದ್ದಿತ್ತು. "ಕಣದಲ್ಲಿ ಗುಡ್ಡೆ ಇಲ್ಲ. ಕತ್ತಲೆ ಮಳೆಗಾಲವಲ್ಲ. ಈಗ ಭಯ ವೇನು ?" ಎಂದುಕೊಂಡು, ಅವರಿಬ್ಬರೂ ಮಲಗುವುದಕ್ಕೆ ಮುಂಚಿತವಾಗಿ ಊರಿನ ಪ್ರತಿ ಮನೆಯ ಮುಂದೆಯೂ ಒಂದೊಂದು ಸಲ ಗಟ್ಟಿಯಾಗಿ ಕೂಗಿ "ಎಚ್ಚರವಾಗಿರಿ" ಎಂದು ಹೇಳಿ, ಹೋಗಿ ತಾವೂ ಮಲಗಿಕೊಂಡರು. ಆ ರಾತ್ರಿ, ಅರ್ಧರಾತ್ರಿ ಕಳೆದಮೇಲೆ, ಯಾರೋ ತನ್ನ ಹೆಸರು ಕರೆಯುತ್ತಿರು ವಂತೆ ಬೋರಯ್ಯನಿಗೆ ಭಾಸವಾಯಿತು. ಅವನು ನಿದ್ದೆಯಿಂದ ಎಚ್ಚೆತ್ತು ನೋಡುವಾಗ, ಬಾಗಿಲಿನಲ್ಲಿ ತಿಮ್ಮಪ್ಪನೂ ಕಾನ್‌ಸ್ಟೇಬಲ್ ಕೆಂಪಯ್ಯನೂ ನಿಂತಿದ್ದರು. ತಿಮ್ಮಪ್ಪ ಅಪರಾಧಿಯಂತೆ "ಕಾನ್‌ಸ್ಟೇಬಲ್‌ರು ನನ್ನನ್ನು ಎಚ್ಚರಿಸಿದರು. ನೀನಾದರೂ ಗಸ್ತಿಗೆ ಹೋಗಿದ್ದೀಯೋ ಅಂತ ನೋಡಲು ಬಂದೆ, ನೀನೂ ಮಲಗಿದ್ದಿ" ಎಂದನು. ಮುಂದಲ ಗಳಿಗೆಯಲ್ಲಿಯೇ ಕಾನ್‌ಸ್ಟೇಬಲ್ ಕೆಂಪಯ್ಯ "ಕಾವಲು ತಪ್ಪಿದಿರಿ. ರಿಪೋರ್ಟಿಗೆ ರುಜು ಹಾಕಿ" ಎಂದು ಮೊದಲೇ ಸಿದ್ಧಮಾಡಿಟ್ಟುಕೊಂಡಿದ್ದ ಒಂದು ಕಾಗದವನ್ನು ತಿಮ್ಮಪ್ಪನ ಮುಂದಕ್ಕೆ ನೀಡಿದನು. ಒಂದೆರಡು ನಿಮಿಷಗಳೊಳಗಾಗಿ ತಿಮ್ಮಪ್ಪ, ರುಜು ಹಾಕದಿದ್ದ ಕಾಗದವನ್ನು ಕಾನ್‌ಸ್ಟೇಬಲ್‌ರಿಗೆ ಹಿಂದಕ್ಕೆ ಕೊಟ್ಟನು. ಜತೆ ಯಲ್ಲಿ ತಿಮ್ಮಪ್ಪನ ಒಂದು ಕೋಳಿಯೂ ಕಾನ್‌ಸ್ಟೇಬಲ್‌ರ ಕೈಸೇರಿತು.

ಅಲ್ಲಿಂದ ಮುಂದೆ ಪ್ರತಿದಿನವೂ ಅದೇ ಮಾಮೂಲು ಆಯಿತೆಂದು ಹೇಳ ಬಹುದು. ಕಾವಲುಗಾರರು ಹೇಗೆ ಕಾವಲಿದ್ದರೂ ಕಾನಸ್ಟೇಬಲ್ ಕೆಂಪಯ್ಯ ಅದಾವುದೋ ಮಾಯದಲ್ಲಿ ಅವರನ್ನು ತಪ್ಪಿಗೆ ಸಿಕ್ಕಿಸಿಬಿಡುತ್ತಿದ್ದನು. ಆಗಲೇ ಊರಿನ ಐವತ್ತು ಅರವತ್ತು ಕೋಳಿಗಳು ಕೆಂಪಯ್ಯನಲ್ಲಿ ಜೀರ್ಣವಾಗಿ ಹೋಗಿ ದ್ದವು. ಹೀಗೆ ಇನ್ನು ಕೆಲವು ದಿನ ನಡೆದರೆ, ಹನುಮನ ಹಳ್ಳಿಯವರು ಅನೇಕ

ತಿಂಗಳುಗಳಿಂದ ಕಷ್ಟಪಟ್ಟು ಬೆಳೆಸಿ ಸಾಕಿದ್ದ, ಅವರ ಮುಖ್ಯ ಜೀವನೋಪಾಯ ವಾಗಿದ್ದ ಸೀಮೆಕೋಳಿಯ ತಳಿ, ನಿರ್ನಾಮವಾಗುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. "ಈ ಏಕಚಕ್ರನಗರಕ್ಕೆ ಸಂಭವಿಸಿದ ಬಕಬಾಧೆಯನ್ನು ನಿವಾರಿಸುವ ಬಲಭೀಮನೆಲ್ಲಿ ?" ಎಂದು ಹಳ್ಳಿಯವರು ಕಂಡ ಕಂಡ ದೇವರಿಗೆ ಹರಕೆ ಹೊರತೊಡಗಿದರು.

"ತನಗೆ ತಾನು ಸಹಾಯಮಾಡಿಕೊಳ್ಳುವವರಿಗೆ ದೇವರೂ ಸಹಾಯ ಮಾಡುತ್ತಾನೆ" ಎಂಬ ಗಾದೆ ಹನುಮನಹಳ್ಳಿಯವರಿಗೆ ಇದ್ದಕ್ಕಿದ್ದಂತೆ ಹೊಳೆ ಯಿತು. ಆ ಸಂಜೆ, ಗ್ರಾಮದ ಚಾವಡಿಯಲ್ಲಿ, ಊರಿನ ಎಲ್ಲ ಕಾವಲು ಗಾರರದೂ ಸಭೆಯಾಯಿತು. ಸಭೆಗೆ ಕಾವಲುಗಾರರು ಹೊರತು ಇತರರಿಗೆ ಪ್ರವೇಶವೂ ಇರಲಿಲ್ಲ. ಕುಳವಾಡಿ, ದೊಣ್ಣೆ ಹಿಡಿದುಕೊಂಡು, ಚಾವಡಿಯ ಸುತ್ತಾ ಯಾರೂ ಸೇರದಂತೆ ಗಸ್ತು ಹೊಡೆಯುತ್ತಿದ್ದನು. ಸಭೆಗೆ ಪಟೇಲ್ ಹನುಮೇಗೌಡರು ಬಂದಿರಲಿಲ್ಲ. ಸುಮಾರು ಒಂದು ಗಂಟೆಯ ಕಾಲ ಸಭೆಯ ಕಾರ್ಯಗಳು ನಡೆದ ಮೇಲೆ, ಗಂಭೀರ ಮುಖಭಾವದಿಂದ ಎಲ್ಲರೂ ಚಾವಡಿ ಬಿಟ್ಟು ಹೊರಬಿದ್ದರು. ರಾತ್ರಿಯ ಕಾವಲನ್ನು ಇನ್ನು ಹೆಚ್ಚು ಎಚ್ಚರಿಕೆ ಯಿಂದ ಮಾಡಬೇಕೆಂಬ ತೀರ್ಮಾನವಾಯಿತೆಂದು ಕುಳವಾಡಿ, ಅನಂತರ ಎಲ್ಲರಿಗೂ ಹೇಳಿದನು. ಚಾವಡಿಯ ಎದುರಿಗೇ ಇದ್ದ ತಮ್ಮ ಮನೆಯ ಜಗುಲಿಯ ಮೇಲೆ ಪಟೇಲ್ ಹನುಮೇಗೌಡರು ಕುಳಿತಿದ್ದರು. ಊರಿಗೆ ಹಿರಿಯರಾದ ಅವರಿಗೆ ಕಾವಲಿನ ಕಾರ್ಯ ಬಿದ್ದಿರಲಿಲ್ಲವಾಗಿ, ಅವರು ಚಾವಡಿಯ ಸಭೆಗೆ ಹೋಗಿರಲಿಲ್ಲ. ಆದರೆ ಚಾವಡಿಯಿಂದ ಪ್ರತಿಯೊಬ್ಬರೂ ಹನುಮೇ ಗೌಡರ ಕಡೆ ನೋಡಿಯೇ ನೋಡುತ್ತಿದ್ದರು. ಎಚ್ಚರಿಕೆಯಿಂದ ನೋಡು ವವರಿಗೆ, ಹನುಮೇಗೌಡರ ಮುಖದಲ್ಲಿ ಒಂದು ಚೇಷ್ಟೆಯ ಮನೋಭಾವವೂ, ಸಂಜ್ಞೆಯ ವಿನೋದ ಸಂಭಾಷಣೆಯೂ, ತೋರುತ್ತಿದ್ದಿತು. ಹನುಮೇಗೌಡ ಅವರಿಗೆಲ್ಲ "ಸರಿ ಸರಿ" ಎನ್ನುವಂತೆ ತಲೆಯಲ್ಲಾಡಿಸುತ್ತಿದ್ದನು.

ಆ ರಾತ್ರಿ ಕೆಂಪಯ್ಯ, ಒಂದು ದಟ್ಟಿ ಪಂಚೆಯನ್ನುಟ್ಟುಕೊಂಡು ಬೆನ್ನು ಪೂರ್ತ ಹರಿದಿದ್ದ ಅಂಗಿಯನ್ನು ಧರಿಸಿ, ಅದರ ಮೇಲೆ ಒಂದು ದುಪ್ಪಟಿಯನ್ನು ಹೊದೆದುಕೊಂಡು ಹನುಮನಹಳ್ಳಿಗೆ ಬಂದನು. ಆಗ ಸುಮಾರು ಗಂಟೆ ಒಂದೂವರೆ ಆಗಿತ್ತು. ಕೆಂಪಯ್ಯ ಸುಖವಾಗಿ ಒಂದು ನಿದ್ರೆ ಮಾಡಿ, ಹೊರಟು

ಬಂದಿದ್ದನು. ಆಪತ್ತಿನ ಸರದಿ ಪುಟ್ಟಪ್ಪ ಮತ್ತು ರಂಗಯ್ಯನದಾಗಿತ್ತು. ಕೆಂಪಯ್ಯನಿಗೆ ಬಹಳ ದಿನಗಳಿಂದ ಪುಟ್ಟಪ್ಪನ ಪುಷ್ಟವಾದ ಕೋಳಿಯ ಮೇಲೆ ಕಣ್ಣು ಇತ್ತು. "ಆ ಆಸೆ ಇಂದು ಫಲಿಸುತ್ತೆ" ಎಂದು ಕೆಂಪಯ್ಯ ಒಂದು ವಿಧವಾದ ತೃಪ್ತಿಯ ಮನೋಭಾವದಿಂದ ನಿಧಾನವಾಗಿ ಹೆಜ್ಜೆ ಹಾಕುತ್ತ ಮುಂದುವರಿಯುತ್ತಿದ್ದನು. ಚಾವಡಿಯ ಹತ್ತಿರಕ್ಕೆ ಬಂದ ಕೂಡಲೇ, ಯಾರು ಏನು ಎಂಬುದು ಅವನಿಗೆ ಗೊತ್ತಾಗುವುದಕ್ಕೆ ಮುಂಚೆಯೇ, ಹಿಂದಿನಿಂದ ಅವನ ತಲೆಗೆ ಯಾರೋ ಒಂದು ಮುಸುಕನ್ನು ಹಾಕಿದರು. ಅವನ ಕೈಯನ್ನು ಯಾರೋ ಹಿಡಿದುಕೊಂಡರು. ಬೆನ್ನಿನ ಮೇಲೆ ಒಂದೇ ಸಮನೆ ಗುಡ್ ಗುಡ್ ಎಂದು ಹತ್ತಾರು ಗುದ್ದುಗಳು ಬಿದ್ದವು. ಕೆಂಪಯ್ಯನು ಗಟ್ಟಿಯಾಗಿ "ಪಟೇಲರೇ ಪಟೇಲರೇ ಸತ್ತೆ, ಸತ್ತೆ, ಖೂನಿ ಖೂನಿ" ಎಂದು ಕಿರುಚಿದನು. ಮತ್ತೆ ಅವನ ಬೆನ್ನಿಗೆ ಗುಡ್ ಗುಡ್ ಎಂದು ಗುದ್ದುಗಳು ಬಿದ್ದವು. ಇಬ್ಬರು ಅವನನ್ನು ಬಲವಾಗಿ ತಬ್ಬಿ ಅಲ್ಲಾಡದಂತೆ ಹಿಡಿದುಕೊಂಡುಬಿಟ್ಟರು.

ಆ ವೇಳೆಗೆ ಪಟೇಲ್ ಹನುಮೇಗೌಡರು ಅಲ್ಲಿಗೆ ಬಂದರು. "ಯಾರಯ್ಯ, ಏನ್ರಯ್ಯ ಈ ಅವೇಳೆಯಲ್ಲಿ ಗದ್ದಲ? ಕಾವಲು ಕಾಯುವವರು ಹೀಗೆ ಯಾಕೆ ಕೂಗಾಡಬೇಕು?" ಎಂದರು. ಕೆಂಪಯ್ಯ 'ಪಟೇಲರೇ' ಎಂದು ಏನನ್ನೋ ಹೇಳುವುದಕ್ಕೆ ಹೋದನು. ಆಗ ಮತ್ತೆ ಎರಡು ಗುದ್ದು ಅವನ ಬೆನ್ನಿನ ಮೇಲೆ ಬಿದ್ದುದರಿಂದ ಅವನು ಬೆಪ್ಪಗಾದನು. ಪುಟ್ಟಪ್ಪನು ಪಟೇಲರಿಗೆ "ಗೌಡರೇ, ನಾವು ಗಸ್ತು ತಿರುಗುತ್ತಾ ಇದ್ವೊ. ಇದಾವನೋ ಕಳ್ಳ, ಹೊಂಚುಹಾಕ್ತಾ ತಿರುಗುತ್ತಿದ್ದ. ಹಿಡಕೊಂಡೊ. ಸ್ವಲ್ಪ ಕೊಸರಾಡಿದ. ಎರಡು ಕೊಟ್ವೊ ಅಷ್ಟೆ" ಎಂದನು. ಪಟೇಲರು "ಪಾಪ ಪಾಪ, ಹೊಡೀಬಾರದು, ಚಾವಡಿಯಲ್ಲಿ ಕೂರಿಸಿ, ಇನ್ನೇನು ಪದ್ಧತಿಯಂತೆ ದಫೇದಾರ್ ಕೆಂಪಯ್ಯ ಬರ್ತಾರಲ್ಲ. ಅವರ ವಶಕ್ಕೆ ಒಪ್ಪಿಸಿಬಿಡೋಣ" ಎಂದರು. ಅಷ್ಟು ಹೊತ್ತಿಗೆ ಕೆಂಪಯ್ಯನು ಮುಸುಕಿನೊಳಗಿಯೇ "ಪಟೇಲ್ ಹನುಮೇಗೌಡರೇ, ನಾನೇ ಕೆಂಪಯ್ಯ" ಎಂದನು. ಹನುಮೇಗೌಡರು ಬೆಚ್ಚಿಬಿದ್ದಂತೆ 'ಹಾ' ಎಂದರು. ಕೆಂಪಯ್ಯನನ್ನು ಕಟ್ಟಿ ಹಿಡಿದಿದ್ದವರು ಸರಕ್ಕನೆ ಕೈ ಬಿಟ್ಟರು. ಮುಸುಕು ತೆಗೆದ ಕೆಂಪಯ್ಯನನ್ನು ನೋಡಿ ಪಟೇಲರಿಗೆ ಆಶ್ಚರ್ಯವಾಯಿತು.

ಪಟೇಲರು ಕೂಡಲೇ ತಮ್ಮ ನಗುವನ್ನು ಅಡಗಿಸಿಕೊಂಡು, ಪುಟ್ಟಪ್ಪ

ನನ್ನೂ ರಂಗನನ್ನೂ ಊರಿನವರನ್ನೂ ಕುರಿತು "ಅಲ್ಕಣ್ರಯ್ಯ, ನಿಮಗೇನು ಜ್ಞಾನಗೀನ ನೆಟ್ಟಗಯ್ತೊ ? ಯಾರನ್ನ ಅಂತ ಹೊಡಿತಿದ್ರಿ. ದಫೇದಾರ್ರು ಕಣ್ರೊ ದಫೆದಾರ್ರು. ನಿಮಗೆ ತಿಂದು ಕೊಬ್ಬು ಹೆಚ್ಚಾಯ್ತು. ಊರೆಲ್ಲ ಉರುಲು ಹೋಗೋಕೆ ಮಾಡ್ಕೊಂಡ್ರಿ. ದಫೇದಾರ್ರು ಒಬ್ಬೊಬ್ಬರನ್ನೂ ನೇತುಹಾಕಿಸ್ತಾರೆ ನಡೀರಿ" ಎಂದರು. ಪುಟ್ಟಪ್ಪನು ಏನೂ ತಿಳಿಯದವನಂತೆ "ದಫೇದಾರ್ರು ಅಂತ ನಮುಗ್ಹೆಂಗೆ ಗೊತ್ತಾಗಬೇಕು ?" ಎಂದನು. ಬರೀ ಕಾನ್‌ಸ್ಟೇಬಲ್ ಆಗಿದ್ದ ಕೆಂಪಯ್ಯನಿಗೆ, ಜನರೆಲ್ಲ ದಫೇದಾರರು ಎಂದು ತನ್ನನ್ನು ಕರೆದುದರಿಂದ, ಗುದ್ದು ಬಿದ್ದಿದ್ದರೂ ಸ್ವಲ್ಪ ಸಮಾಧಾನವಾಯಿತು. ಹನುಮೇಗೌಡನು ಕೆಂಪಯ್ಯನನ್ನು ನೋಡುತ್ತ "ಅಲ್ಕಣ್ರೆ ದಫೆದಾರ್ರೆ, ನಿಮ ಗೇನು ಬಂದದ್ದು ಕೇಡುಗಾಲ. ನಿಮ್ಮನೆಕಾಯ್ವಾಗ, ನಿಮ್ಮ ದಿರಿಸು ಹಾಕ್ಕೊಂಡು ಬರೋಕೆ ಇಲ್ವೆ ? ನೀವು ದಫೆದಾರ್ರು ಅಂತ ಈ ಬಡಪಾಯಿ ಗಳಿಗೆ ಹೇಗೆ ಗೊತ್ತಾಗಬೇಕು ? ಸರ್ಕಾರದೋರು ಕೊಟ್ಟರೊ ಅಂಗಿ ಚಡ್ಡಿ ದುಮಾಲು ಅರಿವೆ ಹಾಕ್ಕೊಂಡ್ಬಂದಿದ್ರೆ, ನಿಮ್ಮ ಮೈ ಮುಟ್ಟೋಕೆ ಯಾರಿ ಗಾದರೂ ಎದೆ ಆಗೋದೆ ? ಬುಡಿಬುಡಿ, ನಿಮ್ಮನ್ನ ನಾನು ಒಪ್ಪಲಿಲ್ಲ" ಎಂದನು. ಕೆಂಪಯ್ಯನನ್ನು ಪಟೇಲರು ಮನೆಗೆ ಕರೆದುಕೊಂಡು ಹೋಗಿ ಸಿದ್ಧವಾಗಿಟ್ಟಿದ್ದ ಬಿಸಿಬಿಸಿ ಹಾಲನ್ನು ಕೊಟ್ಟು ಮಲಗಿಸಿದರು. ಕೆಂಪಯ್ಯನಿಗೆ ಬೆನ್ನಿನ ನೋವು ಹೋಗಬೇಕಾದರೆ ಅನಂತರ ಒಂದು ತಿಂಗಳು ಹಿಡಿಯಿತು.

* * * *

ಈಚೆಗೆ ಕೆಂಪಯ್ಯ, ಹನುಮನಹಳ್ಳಿಗೆ ರಾತ್ರಿಯ ಕಾವಲು ನೋಡಲು ಹೋಗುತ್ತಿಲ್ಲ. ಹನುಮನಹಳ್ಳಿ ಕೋಳಿಗಳು ಅಸಂಖ್ಯಾತವಾಗಿ ಬೆಳೆದು, ಯಾವ ಸಂತೆಯಲ್ಲಿಯೂ ಅವುಗಳ ಮಾರಾಟವೇ ನಡೆಯುತ್ತಿದೆ. ಕೆಂಪಯ್ಯ ನಿಗೆ ಒಂದು ಸಂಶಯ ಮಾತ್ರ ಇಂದಿಗೂ ನಿವೃತ್ತಿಯಾಗಿಲ್ಲ. "ವಿಷಯ ಪಟೇಲರಿಗೆ ಮೊದಲು ತಿಳಿದಿತ್ತೆ ? ಇಲ್ಲವೆ ?" ತಿಳಿದಿರಲಿ, ಬಿಡಲಿ, ಮನುಷ್ಯ ಬಹು ಘಾಟಿ, ಎಂಬುದರಲ್ಲಿ ಕೆಂಪಯ್ಯನಿಗೆ ಏನೂ ಅನುಮಾನವಿರಲಿಲ್ಲ.

ಆತುರ ಸನ್ಯಾಸ

೧

ಈಗ್ಗೆ ಸುಮಾರು ಆರು ತಿಂಗಳ ಮಾತು ; ಬಚ್ಚಯ್ಯನವರ ಮನೆಯ ಮುಂದೆ, ಬೀದಿಯಲ್ಲಿ ಏಳುವ ಹೊತ್ತಿಗೆ ಬೆಂಕಿ ಹಾಕಿದ್ದರು. ಅನೇಕ ದಿನಗಳಿಂದ ಪಾರ್ಶ್ವವಾಯುವಿನಿಂದ ನರಳುತ್ತಿದ್ದ ಬಚ್ಚಯ್ಯನವರ ತಂದೆ ರಾಜಣ್ಣ, ಆ ಅರ್ಧ ರಾತ್ರಿಯೇ ಇಹಲೋಕ ಯಾತ್ರೆ ಮುಗಿಸಿದ್ದರು. ಅವರಿಗೆ ವಯಸ್ಸು ತೊಂಬತ್ತ ನಾಲ್ಕು ಆಗಿತ್ತು. ಮನೆ ತುಂಬ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳು ; ಅವರ ಪಡೆಯೇ ಒಂದು ಹೊಸ ಊರಿನಲ್ಲಿ ವಸಾಹತು ಸ್ಥಾಪಿಸಿಕೊಳ್ಳುವಷ್ಟು ವಿಸ್ತಾರವಾಗಿತ್ತು. ಅರ್ಧ ರಾತ್ರಿ ನಂತರ, ಸುಮಾರು ಒಂದು ಗಂಟೆಗೆ ಅವರಿಗೆ ಪ್ರಾಣಹೋದುದು, ಅವರ ಮಗನಿಗೆ ಗೊತ್ತಾಗಿತ್ತು. ಎಂಟು ದಿನಗಳಿಂದ ಅರ್ಧ ಜ್ಞಾನ. ಅರ್ಧ ಅಜ್ಞಾನದಲ್ಲಿದ್ದರೂ, ಸಾಯುವುದಕ್ಕೆ ನಾಲ್ಕು ಗಂಟೆಗಳ ಮುಂಚೆ, ಅವರಿಗೆ ಪೂರ್ತಿ ತಿಳಿವುಂಟಾಯಿತು. ಅವರು ಸಮೀಪದಲ್ಲಿಯೇ ಕುಳಿತಿದ್ದ ಬಚ್ಚಯ್ಯನನ್ನು ಕರೆದು, "ಅರ್ಕಲಗೂಡು ಪರ್ವತಯ್ಯನಿಗೆ ನೂರು ರೂಪಾಯಿ ಕೊಡು" ಎಂದು ಹೇಳಿದರು. "ಅವನಿಗೆ ಯಾಕೆ ಕೊಡಬೇಕು ?" ಎಂದು ಕೇಳಬೇಕೆಂದು ಬಚ್ಚಯ್ಯನಿಗೆ ನಾಲಗೆಯ ತುದಿಗೆ ಪ್ರಶ್ನೆ ಬಂದಿತು. ಆದರೆ ಎಂಟು ದಿನದ ಮೇಲೆ ಜ್ಞಾನ ತಿಳಿಯಾಗಿರುವ ಸಾಯುತ್ತಿರುವ ಮುದುಕನ ವಿಚಾರಸರಣಿ ಕತ್ತರಿಸಿಹೋಗಬಾರದೆಂದು, ಅವನು ಮಾತನಾಡದೆ "ಆಗಲಿ" ಎಂದು ಹೇಳಿ, ಮುಂದಲ ಮಾತುಗಳನ್ನು ಆತುರದಿಂದ ಕಾಯುತ್ತಿದ್ದನು. ಜಮೀನು, ಲೇವಾದೇವಿ, ಹಣಕಾಸು, ಬಾಂಧವ್ಯದಲ್ಲಿ ವ್ಯವಹಾರ ಯಾವುದನ್ನಾದರೂ ತಂದೆ ಹೇಳಬಹುದೆಂದು ಬಚ್ಚಯ್ಯ ನಿರೀಕ್ಷಿಸುತ್ತಿದ್ದನು. ಅವರ ತಂದೆ ಮುಂದೆ ಯಾವ ಮಾತನ್ನೂ ಆಡಲೇ ಇಲ್ಲ. ಅವರು ಕಣ್ಣು ಮುಚ್ಚಿಕೊಂಡು, ಎಚ್ಚರವಾಗಿ ಗೆಲುವಾಗಿ ಏನನ್ನೋ ಯೋಚಿಸುತ್ತಾ, ಮಧ್ಯೆ ಮಧ್ಯೆ ಮುಗುಳು ನಗ ನಗುತ್ತಾ, ಮಲಗಿದ್ದರು. ಕೊನೆಯ ಗಳಿಗೆಯವರೆಗೆ ಅವರು ಜ್ಞಾನವುಳ್ಳವರಾಗಿಯೇ ಇದ್ದರು. ಅವರ ಕೊನೆಯ ಉಸಿರು

ಹಾರಿಹೋದಾಗಲೂ, ಅವರ ಮುಖದ ಮೇಲೆ ಒಂದು ವಿನೋದದ ನಗೆಯು ಅಲೆ ಹಾದುಹೋಯಿತು. ಜೀವನಮರಣದ ಗಡಿಯಲ್ಲಿ ಅವರು ಏನನ್ನು ನೋಡಿ ನಗುತ್ತಿರಬಹುದು ಎಂದು ಬಚ್ಚಯ್ಯ ಕೌತುಕಗೊಂಡನು. ಉಸಿರಿನೊಂದಿಗೆ ನಗೆಯನ್ನೂ ಹೊರಕ್ಕೆ ಚೆಲ್ಲಿದ್ದ ಅವರು "ಇನ್ನೂ ಈ ನಾಟಕ ಮುಗಿಸಿಲ್ಲ" ಎಂಬಂತೆಯೇ ಬಚ್ಚಯ್ಯನಿಗೆ ತೋರುತ್ತಿದ್ದಿತು.

ತಂದೆಯ ಪ್ರಾಣ ಹೋದ ಕೂಡಲೇ ಬಚ್ಚಯ್ಯ, ಎದುರು ಮನೆಯ ಶಿಂಗ್ಲಾಚಾರಿಯನ್ನು ಕರೆದುಕೊಂಡು ಬಂದನು. ಶಿಂಗ್ಲಾಚಾರಿಗೆ ಸಾವಿನ ಅನುಭವ ಬಹಳ. ನೋಡಿದ ಕೂಡಲೇ, ಒಬ್ಬ ಮನುಷ್ಯ ಸತ್ತಿದ್ದಾನೆಯೇ ಅಥವಾ ಉಸಿರು ಇನ್ನೂ ಸ್ವಲ್ಪ ಎಲ್ಲಿಯಾದರೂ ಸಿಕ್ಕಿಕೊಂಡಿದೆಯೇ ಎಂಬುದು ಅವನಿಗೆ ಗೊತ್ತಾಗುತ್ತಿದ್ದಿತು. ಶಿಂಗ್ಲಾಚಾರಿಯೂ ಬಚ್ಚಯ್ಯನೂ ಮುದುಕನನ್ನು ಮತ್ತೆ ನೋಡಿದರು. ಶಿಂಗ್ಲಾಚಾರಿ "ಘಾಟಿ ಮುದುಕ! ಯಮನೊಂದಿಗೆ ಏನೋ ಹಾಸ್ಯ ಮಾಡುತ್ತಿರುವಂತೆ ತೋರುತ್ತದೆ" ಎಂದನು. ಬಚ್ಚಯ್ಯ "ವೆಂಕ್ಟಾಚಾರಿಯನ್ನು ಕರೆದು ತೋರಿಸೋಣವೇ ?" ಎಂದನು. ಶಿಂಗ್ಲಾಚಾರಿ "ಬೇಡ ಬೇಡ. ವೆಂಕ್ಟಾಚಾರಿಗೆ ತೋರಿಸಿದರೆ ಇನ್ನೂ ಸ್ವಲ್ಪ ಜೀವವಿರುವಾಗಲೇ ಎತ್ತಿಕೊಂಡು ಹೋಗಿಬಿಡುತ್ತಾನೆ" ಎಂದನು. ಸಾವಿನ ಎದುರಿಗೂ ಅವರಿಗೆ ನಗು ಬಂತು.

ವೆಂಕ್ಟಾಚಾರಿಯ ವಿಷಯದಲ್ಲಿ, ಶಿಂಗ್ಲಾಚಾರಿ ಹೇಳಿದ ಮಾತು ಅಂತಹ ಅತಿಶಯೋಕ್ತಿಯೂ ಅಲ್ಲ. ಭದ್ರಯ್ಯನವರ ಮಗು ಪ್ಲೇಗಿನಿಂದ ಸತ್ತಾಗ, ಅದು ಸಾಯುವುದಕ್ಕೆ ಮೂರು ದಿನಗಳ ಹಿಂದಿನಿಂದಲೇ ಯಾರೂ ಭದ್ರಯ್ಯನ ಬಾಗಿಲಿಗೆ ಹಲೆ ಹಾಕಿರಲಿಲ್ಲವಷ್ಟೆ. ಪ್ಲೇಗಿನ ಸಾಂಕ್ರಾಮಿಕ ಭಯ ಹಾಗೆ. ಮಗು ಸತ್ತ ಮೇಲೆ, ವೆಂಕ್ಟಾಚಾರಿ ಅದನ್ನು ಹೆಗಲಿನ ಮೇಲೆ ಹಾಕಿಕೊಂಡು ಹೊಳೇ ತೀರದ ಸ್ಮಶಾನಕ್ಕೆ ಹೋಗುತ್ತಿದ್ದಾಗ ಮಗುವಿನ ಒಂದು ಬೆರಳು ಅಲುಗಾಡಿದಂತೆ ವೆಂಕ್ಟಾಚಾರಿಗೆ ಭಾಸವಾಯಿತು. ಅವನು ಬೆಚ್ಚಿಬಿದ್ದು ಸ್ಮಶಾನದಲ್ಲಿ ನಾಲ್ಕು ಗಂಟೆ ಕುಳಿತಿದ್ದು, ಮಗು ಪೂರ್ಣವಾಗಿ ಸತ್ತಿದೆ ಎಂದು ತಿಳಿದ ನಂತರವೇ, ಸಂಸ್ಕಾರ ಮಾಡಿ ಮನೆಗೆ ಬಂದನು. ಅಲ್ಲಿಂದ ಮುಂದೆ "ಪ್ರಾರ್ಣ ಸಾಯುವುದಕ್ಕೆ ಮುಂಚೆ ವೆಂಕ್ಟಾಚಾರಿಗೆ ಹೇಳಬೇಡಿ" ಎಂಬ ನುಡಿ ಅವನ ವಿಷಯಕ್ಕೆ ಅನ್ವಯವಾಗತೊಡಗಿತು. ಶಿಂಗ್ಲಾಚಾರಿಯು "ಸದ್ಯ ವೆಂಕಟಾ

ಚಾರಿ ಈ ಚುರುಕು ತೋರಿಸದೆ ಇದ್ದಿದ್ದರೆ, ಸತ್ತ ಹೆಣಗಳೆಲ್ಲ ಊರಲ್ಲಿಯೇ ಇರಬೇಕಾಗುತ್ತಿದ್ದಿತು" ಎಂದನು.

೨

ಬಚ್ಚಯ್ಯನವರ ತಂದೆಯ ಸಂಸ್ಕಾರ, ಆ ಬೆಳಿಗ್ಗೆ ನದಿಯ ತೀರದ ಸ್ಮಶಾನದಲ್ಲಿ ನಡೆಯಿತು. ಪೂರ್ಣ ಬಾಳನ್ನು ಬಾಳಿ ಅವರು ಮುಪ್ಪಿನಲ್ಲಿ ಸತ್ತಿದ್ದುದರಿಂದ "ಲೆಕ್ಕದಲ್ಲಿ ಹೊತ್ತದ್ದಕ್ಕೂ ಮುಪ್ಪಿನಲ್ಲಿ ಸತ್ತದ್ದಕ್ಕೂ ದುಃಖವಿಲ್ಲ" ಎಂಬಂತೆ ಯಾರೂ ಹೆಚ್ಚು ದುಃಖಪಡದೆ ಕಾರ್ಯಗಳನ್ನು ಶಾಂತವಾಗಿ ಸಾಂಗವಾಗಿ ನೆರವೇರಿಸುತ್ತಿದ್ದರು. ಬಿಳಿಯ ಬಟ್ಟೆಯಿಂದ ಮುಚ್ಚಿದ್ದ ಬಚ್ಚಯ್ಯನವರ ತಂದೆಯ ದೇಹ, ಸ್ವಲ್ಪವಾಗಲೀ ಬಣ್ಣಗೆಡದೆ ಒಳ್ಳೆ ಯೋಧನ ದೇಹದಂತೆ ಗಟ್ಟಿಮುಟ್ಟಾಗಿತ್ತು. ಮುಖದ ಮೇಲೆ ಅದೇ ರಾತ್ರಿಯ ವಿನೋದ. ಸಾಮಾನ್ಯವಾಗಿ, ವಿಕಾರವಾಗುತ್ತಿದ್ದ ಸತ್ತ ಮುಖ, ನಗುಮುಖವಾಗಿರುತ್ತಿದ್ದುದನ್ನು ಊರಿನವರು ಕಂಡೇ ಇರಲಿಲ್ಲ. ಬಚ್ಚಯ್ಯನವರ ತಂದೆ, ಹತ್ತು ವರುಷಗಳಿಂದ ಗಡ್ಡ ಬಿಟ್ಟಿದ್ದದ್ದರಿಂದ, ಸತ್ತಕಾಲದಲ್ಲಿಯೂ ಅವರು, ನಾಟಕದ ವಸಿಷ್ಠನಂತೆ ತೋರುತ್ತಿದ್ದರು.

ಆ ವೇಳೆಗೆ ಅಲ್ಲಿಗೆ ಗುಡಿಶೀನಣ್ಣ ಬಂದರು. ಶೀನಣ್ಣ ದೇವಸ್ಥಾನದ ಅಡಿಗೆಭಟ್ಟ. ಅವರು ಬ್ರಹ್ಮಚಾರಿ. ಅವರಿಗೂ ಆಗಲೇ ಎಂಬತ್ತೈದರ ಹತ್ತಿರ ಹತ್ತಿರ ವಯಸ್ಸು. ಶೀನಣ್ಣನಿಗೆ, ಸತ್ತವನ ಗಡ್ಡವನ್ನು ತೋರಿಸಿ, ಶಿಂಗ್ರಾಚಾರಿ, "ಗಡ್ಡ ಒಳ್ಳೆ ಹೊರವಾಗಿದೆ. ಗೋಸಾಯಿ" ಎಂದನು. ಶೀನಣ್ಣ "ಗೋಸಾಯಿ ಅನ್ನುತ್ತೀಯ ? ಇವನು ಗೋಶಾಯಿಯೆ ! ನಮ್ಮ ತಂದೆ ಬಲಾತ್ಕಾರದಿಂದ ಇವನ ಗಡ್ಡ ಬೋಳಿಸದೆ ಇದ್ದಿದ್ದರೆ, ಇವನು ಈಗಲೂ ಗೋಸಾಯಿಯಾಗಿಯೇ ಊರು ಊರು ತಿರುಗುತ್ತಿದ್ದ" ಎಂದರು. ಗೋಸಾಯಿಯನ್ನು 'ಗೋಶಾಯಿ' ಎಂದು ಹೇಳುವುದರಲ್ಲಿ ಶೀನಣ್ಣನಿಗೆ ಒಂದು ಆನಂದ. ವಯಸ್ಕರಾಗಿದ್ದವರಿಗೆ ಕತೆ ಗೊತ್ತಿತ್ತು. ಆದರೆ ಯುವಕರು "ಅದೇನು ಶೀನಣ್ಣ, ಇವರು ಯಾಕೆ ಗೋಶಾಯಿ ಆಗಿದ್ದರು ?" ಎಂದು ಕೇಳಿದರು.

ನದಿಯ ತೀರದಲ್ಲಿ ಬಚ್ಚಯ್ಯ ಹೋಮ ಹವನ ಮಾಡುತ್ತಿದ್ದ. ಶೀನಣ್ಣ ಕತೆ ಹೇಳಿದರು.

೩

ರಾಜಣ್ಣ (ಬಚ್ಚಯ್ಯನ ತಂದೆ) ಇಪತ್ತಿನವನಲ್ಲಪ್ಪ, ಇನ್ನು ಎರಡು ಮೂರು ವರ್ಷ ಬಂದರೆ, ಇವನಿಗೆ ಬರಾಬರಿ ಶತಮಾನ. ನಮ್ಮ ತಂದೆ ರಾಜನ ತಂದೆಯ ಜತೆ; ಇನ್ನೂ ಸ್ವಲ್ಪ ದೊಡ್ಡವರೇ. ಆಗ ರಾಜನಿಗೆ ವಯಸ್ಸು ಇಪ್ಪತ್ತುಮೂರು. ನನಗೆ ಚೆನ್ನಾಗಿ ಜ್ಞಾಪಕವಿದೆ. ನನಗೂ ಅವನಿಗೂ ಐದು ವರ್ಷ ವ್ಯತ್ಯಾಸ. ನಾನೇ ಕಿರಿಯವ; ರಾಜನ ತೋಟ ಬಹಳ ಚೆನ್ನಾಗಿತ್ತು. ತೆಂಗು, ಬಾಳೆ, ವೀಳೆದೆಲೆಯಾವಾಗಲೂ ಸಮೃದ್ಧವಾಗಿ ನಗುನಗುತ್ತಿದ್ದ ತೋಟ. ಆದರೆ ಆ ತೋಟಕ್ಕೆ ಇದ್ದದ್ದು ಒಂದೇ ಕಾಟ. ಕಳ್ಳರಲ್ಲ ಕಪಿಯಲ್ಲ ದನವಲ್ಲ. ಅರ್ಕಲಗೂಡಿನ ಸಂಗಮಯ್ಯನ ಕುದುರೆ. ಅವನ ಮೊಮ್ಮಗ ಪರ್ವತಯ್ಯ ಈಗಲೂ ಚಿಲ್ಲರೆ ಅಂಗಡಿ ಇಟ್ಟುಕೊಂಡು ಇದ್ದಾನೆ—ಆ ಕುದುರೆ ಅದಾವ ಮಾಯದಿಂದಲೋ, ಪ್ರತಿದಿನವೂ ಒಂದಾಳು ಎತ್ತರದ ತೋಟದ ಬೇಲಿಯನ್ನು ಹಾರಿ, ತೋಟದ ವೀಳೆದೆಲೆ ಹಂಬುಗಳನ್ನೆಲ್ಲ ಧ್ವಂಸ ಮಾಡಿಬಿಡುತ್ತಿದ್ದಿತು. ಆ ಕಾಲದಲ್ಲಿ ಈ ಊರಲ್ಲಿ ದೊಡ್ಡಿ ಇರಲಿಲ್ಲ. ರಾಜ, ಕುದುರೆಯನ್ನು ಹಿಡಿದುಕೊಂಡು ಹೋಗಿ, ಎರಡು ಮೂರು ದಿನ ಅರ್ಕಲಗೂಡಿನ ಸಂಗಮಯ್ಯನಿಗೆ ಒಪ್ಪಿಸಿದ. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಸಂಗಮಯ್ಯ ಎಷ್ಟು ಬಲವಾಗಿ ಹಗ್ಗದಿಂದ ಕಟ್ಟಿ ಹಾಕಿದರೂ, ತೋಟದ ರುಚಿ ಕಂಡ ಕುದುರೆ, ಕಿತ್ತುಕೊಂಡು ರಾತ್ರಿಯಾದ ಕೂಡಲೇ, ರಾಜನ ತೋಟದಲ್ಲಿ ಬೆಳಗಿನವರೆಗೆ, ಲೂಟಿ ಮಾಡುತ್ತಿತ್ತು. ರಾತ್ರಿಯಿಂದ ಬೆಳಗಿನವರೆಗ ನಿತ್ಯಾ ಒಂದು ಕುದುರೆ ತುಳಿದರೆ ತೋಟ ಉಳಿಯುತ್ತದೆಯೇ? ಆ ಬೆಳಗ್ಗೆ ರಾಜ, ತುಂಬ ಕಷ್ಟದಿಂದ ಕುದುರೆಯನ್ನು ಹಿಡಿದು "ಬಿಟ್ಟರೆ ಮತ್ತೆ ಬರುತ್ತದಲ್ಲ" ಎಂಬ ಭಯಕ್ಕಾಗಿ ಕೋಟೆಯ ಹಿಂದೆ ಇದ್ದ ಚದುರಂಗಿ ಗುತ್ತಿಗೆ ಅದನ್ನು ಕಟ್ಟಿಹಾಕಿದ.

ಶೀನಣ್ಣ, ಸ್ವಲ್ಪ ಸುಧಾರಿಸಿಕೊಂಡು ಮತ್ತೆ ಹೇಳತೊಡಗಿದರು. "ಕೋಟೆ ನೋಡಿದೀರಿ. ಈಗ ಏನೋ ಕೆಲವು ಭಾಗ ಮುಚ್ಚಿ ನೆಲಸಮ

ಮಾಡಿದ್ದಾರೆ. ಉಳಿದ ಕಡೆ ಇನ್ನೂ ಕಂದಕವಿದೆ. ಆಗ ಕೋಟೆಯ ಕೆಳಗಡೆ ಒಂಬತ್ತು ತೆಂಗಿನಮರದ ಆಳವಿತ್ತು ; ಅದರಲ್ಲಿ ಕೆಳಗೆ ನೀರು. ಹಿಂದಲ ಕಾಲದ ಪಾಳೆಯಗಾರರು ಕಟ್ಟಿದ್ದ ಕೋಟೆ ; ಕೋಟೆಯ ಹಿಂದೆ ಕುದುರೆಯನ್ನು ಕಟ್ಟಿಹಾಕಿದ ಮೇಲೆ ಆ ರಾತ್ರಿಯೆಲ್ಲ ರಾಜ, ಅದನ್ನು ನೋಡಲೇ ಇಲ್ಲ.

"ಬೆಳಗಾದನಂತರ, ಸಂಗಮಯ್ಯ ರಾಜನ ಮನೆಗೆ ಕುದುರೆ ಹುಡುಕಿಕೊಂಡು ಬಂದ. ದೂರದಲ್ಲಿ ಬರುತ್ತಿದ್ದ ಸಂಗಮಯ್ಯನನ್ನು ನೋಡಿದ ಕೂಡಲೇ ರಾಜನಿಗೆ ಕುದುರೆಯ ಜ್ಞಾಪಕ ಬಂತು. ಸಂಗಮಯ್ಯನ ಕಣ್ಣಿಗೆ ಬೀಳದೆ ರಾಜ, ಕೋಟೆಯ ಹಿಂದೆ ಹೋಗಿ ಕುದುರೆಯನ್ನು ಕಟ್ಟಿದ್ದ ಗುತ್ತಿಯ ಬಳಿ ನೋಡಿದ. ಕುದುರೆ ಅಲ್ಲಿಯೇ ನಿಂತಿತ್ತು. ಜಗ್ಗಿಸಿ, ಗುತ್ತಿಯನ್ನು ಕೀಳಲಾರದೆ ಸುಸ್ತಾಗಿ ನಿಂತಿತ್ತು. ಸಂಗಮಯ್ಯನನ್ನು ನೋಡುವುದಕ್ಕೆ ಮುಂಚೆ ಕುದುರೇನ ಬಿಟ್ಟುಬಿಡೋಣ ಅಂತ ರಾಜ, ತನ್ನ ಕೈಯಲ್ಲಿದ್ದ ಕುಡುಗೋಲಿನಿಂದ ಕುದುರೆಯ ಹಗ್ಗವನ್ನು ಕೊಯ್ದ.... ಕುಯಿದ ಹಗ್ಗವನ್ನು ರಾಜ ಹಿಡಿದುಕೊಳ್ಳುವುದಕ್ಕೆ ಮುಂಚೆ, ಕುದುರೆ ಒಂದೇ ಹಾರಿಗೆ ಇಳಿಜಾರಾಗಿದ್ದ ಕಂದಕದ ಕಡೆ ನುಗ್ಗಿತು. ಕಾಲಿನ ಹಿಡಿತಕ್ಕೆ ಸರಿಯಾಗಿ ನೆಲ ಸಿಕ್ಕದ್ದರಿಂದ ಕುದುರೆ ಹತ್ತಾರು ಸುತ್ತು ಉರುಳಿ ಕಂದಕದ ತಳಕ್ಕೆ ಬಿತ್ತು.... ಮತ್ತೆ ಏಳಲಿಲ್ಲ.

ಶೀನಣ್ಣ ಕೆಮ್ಮಿ ಗಂಟಲು ಸರಿಮಾಡಿಕೊಂಡರು. ಮತ್ತೆ ಹೇಳತೊಡಗಿದರು. "ಆನಂತರ ರಾಜ ಮನೆಗೆ ಬಂದ. ಸಂಗಮಯ್ಯ, ಬಾಗಿಲಿನಲ್ಲಿಯೇ ಕುಳಿತಿದ್ದವನು ರಾಜನನ್ನು ಕಂಡ ಕೂಡಲೇ 'ಕುದುರೆ ರಾತ್ರಿ ತೋಟಕ್ಕೆ ಬಂದಿತ್ತೆ? ಎಲ್ಲಿಗೆ ಓಡಿಸಿದಿರಿ? ಕಟ್ಟಿಹಾಕಿದ್ದೀರಾ?' ಎಂದು ಕೇಳಿದ. ರಾಜನಿಗೆ ಏನೂ ಹೇಳಲು ತೋರಲೇ ಇಲ್ಲ. 'ನಾನು ಕಾಣೆ' ಎಂದು ಹೇಳಿ, ಅವನು ಮನೆಯೊಳಕ್ಕೆ ಹೊರಟುಹೋದ. ಸಂಗಮಯ್ಯನಿಗೆ ರಾಜನ ಮಾತಿನಲ್ಲಿ ಅನುಮಾನ ಬಂತು. ಅವನು ಮಧ್ಯಾಹ್ನದವರೆಗೆ ಊರಲ್ಲೆಲ್ಲ ತಿರುಗಿ, ಕೊನೆಗೆ ಕಂದಕದಲ್ಲಿ ಸತ್ತು ಬಿದ್ದಿದ್ದ ಕುದುರೆಯನ್ನು ನೋಡಿದ. ತತ್‌ಕ್ಷಣ ಹೋಗಿ, ಮರುದಿನವೇ ಅಕ್ಕಲ ಗೂಡಿನಲ್ಲಿ "ರಾಜ ಕುದುರೆ ಕೊಂದಿದ್ದಾನೆ" ಎಂದು ಪೋಲೀಸಿಗೆ ದೂರು ಕೊಟ್ಟ. ಪೋಲೀಸಿಗೆ ದೂರು

ಕೊಟ್ಟ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸತ್ತಾರ್‌ಖಾನ್‌ನನ್ನು ಸೀವು ಕಾಣೆರಿ. ಒಳ್ಳೆಯ ಯಮನಂತಿದ್ದ. ಲಂಚಕೋರ–ಕೊನೆಯಲ್ಲಿ ಅವನಿಗೆ ಲಂಚಕೋರತನಕ್ಕೆ ಕೆಲಸ ಹೋಯಿತು—ಅವನಿಗೆ ಸಂಗಮಯ್ಯನ ಕುದುರೆ ಸುತ್ತರೂ ಲೆಕ್ಕವಿರಲಿಲ್ಲ. ಸಂಗಮಯ್ಯನೇ ಸತ್ತರೂ ಲೆಕ್ಕವಿರಲಿಲ್ಲ. ಅವನಿಗೆ ಬೇಕಾಗಿದ್ದುದು ಹಣ ಹಿರಿಯಲು ಒಂದು ನೊಕದ್ದಮೆ.

ಆಗಿನ ಕಾಲದಲ್ಲಿ ಪೋಲೀಸಿನವರು ಬಂದರೆ ಊರವರೆಲ್ಲ ಹೆದರಿ ಮನೆಯೊಳಗೆ ಅವಿತುಕೊಂಡುಬಿಡುತ್ತಿದ್ದರು. ಪೋಲೀಸಿನವರೂ ಸರ್ವಾಧಿಕಾರಿಗಳಾಗಿ ಜನರನ್ನು ಹೊಡೆದುಬಡಿದು ಲಾಕಪ್‌ನಲ್ಲಿ ಹಾಕಿ ಹಣ ಸುಲಿಗೆ ಮಾಡುತ್ತಿದ್ದರು. ಪೋಲೀಸಿನವರು ಬಂದ ಸುದ್ದಿ ತಿಳಿದ ಕೂಡಲೇ, ರಾಜಣ್ಣ ಹೇಳದೆ ಕೇಳದೆ ಊರುಬಿಟ್ಟು ಓಡಿಬಿಟ್ಟ. ಸತ್ತಾರ್‌ಖಾನ್ ಮನೆಯಲ್ಲಿ ವಿಚಾರಿಸಿದ. ಹಕ್ಕಿ ಹಾರಿಹೋಗಿತ್ತು. ರಾಜಣ್ಣನ ತಂದೆ 'ಕುದುರೆ ಸಂಗತಿ ನನಗೆ ತಿಳಿಯದು. ರಾಜನನ್ನೇ ವಿಚಾರಿಸಿ. ನಾನು ತೋಟಕ್ಕೆ ಸಹ ಹೋಗುವುದಿಲ್ಲ' ಎಂದುಬಿಟ್ಟರು. ಅದು ನಿಶ್ಚಯವೂ ಆಗಿತ್ತು. ಅವರು ಪರಮ ಸಾತ್ವಿಕರು. ಖಾನ್ ಸಾಹೇಬರು 'ಇರಲಿ, ಎಲ್ಲಿ ಹೋಗುತ್ತಾನೆ ? ಬಂದೇ ಬರುತ್ತಾನೆ. ಕೈಗೆ ಸಿಕ್ಕಿಯೇ ಸಿಕ್ಕುತ್ತಾನೆ' ಎಂದು ಹೇಳಿಕೊಂಡು, ಸುಮ್ಮನೆ ತೊಂದರೆ ಕೊಟ್ಟುದಕ್ಕಾಗಿ ಸಂಗಮಯ್ಯನಿಂದಲೇ ಸ್ವಲ್ಪ ಗಿಟ್ಟಿಸಿಕೊಂಡು, ಅರಕಲಗೂಡಿಗೆ ಹಿಂತಿರುಗಿದರು.

ರಾಜಣ್ಣನ ಮನೆಯವರು, 'ಅವನು ಇವತ್ತು ಬರುತ್ತಾನೆ, ನಾಳೆ ಬರುತ್ತಾನೆ' ಎಂದು ನಿತ್ಯಾ ನಿರೀಕ್ಷಿಸುತ್ತಿದ್ದರು. ರಾಜಣ್ಣನ ಸುಳಿವೇ ಇಲ್ಲ. ಒಂದು ವರುಷ, ಎರಡು ವರುಷ ಕಳೆಯಿತು. ರಾಜಣ್ಣನ ಹೆಂಡತಿ—ಆಕೆ ತೀರಿಹೋಗಿಯೇ ಹದಿನೈದು ವರುಷಗಳಾಯಿತು—ಈಗ ತಾನೇ ಮನೆಗೆ ಬಂದಿದ್ದ ಹೊಸ ಸೊಸೆ ಅತ್ತು ಸೊರಗಿ ಒಂದು ಸಲ ಹೊಳೆಗೆ ಬೀಳುವುದಕ್ಕೆ ಸಹ ಹೋಗಿದ್ದಳು. ರಾಜಣ್ಣನ ತಂದೆ ಮೈಸೂರು ಬೆಂಗಳೂರು ಮುಂತಾದ ಕಡೆಗಳಿಗೆಲ್ಲ ರಾಜಣ್ಣನನ್ನು ಹುಡುಕಿಕೊಂಡು ಬರಲು ಜನರನ್ನು ಕಳುಹಿಸಿದರು. ಈ ದೊಡ್ಡ ದೇಶದಲ್ಲಿ ಎಲ್ಲಿ ಅಂತ ಹುಡುಕೋದು ? ನಾಲ್ಕು, ಐದು, ಆರು, ಏಳು, ಎಂಟು, ಒಂಬತ್ತು, ಹತ್ತು ವರುಷಗಳು ಕಳೆದುಹೋದುವು. ಕೊನೆಗೆ ರಾಜಣ್ಣ ಬದು

ಕಿರಲಾರನೆಂದೂ, ಇದ್ದಿದ್ದರೆ ಆ ಪೇಟೆಗೆ ಹಿಂತಿರುಗುತ್ತಿದ್ದನೆಂದೂ, ಎಲ್ಲರೂ
ದೃಢವಾಗಿ ನಂಬಿದರು. ವಿಷಯ ಎಲ್ಲರಿಗೂ ಗೊತ್ತಿದ್ದರೂ ಯಾರೂ ಆ ಭಯ
ವನ್ನು ಬಾಯಿಂದ ಸೂಚಿಸಿರಲಿಲ್ಲ. ವಂಶಕ್ಕೆ ಒಬ್ಬನೇ ಮಗನಾದ ರಾಜಣ್ಣನ
ಈ ಗತಿ ಕಂಡು. ಅವನ ತಂದೆ ಹುಚ್ಚು ಹತ್ತಿದಂತೆ ಆದರು. ರಾಜಣ್ಣನ
ಹೆಂಡತಿಯ ಸ್ಥಿತಿ ಹೇಳಬೇಕಾದುದೇ ಇಲ್ಲ. ಆ ಹುಡುಗಿ ಊಟ, ನಿದ್ರೆ ಎಲ್ಲ
ಬಿಟ್ಟು ಯಮುನ ಕರುಣೆಯನ್ನೇ ನಿರೀಕ್ಷಿಸುತ್ತಿದ್ದಳು. ಹೀಗೆ ಹತ್ತು ವರ್ಷ ಕಳೆ
ಯಿತು.

ಶೀನಣ್ಣನ ದೃಷ್ಟಿ, ಮತ್ತೆ ಆ ಗತಕಾಲಕ್ಕೆ ಹೋಯಿತು. ಅವರ ಕಣ್ಣು
ಗಳು, ಎದುರಿಗಿದ್ದವರನ್ನು ನೋಡುತ್ತಿರಲಿಲ್ಲ. ಹಗುರವಾಗಿ ಪ್ರಾರಂಭವಾಗಿದ್ದ
ವಾತಾವರಣ, ಸ್ವಲ್ಪ ಭಾರವಾಯಿತು. ಶೀನಣ್ಣನವರು ಮುಂದುವರಿಸಿದರು.

"ರಾಜಣ್ಣ, ಊರು ಬಿಟ್ಟು ಹೋದ ಮೇಲೆ, ಆ ಅಜ್ಞಾತವಾಸದ ಹತ್ತು
ವರುಷಗಳಲ್ಲಿ ನಡೆದ ವಿಚಾರ ಈಚೆಗೆ ನಾನು ವೃದ್ಧ ಗೋಸಾಯಿಯಿಂದ ಅರಿ
ತುದು. ರಾಜಣ್ಣನಿಗೆ ಪದೇ ಪದೇ ಊರು ಹೆಂಡತಿ ಮಗು ಇವರ ಯೋಚನೆ
ಬರುತ್ತಲೇ ಇದ್ದಿತಂತೆ. ಅವರನ್ನು ನೋಡಬೇಕೆಂಬ ಆಸೆ. ಅವರಿಗೆ ತಾನು
ಸುಖವಾಗಿದ್ದೇನೆಂಬುದನ್ನು ತಿಳಿಸಬೇಕೆಂಬ ಆಸೆ. ಅವರಿಗೆ ತಾನು ಸುಖ
ವಾಗಿದ್ದೇನೆಂಬುದನ್ನು ತಿಳಿಸಬೇಕೆಂಬ ಕಾತರ. ಆದರೆ ಊರಿಗೆ ಹಿಂದಿರುಗಲು
ಆತನಿಗೆ ಮನಸ್ಸು ಒಗ್ಗಲಿಲ್ಲ. ಅದಕ್ಕೆ ಒಂದು ಕಾರಣ. ಆಗಿನ ಕಾಲದ
ಪೋಲೀಸು. ಪೋಲೀಸು ಎಂದರೇ ಜನ ನಡುಗುತ್ತಿದ್ದರು. ಪೋಲೀಸರು ಯಾವ
ಕಾರಣ ಸಿಕ್ಕಿದರೂ ಸರಿಯೆ, ಒಂದೆರಡು ಗಂಟೆಗಳಾದರೂ ಅಪರಾಧಿ ಎನ್ನಿಸಿ
ಕೊಂಡವರನ್ನು ದಸ್ತಗಿರಿಮಾಡಿ "ಲಾಕ್‌ಅಪ್"ನಲ್ಲಿ ಹಾಕಿ ಅವನಿಂದ ನೂರಾರು
ರೂಪಾಯಿ ಕೀಳುತ್ತಿದ್ದರು. "ಲಾಕ್‌ಅಪ್" ಎಂದರೆ ಸರಿಯುವರ ಎದುರಿಗೆ
ಅವಮಾನ. ಒಂದು ಸಲ "ಲಾಕ್‌ಅಪ್"ನಲ್ಲಿ ಹಾಕಿದರೆ ಹೋದ ಮಾನ
ಬರಿಸಿಕೊಳ್ಳುವುದು ಹೇಗೆ ? 'ಪ್ರಾಣ ಹೋದರೂ ಮಾನ ಉಳಿಸಿಕೊಳ್ಳ
ಬೇಕು.' ರಾಜಣ್ಣನಿಗೆ ಬೇಗ ಊರ ಕಡೆ ಬರಲು ಮನಸ್ಸಾಗದಿರಲು ಎರಡನೆಯ
ಕಾರಣ, ಕುದುರೆಯನ್ನು ಕೊಂದ ಪ್ರಾಣಿಹತ್ಯಾ ಪಿಶಾಚ ಭಯ. ತಾನು
ಕುದುರೆಯನ್ನು ಹಿಡಿದುಕೊಂಡು ಹೋಗಿ ಕೋಟೆಯ ಹಿಂದೆ ಕಟ್ಟಿದುದ
ರಿಂದಲೇ, ಅದು ಸತ್ತಿತೆಂಬುದರಲ್ಲಿ ರಾಜಣ್ಣನಿಗೆ ಯಾವ ಅನುಮಾನವೂ ಇರ

ಲಿಲ್ಲ. ಅವನ ಮನಸ್ಸಿನ ಮೇಲೆ ದೊಡ್ಡ ಹೊರೆ ಕೂತಂತೆ ಆಗಿತ್ತು. ಆ ಮೂಗುಪ್ರಾಣಿಯ ಹತ್ಯೆ, ವಂಶನಾಶಕ. ಇದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಮುಂದಿನ ಪೀಳಿಗೆಗೆ ಒಳ್ಳೆಯದಾಗುವುದಿಲ್ಲ. ಆದುದರಿಂದ 'ಕಾಲು ನಡಿಗೆಯಲ್ಲಿ ಈ ಪವಿತ್ರ ಭೂಮಿಯನ್ನು ಸಂಚರಿಸೋಣ. ಪುಣ್ಯಕ್ಷೇತ್ರಗಳಲ್ಲಿ ಪರಮಾತ್ಮನನ್ನು ಸೇವಿಸೋಣ. ತೀರ್ಥಕ್ಷೇತ್ರಗಳಲ್ಲಿ ಸ್ನಾನ ಮಾಡಿ ಈ ಪಾಪವನ್ನು ತೊಳೆದುಕೊಳ್ಳೋಣ. ಸಾಧು ಸಜ್ಜನರ ಸಂಪರ್ಕದಿಂದ ಸದ್ಗತಿಗೆ ದಾರಿ ಮಾಡಿಕೊಳ್ಳೋಣ' ಎಂದು ಅವನು ಒಂದು ಗೋಸಾಯಿಗಳ ಗುಂಪಿನಲ್ಲಿ ಸೇರಿಕೊಂಡು ಅವರ ಜತೆ ತೀರ್ಥಯಾತ್ರೆ ಮಾಡತೊಡಗಿದನು. ಆದರೆ ಅವನು ಸಂಸಾರಿಯಲ್ಲವೆ? ಪದೇ ಪದೇ ಊರು ಮನೆ, ತಂದೆ ಹೆಂಡತಿ ಮಕ್ಕಳ ಜ್ಞಾಪಕ ಬರುತ್ತಿದ್ದಿತು. ಒಂದು ಸಲ ರಾಜಣ್ಣನಿಗೆ ತುಂಬ ಕಾಹಿಲೆಯಾಗಿ ವಿಷಮಶೀತ ಜ್ವರ ಸನ್ನಿಯಾಯಿತಂತೆ. ಆಗ ಅವನು ಮೈಮೇಲೆ ಜ್ಞಾನವಿಲ್ಲದೆ ಬಾಯಿಗೆ ಬಂದಂತೆ ಹರಟುತ್ತಿದ್ದನಂತೆ. ಅವನನ್ನು ಉಪಚರಿಸುತ್ತಿದ್ದ ಆ ವೃದ್ಧ ಗೋಶಾಯಿಗೆ, ಅಜ್ಞಾನದಲ್ಲಿ ರಾಜಣ್ಣ ಹೇಳುತ್ತಿದ್ದ ಮಾತುಗಳಿಂದ ಅವನ ವೃತ್ತಾಂತ ಪೂರ್ತಿ ಗೊತ್ತಾಯಿತು.

"ರಾಜಣ್ಣನಿಗೆ ಪೂರ್ತಿ ಗುಣವಾದ ಮೇಲೆ ಆ ವೃದ್ಧ ಸನ್ಯಾಸಿ ಒಂದು ದಿನ ಅದು ಇದು ಮಾತನಾಡುತ್ತಾ ನಮ್ಮ ಊರಿನ ಹೆಸರು ಹೇಳಿದನಂತೆ. ಅದನ್ನು ಕೇಳಿ ರಾಜಣ್ಣನ ಮುಖದ ಮೇಲೆ ಆಸೆಯ ಗೆರೆಗಳು ಮೂಡಿದರೂ, ಮುಂದಿನ ಕ್ಷಣದಲ್ಲಿಯೇ ರಾಜಣ್ಣನ ಮುಖಭಾವ ಸ್ವಾಭಾವಿಕವಾಯಿತಂತೆ. ಅನಂತರ ಆ ವೃದ್ಧ ಗೋಶಾಯಿ, 'ಮೈಸೂರು ದೇಶದ ಪುಣ್ಯಸ್ಥಳಗಳಿಗೆಲ್ಲ ಹೋಗಬೇಕು. ಹೇಮಾವತಿ ಕಾವೇರಿ ನದಿಗಳಲ್ಲಿ ಸ್ನಾನಮಾಡಿ ಆ ತೀರದ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಬೇಕು' ಎಂದನಂತೆ. ಅದಕ್ಕೆ ರಾಜಣ್ಣ 'ಹೇಮಾವತಿ ತೀರದಲ್ಲಿ ಅಂತಹ ಕ್ಷೇತ್ರ ಯಾವುದೂ ಇಲ್ಲ' ಎಂದನಂತೆ. ಗೋಶಾಯಿಯು, 'ಯಾಕೆ ಇಲ್ಲ? ಗೋಕರ್ಣಪುರಿ (ಗೊರೂರು) ಇಲ್ಲವೆ? ಅಲ್ಲಿ ಹೇಮಾವತಿ ಯಗಚಿ ಸಂಗಮ ಬೇರೆ ಇದೆ' ಎಂದನಂತೆ.

ಸ್ವಲ್ಪ ದಿನಗಳ ನಂತರ ಮುದಿ ಗೋಶಾಯಿ ಕಾಯಿಲೆ ಬಿದ್ದನು. ರಾಜಣ್ಣ ಅವನನ್ನು ಬಹಳ ಶ್ರದ್ಧೆಯಿಂದ ಉಪಚರಿಸಿದನು. ಗೋಶಾಯಿಗೆ ರೋಗ ಗುಣವಾದರೂ ಕಾಲಿಗೆ ಸ್ವಾಧೀನ ತಪ್ಪಿಹೋಯಿತು. ಅವನು ಎಲ್ಲಿಗೆ

ಹೋಗಬೇಕಾದರೂ, ರಾಜಣ್ಣ ಅವನನ್ನು ಹೆಗಲಿನ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದನು. ಆದರೂ ದಿನ ದಿನಕ್ಕೆ ಸನ್ಯಾಸಿ ಶಕ್ತಿಹೀನನಾಗತೊಡಗಿದ್ದನು.

ಒಂದು ದಿನ ಗೋಶಾಯಿಯು 'ಈ ಜಡಕಾಷ್ಠ ಇನ್ನು ಹೆಚ್ಚು ಕಾಲ ಭೂಮಿಯಲ್ಲಿ ಉಳಿಯುವ ಸಂಭವವಿಲ್ಲ. ಇನ್ನೊಂದು ಸಲ ರಾಮೇಶ್ವರ ಯಾತ್ರೆ ಹೋಗಿ, ಅಲ್ಲಿ ಈ ಕಾಷ್ಠವನ್ನು ಅಗ್ನಿಗೆ ಅರ್ಪಿಸೋಣ' ಎಂದನು. ಅವರ ಜತೆಯಲ್ಲಿ ನೂರಾರು ಗೋಶಾಯಿಗಳು ಹೊರಟರು. ಅವರ ಪ್ರಯಾಣದ ದಾರಿಯಲ್ಲಿ ನಮ್ಮ ಊರಿನಲ್ಲಿಯೂ ಅವರು ನಿಲ್ಲುವುದನ್ನು ಕೇಳಿ, ರಾಜಣ್ಣ 'ನಾನು ರಾಮೇಶ್ವರಕ್ಕೆ ಬರುವುದಿಲ್ಲ. ಇಲ್ಲಿಯೇ (ಕಾಶಿಯಲ್ಲಿಯೇ) ಇರುತ್ತೇನೆ' ಎಂದು ಹಟ ಹಿಡಿದನಂತೆ. ಗೋಶಾಯಿ ವಾದಮಾಡಿ ಕೊನೆಗೂ ರಾಜಣ್ಣನನ್ನೂ ಹೊರಡಿಸಿದನಂತೆ. ನಮ್ಮ ಊರ ಛತ್ರದಲ್ಲಿ ಇಳಿದುಕೊಳ್ಳಬೇಕೆಂದು ವೃದ್ಧ ಗೋಶಾಯಿ ಸೂಚಿಸಿದಾಗ ಸಹ, 'ರಾಜಣ್ಣ ಇಲ್ಲಿ ಉಳಿಯುವುದು ಬೇಡ. ಸಂಗಮದಲ್ಲಿ ಸ್ನಾನಮಾಡಿ ಮುಂದೆ ಹೋಗೋಣ' ಎಂದನಂತೆ. ಆದರೆ ಊರಿನ ಹತ್ತಿರಕ್ಕೆ ಬಂದಾಗ ರಾಜಣ್ಣನ ಮುಖದ ಗೆಲುವನ್ನು ನೋಡಿ ವೃದ್ಧ ಗೋಶಾಯಿಗೆ ನಿಜವಾಗಿ ತೃಪ್ತಿಯ ಮನೋಭಾವ ಉಂಟಾಯಿತಂತೆ. ಗೋಶಾಯಿಗಳೆಲ್ಲ ಬಂದು ದೇವಸ್ಥಾನದ ಮಗ್ಗಲು ಛತ್ರದಲ್ಲಿ ಗೇರಾಯಿಸಿದರು.

"ಅವರ ಪೈಕಿ ಆದೇ ಹಣ್ಣು ಹಣ್ಣು ಮುದುಕ ; ಅವನಿಗೆ ನಡೆಯುವುದಕ್ಕೆ ಕೂಡ ಆಗುತ್ತಿರಲಿಲ್ಲ. ಇನ್ನೊಬ್ಬ ಪುಷ್ಟನಾದ ಗೋಶಾಯಿ ; ಮುದುಕನನ್ನು ಹೆಗಲಿನ ಮೇಲೆ ಕೂರಿಸಿಕೊಂಡು ನದಿಗೆ ಹೋಗಿ ಸ್ನಾನ ಮಾಡಿಸಿ ಕರೆದುಕೊಂಡು ಬರುತ್ತಿದ್ದನು. ನಮ್ಮ ಹಳ್ಳಿಯವರಿಗೆ ನಿತ್ಯಾ ಅವನ್ನು ನೋಡುವುದೇ ಒಂದು ವಿನೋದವಾಗಿತ್ತು. ಮುದುಕನನ್ನು ಹೊತ್ತಿದ್ದ ಗೋಶಾಯಿಯೂ, ಕರ್‍ರಗೆ ಗಡ್ಡ ಮೀಸೆ ಜಡೆ ಬಿಟ್ಟಿದ್ದನು ; ಜಟ್ಟಿಯಾಗಿದ್ದನು. ನಮ್ಮ ತಂದೆಯವರೂ ಪ್ರತಿ ನಿತ್ಯ ಹೊಳೆಗೆ ಸ್ನಾನಕ್ಕೆ ಹೋಗುತ್ತಿದ್ದರಷ್ಟೆ ; ಆ ದಿವಸ ಗೋಶಾಯಿಗಳೆಲ್ಲ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ, ನಮ್ಮ ತಂದೆಯವರೂ ಅಲ್ಲಿ ಇದ್ದರು. ಯುವಕ ಗೋಶಾಯಿ, ಮುದುಕನಿಗೆ ನಿಧಾನವಾಗಿ ಸ್ನಾನಮಾಡಿಸಿ ಮತ್ತೆ ಹೆಗಲಿನ ಮೇಲೆ ಕೂರಿಸಿಕೊಂಡು ಛತ್ರದಲ್ಲಿ ಬಿಟ್ಟು ಬಂದು ತಾನೂ ಸ್ನಾನಕ್ಕೆ ಇಳಿದನು. ಉಳಿದ

ಗೋಶಾಯಿಗಳೆಲ್ಲ ಮೊದಲ ಪಂಕ್ತಿಯಲ್ಲಿ ಸ್ನಾನಮಾಡಿಕೊಂಡು ಛತ್ರಕ್ಕೆ ಹೊರಟುಹೋಗಿದ್ದರು. ಮುದುಕನನ್ನು ಬಿಟ್ಟುಬಂದ ತರುಣ ಗೋಶಾಯಿ, ನಿಧಾನವಾಗಿ ತನ್ನ ಬಟ್ಟೆಗಳನ್ನು ಒಗೆಯಲು ಪ್ರಾರಂಭಿಸಿದನು. ಮೇಲೆ ಜಪ ಮಾಡುತ್ತಾ ಕುಳಿತಿದ್ದ ನಮ್ಮ ತಂದೆ, ಅವನನ್ನೇ ಸ್ವಾಭಾವಿಕವಾಗಿ ನೋಡುತ್ತಿದ್ದರು. ಇದ್ದಕ್ಕಿದ್ದಂತೆ ಜಪ ಮರೆತು ಅವರಿಗೆ ಮತ್ತಾವುದೋ ಯೋಜನೆ ಮಿಂಚಿನಂತೆ ಹೊಳೆಯಿತು. ಅವರು ಹೊಸ ಉತ್ಸಾಹದಿಂದ ಗೋಶಾಯಿಯನ್ನೇ ಕುರಿತು ನೋಡತೊಡಗಿದರು. ಎರಡು ಮೂರು ಗಳಿಗೆ ಅವರು ಹೀಗೆ ನೋಡುತ್ತಿರುವುದರೊಳಗೇ ಗೋಶಾಯಿಗೂ ಅವರು ತನ್ನನ್ನೇ ನೋಡುತ್ತಿರುವುದು ಗೊತ್ತಾಯಿತು. ಅವನು ತಲೆ ತಗ್ಗಿಸಿಕೊಂಡನು.

ಇದ್ದಕ್ಕಿದ್ದಂತೆ ನಮ್ಮ ತಂದೆ, ಯಕ್ಷನು ಧರ್ಮರಾಜನಿಗೆ ಹೇಳಿದಂತೆ, ಗೋಶಾಯಿಯನ್ನು ಕುರಿತು 'ಹೀಗೆ ಯಾಕೆ ಗಡ್ಡಬಿಟ್ಟುಕೊಂಡು ಊರೂರು ತಿರುಗುತ್ತಿದ್ದೀಯೆ ? ಗಂಭೀರವಾಗಿ ಮನೆಗೆ ನಡೆ' ಎಂದರು. ಗೋಶಾಯಿ ಎಲ್ಲೋ ಒಂದು ವಿನಾಡಿ ಬೆಚ್ಚಿಬಿದ್ದಂತೆ ತೋರಿತು. ಆದರೆ ಮರುಕ್ಷಣ ಅವನು ಚೇತರಿಸಿಕೊಂಡು, ಉರ್ದುವಿನಲ್ಲಿ 'ನಿಮ್ಮ ಮಾತು ನನಗೆ ಅರ್ಥವಾಗಲಿಲ್ಲ' ಎಂದನು. ನಮ್ಮ ತಂದೆಗೆ ಅವನ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಅವನ ಕಾವಿಬಟ್ಟೆಯನ್ನೂ ಗಡ್ಡವನ್ನೂ ಜಡೆಯನ್ನೂ ನೋಡಿ, ಅವರಿಗೆ ನಗು ಬಂತು. ಅವರ ನಗುವನ್ನು ನೋಡಿ ಗೋಶಾಯಿಗೂ ಸ್ವಲ್ಪ ನಗು ಬಂದಂತೆ ತೋರಿತು.

"ನಮ್ಮ ತಂದೆ ಅವನಿಗೆ ಇನ್ನೂ ಒಂದೆರಡು ಮಾತುಗಳನ್ನು ಹೇಳಿನೋಡಿದರು. ಗೋಶಾಯಿ ಎಲ್ಲಕ್ಕೂ ಉರ್ದುವಿನಲ್ಲಿ 'ತಿಳಿಯದು ತಿಳಿಯದು' ಎಂದು ಹೇಳತೊಡಗಿದನು. ಆ ವೇಳೆಗೆ ಹೊಳೆ ಆಚೆಯ ಹಳ್ಳಿಗೆ ಉದ್ಯೋಗಕ್ಕೆ (ಕ್ಷೌರಕ್ಕೆ) ಹೊರಟಿದ್ದ ಬೆಟ್ಟನೂ ಅವನ ತಮ್ಮನೂ ಅಲ್ಲಿಗೆ ಬಂದರು. ಅದೇ ನದಿಯನ್ನು ಹಾಯುವ ಸ್ಥಳ. ನಮ್ಮ ತಂದೆ ಒಂದೇ ನಿಮಿಷದಲ್ಲಿ ಅವರಿಬ್ಬರಿಗೂ ಏನೋ ಹೇಳಿದರು. ಬೆಟ್ಟ ಅವನ ತಮ್ಮ ಇಬ್ಬರೂ ಬೆಟ್ಟದಂತಹ ಭರ್ಜರಿ ಆಳುಗಳು. ಅವರು ಮುಗುಳುನಗೆ ನಗುತ್ತಾ, ನದಿಯನ್ನು ಹಾಯಲು ಗೋಶಾಯಿ ವಸ್ತ್ರ ಒಗೆಯುತ್ತಿದ್ದ ಸ್ಥಳದಲ್ಲಿಯೇ ನೀರಿಗೆ ಇಳಿದರು. 'ಅವರ ಪಾಡಿಗೆ ಅವರು ಹೋಗುತ್ತಾರೆ' ಎಂದು ಗೋಶಾಯಿ ತನ್ನ ಕೆಲಸದಲ್ಲಿ ತಾನು

ನಿರತನಾಗಿದ್ದನು. ಇದ್ದಕ್ಕಿದ್ದಂತೆ ಬೆಟ್ಟನ ತಮ್ಮ, ಗೋಶಾಯಿಯ ಸೊಂಟಕ್ಕೆ ಕೈಹಾಕಿ ಹಿಡಿದುಕೊಂಡುಬಿಟ್ಟನು. ಗೋಶಾಯಿಯ ಎರಡು ಕೈಯೂ, ಆ ಕೈಗಳ ಸಂದಿನಲ್ಲಿ ಸೇರಿಹೋಯಿತು. ಗೋಶಾಯಿಯೂ ಶಕ್ತನೇ. ಕೈಗಳನ್ನೂ ಸೊಂಟವನ್ನೂ ಬಿಡಿಸಿಕೊಳ್ಳಲು ಎಷ್ಟೋ ತಿಣಕಾಡಿದನು. ಆದರೆ ಬೆಟ್ಟನ ತಮ್ಮನಿಗೆ ಆ ಪ್ರಚಾರು ಈಡೆ ? ಗೋಶಾಯಿಗೆ ಅಲ್ಲಾಡುವುದಕ್ಕೆ ಸಹ ಆಗ ಲಿಲ್ಲ. ಇವನು ಯಾಕೆ ನನ್ನನ್ನು ಹಿಡಿದಿದ್ದಾನೆ? ಏನು? ಎಂದು ಗೋಶಾಯಿಗೆ ತಿಳಿಯುವುದಕ್ಕೆ ಮುಂಚೆಯೇ ಬೆಟ್ಟನು ಅವನ ಗಡ್ಡಕ್ಕೆ ಸಾಬೂನು ಹಚ್ಚಿ, ಒಂದು ಕಡೆಯನ್ನು ಬೋಳಿಸಿಯೇಬಿಟ್ಟನು. ಬೆಟ್ಟ ಮತ್ತೊಂದು ಕಡೆಯ ಗಡ್ಡವನ್ನು ಬೋಳಿಸುತ್ತಿರುವಾಗ, ಗೋಶಾಯಿ ತಾನು ಉರ್ದು ಮಾತನಾಡ ಬೇಕು ಎಂಬುದನ್ನೇ ಮರೆತು 'ಬೇಡ ಬೇಡ, ಬಿಡು ಬಿಡು—ನನ್ನನ್ನ ಮುಟ್ಟಿ ದರೆ ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ' ಎಂದನು. ಬೆಟ್ಟನು ಯಾವ ಮಾತನ್ನೂ ಗಮನಿಸದೆ, ಅವನ ಮೀಸೆಯನ್ನೂ ಬೋಳಿಸಿಯೇ ಬಿಟ್ಟನು. ಕತ್ತರಿಯಿಂದ ಅವನ ಜಟೆಯನ್ನು ಒಂದೇ ಏಟಿಗೆ ಕತ್ತರಿಸಿ ಹಾಕಿದನು. ಉದ್ದ ವಾದ ಜಟೆ, ಕೇರೆ ಹಾವಿನಂತೆ ನೀರಿನಲ್ಲಿ ತೇಲಿಹೋಯಿತು. ನಮ್ಮ ತಂದೆ ಜಪ ಮಾಡುತ್ತಾ ಕುಳಿತಿದ್ದವರು, ರಾಜಣ್ಣನ ಮುಂದೆ ಬಂದು ನಿಂತು, ಗೃಹಸ್ಥ ನಿಗೆ ಮಾಡಿಸುವಂತೆ ಅವನಿಗೆ ಸರಿಯಾಗಿ ಕ್ಷೌರಮಾಡಿಸಿ, ಹಿಂದೆ ಜುಟ್ಟು ಬಿಡಿಸಿದರು. ಕ್ಷೌರ ಮಾಡಿದ ಮೇಲೆ ಬೆಟ್ಟ ಸರಿಯಾಗಿ ನೋಡಿ 'ಹೌದು ಬುದ್ಧಿ, ನಮ್ಮ ರಾಜಣ್ಣನೋರೇಯ, ಎಂತಹ ವೇಷ, ತಿಳೀಲೇ ಇಲ್ಲವಲ್ಲ !' ಎಂದನು. ನಮ್ಮ ತಂದೆ ನಗುತ್ತಾ 'ಇಲ್ಲ ಇಲ್ಲ, ಇವನು ನೀಲಗಿರಿ ಗೋಶಾಯಿ. ಇವನಿಗೆ ಕನ್ನಡ ಬರೋದಿಲ್ಲ' ಎಂದರು. ರಾಜಣ್ಣ ಕನಸಿನಲ್ಲಿದ್ದವನಂತೆ ಎಲ್ಲ ವನ್ನೂ ಸುಮ್ಮನೆ ನೋಡುತ್ತಾ ನಿಂತಿದ್ದನು. ನಮ್ಮ ತಂದೆ 'ಇವನಿಗೆ ಪ್ರಸರ್ಜನ್ಮ ಕೊಟ್ಟುದಕ್ಕೆ ನಿಮಗೆ ಇದೇ ಉಡುಗೊರೆ' ಎಂದು ಹೇಳಿ ರಾಜಣ್ಣನ ಕಾವಿ ಬಟ್ಟೆಗಳನ್ನೆಲ್ಲ ಬೆಟ್ಟನಿಗೆ ಕೊಟ್ಟುಬಿಟ್ಟರು. ಬೆಟ್ಟ ಅದನ್ನೂ ತೆಗೆದು ಕೊಂಡು 'ಇಷ್ಟಕ್ಕೆ ಆಯಿತೆ ? ಸನ್ಯಾಸಿಯನ್ನು ಹಿಡಿದುಕೊಂಡು ಬಂದು, ದೀಕ್ಷೆ ಇಳಿಸಿ, ಒಪ್ಪಿಸಿದುದಕ್ಕೆ ಇವರ ಯಜಮಾನಿತಿ ಬಹುಮಾನ ಕೊಟ್ಟೇ ಕೊಡುತ್ತಾರೆ" ಎಂದನು.

ಮುಂದಿನ ಗಳಿಗೆಯಲ್ಲಿಯೇ ರಾಜಣ್ಣ, ನಮ್ಮ ತಂದೆಯವರ ಜೀಯ

ಪಂಚೆಯನ್ನೇ ಉಟ್ಟುಕೊಂಡು, ಅವರ ಜತೆ ಮನೆಗೆ ಹೊರಟ. ಛತ್ರದ ಬಾಗಿಲಿನಲ್ಲಿ ಮುದಿಗೋಶಾಯಿ ಕುಳಿತು ಅವರ ಕಡೆಯೇ ನೋಡುತ್ತಿದ್ದ. ಅವನ ಸುತ್ತಾ ಇತರ ಗೋಶಾಯಿಗಳೂ ಕುಳಿತು ಗುಡಿಗುಡಿ ಸೇದುತ್ತಿದ್ದರು. ರಾಜಣ್ಣ 'ಮನೆಗೆ ಹೋಗಿ ಮತ್ತೆ ಬರುತ್ತೇನೆ' ಎನ್ನುವಂತೆ ಅವರಿಗೆ ಕೈಯಿಂದ ಸೂಚಿಸಿ ಮನೆಗೆ ಹೋದನು.

ವೃದ್ಧ ಗೋಶಾಯಿಯ ಮುಖದಲ್ಲಿ ಚೇಷ್ಟೆಯ ನಗು ಮಿಂಚುತ್ತಿತ್ತು. ನಮ್ಮ ತಂದೆ ತನ್ನನ್ನು ಹಿಡಿದು ಹಾಕಲು ವೃದ್ಧಗೋಶಾಯಿಯೂ ಸಹಾಯಕನಾಗಿರಬಹುದೇ ಎಂಬ ಅನುಮಾನ ರಾಜಣ್ಣನಿಗೆ ತನ್ನ ಜೀವಮಾನ ಪೂರ್ತಾ ನಿರ್ಣಯವಾಗಲಿಲ್ಲ. ಆ ಸಂಜೆ ರಾಜಣ್ಣ ಮತ್ತು ಅವರ ಮನೆಯವರೆಲ್ಲ ಗೋಶಾಯಿಗಳನ್ನು ನೋಡಲು ದೇವಸ್ಥಾನದ ಮಗ್ಗುಲ ಛತ್ರಕ್ಕೆ ಬಂದಾಗ ಅವರಾರೂ ಅಲ್ಲಿ ಇರಲಿಲ್ಲ. ರಾಜಣ್ಣನಿಗೆ ಪುನರ್ಜನ್ಮವುಂಟಾದ ಒಂದೆರಡು ಗಂಟೆಗಳಲ್ಲಿಯೇ ಗೋಶಾಯಿಗಳು ಛತ್ರ ಬಿಟ್ಟು ತಮ್ಮ ಯಾತ್ರೆಯನ್ನು ಮುಂದುವರಿಸಿಕೊಂಡು ಹೋಗಿದ್ದರು."

ಶೀನಣ್ಣ ಕತೆ ಮುಗಿಸಿದರು. ಶಿಂಗ್ರಾಚಾರಿ ಮಾತ್ರ "ಹಾಗಾದರೆ ರಾಜಣ್ಣನೂ ಹಿಂದಲ ರಾಜರಂತೆ ಅಶ್ವಮೇಧವನ್ನೇ ಮಾಡಿದಂತೆ ಆಯಿತು" ಎಂದನು. ಪುರೋಹಿತರು "ಇವನೂ ಗೋಹತ್ಯೆಗಾಗಿ ದೇಶವಲೆದ ಬಲರಾಮನೇ ಕಣಯ್ಯ. ಒಂದು ಕುದುರೆಯ ಸಾವಿರ ಕಾರಣನಾದುದಕ್ಕೆ ಇವನು ಹೀಗೆ ಹತ್ತು ವರುಷ ತಲೆ ತಪ್ಪಿಸಿಕೊಂಡು ತಿರುಗಿದನಲ್ಲ; ಈ ಕಾಲದಲ್ಲಿ ಖೂನಿ ಮಾಡಿದವರಿಗೆ ಮೆರವಣಿಗೆ ಮಾಡುತ್ತಾರಲ್ಲ ?" ಎಂದರು. ಆ ವೇಳೆಗೆ ನದಿ ತೀರದಲ್ಲಿ ತಂದೆಗೆ ಅಗ್ನಿಸಂಸ್ಕಾರ ಮುಗಿಸಿ, ಬಚ್ಚಯ್ಯ ಮೇಲಕ್ಕೆ ಬಂದನು. ಅವನ ದೊಡ್ಡ ಸಂಸಾರದ ಜನ–ತಮ್ಮಂದಿರು ಅಕ್ಕತಂಗಿಯರು, ಅವರ ಮಕ್ಕಳು ಮೊಮ್ಮಕ್ಕಳು–ಆಲದಮರದ ನೆರಳಿನಲ್ಲಿ ಕುಳಿತು ಮಾತನಾಡುತ್ತಿದ್ದರು. ಶೀನಣ್ಣ ಶಿಂಗ್ರಾಚಾರಿಗೆ "ನೋಡು, ಒಂದು ಬೇರಿನಿಂದ ಎಷ್ಟು ಗೊಂಚಲು ಹೂವು ಹೀಚು ಹಣ್ಣು ; ಎಲ್ಲವನ್ನೂ ಬಿಟ್ಟು ಆತುರ ಸನ್ಯಾಸದಲ್ಲಿ ಹೋಗಿದ್ದನಲ್ಲ" ಎಂದರು. ಅನಂತರ ಬಚ್ಚಯ್ಯನನ್ನು ಕುರಿತು "ಏನಪ್ಪ ರಾತ್ರಿ ಜ್ಞಾನವಾಗಿದ್ದನಂತಲ್ಲ. ಏನಾದರೂ ಹೇಳಿದನೇ" ಎಂದರು. ಬಚ್ಚಯ್ಯ "ಏನೂ ಇಲ್ಲ. ಅದಿರಲಿ. ಶೀನಣ್ಣನವರೆ, ಅರ್ಕಲಗೂಡು ಪರ್ವತಯ್ಯನಿಗೆ ನೂರು ರೂಪಾಯಿ

ಕೊಡಹೇಳಿದರಲ್ಲ. ಅವರಿಗೂ ನಮಗೂ ಲೇವಾದೇವಿ ಇದ್ದದ್ದೇ ನನಗೆ ಗೊತ್ತಿಲ್ಲವಲ್ಲ. ನಿಮಗೇನಾದರೂ ಗೊತ್ತೆ ?" ಎಂದನು. ಶೀನಣ್ಣನವರು "ಇದು ಲೇವಾದೇವಿಯ ಹಣವಲ್ಲಪ್ಪ ; ಅಶ್ವಮೇಧದ ಕುದುರೆಯ ಶುಲ್ಕ. ಅಶ್ವಮೇಧ ಮಾಡಿದವನು ಸಾಲಗಾರನಾಗಿ ಸಾಯುವುದೆ ?" ಎಂದರು.

ಬಚ್ಚಯ್ಯನಿಗೆ ವಿಚಾರ ಅರ್ಥವಾಗಲಿಲ್ಲ. ಆದರೆ ನಿಧಾನವಾಗಿ ಕೇಳೋಣ ಎಂದು ಅವನು ಆಗ ಸುಮ್ಮನಾದನು.

ಕ್ಷಮೆ

ಹನುಮಂತು ಪಟ್ಟಣಕ್ಕೆ ಎರಡು ಮೈಲಿ ದೂರದ ಹಳ್ಳಿಯಲ್ಲಿ ಒಂದೇ ತುಂಡು ಹೊಲವನ್ನಿಟ್ಟುಕೊಂಡು ಸಾಗುವಳಿ ಮಾಡುತ್ತಾ ಜೀವನ ಮಾಡುತ್ತಿದ್ದ. ಗಟ್ಟಿಗಿತ್ತಿಯಾದ ಅವನ ಹೆಂಡತಿ ನಾಗಿ, ವ್ಯವಸಾಯದ ಕಾರ್ಯದಲ್ಲಿ ಸಹ ಅವನಿಗೆ ಹೆಚ್ಚು ಶ್ರಮವನ್ನು ಕೊಡುತ್ತಿರಲಿಲ್ಲ. ಉಳುವ ಕೆಲಸ ಮಾತ್ರ ಹನುಮಂತುವಿನ ಪಾಲಿಗೆ ಬಿದ್ದಿತ್ತು. ಉಳಿದ ಬಿತ್ತನೆ,ಕಳೆ ಕುಯ್ಯುವುದು, ಒಕ್ಕುವುದು ಎಲ್ಲ ಕಾರ್ಯಗಳನ್ನು ನಾಗಿಯೇ ಮಾಡಿಕೊಳ್ಳುತ್ತಿದ್ದಳು. ಹೊಲದಲ್ಲಿ ಬೆಳೆಯುತ್ತಿದ್ದ ರಾಗಿ, ಇಬ್ಬರು ಮಕ್ಕಳು ಮತ್ತು ಗಂಡ ಹೆಂಡಿರ ಆ ನಾಲ್ವರ ಸಂಸಾರಕ್ಕೆ ಸಾಕಾಗುತ್ತಿರಲಿಲ್ಲ. ಆದರೆ ನಾಗಿ ಹೇಗೋ ಬುದ್ಧಿವಂತಿಕೆಯಿಂದ ಸಂಸಾರ ಸಾಗಿಸುತ್ತಿದ್ದಳು. ಹೊಲದಲ್ಲಿಯೂ ಸಣ್ಣ ಹಿತ್ತಲಿನಲ್ಲಿಯೂ ಯಾವಾಗಲೂ ಕಿರಾಣಿ ತರಕಾರಿ ಇರುತ್ತಿದ್ದವು. ಹತ್ತಿರದಲ್ಲಿದ್ದ ಪಟ್ಟಣದಲ್ಲಿ ನಾಗಿ ಅವನ್ನು ಮಾರಿ ಬೇಕಾದ ಉಪ್ಪು ಎಣ್ಣೆ ಕೊಂಡುಕೊಂಡು ಬರುತ್ತಿದ್ದಳು. ತನ್ನ ಮನೆಯ ಗುಳ್ಳ ಹಸುವಿನ ಒಂದುವರೆ ಪಾವು ಹಾಲಿನ ಜೊತೆಗೆ, ಹಳ್ಳಿಯ ಇತರ ಮನೆಗಳ ಒಂದು ಸೇರು ಹಾಲನ್ನು ಕೊಂಡುಕೊಂಡು, ಎಲ್ಲವನ್ನೂ ಪಟ್ಟಣದಲ್ಲಿ ಹೋಗಿ ಮಾರುತ್ತಿದ್ದಳು. ಭೂಮಿಯ ಕೆಲಸವಿಲ್ಲದಿದ್ದಾಗ ಪಟ್ಟಣದ ಕಂಟ್ರಾಕ್ಟರುಗಳ ಹತ್ತಿರ ಮಣ್ಣು, ಇಟ್ಟಿಗೆ, ಗಾರೆ ಹೊರುವ ಕೂಲಿಯ ಕೆಲಸವನ್ನು ಮಾಡುತ್ತಿದ್ದಳು. ಅಂತೂ ನಾಗಿ ಯಾವಾಗಲೂ ಕೆಲಸ ಮಾಡುತ್ತಲೇ ಇರುತ್ತಿದ್ದಳು. ಹನುಮಂತು ಯಾವಾಗಲೂ ಕುಳಿತುಕೊಂಡು ಬೀಡಿ ಸೇದುತ್ತಾ ಕಾಲಹಾಕುತ್ತಿದ್ದನು. "ಇವನಷ್ಟು ಸುಖಿಯೂ,ನಿರ್ಲಿಪ್ತನೂ ಯಾರೂ ಇಲ್ಲ. ಎಲ್ಲ ಭಾರವನ್ನೂ ಹೆಂಡತಿಯ ಮೇಲೆ ಹೊರಿಸಿ ಬೇಜವಾಬ್ದಾರಿಯಿಂದಿದ್ದಾನೆ. ಅಂತಹ ಪುಣ್ಯಾತ್ಗಿತ್ತಿ ಹೆಂಡತಿ ಎಲ್ಲರಿಗೂ ದೊರೆಯುವುದಿಲ್ಲ" ಎಂದು ಹಳ್ಳಿಯವರು ಹೇಳುತ್ತಿದ್ದರು.

ಹನುಮಂತುವಿನ ಮಗ್ಗುಲು ಮನೆಯ ಪುಟ್ಟ, ಸಮೀಪದ ಪಟ್ಟಣಕ್ಕೆ ಹೋಗಿ ಸಾಹುಕಾರರ ಸರ್ವಿಸ್ ಬಸ್ಸಿನಲ್ಲಿ ಮೊದಲು ಕ್ಲೀನರ್ ಆಗಿ ಸೇರಿ

ಈಚೆಗೆ ಕಂಡಕ್ಟರ್ ಆಗಿ ತಿಂಗಳಿಗೆ ನಲವತ್ತು ರೂಪಾಯಿ ಸಂಬಳ ತರುತ್ತಿದ್ದ. ದುಡ್ಡಿನ ಮುಖವನ್ನೇ ಸಾಧಾರಣವಾಗಿ ಕಾಣದೆ ಇದ್ದ ಹಳ್ಳಿಯಲ್ಲಿ, ತಿಂಗಳಿಗೆ ನಲವತ್ತು ರೂಪಾಯಿ ಎಂದರೆ ಸಾಮಾನ್ಯವಲ್ಲ. ಪುಟ್ಟನನ್ನು ಹಳ್ಳಿಯವರೆಲ್ಲ ಧನಿಕನೆಂದು ಭಾವಿಸುತ್ತಿದ್ದುದಲ್ಲದೆ ಅವನ ಮನೆಯಲ್ಲಿ ಅವನ ಗೌರವ ತುಂಬ ಏರಿತು. ಒಂದು ಭಾನುವಾರದ ರಜಾ ದಿನ ಪುಟ್ಟ ಹಳ್ಳಿಗೆ ಬಂದು, ಕಾಕಿ ಶರಾಯಿನ ಜೇಬಿನಲ್ಲಿ ಕೈಹಾಕಿಕೊಂಡು, ಠೀವಿಯಿಂದಲೂ ಉದಾಸೀನ ಧೋರಣೆಯಿಂದಲೂ ಬೀಡಿ ಸೇದುತ್ತಾ ನಿಂತಿದ್ದನು. ಹನುಮಂತು ಅವನ ಸಮೀಪಕ್ಕೆ ಬಂದು, ಅವನಿಂದ ತಾನೂ ಒಂದು ಬೀಡಿ ತೆಗೆದುಕೊಂಡು ಸೇದುತ್ತಾ ಮಾತನಾಡುತ್ತಾ ನಿಂತುಕೊಂಡನು. ಮೋಟಾರು ಕಂಡಕ್ಟರನ ಜೀವನವನ್ನು ಕುರಿತು ಪುಟ್ಟ ಹೇಳಿದ ಮಾತುಗಳು ಹನುಮಂತುವಿಗೆ ಬಹಳ ಆಕರ್ಷಣೀಯವಾಗಿ ತೋರಿದುವು. ಆ ಸಂಜೆ ಪುಟ್ಟ ಪಟ್ಟಣಕ್ಕೆ ಹೊರಟಾಗ ಅವನ ಜತೆ ಹನುಮಂತುವೂ ಹೊರಟನು.

ಮರುದಿವಸ ಸಂಜೆ ಹನುಮಂತು ಹಳ್ಳಿಗೆ ಹಿಂದಿರುಗಿ ನಾಗಿಗೆ "ನಾನೂ ಬಸ್ ಕ್ಲೀನರ್ ಆಗಿ ಸೇರಿದೆ. ಈಗ ತಿಂಗಳಿಗೆ ಹದಿನೆಂಟು ರೂಪಾಯಿ ಸಂಬಳ. ಎರಡು ವರ್ಷ ಕಳೆಯುವುದರೊಳಗಾಗಿ ಕಂಡಕ್ಟರ್ ಆಗುತ್ತೇನೆ. ತಿಂಗಳಿಗೆ ೩೦-೩೫ ತರಬಲ್ಲೆ. ನನ್ನ ಜೀವನ ಹೇಗೋ ಬಸ್‌ನಲ್ಲಿ ಕಳೆದು ಹೋಗುತ್ತೆ. ತಿಂಗಳಿಗೆ ಮುವ್ವತ್ತು ರೂಪಾಯಿ ಸಿಕ್ಕಿದರೆ ನಮ್ಮ ಸಂಸಾರಕ್ಕೆ ಎಷ್ಟೋ ವಾಸಿ. ಈ ಒಂದು ತುಂಡು ಹಾಳು ಹೊಲದಿಂದ ಏನಾಗುತ್ತೆ ? ಮಳೆ ಹೋದರೆ ನಾಲ್ಕು ಜಳ್ಳು ರಾಗಿಕಾಳೂ ಸಿಕ್ಕುವುದಿಲ್ಲ" ಎಂದನು. ನಾಗಿ ರಾಗಿಯನ್ನು ಕೇರುತ್ತಿದ್ದವಳು, ಯಾವ ಪ್ರತ್ಯುತ್ತರವನ್ನೂ ಕೊಡಲಿಲ್ಲ. ಅಷ್ಟರಲ್ಲಿಯೇ ಹನುಮಂತು ಮತ್ತೆ "ನಾನು ಇಲ್ಲಿ ಮಾಡುತ್ತಿರುವ ಕಾರ್ಯವೂ ಏನೂ ಇಲ್ಲ. ಸುಮ್ಮನೆ ತಿಂದುಕೊಂಡು ಕೂತಿದ್ದೇನೆ. ಮಕ್ಕಳನ್ನು ಕಾಪಾಡುವ ಹೊರೆಯೆಲ್ಲ ನಿನ್ನ ಮೇಲೆಯೇ ಬಿದ್ದಿದೆ. ಮಾಡೋಕೆ ಯಾವ ಕೆಲಸವೂ ಇಲ್ಲವೇ ಇಲ್ಲ. ಇದ್ದರೆ ಮಾಡುತ್ತಿದ್ದೆ. ಈಗ ನಾನು ಹೋಗಿ ತಿಂಗಳಿಗೆ ಹದಿನೈದು ರೂಪಾಯಿ ಕಳುಹಿಸಿದರೂ ನಿನಗೆ ಎಷ್ಟೋ ಸಹಾಯ ವಾಗುತ್ತೆ" ಎಂದನು. ನಾಗಿಯು "ಹೇಗೋ ಆಗುತ್ತೆ ಇರಿ. ಅಲ್ಲಿಂದ ನೀವು ದುಡ್ಡು ಕಳುಹಿಸುವುದು ಅಷ್ಟರಲ್ಲಿಯೇ ಇದೆ. ಅಲ್ಲಿ ಬರುವುದು ನಿಮಗೇ

ಸಾಕಾಗುವುದಿಲ್ಲ. ಮಗ್ಗಲು ಮನೆ ಪುಟ್ಟನ್ನ ನೋಡಿ. ನಲವತ್ತು ಐವತ್ತು ಸಂಪಾದಿಸುತ್ತೀನೆ ಎನ್ನುತ್ತಾನೆ. ಮನೆಗೆ ಒಂದು ಕಾಸನ್ನೂ ಕೊಟ್ಟಿಲ್ಲ. ಅವನ ಬೀಡಿ, ಅವನ ಊಟ ಅವನ ಬಟ್ಟೆಗೇ ಸಾಲದು ಆತನಿಗೆ ಬರುವ ದುಡ್ಡು. ಮೊನ್ನೆ ಬಂದಿದ್ದಾಗ ಮನೆಯಿಂದಲೇ ಪಂಚೆ ಕಂಬಳಿ ಎಲ್ಲ ತೆಗೆದು ಕೊಂಡು ಹೋದ" ಎಂದು ಹೇಳಿ "ನನಗೇನೂ ಕಷ್ಟವಿಲ್ಲ. ನೀವು ಸುಮ್ಮನೆ ಮನೆಯಲ್ಲಿ ಕುಳಿತಿದ್ದರೇ ಕೆಲಸಮಾಡಲು ನನಗೆ ಎಷ್ಟೋ ಆನಂದ" ಎಂದಳು. ಹನುಮಂತು "ನಿನ್ನ ಕಷ್ಟವನ್ನು ತಪ್ಪಿಸುವುದಕ್ಕೇ ನಾನು ಹೋಗುವುದು. ವಾರ ಬರುತ್ತಲೇ ಇರುತ್ತೇನೆ. ದೂರವೂ ಇಲ್ಲ" ಎಂದು ಹೇಳಿ ಹೊರಟೇ ಹೋದನು. ಹೀಗೆ ಅವನು ಕ್ಲೀನರ್ ಆಗಲು ಹೋಗಿದ್ದಾನೆ ಎಂಬುದು ಹಳ್ಳಿಯವರಿಗೆ ತಿಳಿದಾಗ ಅವರು 'ಹೋಗಲಿ, ಸುಮ್ಮನೆ ಮನೇಲಿ ಕೂತು ತಿನ್ನುತ್ತಾ ಇದ್ದ. ಅವನಿಗಾಗಿ ದುಡಿಯುವುದಾದರೂ ನಾಗಿಗೆ ಕಡಿಮೆ ಯಾಯಿತು' ಎಂದುಕೊಂಡರು. ಅವನಿಂದ ನಾಗಿಗೆ ದುಡ್ಡಿನ ಸಹಾಯ ವಾಗಬಹುದೆಂಬ ದೂರದ ಆಸೆ ಸಹ ಅವರಾರಿಗೂ ಇರಲಿಲ್ಲ. ಪಟ್ಟಣಕ್ಕೆ ಸಮೀಪವಾಗಿದ್ದ ಆ ಹಳ್ಳಿಯಿಂದ ಅವರಿಗೆ ಈ ಅನುಭವವುಂಟಾಗಿತ್ತು.

ಹನುಮಂತು ಪ್ರಾರಂಭದಲ್ಲಿ ವಾರಕ್ಕೆ ಒಂದು ಸಲ ಹಳ್ಳಿಗೆ ಬರುತ್ತಿದ್ದನು. ಜಗಲಿಯ ಮೇಲೆ ಬೀಡಿ ಸೇದುತ್ತಾ ನಾಗಿ ಒಳಕ್ಕೆ ಊಟಕ್ಕೆ ಕರೆಯುವವರೆಗೆ ಸುಮ್ಮನೆ ಕುಳಿತಿರುತ್ತಿದ್ದನು. ಅವನ ಎರಡೂ ಮಕ್ಕಳೂ ಒಂದೊಂದು ಗಳಿಗೆ ಅವನ ಬಳಿ ಬಂದು ಕುಳಿತು ಆಟವಾಡುತ್ತಿದ್ದವು. ಅವನು ಬಂದ ಭಾನುವಾರ ನಾಗಿ, ಒಳ್ಳೆಯ ತರಕಾರಿಗಳನ್ನೂ ಕಾಳುಗಳನ್ನೂ ಹೊಂದಿಸಿ ರುಚಿ ರುಚಿಯಾಗಿ ಅಡಿಗೆ ಮಾಡುತ್ತಿದ್ದಳು. ನೆರೆಹೊರೆಯವರು "ಏನಪ್ಪಾ, ಹೋಟಲು ಅನ್ನ ಬೇಜಾರು ಬಂತೋ ?" ಎಂದು ಹಾಸ್ಯಮಾಡುತ್ತಿದ್ದರು. ಎರಡು ಮೂರು ವಾರಗಳ ನಂತರ ಹನುಮಂತು ಮತ್ತೆ ಹಳ್ಳಿಗೆ ಬಂದನು. ನಾಗಿ ಗೊಬ್ಬರ ವನ್ನು ಹೊತ್ತುಕೊಂಡು ಹೊಲಕ್ಕೂ ಮನೆಗೂ ಓಡಾಡುತ್ತಿದ್ದಳು. ಅನಂತರ ದನಕರುಗಳನ್ನು ಹೊಲದ ಬದುವಿನಲ್ಲಿ ಕಟ್ಟಿಹಾಕಿ, ಅದೇ ಜೋಲಿಯ ಪುರಲೆ ಗಳನ್ನು ಆರಿಸಿಕೊಂಡು ಬಂದು, ರೊಟ್ಟಿ ಹಾಕಿ, ಮಕ್ಕಳಿಗೂ ಹನುಮಂತು ವಿಗೂ ಕೊಟ್ಟಳು. ಅನಂತರ ನಾಗಿ ಅಡಿಗೆಯ ಕೆಲಸಕ್ಕೆ ತೊಡಗಿ, ಮಧ್ಯೆ ಮಧ್ಯೆ ಇತರ ಸಣ್ಣ ಸಣ್ಣ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದಳು. ಅವಳು

ಅಡಿಗೆಯ ಮನೆಯಲ್ಲಿದ್ದಾಗ ಹನುಮಂತು ಎರಡು ಮೂರು ಸಲ ಅಲ್ಲಿಗೆ ಹೋದನು. ಅವಳಿಗೆ ಏನೋ ಹೇಳಬೇಕೆಂದು ಅವನ ಮನಸ್ಸಿಗೆ ತೋರಿತ್ತು. ಆದರೆ ಏಕೋ ಹೇಳಲು ಧೈರ್ಯವಿಲ್ಲದೆ ಅವನು ತಳಮಳಿಸುತ್ತಿದ್ದನು. ಅವಳು ಹೊಲಕ್ಕೂ ಮನೆಗೂ ಹೋಗಿ ಬರುತ್ತಿರುವಾಗಲೂ ಅವನು ಅವಳ ಚಲನ ವಲನಗಳನ್ನು ಅದೇ ರೀತಿಯಾದ ಅಧೈರ್ಯದ ನೋಟದಿಂದ ಅನುಸರಿಸುತ್ತಿದ್ದನು. ಗಂಡ ಏನೋ ಹೇಳಬೇಕಾದುದಿದೆ ಎಂಬುದು ನಾಗಿಗೆ ಅರ್ಥವಾಯಿತು. ಅವಳು ಅಡಿಗೆ ಮಾಡಿ ಹನುಮಂತುವಿಗೂ ಮಕ್ಕಳಿಗೂ ಊಟ ಮಾಡಿಸುವವರೆಗೆ ಹನುಮಂತು ಮಾತನಾಡುವ ಧೈರ್ಯ ಮಾಡಲಿಲ್ಲ.

ನಾಗಿಗೆ ಊಟವಾದ ಮೇಲೆ ಹನುಮಂತು ಮಾತನಾಡಿದ. "ನಾಗಿ, ನಾನು ಕ್ಲೀನರ್ ಆಗಲು ಹೋದದ್ದು ಸರಿಯಷ್ಟೆ ? ಕ್ಲೀನರ್ ಕೆಲಸ ಒಂದು ಕೆಲಸವೇ ಅಲ್ಲ. ಅದರಲ್ಲಿ ಮುಂದಕ್ಕೂ ಯಾವ ಫಾಯಿದೇನೂ ಇಲ್ಲ. ಒಂದು ದಿನ ಕ್ಲೀನರ್ ಆದವನು, ಇಪ್ಪತ್ತು ವರ್ಷವೂ ಕ್ಲೀನರೇ. ನಾನು ಕ್ಲೀನರ್ ಆಗಿ ಸೇರಿದುದು ಒಳ್ಳೆಯದಾಗಲಿಲ್ಲ, ಹೋಗಬಾರದಿತ್ತು" ಎಂದನು. ನಾಗಿಯು ಉದಾಸೀನದಿಂದ "ಈಗ ತಾನೇ ಆದದ್ದೇನು ? ಹೋಗಲಿ ಬಿಟ್ಟು ಬಿಡಿ" ಎಂದಳು. ಹನುಮಂತು "ಬಿಟ್ಟು ಮನೆಯಲ್ಲಿ ಕುಳಿತುಕೊಳ್ಳುವುದಲ್ಲ. ಕೆಲಸಮಾಡುವವನಿಗೆ ಈಗ ಪಟ್ಟಣಗಳಲ್ಲಿ ನೂರಾರು ಮಾರ್ಗಗಳಿವೆ. ಮೋಟಾರಿನ ಡ್ರೈವರಿಗೆ ಈಗ ಬಹಳ ಗಿರಾಕಿ. ನಿತ್ಯಾ ನೂರಾರು ಹೊಸ ಲೈಸೆನ್ಸ್‌ಗಳನ್ನು ಸರ್ಕಾರ ಮಂಜೂರ್ಮಾಡುತ್ತಿದೆ. ನಾನೂ ಡ್ರೈವರ್ ಆಗಬೇಕೆಂದು ತೀರ್ಮಾನಿಸಿದ್ದೇನೆ" ಎಂದನು. ಕ್ಲೀನರ್‌ಗಿಂತ ಡ್ರೈವರನ ಜಬರ್ಜ ಹೆಚ್ಚೆಂಬುದು ನಾಗಿಗೆ ಗೊತ್ತಿತ್ತು. ಡ್ರೈವರನ ಠೀವಿಯನ್ನೂ ಕಪ್ಪು ಕನ್ನಡಕವನ್ನೂ, ಅವನು ಕ್ಲೀನರ್‌ನನ್ನು ಗದರಿಸುತ್ತಿದ್ದ ಗಂಡು ಧ್ವನಿಯನ್ನೂ ನಾಗಿ ಅರಿತಿದ್ದಳು. ಹನುಮಂತು ಡ್ರೈವರ್ ಆಗುವುದನ್ನು ಕೇಳಿ ಅವಳಿಗೆ ಸಂತೋಷವಾಯಿತು. ಅವಳು "ನಿಮ್ಮ ಇಷ್ಟ ಹೇಗೋ ಹಾಗೇ ಮಾಡಿ" ಎಂದು ಹೊಲದ ಕಡೆ ಹೊರಟಳು.

ಹನುಮಂತು ಅಧೀರನಾಗಿಯೇ "ನಿಲ್ಲು ನಿಲ್ಲು ಓಡಬೇಡ, ಈಗ ಡ್ರೈವರ್ ಆಗಬೇಕಾದರೆ ನೂರ ಐವತ್ತು ರೂಪಾಯಿ ಖರ್ಚು ಇದೆ" ಎಂದನು. ನಾಗಿ ಹೊರಟಿದ್ದವಳು ಬೆಚ್ಚಿಬಿದ್ದು ಅಲ್ಲಿಯೇ ನಿಂತಳು. ಅವಳ

ಲೆಕ್ಕಾಚಾರ ಯಾವಾಗಲೂ ನೂರೈವತ್ತು ರೂಪಾಯಿವರೆಗೆ ಹೋಗಿಯೇ ಇರಲಿಲ್ಲ. ಅವಳು ತನ್ನ ಜೀವಮಾನದಲ್ಲಿ ಒಟ್ಟಿಗೆ ಹತ್ತು ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನೋಡಿಯೇ ಇರಲಿಲ್ಲ. ಆ ಮೊತ್ತದ ಆಧಿಕ್ಯವನ್ನು ಕೇಳಿ ಆಕೆ, ಅದು ತನಗೆ ಸಂಬಂಧಪಡದ ಅಂಕವೆಂದುಕೊಂಡು "ಅಬ್ಬ! ಅಷ್ಟೊಂದು ಹಣ ಎಲ್ಲಿಂದ ತರುತ್ತೀರಿ?" ಎಂದು ಕೇಳಿದಳು. ಹನುಮಂತು ಮತ್ತೆ, ಡ್ರೈವರಾಗುವುದರಿಂದ ಉಂಟಾಗುವ ಲಾಭಗಳನ್ನೆಲ್ಲ ವಿವರಿಸಿ, ಡ್ರೈವರಾದ ಮೇಲೆ ಮೂರೇ ತಿಂಗಳಿನಲ್ಲಿ ಸಂಬಳದ ಸಾಲವನ್ನು ಬಡ್ಡಿಸಹಿತ ತೀರಿಸಲು ಸಾಧ್ಯವಾಗುವುದೆಂದು ಹೇಳಿದನು. ನಾಗಿ "ಅದೆಲ್ಲ ಸರಿ. ಆದರೆ ಈಗ ನೂರೈವತ್ತು ರೂಪಾಯಿ ಎಲ್ಲಿಂದ ತರುತ್ತೀರಿ?" ಎಂದು ಕೇಳಿದಳು. ಹನುಮಂತು ಮುಗುಳುನಗೆ ನಗುತ್ತಾ "ಅದನ್ನೇ ಹೇಳುವುದಕ್ಕೆ ಬಂದೆ. ಡ್ರೈವರ್ ಕೆಲಸ ಕಲಿಸುವವರಿಗೆ ನೂರೈವತ್ತು ರೂಪಾಯಿ ಕೊಟ್ಟುಬಿಟ್ಟರೆ, ಐವತ್ತು ರೂಪಾಯಿ ಉಳಿತಾಯವಾಗುತ್ತೆ. ಇಲ್ಲದಿದ್ದರೆ ನಾಲ್ಕು ತಿಂಗಳು ತಿಂಗಳಿಗೆ ಐವತ್ತು ರೂಪಾಯಿಗಳಂತೆ ಇನ್ನೂರು ಕೊಡಬೇಕಾಗುತ್ತದೆ" ಎಂದನು. ನಾಗಿ ಮಂಕಳಾಗಿ ಮಾತನಾಡದೆ ನಿಂತಿದ್ದಳು. ಇನ್ನು ಮಾತುಗಳನ್ನು ತಾನೇ ಮುಂದುವರಿಸಬೇಕೆಂದು ಹನುಮಂತುವಿಗೆ ತೋರಿತು. ಆವನು ಮತ್ತೆ ಅಧೀರನಾಗಿ "ಮಗ್ಗಲು ಮನೆಯ ಪುಟ್ಟನ ಅಪ್ಪ, ನೂರೈವತ್ತು ರೂಪಾಯಿ ಸಾಲ ಕೊಡಲು ಒಪ್ಪಿದ್ದಾನೆ" ಎಂದನು. ನಾಗಿಯು ಆ ಸುದ್ದಿಯನ್ನು ಅರಗಿಸಿಕೊಳ್ಳುವುದರೊಳಗೆ "ಹೊಲ ಮನೆ ಅವನಿಗೆ ಭೋಗ್ಯ ಮಾಡಿದೆ. ಪತ್ರ ನಿನ್ನೆ ರಿಜಿಸ್ಟರ್ ಆಯಿತು. ನಾವೇನೂ ಯೋಚಿಸಬೇಕಾದದ್ದಿಲ್ಲ. ಹೊಲ ನಮ್ಮ ಸ್ವಾಧೀನದಲ್ಲೇ ಇರುತ್ತೆ. ಹೆಸರಿಗೆ ಭೋಗ್ಯ, ಬಡ್ಡಿ ಕೊಟ್ಟುಕೊಂಡು ಹೋದರೆ ಆಯಿತು. ಮನೆಯನ್ನು ಸುಮ್ಮನೆ ಅವನು ಹೇಳದುದರಿಂದ ಪತ್ರಕ್ಕೆ ಸೇರಿಸಿದೆ. ನಮ್ಮ ಮನೆಯಿಂದ ನಮ್ಮನ್ನು ಬಿಡಿಸುವವರು ಯಾರು?" ಎಂದನು.

ನಾಗಿಗೆ ಇದ್ದಕ್ಕಿದ್ದಂತೆ ಯಾರೋ ಸುತ್ತಿಗೆಯಲ್ಲಿ ತಲೆಯ ಮೇಲೆ ಇಡಿದ ಭಾವವುಂಟಾಯಿತು. ಅವಳು ಜಗುಲಿಯ ಮೇಲೆ ಮೆಲ್ಲನೆ ಕುಳಿತಳು. ಹತ್ತು ನಿಮಿಷ ಅವಳಿಗೆ ತಾನು ಎಲ್ಲಿರುವೆನೆಂಬುದೇ ಗೊತ್ತಾಗಲಿಲ್ಲ. ಹನುಮಂತು "ಏನೂ ಯೋಚಿಸಬೇಡ, ಹೊಲ ಮನೆ ನಮ್ಮ ಸ್ವಾಧೀನದಲ್ಲಿಯೇ

ಇರುತ್ತವೆ. ಅಡಿಕೆ ಕಡಿಯುವುದರೊಳಗೆ ಹಣ ತೀರಿಸಿಬಿಡುತ್ತೇನೆ" ಎಂದು ಹೇಳಿದುದು ಅವಳಿಗೆ ಕನಸಿನಂತೆ ತೋರಿತು. ಮುಂದಲ ಗಳಿಗೆಯಲ್ಲಿಯೇ ಹನುಮಂತು ಪಟ್ಟಣಕ್ಕೆ ಹೊರಟುಹೋದನು. ನಾಗಿ ಬಹಳ ಹೊತ್ತು ಯೋಚಿಸುತ್ತಾ ಜಗಲಿಯ ಮೇಲೆ ಕುಳಿತಿದ್ದಳು. ವಂಶಪಾರಂಪರ್ಯವಾಗಿ ಬಂದಿದ್ದ ಒಂದು ಮುರುಕು ಮನೆ, ಒಂದು ತುಂಡು ಕಲ್ಲು ಹೊಲ. ಹನ್ನೆರಡು ತಿಂಗಳು ಕೆಲಸಮಾಡಿದರೂ ತಾನು ಇಬ್ಬರು ಮಕ್ಕಳು, ಗಂಡ ಇವರ ಹೊಟ್ಟೆ ತುಂಬುತ್ತಿರಲಿಲ್ಲ. 'ಆದರೂ ಹಳ್ಳಿಯಲ್ಲಿ ಮನೆ ಇದೆ, ಜಮೀನಿದೆ' ಎಂದು ಕೂಲಿ ಮಾಡುತ್ತ ಹೇಗೋ ಹೊಟ್ಟೆ ಹೊರೆಯುತ್ತಿದ್ದವಳಿಗೆ ಅದೂ ಹೋಯಿತೆಂಬ ಭಾವ ಬಂದಿತ್ತು. ಪಟ್ಟಣ ನಮ್ಮನ್ನೂ ನುಂಗಿತು ಎಂದು ಅವಳು ನಿರ್ಣಯಿಸಿಕೊಂಡಳು. ನಾಗಿ ಅಂದಿನ ಸಂಜೆಯವರೆಗೆ ಹಾಗೆಯೇ ಮಂಕಾಗಿ ಕುಳಿತಿದ್ದಳು. ಅವಳ ಮಕ್ಕಳು ಬಂದು ಅವಳ ಸುತ್ತಾ ಅಳುತ್ತಿದ್ದುದೂ ಅವಳಿಗೆ ಲಕ್ಷ್ಯವಿರಲಿಲ್ಲ. ಹೊಲದ ಬದುವಿನಲ್ಲಿ ಕಟ್ಟಿದ್ದ ಹಸುಗಳು, ಪದ್ಧತಿಯಂತೆ ನಾಗಿ ಬಂದು ತಮ್ಮನ್ನು ಬದಲಾಯಿಸಿ ಬೇರೆ ಕಡೆಗೆ ಕಟ್ಟದುದರಿಂದ, ತಾವೂ ಮಂಕಾಗಿ ಮೇವು ಬಿಟ್ಟು ನಿಂತಲ್ಲಿಯೇ ನಿಂತಿದ್ದವು. ಕೆಲಸವನ್ನು ಬಿಟ್ಟು ಎಂದೂ ಹೀಗೆ ಸುಮ್ಮನೆ ಕುಳಿತುಕೊಳ್ಳದಿದ್ದ ನಾಗಿ, ಜಗಲಿಯಿಂದ ಅಲುಗಾಡದುದನ್ನು ಕಂಡು, ಹಳ್ಳಿಯ ಜನರಿಗೆಲ್ಲ ಒಂದು ವಿಧವಾದ ಮಂಕು ಕವಿದಂತೆ ಆಯಿತು. ನಿಧಾನವಾಗಿ ವಿಷಯ ಅವರಿಗೆ ಪುಟ್ಟನ ತಂದೆಯಿಂದ ಗೊತ್ತಾದಾಗ ಅವರು "ಹನುಮಂತು ಹೆಂಡತಿ ಮಕ್ಕಳನ್ನು ನೀಗಿದ" ಎಂದುಕೊಂಡು ಖಿನ್ನರಾದರು.

ಹನುಮಂತು ಮಾಮೂಲಿನಂತೆ ತಿಂಗಳಿಗೆ ಒಂದು ದಿನ ಹಳ್ಳಿಗೆ ಬರುತ್ತಿದ್ದ. ನಾಗಿಯ ಮನಸ್ಸು ಮೊದಲಿನಂತೆ ಹಗುರವಾಗಿಲ್ಲದಿದ್ದರೂ, ಅವಳಿಗೆ ಹನುಮಂತುವಿನಲ್ಲಿ ಪ್ರೀತಿ ಗೌರವವು ಸ್ವಲ್ಪವೂ ಕಡಿಮೆಯಾಗಲಿಲ್ಲ. ಅವಳು ಎಂದಿನಂತೆಯೇ, ಹನುಮಂತು ಬಂದ ದಿನ ಸಂಭ್ರಮದಿಂದಲೇ, ಹೆಚ್ಚುಗಟ್ಟಲೆ ಅಡಿಗೆ ಮಾಡಿ ಅವನನ್ನು ಆದರಿಸುತ್ತಿದ್ದಳು. ಅವಳು ಮುಂದೆ, ಹೊಲ ಮನೆ ಭೋಗ್ಯ ಇವುಗಳ ಮಾತನ್ನು ಎತ್ತಲಿಲ್ಲ. ಅವಳು ಮತ್ತೆ ಮಾತನಾಡಿದರೆ ಅವನಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಪ್ರತ್ಯುತ್ತರ ಕೊಡಬೇಕೆಂದು ಹನುಮಂತು ಸಿದ್ಧಮಾಡಿಕೊಂಡಿದ್ದನು. 'ಇವಳು ಕೋಪಿಸಿಕೊಂಡರೂ ಚಿಂತೆಯಿಲ್ಲ.

ಕೂಗಾಡಿದರೂ ಚಿಂತೆಯಿಲ್ಲ. ಅಷ್ಟು ಗೋಳಾಡಿದರೂ ಸರಿ. ಏನನ್ನಾದರೂ ಮಾಡಿದರೂ, ಅವಳಿಗೆ ತಾನು ಮಾಡಿರುವುದು ನ್ಯಾಯ'ಎಂಬುದನ್ನು ತೋರಿಸಬಹುದೆಂಬುದು ಹನುಮಂತುವಿನ ನಂಬಿಕೆಯಾಗಿತ್ತು. ಆದರೆ ನಾಗಿ ತನ್ನ ಅಸಮ್ಮತಿಯನ್ನಾಗಲೀ ಕೋಪವನ್ನಾಗಲೀ ಯಾವ ರೀತಿಯಿಂದಲೂ ತೋರಿಸದುದರಿಂದ, ಹನುಮಂತು ವಿಧಿಯಿಲ್ಲದೆ ಸುಮ್ಮನಾಗಬೇಕಾಯಿತು. ನಾಗಿಯ ಮನಸ್ಸಮಾಧಾನವನ್ನು ಕಂಡು ಅವನ ಮೈಮೇಲೆ ಮುಳ್ಳು ಏಳುತ್ತಿತ್ತು.

ಏಳು ಎಂಟು ತಿಂಗಳು ಕಳೆಯುವುದರೊಳಗಾಗಿ, ಹನುಮಂತು ಡ್ರೈವರ್ ಆಗಿ ಲೈಸೆನ್ಸ್ ಸಂಪಾದಿಸಿಕೊಂಡನು. ಆತನು ಮೊದಲು ಹೇಳಿದ್ದಂತೆ ತಿಂಗಳಿಗೆ ೬೦-೭೦ ರೂ. ಸಂಬಳ ತರತೊಡಗಿದನು. ಆದರೆ ಅದರಿಂದ ಒಂದು ಕಾಸನ್ನೂ ಸಹ ಅವನು ನಾಗಿಗೇ ಆಗಲೀ ಮನೆಯ ಉಪ್ಪು ಸೊಪ್ಪಿಗಾಗಲೀ ಕೊಡಲಿಲ್ಲ. ತನ್ನ ಮಕ್ಕಳಿಗೆ ಒಂದು ಹೊಸ ಬಟ್ಟೆಯನ್ನು ಸಹ ಅವನು ತಂದು ಕೊಡಲಿಲ್ಲ. ನಾಗಿ ಒಂದೆರಡು ಸಲ, ಭೋಗ್ಯದ ಸಾಲ ತೀರಿಸುವಂತೆ ಅವನಿಗೆ ಸೂಚಿಸಿದಳು. ಹನುಮಂತು ಉದಾಸೀನದಿಂದ "ಅದ್ಯಾವ ಲೆಕ್ಕ. ತಿಂಗಳು ತಿಂಗಳು ಕೊಡಬೇಕೆ ? ಒಂದು ತಿಂಗಳ ಸಂಪಾದನೆ ತಂದು ಒಂದೇ ಗಂಟಿನಲ್ಲಿ ಕೊಟ್ಟುಬಿಟ್ಟರೆ ಆಯಿತು" ಎಂದನು. ನಾಗಿ ಮಾತನಾಡದೆ ಸುಮ್ಮನಾದಳು. ಹನುಮಂತು ತಾನು ಸಂಪಾದಿಸುತ್ತಿದ್ದೇನೆಂದು ಹೇಳುತ್ತಿದ್ದ ಹಣವನ್ನೆಲ್ಲ, ಬೀಡಿ, ಸಿಗರೇಟು, ಹೋಟಲು ತಿಂಡಿ, ಬಟ್ಟೆಗಳು ಇವುಗಳ ಮೇಲೆಯೇ ವಿನಿಯೋಗಿಸುತ್ತಿದ್ದನು.

ಈ ನಡುವೆ ಅನೇಕ ದಿನಗಳಿಂದ ನಿರುಪಯುಕ್ತವಾಗಿ ಬಿದ್ದಿದ್ದ ಒಂದು ಜೀಪ್ ಕಾರನ್ನು ಎಗ್ಜಿಕುಟೀವ್ ಇಂಜನಿಯರ್ ಆಫೀಸಿನಲ್ಲಿ ಸರ್ಕಾರದವರು ಹರಾಜು ಹಾಕಿದರು. ಆ ಕಾರನ್ನು ನೂರು ರೂಪಾಯಿಗೆ ಸಹ ಕೊಳ್ಳುವವರೂ ಯಾರೂ ಇಲ್ಲವೆಂದು ಸರ್ಕಾರದವರೇ ಹೇಳುತ್ತಿದ್ದರು. ಬಸ್ಸನ್ನು ಅದೇ ತಾನೇ ಸ್ಟ್ಯಾಂಡ್‌ನಲ್ಲಿ ನಿಲ್ಲಿಸಿ, ಹನುಮಂತು ಆ ದಾರಿಯಲ್ಲಿ ಹೋಟಲಿಗೆ ಹೊರಟಿದ್ದನು. ಸರ್ಕಾರಿ ಸವಾಲು ಒಂದು ಬಾರಿ ಎರಡು ಬಾರಿ ಎಂದು ಕೂಗುತ್ತಿದ್ದುದನ್ನು ಕೇಳಿ, ಹನುಮಂತುವೂ ಅಲ್ಲಿಗೆ ಹೋಗಿ ನಿಂತನು. ಹರಾಜಿನಲ್ಲಿ ಕೂಗುವವರು ಹೆಚ್ಚು ಜನ ನಿಂತಿರಲಿಲ್ಲ. ಆ ಜೀಪು ಬಹುದಿನಗಳಿಂದ ಗಾಳಿ ಮಳೆ ಬಿಸಿಲಿನಲ್ಲಿ ಜರ್ಜರಿತವಾಗುತ್ತಿದ್ದುದನ್ನು ಕಂಡಿದ್ದ ಮೋಟಾರ್ ಅನುಭವಿಗಳಾರೂ ಹರಾಜಿನ ಸುದ್ದಿ ಕೇಳಿ ಹೆಚ್ಚು ಶ್ರದ್ಧೆ ವಹಿಸಿರಲಿಲ್ಲ. ಹನು

ಮಂತು ಸುಮ್ಮನೆ ಚಪಲದಿಂದ ಹೋಗಿ ಮೋಟಾರಿನ ಇಂಜಿನನ್ನು ನೋಡಿದನು. ಅದು ಅವನಿಗೆ ಏನೂ ಅರ್ಥವಾಗಲಿಲ್ಲ. ಆದರೂ ನೂರನಲವತ್ತಕ್ಕೆ ಏರಿದ್ದ ಹರಾಜಿನ ಸವಾಲನ್ನು ನೂರಐವತ್ತಕ್ಕೆ ಏರಿಸಿದನು. ಅದೇನು ಅವನ ಗ್ರಹಚಾರವೋ? ಯಾರೂ ಮುಂದಕ್ಕೆ ಹೋಗಲೇ ಇಲ್ಲ! ಹರಾಜು ಮಾಡುವವರು "ನೂರೈವತ್ತು ರೂಪಾಯಿ ಒಂದು ಬಾರಿ, ಎರಡು ಬಾರಿ, ಮೂರು ಬಾರಿ. ನವೋದಯ ಮೋಟಾರ್ ಡ್ರೈವರ್ ಹನುಮಂತು ಹೆಸರಿಗೆ ಮಂಜೂರ್" ಎಂದು ಮುಗಿಸಿದರು. ಕೊನೆಯ ವಾಕ್ಯವನ್ನು ಕೇಳಿ ಹನುಮಂತುವಿಗೆ ಮೈ ನಡುಕ ಬಂತು. ಏನೋ ಮಾಡುವುದಕ್ಕೆ ಹೋಗಿ ಏನೋ ಆಯಿತಲ್ಲ ಎಂದು ಅವನು ದಿಗ್ಭ್ರಾಂತನಾದನು. ಹರಾಜಿನ ಅಧಿಕಾರಿ ಹನುಮಂತುವಿನ ರುಜುವನ್ನು ಹರಾಜು ಫಾರಮ್ಮಿಗೆ ಹಾಕಿಸಿ "ಈ ದಿನ ಐದು ಗಂಟೆಯೊಳಗೆ ಪೂರ್ತಿ ಹಣ ಕಟ್ಟಬೇಕು. ನಾಳೆ ಸಾಯಂಕಾಲದೊಳಗೆ ಇಲ್ಲಿಂದ ಸಾಗಿಸಿಬಿಡಿ. ಅನಂತರ ನಾವು ಜವಾಬ್ದಾರರಲ್ಲ" ಎಂದು ಹೇಳಿದನು. ಹನುಮಂತು ಐದು ಗಂಟೆಯೊಳಗೆ ಹಣ ಹೊಂಚಿಕೊಂಡು ಬರುವುದಾಗಿ ಹೇಳಿ, ತಮ್ಮ ಸಾಹುಕಾರರಾದ ನವೋದಯ ಮೋಟರಿನ ಒಡೆಯರ ಬಳಿಗೆ ಹೋದನು. ತುಂಬ ಹೊತ್ತು ಅವರನ್ನು ಕೇಳಿಕೊಂಡ ಮೇಲೆ, ಅವರು ನಾನಾ ನಿಯಮಗಳನ್ನು ಹೇಳಿ, ಕೊನೆಗೆ ನೂರೈವತ್ತು ರೂಪಾಯಿಗಳನ್ನು ಕೊಟ್ಟರು. ಹನುಮಂತು ಆ ಸಾಯಂಕಾಲವೇ ಜೀಪನ್ನು ಎಳೆಸಿಕೊಂಡು ತಂದು ತನ್ನ ಸಾಹುಕಾರರ "ಷೆಡ್"ನಲ್ಲಿ ಅದನ್ನು ನಿಲ್ಲಿಸಿದನು.

ಅಲ್ಲಿಂದ ಮುಂದೆ ಹನುಮಂತುವಿಗೆ ಜೀಪ್ ಗಾಡಿಯೇ ಪ್ರಾಣವಾಯಿತು. ಪ್ರತಿದಿನವೂ ಅವನು ಸರ್ವಿಸ್ ಬಸ್ ಹೊರಡುವುದಕ್ಕೆ ಮುಂಚೆ ಎರಡು ಗಂಟೆಗಳ ಕಾಲ, ಸರ್ವಿಸ್ ಬಸ್ಸನ್ನು ಓಡಿಸಿಕೊಂಡು ಹಿಂದಿರುಗಿದ ಮೇಲೆ ಅರ್ಧರಾತ್ರಿಯವರೆಗೆ,ಜೀಪನ್ನು ಸರಿಮಾಡುವುದರಲ್ಲಿ ಕಳೆಯುತ್ತಿದ್ದನು. ಆರು ತಿಂಗಳು ಕಳೆಯುವುದರೊಳಗಾಗಿ, ಹೋಗಿದ್ದ ಸಾಮಾನುಗಳನ್ನೆಲ್ಲ ಜೀಪ್ ಗಾಡಿಗೆ ಹಾಕಿದುದರಿಂದ, ಅದು ಓಡಲು ಸಿದ್ಧವಾಯಿತು. ಆ ವೇಳೆಗೆ ಸಾಹುಕಾರರ ಸಾಲವೂ ತೀರಿತ್ತು. ಹನುಮಂತು ನವೋದಯ ಸರ್ವಿಸ್‌ನಲ್ಲಿ ಡ್ರೈವರ್ ಕಾರ್ಯವನ್ನು ಬಿಟ್ಟು, ಜೀಪ್‌ಗೆ ಹೊಸದಾಗಿ ಬಣ್ಣ ಹಾಕಿಸಿ ಟ್ಯಾಕ್ಸಿಯಾಗಿ ಮಾಡಿ ಲೈಸೆನ್ಸ್ ತೆಗೆದುಕೊಂಡನು. ಸುತ್ತಲು ಸಂತೆಗಳು,

ದೂರದ ಯಾತ್ರಾ ಕ್ಷೇತ್ರಗಳು, ಜಾತ್ರೆಗಳು, ಅಧಿಕಾರಿಗಳ ತುರ್ತು ಭೇಟಿ, ಹೀಗೆ ಹನುಮಂತುವಿಗೆ ನಿತ್ಯ ನೂರಾರು ಗಿರಾಕಿ ದೊರೆಯತೊಡಗಿತು. ಆತನು ಮೊದಲ ಸಲ ಟ್ಯಾಕ್ಸಿಯಲ್ಲಿ ತನ್ನ ಹಳ್ಳಿಗೆ ಹೋದಾಗ ಹಳ್ಳಿಯವರಿಗೆಲ್ಲಾ ಆಶ್ಚರ್ಯವಾಯಿತು. ಅಷ್ಟಾದರೂ ಅವನು ಭೋಗ್ಯದ ಹಣವನ್ನು ಕೊಟ್ಟು ಹೊಲ ಮನೆಗಳನ್ನು ಬಿಡಿಸಿಕೊಂಡಿರಲಿಲ್ಲ. ನಾಗಿ ಮತ್ತೆ "ಭೋಗ್ಯದ ಹಣವನ್ನು ಈಗಲಾದರೂ ಕೊಟ್ಟುಬಿಡಿ" ಎಂದು ಹೇಳಿದಳು. ಹನುಮಂತು ಉಡಾಫೆಯಿಂದ "ಮರೆತಿದ್ದೆ ; ಇನ್ನೊಂದು ದಿನ ಬರುವಾಗ ತರುತ್ತೇನೆ" ಎಂದನು. ಹಣ ಅವನಿಗೆ ದೊಡ್ಡ ಪ್ರಶ್ನೆಯಾಗಿದ್ದಂತೆ ತೋರಲೇ ಇಲ್ಲ.

ಒಂದು ದಿನ ಹನುಮಂತು ಟ್ಯಾಕ್ಸಿಯನ್ನು ದೌಡಾಯಿಸಿಕೊಂಡು ಪಟ್ಟಣದ ಕಡೆ ಬರುತ್ತಿರುವಾಗ, ದಾರಿಯಲ್ಲಿ ಲಕ್ಷ್ಮಿ ನಿಧಾನವಾಗಿ ಪಟ್ಟಣದ ಕಡೆಗೇ ನಡೆದುಕೊಂಡು ಹೋಗುತ್ತಿದ್ದಳು. ಲಕ್ಷ್ಮಿ ಅವನ ಹಳ್ಳಿಯವಳು. ಇನ್ನೂ ಯುವತಿಯಾಗಿದ್ದ ವಿಧವೆ. ಅವಳನ್ನು ಕಂಡರೆ ಯಾವಾಗಲೂ ಹನುಮಂತುವಿಗೆ ಮೃದು ಮನಸ್ಸು ಮತ್ತು ಆಸೆ. ಹನುಮಂತು ವೇಗವಾಗಿ ಟ್ಯಾಕ್ಸಿ ಓಡಿಸುತ್ತಾ ಬರುತ್ತಿದ್ದರೂ ದೂರದಿಂದಲೇ ಅವನಿಗೆ ಲಕ್ಷ್ಮಿಯ ಗುರುತು ಹತ್ತಿತು. ಮುಂದಲ ಗಳಿಗೆಯಲ್ಲಿಯೇ ಅವನು ಕಾರನ್ನು ಲಕ್ಷ್ಮಿಯ ಸಮೀಪದಲ್ಲಿ ನಿಲ್ಲಿಸಿದನು. ಲಕ್ಷ್ಮಿಗೆ ಗಾಬರಿಯಾಯಿತು. ಹನುಮಂತು "ಪಟ್ಟಣಕ್ಕೆ ತಾನೆ ? ಬಾ. ಗಾಡಿಯಲ್ಲಿ ಕುಳಿತುಕೋ. ನಾನೂ ಅದೇ ದಾರಿಯಲ್ಲಿ ಹೋಗುತ್ತಿದ್ದೇನೆ" ಎಂದು ಕಾರ್‌ನ ಬಾಗಿಲನ್ನು ತೆರೆದನು. ಲಕ್ಷ್ಮಿಯು ಹಿಂದಲ ಆಸನದಲ್ಲಿ ಕುಳಿತುಕೊಳ್ಳಲು ಹೋದಳು. ಹನುಮಂತು "ಇಲ್ಲಿಯೇ ಬಾ" ಎಂದು ತನ್ನ ಮಗ್ಗುಲಿನ ಆಸನದಲ್ಲಿಯೇ ಕೂರಿಸಿಕೊಂಡನು. ಲಕ್ಷ್ಮಿಯು ಪಟ್ಟಣದ ಒಂದು ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದಳು. ಅವಳಿಗೆ ಹನುಮಂತುವಿನ ಹಳ್ಳಿಯಲ್ಲಿ ಒಂದು ಮುರುಕು ಮನೆ. ಆ ಮನೆ ವಾಸಕ್ಕೆ ಅರ್ಹವಾಗಿರಲಿಲ್ಲ. ಲಕ್ಷ್ಮಿ ಪಟ್ಟಣದಲ್ಲಿಯೇ ಇದ್ದುಕೊಂಡು ತಿಂಗಳಿಗೆ, ಎರಡು ತಿಂಗಳಿಗೆ ಒಂದೊಂದು ಸಲ ಹಳ್ಳಿಗೆ ಬಂದು, ಮತ್ತೆ ಸಂಧ್ಯಾಕಾಲದೊಳಗಾಗಿ ನಗರಕ್ಕೆ ಹಿಂದಿರುಗುತ್ತಿದ್ದಳು. ಹನುಮಂತು ಲಕ್ಷ್ಮಿಯನ್ನು ಕರೆದುಕೊಂಡು ಬಂದು ಅವಳ ಹೋಟೆಲಿನ ಬಳಿ ಬಿಟ್ಟು ತನ್ನ ಟ್ಯಾಕ್ಸಿ ನಿಲ್ದಾಣಕ್ಕೆ ಹೋದನು.

ಹನುಮಂತುವಿಗೂ ಇರುವುದಕ್ಕೆ ಮನೆ ಇರಲಿಲ್ಲ. ಮೊದಲು ಅವನು "ಬೆಳಗಿನಿಂದ ರಾತ್ರಿಯವರೆಗೆ ಪಟ್ಟಣದ ಟ್ಯಾಕ್ಸಿ ನಿಲ್ದಾಣದಲ್ಲಿರುವುದು, ರಾತ್ರಿ

ಯಾದ ಕೂಡಲೇ ಹಳ್ಳಿಗೆ ಹೋಗಿ ಬೆಳಿಗ್ಗೆ ಹಿಂದಿರುಗುವುದು" ಎಂದು ನಿರ್ಣಯಿಸಿಕೊಂಡಿದ್ದನು. ಆದರೆ ಲಕ್ಷ್ಮಿಯನ್ನು ಆ ಹೋಟಲಿನಲ್ಲಿ ಕಂಡ ಮೇಲೆ ಊಟ ತಿಂಡಿಗೆ ಅದೇ ಹೋಟಲಿಗೆ ಬರುವುದು, ರಾತ್ರಿ ಹೋಟಲಿನ ಸಮೀಪದಲ್ಲಿಯೇ ಟ್ಯಾಕ್ಸಿಯನ್ನು ನಿಲ್ಲಿಸುವುದು ; ಸಾಧ್ಯವಾದಷ್ಟು ಹೊತ್ತು ಲಕ್ಷ್ಮಿಯೊಡನೆ ಮಾತನಾಡುತ್ತಿರುವುದು ; ಹೀಗೆ ಅವನಿಗೆ ಅಭ್ಯಾಸವಾಯಿತು. ಒಂದು ದಿನ ಲಕ್ಷ್ಮಿ "ನೀನು ಹೋಟಲಿಗೇ ತಿಂಗಳಿಗೆ ನಲವತ್ತು ಐವತ್ತು ಖರ್ಚುಮಾಡುತ್ತಿದ್ದಿ. ಆದರೂ ಕಾಲಕಾಲಕ್ಕೆ ಊಟ ತಿಂಡಿ ಇಲ್ಲ. ಸರಿಯಾಗಿ ಮಲಗುವುದಕ್ಕೆ ಜಾಗ ಇಲ್ಲ. ನಾನೇ ಇಲ್ಲಿ ಒಂದು ಮನೆ ಮಾಡುತ್ತೇನೆ. ಇಲ್ಲಿ ಖರ್ಚುಮಾಡುವ ದುಡ್ಡನ್ನು ಅಲ್ಲಿ ಕೊಡು. ಸುಖವಾಗಿ ಎರಡು ಹೊತ್ತೂ ಬಿಸಿಬಿಸಿ ಮಾಡಿ ಹಾಕುತ್ತೇನೆ" ಎಂದಳು. ಹನುಮಂತುವಿಗೆ, ಲಕ್ಷ್ಮಿ ಮಾತನಾಡಿದರೇ ಆನಂದವಾಗುತ್ತಿತ್ತು. ಅವಳು ಏನು ಹೇಳಿದರೂ ಅವನು ಅದಕ್ಕೆ ಒಪ್ಪುತ್ತಿದ್ದನು. ಆ ವಿಚಾರ ಲಕ್ಷ್ಮಿಗೂ ಗೊತ್ತಾಗಿತ್ತು. ಅವಳು ಹನುಮಂತುವನ್ನು ಇಷ್ಟ ಬಂದಂತೆ ಕುಣಿಸತೊಡಗಿದಳು. ಅವರಿಬ್ಬರೂ ಬೇರೆ ಮನೆ ಮಾಡಿಕೊಂಡು ಗಂಡ ಹೆಂಡಿರಂತೆಯೇ ಇರತೊಡಗಿದರು. ನೋಡುವವರಿಗೂ ಹಾಗೆಯೇ ತೋರುತ್ತಿತ್ತು.

ಬರಬರುತ್ತಾ ಹನುಮಂತುವಿನ ಟ್ಯಾಕ್ಸಿ ಸಂಪಾದನೆ, ಇದ್ದಕ್ಕಿದ್ದಂತೆ ಒಂದಕ್ಕೆ ಹತ್ತು ಆಯಿತು. ನಿತ್ಯ ತಿರುಪತಿ, ಸುಬ್ರಹ್ಮಣ್ಯ, ತಲಕಾವೇರಿ, ಶ್ರವಣಬೆಳಗೊಳ, ಧರ್ಮಸ್ಥಳ, ಉಡುಪಿ, ಶೃಂಗೇರಿ, ಶಿವಗಂಗೆ, ತಲಕಾಡು, ಜೋಗು— ಹೀಗೆ ಪ್ರಯಾಣಿಕರು ಟ್ಯಾಕ್ಸಿಯನ್ನು ಗೊತ್ತುಮಾಡಿಕೊಳ್ಳುತ್ತಿದ್ದರು. ಲಕ್ಷ್ಮಿ ತನ್ನನ್ನು ಸೇರಿದುದರಿಂದ ತನಗೆ ಲಕ್ಷ್ಮಿ ಒಲಿದಳು ಎಂದು ಹನುಮಂತು ಭಾವಿಸಿಕೊಂಡನು. ಹೊಸ ಹೊಸ ಉಡಿಗೆ, ಒಳ್ಳೆಯ ಆಹಾರ ಇವುಗಳಿಂದ ಲಕ್ಷ್ಮಿ ದಿನ ದಿನಕ್ಕೆ ಸುಂದರಿಯಾಗಿ ತೋರತೊಡಗಿದಳು. ಹನುಮಂತುವಿನ ಹಿಗ್ಗು ಅವನ ಮನಸ್ಸನ್ನು ಹಿಡಿಸದೆ ಉಕ್ಕಿ ಹರಿಯುತ್ತಿತ್ತು ! ಬಂದ ಹಣವನ್ನೆಲ್ಲ ಹನುಮಂತು ಲಕ್ಷ್ಮಿಯ ಕೈಲಿ ಹಾಕಿ, ಸುಖವಾಗಿ ಎರಡು ಹೊತ್ತು ಬಿಸಿಬಿಸಿ ಊಟ ಮಾಡಿಕೊಂಡು, ಲಕ್ಷ್ಮಿಯೊಂದಿಗೆ ಚಕ್ಕಂದವಾಡುತ್ತ ಕಾಲ ಕಳೆಯುತ್ತಿದ್ದನು.

ಎರಡು ವರುಷಗಳಿಂದ ಹನುಮಂತು ಹಳ್ಳಿಗೆ ತಲೆಹಾಕಿರಲಿಲ್ಲ. ಅವನು

ಲಕ್ಷ್ಮಿಯ ಬೆನ್ನು ಹತ್ತಿರುವುದು ಹಳ್ಳಿಯವರಿಗೆಲ್ಲ ಗೊತ್ತಾಗಿತ್ತು. ಎಲ್ಲರೂ ಬಂದು ಲಕ್ಷ್ಮಿಯ ಮನೆಯನ್ನು ನೋಡಿಕೊಂಡು ಹೋಗಿದ್ದರು. ಕೊನೆಗೊಮ್ಮೆ ನಾಗಿಗೂ ಸುದ್ದಿ ತಿಳಿಯಿತು. ಅವಳು ಮೂರು ದಿನ ಊಟ ತಿಂಡಿ ಬಿಟ್ಟು ಕುಳಿತಳು. ಹೊಟ್ಟೆಗಿಲ್ಲದೆ ಮಕ್ಕಳು ಸಾಯುವಂತಾದುವು. ಊರಿನವರೆಲ್ಲ ಬಂದು "ನಿನಗೆ ಅವನು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೇ. ನಿನಗೆ ಯಾವಾಗಲೂ ಅವನಿಂದ ಒಂದು ಕಾಸಿನ ಪ್ರಯೋಜನವು ಆಗಲಿಲ್ಲ. ಸುಖವಾಗಿ ನಿನ್ನ ಪಾಡಿಗೆ ಇರು" ಎಂದು ಸಮಾಧಾನ ಮಾಡಿದರು. ಈ ಮಧ್ಯೆ ಪುಟ್ಟನ ತಂದೆ ಭೋಗ್ಯದ ಹಣಕ್ಕೆ ದಾವಾ ಹಾಕಿ ಡಿಕ್ರಿ ಹರಾಜಿನಲ್ಲಿ ಮನೆಯನ್ನೂ ಹೊಲವನ್ನೂ ಕೊಂಡುಕೊಂಡನು. ಆದರೆ ಅವನಿಗೂ ನಾಗಿಯಲ್ಲಿ ಕನಿಕರವುಂಟಾಯಿತು. ನಾಗಿ ಹಾಲು ಮಾರಿ ಕೂಲಿ ಮಾಡಿ ಸ್ವಲ್ಪ ಹಣ ಉಳಿಸಿದ್ದಳು. ಪುಟ್ಟನ ತಂದೆ ಜಮೀನನ್ನೂ ಮನೆಯನ್ನೂ ನಾಗಿಯ ಹೆಸರಿಗೆ ಕ್ರಯ ಬರೆದನು. "ಹನುಮಂತು ಬಂದರೂ ಅವನ ಆಸ್ತಿ ಇಲ್ಲಿ ಏನೂ 'ಇಲ್ಲ" ಎಂದು ಊರವರೆಲ್ಲ ತೀರ್ಮಾನಿಸಿದರು.

ಈ ಮಧ್ಯೆ ಲಕ್ಷ್ಮಿ ತನ್ನ ಹಳ್ಳಿಯ ಮುರುಕಲು ಮನೆಯನ್ನು ಪೂರ್ತಾ ನೆಲಸಮಮಾಡಿ, ಹೊಸ ಮನೆ ಕಟ್ಟಲು ಪಟ್ಟಣದ ಕಂಟ್ರಾಕ್ಟರಿಗೆ ವಹಿಸಿದಳು. ಅವರು ಹೊಸ ಮಾದರಿಯಲ್ಲಿ ನಾಲ್ಕು ಮೈಲಿ ದೂರಕ್ಕೆ ಕಾಣುವಂತೆ ಮಂಗಳೂರು ಹೆಂಚಿನ ಮನೆಯನ್ನು ಕಟ್ಟಿದರು. ಅದನ್ನು ನೋಡಿ ಹನುಮಂತು ಮತ್ತು ಲಕ್ಷ್ಮಿಯ ಬಾಂಧವ್ಯ ಇನ್ನೂ ಹೆಚ್ಚು ದೃಢವಾಗಿದೆಯೆಂದು ಜನ ತಿಳಿದುಕೊಂಡರು.

ಒಂದು ಭಾನುವಾರ ಹನುಮಂತು ಮಂಗಳೂರಿಗೆ ವಿದ್ಯಾರ್ಥಿಗಳ ಒಂದು ತಂಡವನ್ನು ಟ್ಯಾಕ್ಸಿಯಲ್ಲಿ ಕೂರಿಸಿಕೊಂಡು ಹೊರಟನು. ಮಂಗಳೂರನ್ನು ತಲಪುವ ವೇಳೆಗೆ ಸಂಧ್ಯಾಕಾಲದ ದೀಪ ಹತ್ತಿಸಿತ್ತು. ಬೆಳಗಿನವರೆಗೆ ಅಲ್ಲಿ ಇದ್ದಿದ್ದರೆ ಹಿಂದಿರುಗುವ ಪ್ರಯಾಣದಲ್ಲಿ ಕೆಲವು ಪ್ರವಾಸಿಗಳು ಸಿಕ್ಕುತ್ತಿದ್ದರು. ಆದರೆ ಇದ್ದಕ್ಕಿದ್ದಂತೆ ಹನುಮಂತುವಿಗೆ ಲಕ್ಷ್ಮಿಯ ಆಸೆ ದುರ್ದಮ್ಯವಾಗಿ ಬೆಳೆಯಿತು. ಪ್ರಯಾಣದ ಶ್ರಮಪರಿಹಾರಕ್ಕಾಗಿ ಅವನು ಮದ್ಯಪಾನವನ್ನೂ ಮಾಡಿದ್ದನು. ಅವನು ಹಿಂದು ಮುಂದು ಯೋಚಿಸದೆ ಒಂದೇ ವೇಗದಲ್ಲಿ ಟ್ಯಾಕ್ಸಿಯನ್ನು ಓಡಿಸಿಕೊಂಡು ತನ್ನ ಊರಿಗೆ ಹೊರಟನು. ವೇಗವಾಗಿ ಆರು

ಗಂಟೆ ಪ್ರಯಾಣದಲ್ಲಿ ತನ್ನ ಊರನ್ನು ಸೇರಬಹುದೆಂದು ಹನುಮಂತುವಿನ ಅನುಭವ. ಅದು ಘಟ್ಟದ ದಾರಿಯಾದುದರಿಂದ ಅವನು ಸ್ವಲ್ಪ ಎಚ್ಚರಿಕೆಯಿಂದಲೇ ಇರಬೇಕಾಗಿತ್ತು. ಆದರೆ ಇಂದ್ರಿಯಗಳಿಗೆ ಒಳಗಾಗಿ ಅವುಗಳ ಹತೋಟಿಯಲ್ಲಿ ಓಡುತ್ತಿದ್ದ ಅವನ ಮನಸ್ಸು ಎಚ್ಚರ ತಪ್ಪಿತ್ತು. ಎದುರಿಗೆ ಒಂದು ಲಾರಿ ಬರುತ್ತಿತ್ತು. ಲಾರಿಯ ವಿದ್ಯುತ್ ದೀಪ ಅವನ ಕುಡಿದ ಕಣ್ಣಿಗೆ ಬಿದ್ದ ಕೂಡಲೆ ಅವನ ಕಣ್ಣನ್ನು ಲಕ್ಷಾಂತರ ಸೂಜಿಗಳು ಚುಚ್ಚಿದಂತಾಗಿ ತಲೆ ತಿರುಗಿತು, ಮಗ್ಗುಲಿನಲ್ಲಿ ಆಳವಾದ ಗಟ್ಟದ ಕಂದಕವಿರುವುದನ್ನು, ಆತುರದಲ್ಲಿಯೂ ಮದ್ಯದ ಅಮಲಿನಲ್ಲಿಯೂ ಮರೆತ ಹನುಮಂತು, ತನ್ನ ಗಾಡಿಯನ್ನು ಸ್ವಲ್ಪ ಹೆಚ್ಚಾಗಿ ಬಲಕ್ಕೆ ತಿರುಗಿಸಿದನು. ಶ್ರೀಮದ್ರಮಾರಮಣ ಗೋವಿಂದ, ಗೋವಿಂದ ! ಕಾರು ನೂರಾರು ಅಡಿ ಹಳ್ಳದ ಕಂದಕದಲ್ಲಿ ಬಿದ್ದು ಹೋಯಿತು.

ಲಾರಿಯವನು ಮುಂದಲ ಊರಿಗೆ ಹೋಗಿ ಪೋಲೀಸ್ ಸ್ಟೇಷನ್ನಿನಲ್ಲಿ ದೂರು ಕೊಟ್ಟನು. ಬೆಳಗಾದ ಮೇಲೆ ಪೋಲೀಸ್ ಸಂರಕ್ಷಣ ಪಡೆ ಸ್ಥಳಕ್ಕೆ ಬಂದು ಪರೀಕ್ಷಿಸಿತು. ಕಂದಕದ ಕೆಳಕ್ಕೆ ಗಾಡಿ ಉರುಳುವಾಗ ಹೇಗೋ ಹನುಮಂತು ಸುಮಾರು ೪೦ ಅಡಿ ಕೆಳಗಿದ್ದ ಒಂದು ಮರದ ಬುಡಕ್ಕೆ ತಗಲಿಕೊಂಡಿದ್ದನು. ಗಾಡಿ ಕೆಳಕ್ಕೆ ಬಿದ್ದು ಪುಡಿಪುಡಿಯಾಗಿತ್ತು. ಹನುಮಂತುವಿನ ಕಣ್ಣು ಮುಖವೆಲ್ಲ ಗಾಯವಾಗಿತ್ತು. ಎರಡು ಕಣ್ಣುಗಳಿಗೂ ತುಂಬ ಏಟು ಬಿದ್ದಿತ್ತು. ಆದರೆ ಹನುಮಂತು ಜ್ಞಾನವಾಗಿದ್ದನು. ಅವನನ್ನು ಉಪಾಯವಾಗಿ ಎತ್ತಿಕೊಂಡು ಬಂದು ವೈದ್ಯಶಾಲೆಗೆ ದಾಖಲ್ಮಾಡಿದರು. ಅವನ ದೇಹದ ಗಾಯಗಳು ಬಹು ಬೇಗ ವಾಸಿಯಾದರೂ ಕಣ್ಣಿನ ಏಟು ಮಾಯಲಿಲ್ಲ. ಅವನು ನಾಲ್ಕು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಬೇಕಾಯಿತು. ಲಕ್ಷ್ಮಿ ಒಂದು ಸಲ ಬಂದು ವಿಚಾರಿಸಿದಳು. ಬುದ್ಧಿವಂತಳಾದ ಅವಳಿಗೆ ಪರಿಸ್ಥಿತಿ ಅರ್ಥವಾಯಿತು. ಅನಂತರ ಬರಲಿಲ್ಲ. ಹಳ್ಳಿಯ ತನ್ನ ಹೊಸ ಮನೆಯಲ್ಲಿ ಹೋಗಿ ವಾಸಿಸುತ್ತಾ ಹೋಟಲಿಗೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದಳು. ಹನುಮಂತುವಿಗೆ ಆಸ್ಪತ್ರೆಯಿಂದ ಬಿಡುಗಡೆಯಾದಾಗ ವೈದ್ಯರು, "ನೀನು ಇನ್ನು ಮೋಟಾರು ನಡೆಸಕೂಡದು. ಮೊದಲೇ ನಿನ್ನ ಕಣ್ಣಿನಲ್ಲಿ ದೋಷವಿತ್ತು. ಈಗಂತೂ ಎರಡು ಕಣ್ಣುಗಳಿಗೂ ಏಟು ಬಿದ್ದಿರುವುದರಿಂದ ನಿನ್ನ ಕಣ್ಣು ಪೂರ್ತಿ

ಅಪ್ರಯೋಜಕವಾಗಿವೆ" ಎಂದು ಹೇಳಿ ಕಳುಹಿಸಿದರು. ಅದೇ ವಿಚಾರವನ್ನು ಅವರು ಸಂಬಂಧಪಟ್ಟ ಅಧಿಕಾರಿಗಳಿಗೂ ತಿಳಿಸಿದರು. ಆಸ್ಪತ್ರೆಯಿಂದ ಬಿಡುಗಡೆಯಾದಾಗ ಹನುಮಂತುವಿನ ಕೈಲಿ ಒಂದು ಕಾಸೂ ಇರಲಿಲ್ಲ. ಅವನು ನೆಟ್ಟಗೆ ತನ್ನ ಹಿಂದಲ ಹೋಟಲಿಗೆ ಹೋಗಿ ನೋಡಿದನು. ಲಕ್ಷ್ಮಿ ಕೆಲಸ ಬಿಟ್ಟು ಹಳ್ಳಿಯಲ್ಲಿ ಹೋಗಿ ವಾಸಿಸುತ್ತಿರುವುದು ತಿಳಿಯಿತು.

ಹನುಮಂತು ಹೋಟಲಿನಲ್ಲಿ ಫಲಾಹಾರವನ್ನು ಸಾಲ ತಿಂದು, ತಾನು ಹಿಂದೆ ಡ್ರೈವರ್ ಆಗಿದ್ದ ನವೋದಯ ಮೋಟಾರ್ ಸಾಹುಕಾರರಲ್ಲಿ ಹೋಗಿ, ತನಗೆ ಕ್ಲೀನರ್ ಕೆಲಸವನ್ನಾದರೂ ಕೊಡಬೇಕೆಂದು ಪ್ರಾರ್ಥಿಸಿದನು. ಸಾಹುಕಾರರು "ನನ್ನ ಬಳಿ ಈಗ ಕ್ಲೀನರ್ ಇಲ್ಲವೇ ಇಲ್ಲ. ಬರಿಯ ಡ್ರೈವರ್ ಒಬ್ಬನೇ ಇರುವುದು. ಬಸ್‌ನ ಉತ್ಪತ್ತಿ ಇನ್ನು ನಾಲ್ಕು ದಿನ ಹೀಗೇ ಇದ್ದರೆ ಡ್ರೈವರನನ್ನೂ ಮನೆಗೆ ಕಳುಹಿಸಬೇಕಾಗುತ್ತದೆ" ಎಂದರು. ಹನುಮಂತು ಏನು ಮಾಡುವುದಕ್ಕೂ ತೋಚದೆ ನೆಟ್ಟಗೆ ತನ್ನ ಹಳ್ಳಿಗೆ ಬಂದನು.

ಹಳ್ಳಿಯಲ್ಲಿ ಅವನು ಮೊದಲು ಲಕ್ಷ್ಮಿಯ ಮನೆಗೆ ಹೋದನು. ಲಕ್ಷ್ಮಿ ಹೊಸ ಮನೆಯಲ್ಲಿ ರಾಣಿಯಂತೆ ಠೀವಿಯಿಂದ ಊಟಕ್ಕೆ ಕುಳಿತಿದ್ದಳು. ಹನುಮಂತನು ನೆಟ್ಟಗೆ ಹೋಗಿ ಮನೆಯ ಒಳಗೆ ಕುಳಿತನು. ಲಕ್ಷ್ಮಿ ಅವನನ್ನು ಮಾತನಾಡಿಸಲೇ ಇಲ್ಲ. ಹನುಮಂತುವೇ "ಆಸ್ಪತ್ರೆಯಿಂದ ಇವತ್ತು ಬಿಡುಗಡೆಯಾಯಿತು. ಕಣ್ಣು ಇನ್ನು ಮೊದಲಿನಂತೆ ಆಗುವಂತಿಲ್ಲ" ಎಂದನು. ಲಕ್ಷ್ಮಿಯು ಉತ್ಸಾಹವನ್ನೇ ತೋರಿಸದೆ ಹೂ ಎನ್ನುತ್ತಾ ಊಟಮಾಡಿ, ಬಿಂದಿಗೆ ತೆಗೆದುಕೊಂಡು ಕೆರೆಗೆ ನೀರಿಗೆ ಹೊರಟಳು. ಅವಳ ಮುಖದಲ್ಲಿ "ನಿನಗೂ ನನಗೂ ಸಂಬಂಧವಿಲ್ಲ. ಹಿಂದಲದು ಆಗಿಹೋಯಿತು. ಇನ್ನು ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ" ಎಂಬ ಭಾವ ಹನುಮಂತುವಿಗೆ ಸ್ಪಷ್ಟವಾಗಿ ಹೊಳೆಯಿತು. ಅವನು ಅವಳ ಮನೆಯನ್ನು ಬಿಟ್ಟು ಬೀದಿಗೆ ಹೊರಟನು.

ಹನುಮಂತುವಿನ ಪ್ರಯತ್ನವೇ ಇಲ್ಲದೆ ಅವನ ಕಾಲುಗಳು ಅವನನ್ನು ತನ್ನ ಮನೆಯ ಕಡೆಗೆ ಎಳೆದುಕೊಂಡು ಹೋದವು. ಆಸ್ಪತ್ರೆಯಲ್ಲಿರುವಾಗ ಮನೆಯನ್ನೂ ಹೊಲವನ್ನೂ ಶೆಟ್ಟನ ತಂದೆ ದಾವಾ ಮಾಡಿ ಸ್ವಾಧೀನ ಮಾಡಿಕೊಂಡಿರುವುದು ಅವನಿಗೆ ತಿಳಿದಿರಲಿಲ್ಲ. ಮತ್ತೆಲ್ಲಿಯೂ ಹೋಗುವುದಕ್ಕೆ

ಸ್ಥಳವಿಲ್ಲದುದರಿಂದ ನಾಗಿ ಅದೇ ಮನೆಯಲ್ಲಿರಬಹುದೆಂದು ಅವನು ಭಾವಿಸಿದ್ದನು. ಊರಿನವರು ಅವನು ಲಕ್ಷ್ಮಿಯ ಮನೆಗೆ ಹೋದುದನ್ನೂ ನೋಡಿದ್ದರು. ಅಂತಹ ಸಣ್ಣ ಹಳ್ಳಿಯಲ್ಲಿ ವಿಷಯ ಬಹುಬೇಗ ಎಲ್ಲರಿಗೂ ಗೊತ್ತಾಗುತ್ತದೆ. ಹನುಮಂತು ತನ್ನ ಮನೆಯ ಕಡೆಗೆ ಹೋಗುತ್ತಿರುವಾಗ ಊರಿನ ಕೆಲವರು ಅವನಿಗೆ ಕೇಳಿಸುವಂತೆಯೇ "ರಾಜ್ಯ ಜಯಿಸಿಕೊಂಡು ಬಂದ ಕಣಪ್ಪ. ಆದರೆ ಇರೋಕೆ ಮನೆ ಇಲ್ಲ" ಎಂದರು. ಇನ್ನೊಬ್ಬ "ಮನೆ ಯಾಕೆ ಇಲ್ಲ ? ಹೆಂಡತಿಯ ಮನೆ ಗಂಡನಿಗಾಗದೆ ?" ಎಂದನು. ಮತ್ತೊಬ್ಬ "ಹೌದು ಹೌದು. ಆ ಮನೆಗಾಗಿ ಇವ ಬಹಳ ಕಷ್ಟಪಟ್ಟಿದ್ದಾನೆ. ಹೋಗಲಿ, ನಾಗಿ ಇವನ ಭೂತ ಬಿಡಿಸ್ತಾಳೆ" ಎಂದನು. ಆ ಮಾತುಗಳನ್ನೆಲ್ಲ ಅವರು ಹನುಮಂತುವಿಗೇ ಹೇಳಿದರು. ಆದರೆ ಅವನಿಗೆ ಹೇಳಬೇಕಾದುದನ್ನು ಅವನಿಗೆ ಕೇಳುವಂತೆ, ಒಬ್ಬರೊಂದಿಗೊಬ್ಬರು ಮಾತನಾಡಿಕೊಳ್ಳುವುದು ಅವರ ಪದ್ಧತಿ. ಎಲ್ಲವನ್ನೂ ಕೇಳುತ್ತಾ ಹನುಮಂತು ಮಿಶ್ರಭಾವಗಳೊಂದಿಗೆ ತನ್ನ ಮನೆ ಸೇರಿದನು.

ಹನುಮಂತು ತನ್ನ ಮಾಮೂಲು ಜಾಗದಲ್ಲಿ ಪದ್ಧತಿಯಂತೆ ಜಗಲಿಯ ಮೇಲೆ ಕುಳಿತನು. ನಾಗಿ ಮಕ್ಕಳಿಗೆ ತಟ್ಟೆ ಹಾಕುತ್ತಿದ್ದಳು. ಹನುಮಂತು ಬಂದು ಬಾಗಿಲಿನಲ್ಲಿ ಕುಳಿತುದನ್ನು ಕಂಡು, ಅವನಿಗೂ ಒಂದು ತಟ್ಟೆ, ಹಿಂದಲಂತೆ ಹಾಕಿದಳು. ಒಂದು ಸಲ ಅವನ ಕಡೆ ನೋಡಿದಾಗಲೇ ಅವಳಿಗೆ ಅವನಿಗೆ ಊಟವಾಗಿಲ್ಲದಿರುವುದೂ, ಅವನು ನಿರ್ಗತಿಕನಾಗಿರುವುದೂ ಗೊತ್ತಾಯಿತು. ಅವಳು, ಹನುಮಂತು ಕೈಕಾಲು ತೊಳೆದುಕೊಳ್ಳಲೆಂದು ಚೊಂಬಿನಲ್ಲಿ ನೀರನ್ನು ತಂದು ಬಾಗಿಲಿನಲ್ಲಿ ಇಟ್ಟಳು. ಆ ವೇಳೆಗೆ ಹನುಮಂತುವಿನ ಇಬ್ಬರು ಹುಡುಗರೂ ಬೀದಿಯಿಂದ ಮನೆಗೆ ಊಟಕ್ಕೆ ಬಂದರು. ಅವರು ಒಳಗೆ ಹೋಗಿ ತಟ್ಟೆಯ ಮುಂದೆ ಕುಳಿತಾಗ ಮತ್ತೊಂದು ತಟ್ಟೆ ಖಾಲಿ ಇದ್ದುದನ್ನು ನೋಡಿ "ಅಪ್ಪಾ, ಬಾ ಉಣ್ಣೋಕೆ" ಎಂದು ಕರೆದರು. ಜತೆಯಲ್ಲಿ ನಾಗಿಯೂ "ಬನ್ನಿ" ಎಂದು ಕರೆದಳು. ಹನುಮಂತು ಒಳಕ್ಕೆ ಹೋಗಿ ತಟ್ಟೆಯ ಮುಂದೆ ಕುಳಿತನು.

ನಾಗಿಯ ಬೈಗಳಕ್ಕಾಗಿ ಹನುಮಂತು ಸಿದ್ಧನಾಗಿದ್ದನು. ನಾಗಿ ಬಡಿಸುವುದಕ್ಕೆ ಸೌಟನ್ನು ಮೇಲಕ್ಕೆತ್ತಿದರೆ, ಅದು ತನ್ನ ತಲೆಯ ಮೇಲೆಯೇ ಬೀಳುವು

ದೇನೋ ಎಂದು ಹೆದರುತ್ತಿದ್ದನು. ಆದರೆ ನಾಗಿಗೆ ಅದಾವ ಯೋಚನೆಯೂ ಇರಲೇ ಇಲ್ಲ. ಅವಳು ಹನುಮಂತು ಮೋಟಾರು ವಿದ್ಯೆ ಕಲಿಯಲು ಹೊರಡುವುದಕ್ಕೆ ಮುಂಚೆ ಹೇಗೆ ಸ್ವಾಭಾವಿಕವಾಗಿದ್ದಳೋ ಹಾಗೆಯೇ ಇದ್ದಳು. ಈ ಮಧ್ಯದಲ್ಲಿ ನಡೆದುದೆಲ್ಲ, ಕೆಟ್ಟ ಕನಸಿನಂತೆ ಅವಳಿಗೆ ಮರೆತು ಹೋಗಿತ್ತು. ಊಟ ಮುಗಿಸಿಕೊಂಡು ಹನುಮಂತು ಬಾಗಿಲಿನ ಜಗಲಿಯ ಮೇಲೆ ಕುಳಿತಿದ್ದನು. ನಾಗಿ, ತನ್ನ ಊಟ ಪೂರೈಸಿಕೊಂಡು ಹಸುಗಳನ್ನು ಹೊಲದ ಬದುವಿನಲ್ಲಿ ಕಟ್ಟಿ ಹಾಕಲು ಹೊಡೆದುಕೊಂಡು ಹೋದಳು. ಎದುರಿಗೆ ಲಕ್ಷ್ಮಿ, ಕೆರೆಯಿಂದ ನೀರಿನ ಬಿಂದಿಗೆ ಹೊತ್ತುಕೊಂಡು ಬರುತ್ತಿದ್ದಳು. ಅವರಿಬ್ಬರೂ ಒಬ್ಬರನ್ನೊಬ್ಬರು ದೀರ್ಘಕಾಲ ದಿಟ್ಟಿಸಿ ನೋಡಿದರು. ಆ ಇಬ್ಬರು ಮಹಿಳೆಯರ ಮನಸ್ಸಿನಲ್ಲಿ ಯಾವ ಭಾವಗಳುಂಟಾದುವೋ ಯಾರು ಹೇಳಬಲ್ಲರು !

—□—

ಬೆಲೆ : ರೂ. 15-00